# ಗೃಹ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಹೆಚ್.ಡಿ. 12. ಸಿಎನ್ಎ 2010, ಬೆಂಗಳೂರು, ದಿನಾಂಕ: 7ನೇ ಅಕ್ಟೋಬರ್, 2014.**

ಕರ್ನಾಟಕ ಸಿನಿಮಾಗಳ (ನಿಯಂತ್ರಣ) ಅಧಿನಿಯಮದ 1964ರ (1964ರ ಕರ್ನಾಟಕ ಅಧಿನಿಯಮ 23) 19ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಮಾಡಲು ಉದ್ದೇಶಿಸಿರುವ ಈ ಮುಂದಿನ ನಿಯಮಗಳ ಕರಡನ್ನು, ಅಧಿಸೂಚನೆ ಸಂಖ್ಯೆ: ಹೆಚ್‌ಡಿ 12 ಸಿಎನ್ಎ 2010, ದಿನಾಂಕ: 21.04.2014, ಕರ್ನಾಟಕ ರಾಜ್ಯಪತ್ರ ಭಾಗ- IV-ಎ, ದಿನಾಂಕ: 15ನೇ ಮೇ 2014ರಲ್ಲಿ ರಾಜ್ಯಪತ್ರದಲ್ಲಿ ಅವುಗಳನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಿರುವುದರಿಂದ, ಮತ್ತು ಸದರಿ ರಾಜ್ಯಪತ್ರವನ್ನು 15ನೇ ಮೇ, 2014ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಸ್ವೀಕರಿಸಲಾದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸಿರುವುದರಿಂದ;

ಈಗ, ಆದ್ದರಿಂದ ಕರ್ನಾಟಕ ಸಿನಿಮಾಗಳ (ನಿಯಂತ್ರಣ) ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ ಸಂಖ್ಯೆ: 23) 19ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:-

### ಅಧ್ಯಾಯ – I

### ಪ್ರಾರಂಭ

**1. ಹೆಸರು ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು, ಕರ್ನಾಟಕ ಸಿನಿಮಾಗಳ (ನಿಯಂತ್ರಣ) ನಿಯಮಗಳು, 2014 ಎಂದು ಕರೆಯತಕ್ಕದ್ದು.

2. ಅವು, ರಾಜ್ಯಪತ್ರದಲ್ಲಿ ಅವುಗಳು ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(1) "ಅಧಿನಿಯಮ" ಎಂದರೆ, ಕರ್ನಾಟಕ ಸಿನಿಮಾಗಳ (ನಿಯಂತ್ರಣ) ಅಧಿನಿಯಮ, 1964, (1964ರ ಕರ್ನಾಟಕ ಅಧಿನಿಯಮ 23);

(2) "ಸಭಾಂಗಣ" ಎಂದರೆ, ಚಲನಚಿತ್ರ ಪ್ರದರ್ಶನ ವೀಕ್ಷಿಸಲು ಸಾರ್ವಜನಿಕರಿಗೆ ಸ್ಥಳಾವಕಾಶ ಕಲ್ಪಿಸಿದ ಯಾವುದೇ ಲೈಸೆನ್ಸ್ ಪಡೆದ ಸ್ಥಳ;

(3) "ಪೋಲಿಸ್ ಆಯುಕ್ತರು" ಎಂದರೆ, ಸಭಾಂಗಣ ಇರುವ ನಗರದ ಪೋಲಿಸ್ ಆಯುಕ್ತರು;

(4) "ಸಿನಿಮಾ ಆಪರೇಟರ್" ಎಂದರೆ, ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಲಾದಂತೆ ಪ್ರೊಜೆಕ್ಟರ್ ಕೊಠಡಿಯ ಪ್ರಭಾರದಲ್ಲಿರುವ ವ್ಯಕ್ತಿ;

(5) "ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟ್" ಎಂದರೆ, ಸಭಾಂಗಣ ಅಥವಾ ಮಲ್ಟಿಪ್ಲೆಕ್ಸ್ ಕಾಂಪ್ಲೆಕ್ಸ್ ಇರುವ ಜಿಲ್ಲೆ ಅಥವಾ ಪ್ರದೇಶದ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟ್;

(6) "ನಿರ್ದೇಶಕರು" ಎಂದರೆ, ಕರ್ನಾಟಕದಲ್ಲಿ ನಗರ ಮತ್ತು ಪಟ್ಟಣ ಯೋಜನೆಯ ನಿರ್ದೇಶಕರು;

(7) “ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಮಹಾ ನಿರ್ದೇಶಕರು” ಎಂದರೆ, ಕರ್ನಾಟಕದಲ್ಲಿನ ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಮಹಾನಿರ್ದೇಶಕರು;

(8) “ಇಲೆಕ್ಟ್ರಿಕಲ್ ಇನ್ಸ್‌ಪೆಕ್ಟರ್” ಎಂದರೆ, ವಿದ್ಯುಚ್ಛಕ್ತಿ ಅಧಿನಿಯಮದ 2003ರ (2003ರ ಕೇಂದ್ರ ಅಧಿನಿಯಮ 36ರ) 162ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಸರ್ಕಾರವು ಹಾಗೆಂದು ನೇಮಕ ಮಾಡಿದ ವ್ಯಕ್ತಿ ಮತ್ತು ರಾಜ್ಯದ ಮುಖ್ಯ ಇಲೆಕ್ಟ್ರಿಕಲ್ ಇನ್ಸ್‌ಪೆಕ್ಟರ್, ವಿಭಾಗೀಯ ಅಪರ ಮುಖ್ಯ ಇಲೆಕ್ಟ್ರಿಕಲ್ ಇನ್ಸ್‌ಪೆಕ್ಟರ್, ಪ್ರೇಕ್ಷಕ ಮಂದಿರ ಅಥವಾ ಮಲ್ಟಿಪ್ಲೆಕ್ಸ್ ಇರುವ ಜಿಲ್ಲೆ ಅಥವಾ ಪ್ರದೇಶದ ಇಲೆಕ್ಟ್ರಿಕಲ್ ಇನ್ಸ್‌ಪೆಕ್ಟರ್ ಒಳಗೊಳ್ಳುತ್ತಾರೆ;

(9) “ಕಾರ್ಯನಿರ್ವಾಹಕ ಅಭಿಯಂತರರು” ಎಂದರೆ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಸಾರಿಗೆ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು ಹಾಗೂ ಸಭಾಂಗಣ ಅಥವಾ ಮಲ್ಟಿಪ್ಲೆಕ್ಸ್ ಕಾಂಪ್ಲೆಕ್ಸ್ ಇರುವ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಸಾರಿಗೆ ವಿಭಾಗದ ಪ್ರಭಾರದಲ್ಲಿರುವವರು;

(10) “ಅಧಿಕ ವೋಲ್ಟೇಜ್” ಎಂದರೆ, ಸಾಮಾನ್ಯ ಷರತ್ತುಗಳ ಮೇರೆಗೆ 33,000 (ಮೂವತ್ತ್ಮೂರು ಸಾವಿರ) ವೋಲ್ಟ್‌ಸ್‌ನ್ನು ಮೀರುವ ವೋಲ್ಟೇಜ್;

(11) “ಚಲನಚಿತ್ರ ಸಲಹಾ ಮಂಡಳಿ” ಎಂದರೆ, 7ನೇ ನಿಯಮದ ಮೇರೆಗೆ ರಚಿಸಿದ ಚಲನಚಿತ್ರ ಸಲಹಾ ಮಂಡಳಿ;

(12) “ಅಗ್ನಿಶಾಮಕ ಅಧಿಕಾರಿ” ಎಂದರೆ, ಸಭಾಂಗಣ ಅಥವಾ ಮಲ್ಟಿಪ್ಲೆಕ್ಸ್ ಕಾಂಪ್ಲೆಕ್ಸ್ ಇರುವ ಜಿಲ್ಲೆ ಅಥವಾ ಪ್ರದೇಶದಲ್ಲಿ ಅಧಿಕಾರ ವ್ಯಾಪ್ತಿ ಹೊಂದಿರುವ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಅಗ್ನಿಶಾಮಕ ಅಧಿಕಾರಿ;

(13) “ಅಗ್ನಿ ನಿರೋಧಕ ಸಾಮಾಗ್ರಿ” ಎಂದರೆ, ‘ಎ’ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸಾಮಾಗ್ರಿ;

(14) “ಅಗ್ನಿಶಾಮಕ ಪ್ರತಿರೋಧ ಸಾಮಾಗ್ರಿ” ಎಂದರೆ, ‘ಬಿ’ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸಾಮಗ್ರಿ;

(15) “ನಮೂನೆ” ಎಂದರೆ, ಈ ನಿಯಮಗಳಿಗೆ ಸೇರಿಸಿದ ನಮೂನೆ;

(16) “ಆರೋಗ್ಯಾಧಿಕಾರಿ” ಎಂದರೆ, ಜಿಲ್ಲೆಯ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ; ಮತ್ತು ನಿಗಮ, ಪುರಸಭೆ, ಪಟ್ಟಣ ಪಂಚಾಯಿತಿ ಅಥವಾ ದಂಡು ಪ್ರದೇಶದ ಸಂದರ್ಭದಲ್ಲಿ, ಅಂತಹ ನಿಗಮಕ್ಕೆ ಸೇರಿದ ಆರೋಗ್ಯ ಅಧಿಕಾರಿ ಅಥವಾ ತಾಲ್ಲೂಕು ಆರೋಗ್ಯಾಧಿಕಾರಿ; ನಗರಪಾಲಿಕೆ, ಪುರಸಭೆ, ಪಟ್ಟಣ ಪಂಚಾಯಿತಿ ಅಥವಾ ದಂಡು ಪ್ರದೇಶ ಮಂಡಳಿಯ ಸಂದರ್ಭದಲ್ಲಿ ಹಾಗೂ ನಗರಪಾಲಿಕೆ ಪುರಸಭೆ, ಪಟ್ಟಣ ಪಂಚಾಯಿತಿ ಅಥವಾ ದಂಡು ಪ್ರದೇಶ ಮಂಡಳಿಯ ಸಂದರ್ಭಗಳಲ್ಲಿ, ಆರೋಗ್ಯಾಧಿಕಾರಿ ವರ್ಗ “ಎ” ದರ್ಜೆಯ ಅಧಿಕಾರಿಯು ಲಭ್ಯವಿಲ್ಲದಿದ್ದಾಗ, ಅಂತಹ ಪ್ರದೇಶದಲ್ಲಿ ಅಧಿಕಾರವ್ಯಾಪ್ತಿ ಹೊಂದಿರುವ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ;

(17) “ಅಧಿಕ ವೋಲ್ಟೇಜ್” ಎಂದರೆ, ಸಾಮಾನ್ಯ ಸ್ಥಿತಿಗಳಲ್ಲಿ 33,000 (ಮೂವತ್ತ್ಮೂರು ಸಾವಿರ) ವೋಲ್ಟ್ಸ್ ಮೀರದ ವೋಲ್ಟೇಜ್;

(18) “ಸ್ಥಳೀಯ ಪ್ರಾಧಿಕಾರ” ಎಂದರೆ,-

(i) ಯಾವುದೇ ಪುರಸಭೆ ಪ್ರದೇಶದಲ್ಲಿ, ಕರ್ನಾಟಕ ಪುರಸಭೆಗಳ ಅಧಿನಿಯಮ, 1964ರ ಮೇರೆಗೆ ಅಥವಾ ಸಂದರ್ಭಾನುಸಾರ ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ರ ಮೇರೆಗೆ ರಚಿತವಾದ ನಗರಪಾಲಿಕೆ, ನಗರಸಭೆ, ಪಟ್ಟಣ ಪುರಸಭೆ ಕೌನ್ಸಿಲ್, ಪಟ್ಟಣ ಪಂಚಾಯಿತಿ, ದಂಡು ಪ್ರದೇಶ ಮಂಡಳಿ, ನೈರ್ಮಲ್ಯ ಮಂಡಳಿ ಅಥವಾ ಅಧಿಸೂಚಿತ ಪ್ರದೇಶ ಸಮಿತಿ;

(ii) ಇತರೆ ಪ್ರದೇಶಗಳಲ್ಲಿ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ (1993ರ ಕರ್ನಾಟಕ ಅಧಿನಿಯಮ 14) ಮೇರೆಗೆ ರಚಿತವಾದ ಗ್ರಾಮ ಪಂಚಾಯಿತಿ;

(19) “ಕಡಿಮೆ ವೋಲ್ಟೇಜ್” ಎಂದರೆ, ಸಾಮಾನ್ಯ ಸ್ಥಿತಿಗಳಲ್ಲಿ ಎರಡುನೂರ ಐವತ್ತು ವೋಲ್ಟುಗಳನ್ನು ಮೀರದ ವೋಲ್ಟೇಜ್;

(20) “ಮಧ್ಯಮ ವೋಲ್ಟೇಜ್” ಎಂದರೆ, ಸಾಮಾನ್ಯ ಸ್ಥಿತಿಗಳಲ್ಲಿ ಆರುನೂರ ಐವತ್ತು ವೋಲ್ಟುಗಳನ್ನು ಮೀರದ ವೋಲ್ಟೇಜ್;

(21) “ಮಲ್ಟಿಪ್ಲೆಕ್ಸ್ ಕಾಂಪ್ಲೆಕ್ಸ್” ಎಂದರೆ, ಹೋಟೆಲುಗಳು, ಉಪಾಹಾರ ಗೃಹಗಳು, ಅಂಗಡಿಗಳನ್ನು ಒಳಗೊಂಡು ಒಂದಕ್ಕಿಂತ ಹೆಚ್ಚಿನ ಸಭಾಂಗಣ ಮತ್ತು ಮನರಂಜನೆ ಮತ್ತು ಸಾಂಸ್ಕೃತಿಕ ಕೇಂದ್ರದ ಸ್ಥಳಾವಕಾಶ ಕಲ್ಪಿಸಿದ ಕಟ್ಟಡ;

ವಿವರಣೆ: ಮಲ್ಟಿಪ್ಲೆಕ್ಸ್ ಕಾಂಪ್ಲೆಕ್ಸ್‌ನ ಸಂದರ್ಭದಲ್ಲಿ, ಎಲ್ಲ ಪೂರಕ ಸ್ಥಳಗಳು ಹಾಗೆಂದು, ಚಲನಚಿತ್ರ ಮಂದಿರ ಮತ್ತು ಟಿಕೇಟು ಕೌಂಟರ್ಗಳಿಗೆ ಹೊಂದಿಕೊಂಡಂತೆ ಪ್ರೊಜೆಕ್ಟರ್ ಕೊಠಡಿ, ಶೌಚಾಲಯಗಳು, ಪ್ರವೇಶ/ ನಿರ್ಗಮನ ದ್ವಾರಗಳು/ ದಾರಿಗಳು, ಉಪಾಹಾರ ಗೃಹಗಳು/ ಕೆಫೆಗಳು/ ಕ್ಯಾಂಟೀನುಗಳನ್ನು ಉಪಯೋಗಿಸುವುದನ್ನು ಒಳಗೊಂಡಂತೆ ಚಲನಚಿತ್ರ ಮಂದಿರಗಳು, ಸಭಾಂಗಣದ ಉದ್ದೇಶಕ್ಕಾಗಿ ಬಳಸಿಕೊಂಡ ಖಾಯಂ ಕಟ್ಟಡದ ಭಾಗವನ್ನು ಮಾತ್ರ ಪರಿಗಣಿಸತಕ್ಕದ್ದು.

(22) “ಖಾಯಂ ಕಟ್ಟಡ” ಎಂದರೆ, 2-4 ಗಂಟೆಗಿಂತ ಕಡಿಮೆ ಇಲ್ಲದಂತೆ ಅಗ್ನಿಶಾಮಕ ನಿರೋಧಕ ಮತ್ತು ಅಗ್ನಿಶಾಮಕ ಪ್ರತಿರೋಧಕದ ಸಾಮಗ್ರಿಗಳೊಂದಿಗೆ ಖಾಯಂ ಉಪಯೋಗಕ್ಕಾಗಿ ನಿರ್ಮಿಸಿದಂಥ ಕಟ್ಟಡ;

(23) “ಜನಸಂಖ್ಯೆ” ಎಂದರೆ, ಸಭಾಂಗಣ ಅಥವಾ ಮಲ್ಟಿಪ್‌ಲೆಕ್ಸ್ ಕಾಂಪ್ಲೆಕ್ಸ್ ಇರುವ ಲೈಸೆನ್ಸ್ ಪಡೆದ ಸ್ಥಳಕ್ಕಾಗಿ ಹಿಂದಿನ ಎರಡು ಜನಗಣತಿ ವರದಿಗಳಲ್ಲಿ ಹೆಚ್ಚಿಸಿದ ಸರಾಸರಿ ದರದಿಂದ ಲೆಕ್ಕಹಾಕಲಾದ ವಾರ್ಷಿಕ ಹೆಚ್ಚಿಸಿದ ಹಿಂದಿನ ಸರ್ಕಾರಿ ಜನಗಣತಿಯನ್ನು ಸೇರಿಸಿ ನಿವಾಸಿಗಳ ಒಟ್ಟು ಸಂಖ್ಯೆ;

(24) “ಪ್ರೊಜೆಕ್ಟರ್ ಕೊಠಡಿ” ಎಂದರೆ, ಸಿನಿಮೊಟೋಗ್ರಾಫಿ ಸಲಕರಣೆಗಳನ್ನು ನಿಲ್ಲಿಸಿರುವಂಥ ಲೈಸೆನ್ಸ್ ಪಡೆದ ಸ್ಥಳದ ಭಾಗ ಮತ್ತು ತಾಂತ್ರಿಕವಾಗಿ ಮುಂದುವರಿದ ಡಿಜಿಟಲ್ ಪ್ರೊಜೆಕ್ಟರ್ ಅಥವಾ ಡಿಜಿಟಲ್ ಧ್ವನಿವ್ಯವಸ್ಥೆ ಯಾವುದಾದರನ್ನು ಅಳವಡಿಸಲಾಗಿದ್ದರೆ, ಚಿತ್ರಮಂದಿರದ ಆ ಭಾಗವನ್ನು ಒಳಗೊಳ್ಳುತ್ತದೆ;

(25) “ಪ್ರಾದೇಶಿಕ ಆಯುಕ್ತರು” ಎಂದರೆ, ಸಭಾಂಗಣ ಅಥವಾ ಮಲ್ಟಿಪ್ಲೆಕ್ಸ್ ಕಾಂಪ್ಲೆಕ್ಸ್ ಇರುವ ವಿಭಾಗ ಪ್ರಾದೇಶಿಕ ಆಯುಕ್ತರು;

(26) “ಪ್ರಕರಣ” ಎಂದರೆ, ಅಧಿನಿಯಮದ ಪ್ರಕರಣ;

(27) “ಅನುಸೂಚಿ” ಎಂದರೆ, ಈ ನಿಯಮಗಳಿಗೆ ಸೇರಿಸಲಾದ ಅನುಸೂಚಿ;

(28) “ಠಾಣಾಧಿಕಾರಿ” ಎಂದರೆ, ಸಭಾಂಗಣ ಅಥವಾ ಮಲ್ಟಿಪ್ಲೆಕ್ಸ್ ಕಾಂಪ್ಲೆಕ್ಸ್ ಇರುವ ಪೊಲೀಸ್ ಠಾಣೆಯ ಠಾಣಾಧಿಕಾರಿ;

(29) “ತಾತ್ಕಾಲಿಕ ಕಟ್ಟಡ” ಎಂದರೆ, ಖಾಯಂ ಕಟ್ಟಡವಲ್ಲದಂಥ ಕಟ್ಟಡ;

(30) (i) “ಚಿತ್ರಮಂದಿರ” ಎಂದರೆ, ಒಂದೇ ಪರದೆ ಇರುವ ಸಿನಿಮಾ ಚಿತ್ರಮಂದಿರ;

(ii) “ಬಹುಪರದೆಗಳ ಚಿತ್ರಮಂದಿರ” ಎಂದರೆ, ಒಂದೇ ಚಿತ್ರಮಂದಿರ ಕಟ್ಟಡದಲ್ಲಿ ಒಂದು ಪರದೆಗಿಂತ ಹೆಚ್ಚು ಪರದೆಯೊಂದಿಗೆ ಖಾಯಂ ಕಟ್ಟಡದಲ್ಲಿ ಚಿತ್ರಮಂದಿರ;

(31) “ನಗರ ಯೋಜನಾಧಿಕಾರಿ” ಎಂದರೆ, ಸಭಾಂಗಣ ಅಥವಾ ಮಲ್ಟಿಪ್ಲೆಕ್ಸ್ ಅಥವಾ ಲೈಸೆನ್ಸ್ ಪಡೆದ ಸ್ಥಳವು ನಗರ ಪಾಲಿಕೆಯ ಪರಿಮಿತಿಯೊಳಗಿದ್ದರೆ, ಆ ನಗರ ಪಾಲಿಕೆಯ ನಗರ ಯೋಜನಾಧಿಕಾರಿ; ಸಭಾಂಗಣ ಅಥವಾ ಮಲ್ಟಿಪ್ಲೆಕ್ಸ್ ಅಥವಾ ಲೈಸೆನ್ಸ್ ಪಡೆದ ಸ್ಥಳವು ನಗರಾಭಿವೃದ್ಧಿ ಪ್ರಾಧಿಕಾರದ ಪರಿಮಿತಿಯೊಳಗಿದ್ದರೆ, (ನಗರ ಪಾಲಿಕೆ ಪರಿಮಿತಿಗಳನ್ನು ಹೊರತುಪಡಿಸಿ), ಆ ನಗರಾಭಿವೃದ್ಧಿ ಪ್ರಾಧಿಕಾರದ ನಗರ ಯೋಜನಾ ಸದಸ್ಯ; ಸಭಾಂಗಣ ಅಥವಾ ಮಲ್ಟಿಪ್ಲೆಕ್ಸ್ ಅಥವಾ ಲೈಸೆನ್ಸ್ ಪಡೆದ ಸ್ಥಳವು ಯೋಜನಾ ಪ್ರಾಧಿಕಾರದ ಪರಿಮಿತಿಯೊಳಗಿದ್ದರೆ, ಆ ಯೋಜನಾ ಪ್ರಾಧಿಕಾರದ ನಗರ ಯೋಜನಾಧಿಕಾರಿ; ಸಭಾಂಗಣ ಅಥವಾ

ಮಲ್ಟಿಪ್ಲೆಕ್ಸ್ ಅಥವಾ ಲೈಸೆನ್ಸ್ ಪಡೆದ ಸ್ಥಳವು ನಗರ ಪಾಲಿಕೆ, ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಯೋಜನಾ ಪ್ರಾಧಿಕಾರದ ಅಧಿಕಾರವ್ಯಾಪ್ತಿಯ ಹೊರಗೆ ಆದರೆ, ಜಿಲ್ಲೆಯೊಳಗೆ ಇದ್ದರೆ, ಆ ಜಿಲ್ಲೆಯ ಜಿಲ್ಲಾ ನಗರ ಮತ್ತು ಪಟ್ಟಣ ಯೋಜನೆಯ ಸಹಾಯಕ ನಿರ್ದೇಶಕರು;

(32) "ವೋಲ್ಟೇಜ್" ಎಂದರೆ, ಭಾರತೀಯ ಗುಣಮಟ್ಟಗಳಿಂದ ಕೂಡಿದ ವೋಲ್ಟ್ ಮೀಟರಿನಿಂದ ಅಳತೆ ಮಾಡಲಾದಂತೆ ಯಾವುದೇ ಎರಡು ವಿದ್ಯುತ್ ವಾಹಕಗಳ ನಡುವೆ ಅಥವಾ ವಿದ್ಯುತ್ ವಾಹಕ ಮತ್ತು ಭೂಸಂಪರ್ಕದ ಯಾವುದೇ ಭಾಗದ ನಡುವೆಯಾಗಲಿ ವೋಲ್ಟುಗಳಲ್ಲಿ ಅಳತೆ ಮಾಡಲಾದ ವಿವಿಧ ವಿದ್ಯುತ್ ವಿಭವಾಂತರ;

(38) "ವ್ಯಾಟ್" ಎಂದರೆ, ಕ್ರಿಯಾಶೀಲ ವಿದ್ಯುತ್ ಘಟಕ ಮತ್ತು "ಎಂ.ಡಬ್ಲ್ಯೂ" ಎಂದರೆ 106 'ವ್ಯಾಟ್‌ಗಳಿಗೆ ಸಮನಾದ' ಮೆಗಾವ್ಯಾಟ್.

## ಅಧ್ಯಾಯ – II

## ಸಾಮಾನ್ಯ ಉಪಬಂಧ

**3. ವಿದ್ಯುಚ್ಛಕ್ತಿ ಅಧಿನಿಯಮ, 2003ರ ಪಾಲನೆ.-** ವಿದ್ಯುಚ್ಛಕ್ತಿ ಅಧಿನಿಯಮ, 2003ರ (2003ರ ಕೇಂದ್ರ ಅಧಿನಿಯಮ, 36) 54ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ನೋಟೀಸನ್ನು, ವಿದ್ಯುಚ್ಛಕ್ತಿ ಪರಿಶೀಲಕನಿಗೆ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟ್‌ರವರಿಗೆ ಕೊಡಬೇಕಾದ ಸಂದರ್ಭಗಳಲ್ಲಿ ಅಂತಹ ನೋಟೀಸನ್ನು ಕೊಡುವವರೆಗೆ ಮತ್ತು ಲೈಸೆನ್ಸ್ ನೀಡುವ ಪ್ರಾಧಿಕಾರವು, ಲೈಸೆನ್ಸ್ ನೀಡುವುದರ ತೀರ್ಮಾನದ ಬಗ್ಗೆ ಜಿಲ್ಲೆಯ ಅಥವಾ ಅಂತಹ ಪ್ರದೇಶದ ವಿದ್ಯುಚ್ಛಕ್ತಿ ಪರಿಶೀಲಕನಿಗೆ ತಿಳಿಸುವವರೆಗೆ ಯಾವುದೇ ಲೈಸೆನ್ಸ್‌ನ್ನು ಮಂಜೂರು ಮಾಡತಕ್ಕದ್ದಲ್ಲ.

**4. ಕೆಲವು ಅಧಿಕಾರಿಗಳ ಪರಿಶೀಲನಾಧಿಕಾರ.-** (1) ಲೈಸೆನ್ಸ್ ನೀಡುವ ಪ್ರಾಧಿಕಾರಿ ಅಥವಾ ಆತನು ಅಧಿಕೃತಗೊಳಿಸಿದ ಅಧಿಕಾರಿ; ಅಥವಾ ಠಾಣಾಧಿಕಾರಿಯ ದರ್ಜೆಗೆ ಕಡಿಮೆಯಿಲ್ಲದ ಯಾರೇ ಪೊಲೀಸ್ ಅಧಿಕಾರಿ; ಅಥವಾ ಕರ್ನಾಟಕ ರಾಜ್ಯ ಅಗ್ನಿ ಶಾಮಕ ಮತ್ತು ತುರ್ತು ಸೇವೆಗಳ ಅಗ್ನಿಶಾಮಕ ಠಾಣಾಧಿಕಾರಿಯ ದರ್ಜೆಗೆ ಕಡಿಮೆಯಲ್ಲದ ಯಾರೇ ಅಗ್ನಿಶಾಮಕ ಅಧಿಕಾರಿ; ಅಥವಾ ತಾಲ್ಲೂಕು ಆರೋಗ್ಯಾಧಿಕಾರಿ ದರ್ಜೆಗೆ ಕಡಿಮೆಯಿಲ್ಲದ ಯಾರೇ ಆರೋಗ್ಯಾಧಿಕಾರಿ; ಅಥವಾ ವಿದ್ಯುಚ್ಛಕ್ತಿ ಪರಿಶೀಲಕನ ದರ್ಜೆಗೆ ಕಡಿಮೆಯಿಲ್ಲದ ಯಾರೇ ಅಧಿಕಾರಿ; ಅಥವಾ ಆ ಪ್ರದೇಶದ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಯಾರೇ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್, ಅಥವಾ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಸಾರಿಗೆ ಇಲಾಖೆಯ ಸಂಬಂಧಪಟ್ಟ ಅಧಿಕಾರವ್ಯಾಪ್ತಿಯ ಕಾರ್ಯನಿರ್ವಾಹಕ ಅಭಿಯಂತರರು, ಅಥವಾ ಆತನು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು, ಅಧಿನಿಯಮ ಮತ್ತು ನಿಯಮಗಳು, ಅದರ ಮೇರೆಗೆ, ಅಧಿನಿಯಮ ಮತ್ತು ಅದರ ನಿಯಮಗಳ ಮೇರೆಗೆ ರಚಿಸಿದ ಉಪಬಂಧಗಳನ್ನು ಲೈಸೆನ್ಸ್‌ದಾರನು ಪಾಲಿಸಲಾಗುತ್ತಿದೆ ಎಂಬುದನ್ನು ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ಅಧಿನಿಯಮದ ಮತ್ತು ನಿಯಮಗಳ ಮೇರೆಗೆ ಲೈಸೆನ್ಸ್ ಪಡೆದ ಅಥವಾ ಲೈಸೆನ್ಸ್ ಪಡೆಯಲು ಉದ್ದೇಶಿಸಿದ ಸಭಾಂಗಣ ಅಥವಾ ಮಲ್ಟಿಪ್ಲೆಕ್ಸ್ ಅಥವಾ ಸ್ಥಳವನ್ನು ಯಾವುದೇ ಕಾಲದಲ್ಲಿ ಪ್ರವೇಶಿಸಬಹುದು.

(2) ಲೈಸೆನ್ಸ್‌ದಾರನು, (1)ನೇ ಉಪ-ನಿಯಮದಲ್ಲಿ ಉಲ್ಲೇಖಿಸಲಾದ ಯಾರೇ ಅಧಿಕಾರಿಗಳು ಕೇಳಿದ ಕೂಡಲೇ, ಲೈಸೆನ್ಸ್ ಮತ್ತು ನಕ್ಷೆ ಮತ್ತು ಅದಕ್ಕೆ ಸೇರಿದ ವಿವರಣೆಗಳನ್ನು ಹಾಜರುಪಡಿಸತಕ್ಕದ್ದು ಮತ್ತು ಯಾರೇ ಸದರಿ ಅಧಿಕಾರಿಗಳು, ಲೈಸೆನ್ಸ್ ನೀಡುವ ಪ್ರಾಧಿಕಾರಿಯ ಮೂಲಕ ಕಾಲಕಾಲಕ್ಕೆ ಅಥವಾ ಸಂದರ್ಭವು ಒದಗಿ ಬಂದಂತೆ ಸಾರ್ವಜನಿಕ ಸುರಕ್ಷತೆ ಅಥವಾ ಅನುಕೂಲದ ಬಗ್ಗೆ ಅಥವಾ ಕಾನೂನು, ಆದೇಶ, ಶಾಂತಿ ಮತ್ತು ಸಾರ್ವಜನಿಕ ಸಭ್ಯತೆಗಳ ಸುವ್ಯವಸ್ಥೆಯನ್ನು ಪರೀಕ್ಷಿಸುವುದಕ್ಕಾಗಿ ಮತ್ತು ನಿರ್ವಹಣೆಗಾಗಿ ಅವರ ಆದೇಶಗಳನ್ನು ಲೈಸೆನ್ಸ್‌ದಾರನಿಗೆ ತಿಳಿಸತಕ್ಕದ್ದು. ಸಂದರ್ಭಗಳು ಹಾಗೆ ಅಗತ್ಯಪಡಿಸಿದರೆ, ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಲೈಸೆನ್ಸ್‌ದಾರನಿಗೆ ನೋಟೀಸನ್ನು ಕೊಟ್ಟ ತರುವಾಯ, ಹೆಚ್ಚುವರಿ ರಕ್ಷಣೆಗಳನ್ನು ಒದಗಿಸಲು

ಆತನಿಗೆ ನಿರ್ದೇಶಿಸಬಹುದು ಮತ್ತು ಲೈಸೆನ್ಸ್‌ದಾರನು ಅಂತಹ ನಿರ್ದೇಶನಗಳನ್ನು ಪಾಲಿಸತಕ್ಕದ್ದು, ಅದಕ್ಕೆ ತಪ್ಪಿದಲ್ಲಿ ಲೈಸೆನ್ಸ್ ರದ್ದತಿಗೆ ಗುರಿಯಾಗತಕ್ಕದ್ದು.

5. ನಿವೇಶನ, ಕಟ್ಟಡ ಅಥವಾ ಸಾಧನ ಸಾಮಗ್ರಿಯ ಒಡೆತನಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸುವುದು.- ಲೈಸೆನ್ಸ್‌ಗೆ ಅರ್ಜಿದಾರನು, ಲೈಸೆನ್ಸ್‌ನ್ನು ನೀಡಲು ಅಥವಾ ನವೀಕರಿಸಲು ಅಗತ್ಯಪಡಿಸಿದ ನಿವೇಶನ, ಕಟ್ಟಡ ಮತ್ತು ಇತರ ಸಾಧನ ಸಾಮಗ್ರಿಯನ್ನು ಒಳಗೊಂಡು, ಆ ಆವರಣಗಳ ಒಡೆತನಕ್ಕೆ ಸಂಬಂಧಪಟ್ಟ ಅವಶ್ಯ ದಾಖಲೆಗಳನ್ನು ಲೈಸೆನ್ಸ್ ನೀಡುವ ಪ್ರಾಧಿಕಾರಿಯ ಮುಂದೆ ಹಾಜರುಪಡಿಸತಕ್ಕದ್ದು.

6. ಲೈಸೆನ್ಸ್‌ಗಳು ಮತ್ತು ನಕ್ಷೆಗಳ ಪ್ರದರ್ಶನ.- (1) ಲೈಸನ್ಸ್‌ದಾರನು, ಲೈಸೆನ್ಸ್‌ನ್ನು ಮತ್ತು ಅನುಮೋದಿತ ಕಟ್ಟಡದ ನಕ್ಷೆಯನ್ನು ಸಿನಿಮಾದ ಕಛೇರಿಯ ಗೋಡೆಗಳ ಮೇಲೆ ಎದ್ದು ಕಾಣುವಂತೆ ಪ್ರದರ್ಶಿಸತಕ್ಕದ್ದು.

(2) ಲೈಸೆನ್ಸ್ ಅನುಮೋದಿತ ಕಟ್ಟಡದ ನಕ್ಷೆಗಳು ಮತ್ತು ಇತರೆ ಅವಶ್ಯಕ ವಿವರಗಳನ್ನು ಲೈಸೆನ್ಸ್‌ದಾರನು, ಡಿಜಿಟಲ್ ಫಾರ್ಮ್‌ನಲ್ಲಿ ರಕ್ಷಿಸತಕ್ಕದ್ದು.

## ಅಧ್ಯಾಯ – III

## ಚಲನಚಿತ್ರ ಅನುಮೋದನೆಗಾಗಿ ಪ್ರಕ್ರಿಯೆ

**7. ಚಲನಚಿತ್ರ ಸಲಹಾ ಮಂಡಳಿಯ ರಚನೆ.-** (1) ರಾಜ್ಯ ಸರ್ಕಾರವು, 12ನೇ ಪ್ರಕರಣದ ಮೇರೆಗೆ ನಿರ್ದೇಶನಗಳನ್ನು ನೀಡುವ ವಿಷಯದಲ್ಲಿ ರಾಜ್ಯ ಸರ್ಕಾರಕ್ಕೆ ಸಲಹೆ ಕೊಡುವ ಉದ್ದೇಶಕ್ಕಾಗಿ ಚಲನಚಿತ್ರ ಸಲಹಾ ಮಂಡಲಿಯನ್ನು (ಇದರಲ್ಲಿ ಇನ್ನು ಮುಂದೆ ಮಂಡಳಿ ಎಂದು ಉಲ್ಲೇಖಿಸಲಾಗಿದೆ) ರಚಿಸತಕ್ಕದ್ದು.

(2) ಚಲನಚಿತ್ರ ಸಲಹಾ ಮಂಡಲಿಯು,-

(i) ವಿಭಾಗೀಯ ಆಯುಕ್ತರು, ಬೆಂಗಳೂರು – ಅಧ್ಯಕ್ಷ

(ii) ಜಿಲ್ಲಾ ಮ್ಯಾಜಿಸ್ಟ್ರೇಟ್, ಬೆಂಗಳೂರು ನಗರ ಜಿಲ್ಲೆ - ಸದಸ್ಯ

(iii) ಜಿಲ್ಲಾ ಮ್ಯಾಜಿಸ್ಟ್ರೇಟ್, ಬೆಂಗಳೂರು ಗ್ರಾಮಾಂತರ ಜಿಲ್ಲೆ - ಸದಸ್ಯ

(iv) ಕಾಲೇಜು ಶಿಕ್ಷಣ ಆಯುಕ್ತರು, ಬೆಂಗಳೂರು - ಸದಸ್ಯ

(v) ಆಯುಕ್ತರು, ಮಾಹಿತಿ ಮತ್ತು ಪ್ರಚಾರ ಇಲಾಖೆ, ಬೆಂಗಳೂರು - ಸದಸ್ಯ ಸಂಚಾಲಕ

(vi) ಪೊಲೀಸು ಆಯುಕ್ತರು, ಬೆಂಗಳೂರು - ಸದಸ್ಯ

(vii) ಸರ್ಕಾರವು ನಾಮನಿರ್ದೇಶಿಸಿದ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಲಿಯ ಪ್ರತಿನಿಧಿ, ಕರ್ನಾಟಕ ಚಲನಚಿತ್ರ ಪ್ರದರ್ಶಕರ ಒಕ್ಕೂಟ, ರಾಜ್ಯ ಮಟ್ಟದ ಚಲನಚಿತ್ರ ವಿತರಕ ಸಂಘ, ಕರ್ನಾಟಕ ಕನ್ನಡ ಚಲನಚಿತ್ರ ನಿರ್ಮಾಪಕರ ಸಂಘವನ್ನು ಒಳಗೊಂಡಂತೆ ನಾಲ್ಕು ಸರ್ಕಾರೇತರ ಸದಸ್ಯರಿಗಿಂತ ಕಡಿಮೆ ಇಲ್ಲದಂತೆ

-ಒಳಗೊಂಡಿರತಕ್ಕದ್ದು.

(viii) ಸಮಿತಿಯು ಅವಶ್ಯಕವೆಂದು ಅಭಿಪ್ರಾಯಪಟ್ಟರೆ, ಯಾರೇ ಇತರ ಸರ್ಕಾರಿ ಅಥವಾ ಸರ್ಕಾರೇತರ ಸದಸ್ಯರನ್ನು ವಿಶೇಷ ಆಹ್ವಾನಿತರಾಗಿ ಸಹ ಸದಸ್ಯನನ್ನಾಗಿ ಸೇರಿಸಿಕೊಳ್ಳಬಹುದು ಅಥವಾ ಆಹ್ವಾನಿಸಬಹುದು.

**8. ಸದಸ್ಯರ ಪದಾವಧಿ**.- ಚಲನಚಿತ್ರ ಸಲಹಾ ಮಂಡಲಿಯ ಸರ್ಕಾರೇತರ ಸದಸ್ಯರ ಪದಾವಧಿ ಎರಡು ವರ್ಷದ ಅವಧಿಗೆ ಇರತಕ್ಕದ್ದು, ಅವರು ಮರು ನೇಮಕಕ್ಕೆ ಅರ್ಹರಾಗಿರತಕ್ಕದ್ದು.

**9. ಸದಸ್ಯರನ್ನು ತೆಗೆದು ಹಾಕುವುದು.**- ರಾಜ್ಯ ಸರ್ಕಾರವು, ಅದರ ಅಭಿಪ್ರಾಯದಲ್ಲಿ ಅವನ ಅವಧಿ ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಸಾಕಷ್ಟು ಕಾರಣಕ್ಕಾಗಿ ಚಲನಚಿತ್ರ ಸಲಹಾ ಮಂಡಲಿಯ ಯಾರೇ ಸರ್ಕಾರೇತರ ಸದಸ್ಯನನ್ನು ಯಾವುದೇ ಸಮಯದಲ್ಲಿ ತೆಗೆದು ಹಾಕಬಹುದು.

**10. ಸದಸ್ಯರು ಗೌರವ ಸ್ಥಾನದಲ್ಲಿ ಕೆಲಸ ಮಾಡತಕ್ಕದ್ದು.**- ಚಲನಚಿತ್ರ ಸಲಹಾ ಮಂಡಲಿಯ ಸರ್ಕಾರೇತರ ಸದಸ್ಯರು ಗೌರವ ಸ್ಥಾನದಲ್ಲಿ ಕೆಲಸ ಮಾಡತಕ್ಕದ್ದು.

**11. ಮಂಡಲಿಯ ಕೇಂದ್ರ ಕಾರ್ಯಸ್ಥಾನ.-** ರಾಜ್ಯ ಸರ್ಕಾರವು ಅನ್ಯಥಾ ನಿರ್ದೇಶಿಸಿದ ಹೊರತು, ಚಲನಚಿತ್ರ ಸಲಹಾ ಮಂಡಲಿಯ ಕೇಂದ್ರ ಕಾರ್ಯಸ್ಥಾನವು ಬೆಂಗಳೂರಿನಲ್ಲಿರತಕ್ಕದ್ದು.

**12. ಸಭೆಗಳಲ್ಲಿ ಅಧ್ಯಕ್ಷತೆ ವಹಿಸುವ ವ್ಯಕ್ತಿ.-** ಅಧ್ಯಕ್ಷನು ಚಲನಚಿತ್ರ ಸಲಹಾ ಮಂಡಲಿಯ ಎಲ್ಲಾ ಸಭೆಗಳಲ್ಲಿ ಅಧ್ಯಕ್ಷತೆ ವಹಿಸತಕ್ಕದ್ದು, ಅವನ ಗೈರು ಹಾಜರಿಯಲ್ಲಿ ಹಾಜರಿರುವ ಸದಸ್ಯರು ಅವರಲ್ಲಿ ಒಬ್ಬರನ್ನು ಅಧ್ಯಕ್ಷತೆ ವಹಿಸಲು ಚುನಾಯಿಸಿಕೊಳ್ಳಬಹುದು.

**13. ಕೋರಂ.-** ಸಲಹಾ ಮಂಡಲಿಯ ಸಭೆಗಾಗಿ ಕೋರಂ ಮೂರು ಆಗಿರತಕ್ಕದ್ದು.

**14. ಮಂಡಲಿಯ ಸಭೆಗಳು.-** (1) ಚಲನಚಿತ್ರ ಸಲಹಾ ಮಂಡಲಿಯು, 16ನೇ ಪ್ರಕರಣದ ಮೇರೆಗೆ ಪ್ರದರ್ಶನಕ್ಕಾಗಿ ರಾಜ್ಯ ಸರ್ಕಾರವು ಅನುಮೋದಿಸಬೇಕಾದ ಚಲನಚಿತ್ರಗಳನ್ನು ಪರಿಶೀಲಿಸುವ ಉದ್ದೇಶಕ್ಕಾಗಿ ಅನುಮೋದನೆಗಾಗಿ ಚಲನಚಿತ್ರವನ್ನು ಸ್ವೀಕರಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಸಭೆ ಸೇರತಕ್ಕದ್ದು.

(2) ಪ್ರತಿಯೊಂದು ಸಭೆಗಾಗಿ, ರಾಜ್ಯ ಸರ್ಕಾರದ ಗ್ರೂಪ್-ಎ ಅಧಿಕಾರಿಗಳಿಗೆ ಅನ್ವಯವಾಗಬಹುದಾದಂಥ ಪ್ರಯಾಣ ವೆಚ್ಚಗಳು ಮತ್ತು ಉಪವೇಶನ ಫೀಜನ್ನು ಹಾಜರಿದ್ದ ಸದಸ್ಯರಿಗೆ ಸಂದಾಯಮಾಡತಕ್ಕದ್ದು.

**15. ಪ್ರಕ್ರಿಯೆ.-** ಚಲನಚಿತ್ರ ಸಲಹಾ ಮಂಡಲಿಯ ಶಿಫಾರಸ್ಸನ್ನು ಸಭೆಯಲ್ಲಿ ಹಾಜರಿರುವ ಸದಸ್ಯರ ಬಹುಮತದ ಮೂಲಕ ತೆಗೆದುಕೊಳ್ಳತಕ್ಕದ್ದು ಮತ್ತು ಸಮಾನ ಮತಗಳ ಸಂದರ್ಭದಲ್ಲಿ ಅಧ್ಯಕ್ಷಾಧಿಕಾರಿಯು ಎರಡನೆಯ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು ಮತ್ತು ಅದನ್ನು ಚಲಾಯಿಸತಕ್ಕದ್ದು.

**16.ಕೇಂದ್ರ ಸರ್ಕಾರವು ಪ್ರಮಾಣೀಕರಿಸಿದ ಚಲನಚಿತ್ರಗಳಿಗೆ ಸಂಬಂಧಿಸಿದಂತೆ ಘೋಷಣೆ.-** ಕೇಂದ್ರ ಚಲನಚಿತ್ರ ಸಲಹಾ ಮಂಡಲಿಯ ಪೂರ್ವಾನುಮೋದನೆಯೊಂದಿಗೆ ವೈಜ್ಞಾನಿಕ ಚಲನಚಿತ್ರ, ಚಲನಚಿತ್ರಗಳು, ಶೈಕ್ಷಣಿಕ ಉದ್ದೇಶಗಳಿಗಾಗಿನ ಚಲನಚಿತ್ರಗಳು, ವಾರ್ತೆಗಳು ಮತ್ತು ಪ್ರಸ್ತುತ ಘಟನೆಗಳೊಂದಿಗೆ ವ್ಯವಹರಿಸುವ ಚಲನಚಿತ್ರಗಳು ಅಥವಾ ಸಾಕ್ಷ್ಯ ಚಿತ್ರಗಳು ಅಥವಾ 12ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಮಾದರಿಯ ಚಲನಚಿತ್ರಗಳೆಂದು ಕೇಂದ್ರ ಸರ್ಕಾರವು ಪ್ರಮಾಣೀಕರಿಸುವ ಮತ್ತು ರಾಜ್ಯ ಸರ್ಕಾರವು ಅಥವಾ ರಾಜ್ಯ ಸರ್ಕಾರದ ಒಡೆತನ ಅಥವಾ ನಿಯಂತ್ರಣದಲ್ಲಿರುವ ನಿಗಮದಿಂದ ಅಥವಾ ರಾಜ್ಯ ಸರ್ಕಾರದ ಕೈಗಾರಿಕಾ ಉದ್ಯಮದ ಮೂಲಕ ಮತ್ತು ಚಲನಚಿತ್ರ ಪರಿಶೀಲನಾ ಮಂಡಳಿಯಿಂದ ಪ್ರಮಾಣೀಕರಿಸಿದ ಚಲನಚಿತ್ರಗಳನ್ನು 12ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಅನುಮೋದಿಸಬಹುದು ಮತ್ತು 17 ರಿಂದ 23ರವರೆಗಿನ ನಿಯಮಗಳ ಉಪಬಂಧಗಳು ಅಂತಹ ಚಲನಚಿತ್ರಗಳಿಗೆ ಅನ್ವಯವಾಗತಕ್ಕದ್ದಲ್ಲ.

**17. ಮಂಡಳಿಗೆ ಅರ್ಜಿ.**- ರಾಜ್ಯ ಸರ್ಕಾರದಿಂದ ಯಾವುದೇ ಚಲನಚಿತ್ರಗಳಿಗೆ ಅನುಮೋದನೆಯನ್ನು ಹೊಂದಲು ಮತ್ತು ಕೇಂದ್ರ ಚಲನಚಿತ್ರ ಸಲಹಾ ಮಂಡಳಿಯಿಂದ ಯಾವುದೇ ಪ್ರಮಾಣೀಕರಿಸಿದ ಚಲನಚಿತ್ರಗಳಿಗೆ ಮತ್ತು ವೈಜ್ಞಾನಿಕ ಚಲನಚಿತ್ರ, ಶೈಕ್ಷಣಿಕ ಉದ್ದೇಶಗಳಿಗಾಗಿ ಚಲನಚಿತ್ರಗಳು, ವಾರ್ತೆಗಳು ಮತ್ತು ಪ್ರಸ್ತುತ ಘಟನೆಗಳೊಂದಿಗೆ ವ್ಯವಹರಿಸುವ ಚಲನಚಿತ್ರಗಳು ಅಥವಾ ಸಾಕ್ಷ್ಯಚಿತ್ರಗಳು ಅಥವಾ ರಾಜ್ಯ ಸರ್ಕಾರದ ಒಡೆತನ ಅಥವಾ ನಿಯಂತ್ರಣದಲ್ಲಿರುವ ನಿಗಮದಿಂದ (12ನೇ ಪ್ರಕರಣದ ಮೇರೆಗೆ) ತಯಾರಿಸಿದ ಚಲನಚಿತ್ರಗಳಿಗೆ ಅನುಮೋದನೆಯನ್ನು ಪಡೆಯಲು ಇಚ್ಛಿಸುವ ಯಾರೇ ವ್ಯಕ್ತಿಯು, ಚಲನಚಿತ್ರದ ಹೆಸರು ಮತ್ತು ಪ್ರದರ್ಶಕರು ಅದನ್ನು ಯಾವ ಮೂಲದಿಂದ ಪಡೆಯಬಹುದೋ ಆ ಮೂಲ ಮತ್ತು ಚಲನಚಿತ್ರದ ಪ್ರತಿಯೊಂದಿಗೆ ಚಲನಚಿತ್ರ

ಸಲಹಾ ಮಂಡಳಿಯ ಮೂಲಕ ಅಗತ್ಯಪಡಿಸಬಹುದಾದಂಥ ಇತರ ವಿವರಗಳನ್ನು ನಿರೂಪಿಸುವ ಅರ್ಜಿಗಳನ್ನು ಲಿಖಿತದಲ್ಲಿ ಚಲನಚಿತ್ರ ಸಲಹಾ ಮಂಡಳಿಯ ಅಧ್ಯಕ್ಷನಿಗೆ ಕಳುಹಿಸತಕ್ಕದ್ದು. ಆತನು, ಮಂಡಳಿಯು ಗೊತ್ತುಪಡಿಸಬೇಕಾದ ದಿನಾಂಕದಂದು ಮತ್ತು ಸಮಯದಲ್ಲಿ ಬೆಂಗಳೂರಿನ ಸಲಹಾ ಮಂಡಳಿಯ ಮುಂದೆ ಚಲನಚಿತ್ರವನ್ನು ಪ್ರದರ್ಶಿಸಲು ವ್ಯವಸ್ಥೆ ಮಾಡತಕ್ಕದ್ದು. ಅಂತಹ ಪ್ರತಿಯೊಂದು ಅರ್ಜಿಯ ಜೊತೆಯಲ್ಲಿ 20ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ಫೀಜಿನ ಮೂಲಕ ಲಗತ್ತಿಸತಕ್ಕದ್ದು.

**18. ಮಂಡಳಿಯು ಕೈಗೊಳ್ಳಬೇಕಾದ ಕ್ರಮ.-** 17ನೇ ನಿಯಮದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಅಧ್ಯಕ್ಷರು 12ನೇ ಪ್ರಕರಣದ ಮೇರೆಗೆ ಆ ಚಲನಚಿತ್ರವನ್ನು ಅನುಮೋದನೆ ಮಾಡಲು ರಾಜ್ಯ ಸರ್ಕಾರಕ್ಕೆ ಅದು ಸಲಹೆ ಮಾಡುವುದಾಗಲಿ ಅದನ್ನು ನಿರ್ಧರಿಸುವ ದೃಷ್ಟಿಯಿಂದ, ಅದರ ಮುಂದಿನ ಸಭೆಗಳಲ್ಲಿ ಚಲನಚಿತ್ರ ಸಲಹಾ ಮಂಡಲಿಯು ಮುಂದಿನ ಸಭೆಯಲ್ಲಿ ಅದು ಚಲನಚಿತ್ರವನ್ನು ಪರೀಶೀಲಿಸಲು ವ್ಯವಸ್ಥೆ ಮಾಡತಕ್ಕದ್ದು. ಅರ್ಜಿದಾರನು, ಸಂಬಂಧಪಟ್ಟ ಚಲನಚಿತ್ರದ ಬಗ್ಗೆ ಯಾವುದೇ ಮನವಿಯನ್ನು ಸಲ್ಲಿಸಲು ಇಚ್ಛಿಸಿದರೆ, ಚಲನಚಿತ್ರ ಸಲಹಾ ಮಂಡಲಿಯು ಹಾಗೆ ಮಾಡಲು ಅವನಿಗೆ ಅವಕಾಶವನ್ನು ಕೊಡತಕ್ಕದ್ದು, ಅಂತಹ ಮನವಿಯು ಲಿಖಿತದಲ್ಲಿರತಕ್ಕದ್ದು ಮತ್ತು ರಾಜ್ಯ ಸರ್ಕಾರಕ್ಕೆ ಅದರ ಶಿಫಾರಸ್ಸುಗಳನ್ನು ಮಾಡುವಲ್ಲಿ ಚಲನಚಿತ್ರ ಸಲಹಾ ಮಂಡಲಿಯು ಅದನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

**19. ರಾಜ್ಯ ಸರ್ಕಾರದಿಂದ ಚಲನಚಿತ್ರದ ಅನುಮೋದನೆ.-** ಚಲನಚಿತ್ರ ಸಲಹಾ ಮಂಡಲಿಯು, 16ನೇ ನಿಯಮದ ಮೇರೆಗೆ ಚಲನಚಿತ್ರವನ್ನು ಪರೀಕ್ಷಿಸಿದ ತರುವಾಯ ಐದು ದಿವಸಗಳೊಳಗೆ, 12ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಚಲನಚಿತ್ರವನ್ನು ಅನುಮೋದಿಸುವುದಕ್ಕೆ ಸಂಬಂಧಿಸಿದಂತೆ ಅದರ ಶಿಫಾರಸ್ಸನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು. ಚಲನಚಿತ್ರ ಸಲಹಾ ಮಂಡಲಿಯ ಶಿಫಾರಸ್ಸನ್ನು ಪರಿಗಣಿಸಿದ ತರುವಾಯ ಮತ್ತು ಅದು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ, ರಾಜ್ಯ ಸರ್ಕಾರವು ಚಲನಚಿತ್ರವನ್ನು ಅನುಮೋದಿಸಲು ತೀರ್ಮಾನಿಸಿದರೆ, ಅದು ಚಲನಚಿತ್ರದ ಸರಬರಾಜಿಗಾಗಿ ಲೈಸೆನ್ಸ್‌ದಾರನು ಯಾರೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳಬಹುದೋ ಆ ವ್ಯಕ್ತಿಗಳು, ಫರ್ಮ್, ಸಂಸ್ಥೆ ಅಥವಾ ಸರ್ಕಾರದ ವಿಳಾಸಗಳೊಂದಿಗೆ ಕರ್ನಾಟಕ ರಾಜ್ಯಪತ್ರದಲ್ಲಿ ಚಲನಚಿತ್ರದ ಹೆಸರನ್ನು ಅಧಿಸೂಚಿಸತಕ್ಕದ್ದು:

ಪರಂತು, ರಾಜ್ಯ ಸರ್ಕಾರವು, ಚಲನಚಿತ್ರ ಅಧಿನಿಯಮ, 1952ರ (ಕೇಂದ್ರ ಅಧಿನಿಯಮ 1952ರ 37) ಮೇರೆಗೆ ಕೇಂದ್ರ ಚಲನಚಿತ್ರ ಪರಿಶೀಲನಾ ಮಂಡಲಿಯು ಸಾರ್ವಜನಿಕ ಪ್ರದರ್ಶನಕ್ಕಾಗಿ ಯೋಗ್ಯವೆಂದು ಪ್ರಮಾಣೀಕರಿಸಿಲ್ಲದ ಯಾವುದೇ ಚಲನಚಿತ್ರವನ್ನು ಅನುಮೋದಿಸತಕ್ಕದ್ದಲ್ಲ.

**20. ಚಲನಚಿತ್ರ ಪರೀಕ್ಷೆಗಾಗಿ ಸಂದಾಯ ಮಾಡಬೇಕಾದ ಫೀಜು.-** 18ನೇ ನಿಯಮದ ಮೇರೆಗೆ ಚಲನಚಿತ್ರದ ಪರೀಕ್ಷೆಗಾಗಿ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು ಮತ್ತು 17ನೇ ನಿಯಮದ ಮೇರೆಗೆ ಅದನ್ನು ಅರ್ಜಿಯೊಂದಿಗೆ ಸಂದಾಯ ಮಾಡತಕ್ಕದ್ದು.

**21. ಚಲನಚಿತ್ರದ ದ್ವಿಪ್ರತಿಗಳ ಪರೀಕ್ಷೆಯು ಅನಾವಶ್ಯಕ.-** ಎರಡನೆಯ ಚಿತ್ರವು ಮೊದಲನೆಯ ಪ್ರತಿಯೆಂದು ರುಜುವಾತಾದರೆ, ಹಿಂದೆ ಅನುಮೋದಿತವಾದ ಚಲನಚಿತ್ರಗಳ ದ್ವಿಪ್ರತಿಗಳು ಪರೀಕ್ಷೆ ಮತ್ತು ಅನುಮೋದನೆಯು ಅಗತ್ಯವಾಗಿರತಕ್ಕದ್ದಲ್ಲ.

**22. ಮಾರ್ಪಾಟು ಮಾಡಿದ ಚಲನಚಿತ್ರದ ಪರೀಕ್ಷೆ.-** ರಾಜ್ಯ ಸರ್ಕಾರವು ಯಾವುದೇ ಚಲನಚಿತ್ರವನ್ನು ಅನುಮೋದಿಸಿದ ತರುವಾಯ ಅದನ್ನು ಕತ್ತರಿಸುವ, ಸೇರಿಸುವ ಮೂಲಕ ಅಥವಾ ಅನ್ಯಥಾ ಮಾರ್ಪಡಿಸಿದರೆ ಅದನ್ನು ಚಲನಚಿತ್ರ ಸಲಹಾ ಮಂಡಲಿಯು ಮರು ಪರೀಕ್ಷೆ ಮಾಡತಕ್ಕದ್ದು ಮತ್ತು ರಾಜ್ಯ ಸರ್ಕಾರವು ಅನುಮೋದಿಸತಕ್ಕದ್ದು, ಅಂತಹ ಮರು ಪರೀಕ್ಷೆಯ ಫೀಜುಗಳು ಚಲನಚಿತ್ರಗಳ ಪರೀಕ್ಷೆಗಾಗಿ 20ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದಂತೆ ಅದೇ ಆಗಿರತಕ್ಕದ್ದು.

**23. ಪರೀಕ್ಷಿಸಿದ ಚಲನಚಿತ್ರಗಳ ರಿಜಿಸ್ಟರು.-** ಚಲನಚಿತ್ರ ಸಲಹಾ ಮಂಡಲಿಯ ಅಧ್ಯಕ್ಷರು ರಿಜಿಸ್ಟರ್‌ನಲ್ಲಿ ನಿರ್ವಹಿಸತಕ್ಕದ್ದು, ಈ ಕೆಳಕಂಡ ವಿವರಗಳನ್ನು ನಮೂದಿಸತಕ್ಕದ್ದು, ಎಂದರೆ.-

(i) ಪರೀಕ್ಷಿಸಿದ ಪ್ರತಿಯೊಂದು ಚಲನಚಿತ್ರದ ಹೆಸರು;

(ii) ಅನುಮೋದನೆಗಾಗಿ ಅರ್ಜಿ ಸಲ್ಲಿಸುವ ವ್ಯಕ್ತಿಗಳು, ಫರ್ಮ್ ಅಥವಾ ಸಂಸ್ಥೆಯ ಹೆಸರು;

(iii) ಚಲನಚಿತ್ರವನ್ನು ತಯಾರಿಸುವ ಮತ್ತು ಬಿಡುಗಡೆ ಮಾಡುವ ವ್ಯಕ್ತಿ ಅಥವಾ ಕಂಪನಿಯ ಹೆಸರು;

(iv) ಚಲನಚಿತ್ರವನ್ನು ಮೂಲತಃ ನಿರ್ಮಿಸಿದ ದೇಶದ ಹೆಸರು;

(v) ಪರೀಕ್ಷೆಯ ದಿನಾಂಕ;

(vi) ಮೀಟರುಗಳಲ್ಲಿ ಚಲನಚಿತ್ರದ ಉದ್ದ, ರೀಲುಗಳ ಸಂಖ್ಯೆ ಮತ್ತು ಮೀಟರುಗಳಲ್ಲಿ ಪ್ರತಿಯೊಂದು ರೀಲಿನ ಉದ್ದ;

(vii) ಅಂತಹ ಪರೀಕ್ಷೆಯ ಬಗ್ಗೆ ಮಂಡಲಿಯ ಷರಾಗಳು; ಮತ್ತು

(viii) ಸರ್ಕಾರದ ಅನುಮೋದನೆಯನ್ನು ತಿಳಿಸುವ ರಾಜ್ಯಪತ್ರದಲ್ಲಿ ಪ್ರಕಟವಾದ ಅಧಿಸೂಚನೆಯ ಸಂಖ್ಯೆ ಮತ್ತು ದಿನಾಂಕ.

## ಅಧ್ಯಾಯ – IV

## ಖಾಯಂ ಸಿನಿಮಾಗಳು ಅಥವಾ ಮಲ್ಟಿಪ್ಲೆಕ್ಸ್ ಸ್ಥಳದ ಅನುಮೋದನೆ

**24. ಖಾಯಂ ಸಿನಿಮಾ ಕಟ್ಟಡ ಅಥವಾ ಮಲ್ಟಿಪ್ಲೆಕ್ಸ್‌ನ ನಿರ್ಮಾಣ ಮಾಡಲು ನಿರಾಕ್ಷೇಪಣಾ ಪ್ರಮಾಣಪತ್ರಕ್ಕಾಗಿ ಅರ್ಜಿ.-** (1) ಖಾಯಂ ಸಿನಿಮಾ ಕಟ್ಟಡ ಅಥವಾ ಮಲ್ಟಿಪ್ಲೆಕ್ಸ್‌ನ್ನು ನಿರ್ಮಿಸಲು ಅಥವಾ ಅಸ್ತಿತ್ವದಲ್ಲಿರುವ ಕಟ್ಟಡವನ್ನು ಖಾಯಂ ಸಿನಿಮಾ ಕಟ್ಟಡ ಅಥವಾ ಮಲ್ಟಿಪ್ಲೆಕ್ಸ್‌ಗೆ ಪರಿವರ್ತಿಸಲು ಉದ್ದೇಶಿಸುವ ವ್ಯಕ್ತಿಯು, ಮೊದಲು ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ನಮೂನೆ-'ಎ ' ನಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿದಾರನು, ಸಂದರ್ಭಾನುಸಾರ ಉದ್ದೇಶಿತ ನಿವೇಶನ ಅಥವಾ ಪರಿವರ್ತಿಸಬೇಕಾದ ಕಟ್ಟಡದ ಮೇಲೆ ಸಾರ್ವಜನಿಕ ಮುಖ್ಯ ರಸ್ತೆಯಿಂದ ಸ್ಪಷ್ಟವಾಗಿ ಅದನ್ನು ನೋಡುವ ಹಾಗೆ ಅಂತಹ ಜಾಗದಲ್ಲಿ ಫಲಕದ ಮೇಲೆ, ಈ ಬಗ್ಗೆ ನಮೂನೆ-ಬಿ ನಲ್ಲಿ ನೋಟೀಸನ್ನು ಸಹ ಹಾಕತಕ್ಕದ್ದು. ಅಂತಹ ನೋಟೀಸು ಕನ್ನಡ ಮತ್ತು ಇಂಗ್ಲಿಷಿನಲ್ಲಿ ಇರತಕ್ಕದ್ದು. ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಅರ್ಜಿದಾರನಿಗೆ ಲೈಸೆನ್ಸನ್ನು ನಿರ್ಣಯಿಸುವವರೆಗೂ ಅರ್ಜಿಯನ್ನು ಸೂಚನಾ ಫಲಕದ ಮೇಲೆ ಆ ನೋಟೀಸನ್ನು ಪ್ರದರ್ಶಿಸತಕ್ಕದ್ದು. ಆ ಫಲಕವು ಗಾತ್ರದಲ್ಲಿ ಕನಿಷ್ಠ ಪಕ್ಷ 1.25 ಮೀ x 1.00 ಮೀ ಅಳತೆಯದ್ದಾಗಿರತಕ್ಕದ್ದು ಮತ್ತು ನೋಟೀಸು ದಪ್ಪವಾಗಿ ಮತ್ತು ಸ್ಪಷ್ಟವಾಗಿ ಸ್ಫುಟವಾಗಿ ಅಕ್ಷರಗಳಲ್ಲಿರತಕ್ಕದ್ದು.

(2) ಅರ್ಜಿಯು ಈ ಮುಂದಿನವುಗಳೊಂದಿಗೆ ಲಗತ್ತಿಸಿರತಕ್ಕದ್ದು,-

(i) ಟ್ರೆಸಿಂಗ್ ಚಲನಚಿತ್ರದ ಮೇಲೆ ಮುದ್ರಿತ ಒಂದು ಮೂಲ ನಕ್ಷೆಯೊಂದಿಗೆ ಆರು ಪ್ರತಿಗಳಲ್ಲಿ ಅಳತೆಗೆ ಸರಿಯಾಗಿ ಬರೆದ ಪಟ್ಟಣ ನಕ್ಷೆಯ ಉದ್ಧೃತ ಭಾಗ ಮತ್ತು ಡಿಜಿಟಲ್ ನಮೂನೆಯಲ್ಲಿ ಇರಬೇಕು ಮತ್ತು ಉದ್ದೇಶಿತ ನಿವೇಶನದಿಂದ ಚಲನಚಿತ್ರಗಳನ್ನು ಚಾಲನೆ ಮಾಡಿಕೊಂಡು ಬರುವ ಸಂದರ್ಭದಲ್ಲಿ 500 ಮೀಟರುಗಳು ಮತ್ತು 1000 ಮೀಟರುಗಳ ದೂರದವರೆಗೆ ಇರುವಂಥ ಸುತ್ತಮುತ್ತಲ ರಸ್ತೆಗಳು ಮತ್ತು ಕಟ್ಟಡಗಳನ್ನು ಸ್ಪಷ್ಟವಾಗಿ ಸೂಚಿಸುವ ಅದೇ ನಕ್ಷೆಯ ಆರು ಪ್ರಿಂಟುಗಳು ಅಥವಾ ಪ್ರತಿಗಳನ್ನು ಒದಗಿಸತಕ್ಕದ್ದು, ಸದರಿ ನಿವೇಶನದಿಂದ ಎಲ್ಲಾ ಶೈಕ್ಷಣಿಕ ಸಂಸ್ಥೆಗಳು, ಆಸ್ಪತ್ರೆಗಳು, ದೇವಾಲಯಗಳು ಅಥವಾ ಸಾರ್ವಜನಿಕರಿಗೆ ಮಹತ್ವವೆನಿಸುವ ಇತರೆ ಸ್ಥಳಗಳ ದೂರವನ್ನು ಸಹ ತೋರಿಸತಕ್ಕದ್ದು.

(ii) ಟ್ರೆಸಿಂಗ್ ಚಲನಚಿತ್ರದ ಮೇಲೆ ಮೂಲ ಮುದ್ರಿತ ಪ್ರತಿಯಲ್ಲಿ ನಿವೇಶನ ಯೋಜನೆ ಯಾವುದೇ ಅದಕ್ಕೆ ಸೇರಿಕೊಂಡ ಕಟ್ಟಡಗಳು, ಉಪಗೃಹಗಳು ಮತ್ತು ಇತರ ರಚನೆಗಳು, ಒಳದಾರಿಗಳು, ರಸ್ತೆಗಳು, ಮಾರ್ಗಗಳು,

ಬಾವಿಗಳು, ತೊಟ್ಟಿಗಳು, ನೀರೆತ್ತುವ ಕೊಳಾಯಿಗಳು, ಯಾವುದಾದರೂ ಇದ್ದರೆ ಅವುಗಳು, ಚರಂಡಿಗಳು, ನೀರಿನ ಚರಂಡಿ ಮತ್ತು ಪ್ರಮುಖ ಅನಿಲ ವಿತರಣಾ ವ್ಯವಸ್ಥೆಗಳು, ಭೂಮಿಯ ಒಳಗಿರುವ ಕೇಬಲ್ಲುಗಳು, ಮೇಲಿರುವ ಅತೀವ ಮತ್ತು ಹೆಚ್ಚಿನ ಅತೀವ ವೋಲ್ಟೇಜ್ ಲೈನ್‌ಗಳು, ಟೆಲಿಗ್ರಾಫ್ ಮತ್ತು ದೂರವಾಣಿ ಲೈನುಗಳು, ನದಿಗಳು ಅಥವಾ ನಾಲೆಗಳ ಅತೀವ ಪ್ರವಾಹ ಗುರುತುಗಳು, ಪಕ್ಕದ ಜಲಾಶಯದ ಗರಿಷ್ಠ ನೀರಿನ ಮಟ್ಟ, ಕೆರೆಗಳು ಪಕ್ಕದ ಬಾವಿಗಳ ನೀರಿನ ಮಟ್ಟ, ನಿವೇಶನದೊಳಗೆ ಮಳೆಗಾಲದಲ್ಲಿ ಉಂಟಾಗುವ ಕಾರಣಗಳು ಯಾವುವಾದರೂ ಇದ್ದರೆ ಅವುಗಳು, ಸ್ಥಳಾವಕಾಶ ಕಲ್ಪಿಸಬೇಕಾದ ಆಸನಗಳ ಸಂಖ್ಯೆಯೊಂದಿಗೆ ಚದರ ಮೀಟರುಗಳಲ್ಲಿ ಮುಕ್ತ ಪ್ರದೇಶಗಳು ಮತ್ತು ನಿವೇಶನ ಹಾಗೂ ಉದ್ದೇಶ ಕಟ್ಟಡದ ಅಳತೆಯನ್ನು ತೋರಿಸುವುದು ಚಿತ್ರಮಂದಿರ ಅಥವಾ ಮಲ್ಟಿಪ್ಲೆಕ್ಸ್ ಮತ್ತು ಅದರ ಆವರಣಗಳ ಬ್ಲಾಕ್ ಮಟ್ಟಗಳನ್ನು ತೋರಿಸುವ ಬ್ಲಾಕ್ ಮಟ್ಟದಲ್ಲಿ ಅದರಲ್ಲಿ ತೋರಿಸುವ 1:500ಕ್ಕಿಂತ ಕಡಿಮೆಯಲ್ಲದ ಅಳತೆಗೆ ಸರಿಯಾಗಿ ತೆಗೆದು ಆರು ಪ್ರತಿಗಳು ಸಹ ಲಗತ್ತಿಸತಕ್ಕದ್ದು.

(iii) ನಿರಾಕ್ಷೇಪಣಾ ಪ್ರಮಾಣಪತ್ರದ ಮಂಜೂರಾತಿಗಾಗಿ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಿದಂತೆ ಫೀಜುಗಳನ್ನು ಜಮೆ ಮಾಡಿರುವುದಕ್ಕೆ ಖಜಾನೆ ಚಲನ್.

**25. ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಆಕ್ಷೇಪಗಳನ್ನು ಆಹ್ವಾನಿಸುವುದು.**- (1) ಲೈಸೆನ್ಸ್ ನೀಡುವ ಪ್ರಾಧಿಕಾರಿಯು, 24ನೇ ನಿಯಮದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಸದರಿ ಪ್ರದೇಶದಲ್ಲಿ ವ್ಯಾಪಕ ಪ್ರಸಾರವುಳ್ಳ ಎರಡು ಸ್ಥಳೀಯ ವಾರ್ತಾ ಪತ್ರಿಕೆಗಳಲ್ಲಿ ಒಂದು ಕನ್ನಡ ಮತ್ತು ಒಂದು ಇಂಗ್ಲೀಷ್ ಭಾಷೆಯಲ್ಲಿ ಆಕ್ಷೇಪಣೆಗಳನ್ನು ಆಹ್ವಾನಿಸಿ ಪ್ರಕಟಿಸುವ ಮೂಲಕ ಅಂತಹ ಉದ್ದೇಶವನ್ನು ಸಾರ್ವಜನಿಕರಿಗೆ ಅರ್ಜಿದಾರನ ಖರ್ಚಿನಲ್ಲಿ ಅಧಿಸೂಚಿಸತಕ್ಕದ್ದು, ಅಂತಹ ನೋಟೀಸು `ಸಿ' ನಮೂನೆಯಲ್ಲಿರತಕ್ಕದ್ದು ಮತ್ತು ಆಕ್ಷೇಪಣೆಗಳನ್ನು ಆ ಅವಧಿಯೊಳಗೆ ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ಕಳುಹಿಸತಕ್ಕದ್ದು. ಆ ಅಂತಹ ಪ್ರಕಟಣೆಯ ದಿನಾಂಕದಿಂದ ಹದಿನೈದು ದಿನಗಳಾಗಿರತಕ್ಕದ್ದು. ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಖಾಯಂ ಸಿನಿಮಾ ಕಟ್ಟಡ ಮತ್ತು ಮಲ್ಟಿಪ್ಲೆಕ್ಸ್ ಸ್ಥಳಕ್ಕೆ ಉದ್ದೇಶಿತ ನಿವೇಶನದ ಸೂಕ್ತತೆ ಅಥವಾ ಅನ್ಯಥಾ ಅದಕ್ಕೆ ಸಂಬಂಧಿಸಿದಂತೆ ಅವರ ಅಭಿಪ್ರಾಯವನ್ನು ಪಡೆಯುವ ಉದ್ದೇಶಕ್ಕಾಗಿ ನಗರ ಪಾಲಿಕೆಯ ಪಟ್ಟಣ ಯೋಜನಾಧಿಕಾರಿ/ ನಗರಾಭಿವೃದ್ಧಿ ಪ್ರಾಧಿಕಾರಿ/ ಯೋಜನಾ ಪ್ರಾಧಿಕಾರಿ/ ಸಂದರ್ಭಾನುಸಾರ ಜಿಲ್ಲೆಯ ಪಟ್ಟಣ ಮತ್ತು ನಗರ ಯೋಜನೆಯ ಸಹಾಯಕ ನಿರ್ದೇಶಕರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಜಿಲ್ಲಾ ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ/ ನಗರ ಪೊಲೀಸ್ ಆಯುಕ್ತರು/ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಜಿಲ್ಲಾ ಅಗ್ನಿ ಶಾಮಕ ಅಧಿಕಾರಿ/ ಜಿಲ್ಲೆ ಅಥವಾ ಆ ಪ್ರದೇಶದ ವಿದ್ಯುತ್ ಪರಿಶೀಲಕರಿಗೆ ಅರ್ಜಿದಾರನು ಒದಗಿಸಿದ ಅದರ ಲಗತ್ತುಗಳು ಅಥವಾ ದಸ್ತಾವೇಜುಗಳೊಂದಿಗೆ ಏಕಕಾಲದಲ್ಲಿ ಅರ್ಜಿಯ ಪ್ರತಿಗಳನ್ನು ಕಳುಹಿಸತಕ್ಕದ್ದು.

(2) ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಆದಷ್ಟು ಬೇಗನೆ ಮತ್ತು ಯಾವುದೇ ಸಂದರ್ಭದಲ್ಲಿ (1)ನೇ ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಅವಧಿಯು ಮುಕ್ತಾಯಗೊಂಡ ತರುವಾಯ ಮೂವತ್ತು ದಿವಸಗಳನ್ನು ಮೀರದ ಅವಧಿಯೊಳಗಾಗಿ ಖಾಯಂ ಸಿನಿಮಾ ಕಟ್ಟಡ ಅಥವಾ ಮಲ್ಟಿಪ್ಲೆಕ್ಸ್ ಸ್ಥಾಪನೆಗಾಗಿ ಉದ್ದೇಶಿತ ನಿವೇಶನದ ಸೂಕ್ತತೆಯ ಬಗ್ಗೆ ಅಥವಾ ಅನ್ಯಥಾ ತೀರ್ಮಾನವನ್ನು ಕೈಗೊಳ್ಳತಕ್ಕದ್ದು. (1)ನೇ ಉಪ-ನಿಯಮದಲ್ಲಿ ನಮೂದಿಸಿದ ವಿವಿಧ ಪ್ರಾಧಿಕಾರಗಳು ಆದಷ್ಟು ಬೇಗ ಮತ್ತು ಯಾವುದೇ ಪ್ರಕರಣದಲ್ಲಿ (1)ನೇ ಉಪ-ನಿಯಮದಲ್ಲಿ ನಮೂದಿಸಲಾದ ಅವಧಿಯು ಮುಕ್ತಾಯಗೊಂಡ ತರುವಾಯ ಮೂವತ್ತು ದಿನಗಳ ಅವಧಿಯೊಳಗಾಗಿ ಅವರ ಅಭಿಪ್ರಾಯಗಳನ್ನು ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ತಿಳಿಸತಕ್ಕದ್ದು, ಗೊತ್ತುಪಡಿಸಿದ ಅವಧಿಯ ಒಳಗಾಗಿ ನಿರ್ದಿಷ್ಟಪಡಿಸಿದ ಪ್ರಾಧಿಕಾರಿಗಳು ಅವರ ಅಭಿಪ್ರಾಯಗಳನ್ನು ಒದಗಿಸದೆ ಇದ್ದರೆ, ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಕೊಡಲು ಆಕ್ಷೇಪಣೆ ಇಲ್ಲವೆಂದು ಭಾವಿಸತಕ್ಕದ್ದು.

(3) ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಖಾಯಂ ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಸ್ಥಳಕ್ಕೆ ನಿವೇಶನದ ಸೂಕ್ತತೆಯ ಬಗ್ಗೆ ಅಥವಾ ಅನ್ಯಥಾ ಇದಕ್ಕೆ ಸಂಬಂಧಿಸಿದ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ (1)ನೇ ಉಪ-ನಿಯಮದಲ್ಲಿ ನಮೂದಿಸಲಾದ ವಿವಿಧ ಪ್ರಾಧಿಕಾರಿಗಳ ಅಭಿಪ್ರಾಯಗಳನ್ನು ಮತ್ತು (1)ನೇ ಉಪ-ನಿಯಮದ ಮೇರೆಗಿನ ಪ್ರಕಟಣೆಗೆ ಉತ್ತರವಾಗಿ ಸ್ವೀಕರಿಸಲಾದ ಆಕ್ಷೇಪಣೆಗಳು ಯಾವುದಾದರೂ ಇದ್ದರೆ, ಅವುಗಳನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

**26. ನಿರಾಕ್ಷೇಪಣ ಪ್ರಮಾಣ ಪತ್ರವನ್ನು ನೀಡುವುದಕ್ಕಾಗಿ ಷರತ್ತುಗಳು.**-(1) ಯಾವುದೇ ಸಿನಿಮಾಕ್ಕೆ ಸಂಬಂಧಪಟ್ಟಂತೆ,-

(ಎ) ಸಿನಿಮಾ ನಿವೇಶನದ ಕನಿಷ್ಠ ಪ್ರದೇಶ,-

(i) ಉದ್ದೇಶಿತ ಸಿನಿಮಾ ಕಟ್ಟಡದೊಳಗಿನ ಆಸನಗಳ ಒಟ್ಟು ಸಂಖ್ಯೆಯು ನಾಲ್ಕು ನೂರು ಅಥವಾ ರಸ್ತೆಗೆ ಹೊಂದಿಕೊಂಡಂತೆ ಹದಿನೆಂಟು ಮೀಟರುಗಳಿಗಿಂತ ಕಡಿಮೆ ಇಲ್ಲದಂತೆ ಒಂದು ಒಂಭತ್ತು ನೂರು ಚದರ ಮೀಟರುಗಳಿಗಿಂತ ಕಡಿಮೆ ಇರುವ ಸಂದರ್ಭದಲ್ಲಿ;

(ii) ಉದ್ದೇಶಿತ ಸಿನಿಮಾ ಕಟ್ಟಡದೊಳಗಿನ ಆಸನಗಳ ಒಟ್ಟು ಸಂಖ್ಯೆಯು ಆರು ನೂರು ಅಥವಾ ರಸ್ತೆಗೆ ಹೊಂದಿಕೊಂಡಿರುವ ಒಂದು ಬದಿ ಹದಿನೆಂಟು ಮೀಟರುಗಳಿಗಿಂತ ಕಡಿಮೆ ಇಲ್ಲದಂತೆ, ಒಂದು ಸಾವಿರದ ಮುನ್ನೂರ ಐವತ್ತು ಚದರ ಮೀಟರುಗಳಿಗಿಂತ ಕಡಿಮೆ ಇರುವ ಸಂದರ್ಭದಲ್ಲಿ;

(iii) ಉದ್ದೇಶಿತ ಸಿನಿಮಾ ಕಟ್ಟಡದೊಳಗಿನ ಆಸನಗಳ ಒಟ್ಟು ಸಂಖ್ಯೆಯು ಎಂಟು ನೂರು ಇದ್ದು ಅಥವಾ ಸಿನಿಮಾ ಮಂದಿರದಲ್ಲಿ ಬಾಲ್ಕನಿ ಆಸನದ ವ್ಯವಸ್ಥೆ ಇಲ್ಲದಿರುವಲ್ಲಿ, ರಸ್ತೆಗೆ ಹೊಂದಿಕೊಂಡಿರುವ ಒಂದು ಬದಿ ಮೂವತ್ತು ಮೀಟರುಗಳಿಗಿಂತ ಕಡಿಮೆಯಿಲ್ಲದ, ಒಂದು ಸಾವಿರದ ಎಂಟು ನೂರು ಚದರ ಮೀಟರುಗಳಿಗಿಂತ ಕಡಿಮೆ ಇರುವ ಸಂದರ್ಭದಲ್ಲಿ;

(iv) ಉದ್ದೇಶಿತ ಸಿನಿಮಾ ಕಟ್ಟಡದೊಳಗಿನ ಆಸನಗಳ ಒಟ್ಟು ಸಂಖ್ಯೆಯು ಎಂಟು ನೂರು ಇದ್ದು ಅಥವಾ ಸಿನಿಮಾ ಮಂದಿರದಲ್ಲಿ ಬಾಲ್ಕನಿ ಆಸನದ ವ್ಯವಸ್ಥೆ ಇಲ್ಲದಿರುವಲ್ಲಿ, ರಸ್ತೆಗೆ ಹೊಂದಿಕೊಂಡಿರುವ ಒಂದು ಬದಿ ಇಪ್ಪತ್ತು ಮೀಟರುಗಳಿಗಿಂತ ಕಡಿಮೆಯಿಲ್ಲದಿದ್ದು, ಒಂದು ಸಾವಿರದ ಎರಡು ನೂರು ಚದರ ಮೀಟರುಗಳು ಕಡಿಮೆ ಇರುವ ಸಂದರ್ಭದಲ್ಲಿ;

(v) ಉದ್ದೇಶಿತ ಸಿನಿಮಾ ಕಟ್ಟಡದೊಳಗಿನ ಆಸನಗಳ ಒಟ್ಟು ಸಂಖ್ಯೆಯು ಒಂದು ಸಾವಿರ ಇದ್ದು ಅಥವಾ ಸಿನಿಮಾ ಮಂದಿರದಲ್ಲಿ ಬಾಲ್ಕನಿ ಆಸನದ ವ್ಯವಸ್ಥೆ ಇದ್ದು, ರಸ್ತೆಗೆ ಹೊಂದಿಕೊಂಡಿರುವ ಒಂದು ಬದಿ ಮೂವತ್ತು ಮೀಟರುಗಳಿಗಿಂತ ಕಡಿಮೆಯಿಲ್ಲದಿದ್ದು, ಎರಡು ಸಾವಿರದ ಎರಡು ನೂರ ಐವತ್ತು ಚದರ ಮೀಟರುಗಳಿಗಿಂತ ಕಡಿಮೆ ಇರುವ ಸಂದರ್ಭದಲ್ಲಿ;

(vi) ಉದ್ದೇಶಿತ ಸಿನಿಮಾ ಕಟ್ಟಡದೊಳಗಿನ ಆಸನಗಳ ಒಟ್ಟು ಸಂಖ್ಯೆಯು ಒಂದು ಸಾವಿರ ಇದ್ದು ಅಥವಾ ಸಿನಿಮಾ ಮಂದಿರದಲ್ಲಿ ಬಾಲ್ಕನಿ ಆಸನದ ವ್ಯವಸ್ಥೆ ಇದ್ದು, ರಸ್ತೆಗೆ ಹೊಂದಿಕೊಂಡಿರುವ ಒಂದು ಬದಿ ಇಪ್ಪತ್ತು ಮೀಟರುಗಳಿಗಿಂತ ಕಡಿಮೆ ಇಲ್ಲದಿರುವ, ಒಂದು ಸಾವಿರದ ಐದು ನೂರು ಚದರ ಮೀಟರುಗಳಿಗಿಂತ ಕಡಿಮೆ ಇರುವ ಸಂದರ್ಭದಲ್ಲಿ;

(vii) ಉದ್ದೇಶಿತ ಸಿನಿಮಾ ಕಟ್ಟಡದೊಳಗಿನ ಆಸನಗಳ ಒಟ್ಟು ಸಂಖ್ಯೆಯು ಒಂದು ಸಾವಿರದ ಇನ್ನೂರು ಇದ್ದು ಅಥವಾ ಸಿನಿಮಾ ಮಂದಿರದಲ್ಲಿ ಬಾಲ್ಕನಿ ಆಸನದ ವ್ಯವಸ್ಥೆ ಇಲ್ಲದಿರುವಲ್ಲಿ, ರಸ್ತೆಗೆ ಹೊಂದಿಕೊಂಡಿರುವ ಒಂದು ಬದಿಯು ಮೂವತ್ತಾರು ಮೀಟರುಗಳಿಗಿಂತ ಕಡಿಮೆಯಿಲ್ಲದಿದ್ದು, ಎರಡು ಸಾವಿರದ ಏಳು ನೂರು ಚದರ ಮೀಟರುಗಳಿಗಿಂತ ಕಡಿಮೆ ಇರುವ ಸಂದರ್ಭದಲ್ಲಿ;

(viii) ಉದ್ದೇಶಿತ ಸಿನಿಮಾ ಕಟ್ಟಡದೊಳಗಿನ ಆಸನಗಳ ಒಟ್ಟು ಸಂಖ್ಯೆಯು ಒಂದು ಸಾವಿರದ ಇನ್ನೂರು ಇದ್ದು ಅಥವಾ ಸಿನಿಮಾ ಮಂದಿರದಲ್ಲಿ ಬಾಲ್ಕನಿ ಆಸನದ ವ್ಯವಸ್ಥೆ ಇದ್ದು, ರಸ್ತೆಗೆ ಹೊಂದಿಕೊಂಡಿರುವ ಒಂದು ಬದಿ ಮೂವತ್ತು ಮೀಟರುಗಳಿಗಿಂತ ಕಡಿಮೆ ಇಲ್ಲದ, ಒಂದು ಸಾವಿರದ ಎಂಟು ನೂರು ಚದರ ಮೀಟರುಗಳಿಗಿಂತ ಕಡಿಮೆ ಇರುವ ಸಂದರ್ಭದಲ್ಲಿ;

(ಬಿ) (i) ಸಿನಿಮಾ ನಿವೇಶನವು, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ ಮೇರೆಗೆ ಸಕ್ಷಮ ಪ್ರಾಧಿಕಾರದಿಂದ ಆ ಪ್ರದೇಶಕ್ಕಾಗಿ ಸಿದ್ಧಪಡಿಸಿದ ಮುಖ್ಯ ಯೋಜನೆಯಲ್ಲಿ ಮೀಸಲಿಟ್ಟ ಭೂಮಿ ಉಪಯೋಗದ ಸಂಬಂಧದಲ್ಲಿ ಅನುಮತಿಸಬಹುದಾದ ವಲಯಗಳಲ್ಲಿ ಇರುವ ಸಂದರ್ಭದಲ್ಲಿ:

ಪರಂತು, ಮುಖ್ಯ ಯೋಜನೆಗಳನ್ನು ಸಿದ್ಧಪಡಿಸದೆ ಇರುವಲ್ಲಿ, ಅಸ್ತಿತ್ವದಲ್ಲಿರುವ ಪ್ರಧಾನ ವಾಣಿಜ್ಯ ಪ್ರದೇಶಗಳನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು;

(ii) ಗ್ರಾಮೀಣ ಪ್ರದೇಶಗಳಲ್ಲಿ, ಸಿನಿಮಾ ನಿಯಮಗಳ ಮೇರೆಗೆ, ರಸ್ತೆಯ ಅಗಲ ಮತ್ತು ಗೊತ್ತುಪಡಿಸಲಾದ ಎಲ್ಲ ಇತರೆ ಷರತ್ತುಗಳಿಗೆ ಸಂಬಂಧಿಸಿದಂತೆ ಷರತ್ತುಗಳನ್ನು ಪೂರೈಸಿದ್ದರೆ ಮತ್ತು ಸಕ್ಷಮ ಪ್ರಾಧಿಕಾರಿಯು ಭೂಮಿಯ ಉಪಯೋಗದ ಪರಿವರ್ತನೆಗೆ ಸಂಬಂಧಿಸಿದಂತೆ ಕಾನೂನುಗಳನ್ನು ಸಹ ಪೂರೈಸಿರುವಲ್ಲಿ, ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಅನುಮತಿಸಬಹುದಾದ ಖಾಯಂ ಸಿನಿಮಾ ಮಂದಿರ ಅಥವಾ ಮಲ್ಟಿಪ್ಲೆಕ್ಸ್‌ನ ಮುಖ್ಯ ಯೋಜನೆಗಳು ಇಲ್ಲದಿರುವ ಸಂದರ್ಭಗಳಲ್ಲಿ;

(ಸಿ) ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ನಿವೇಶನವು ಕಾಲುದಾರಿಯನ್ನು ಒಳಗೊಂಡು ರಸ್ತೆಯ ಗರಿಷ್ಟ ಅಗಲವು ಸಾರ್ವಜನಿಕ ರಸ್ತೆಯ ಬದಿಯಿಂದ ರಸ್ತೆಯ ನಗರ ಪ್ರದೇಶಗಳಲ್ಲಿ 12 ಮೀಟರುಗಳು ಇರತಕ್ಕದ್ದು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕಾಲುದಾರಿಯನ್ನು ಒಳಗೊಂಡು 9 ಮೀಟರುಗಳು ಇರತಕ್ಕದ್ದು;

ಪರಂತು, ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ರಾಷ್ಟ್ರೀಯ ಹೆದ್ದಾರಿ/ ರಾಜ್ಯ ಹೆದ್ದಾರಿ/ ಪ್ರಮುಖ ರಸ್ತೆಗಳನ್ನು ಹೊರತುಪಡಿಸಿ, ಸಾರ್ವಜನಿಕ ರಸ್ತೆಯ ಬದಿ ಇದ್ದರೆ, ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಲಿಖಿತದಲ್ಲಿ ಆದೇಶದ ಮೂಲಕ ಅಂತಹ ಷರತ್ತುಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು ಅನುಮತಿಸಬಹುದು, ಕಾಲುದಾರಿಯು ಒಳಗೊಂಡು ರಸ್ತೆಯ ಕನಿಷ್ಠ ಅಗಲವು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಒಂಬತ್ತು ಮೀಟರುಗಳಿರತಕ್ಕದ್ದು.

(ಡಿ) ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡವು, 8 ಮೀಟರುಗಳ ಮುಂಭಾಗದ ಸೆಟ್‌ಬ್ಯಾಕ್‌ನ್ನು, ಯಾವುದು ಹೆಚ್ಚಾಗಿರುವುದೋ ಅಷ್ಟನ್ನು ಅಥವಾ ಕರ್ನಾಟಕ ಹೆದ್ದಾರಿ ನಿಯಮಗಳು, 1966ರಲ್ಲಿ ಇರುವಂತೆ ಹೊಂದಿರತಕ್ಕಂತೆ ಇರುವ ಹೊರತು;

(ಇ) ಸಿನಿಮಾ ನಿವೇಶನವು, ಪ್ರತಿ ಆರು ಮೀಟರುಗಳ ಕನಿಷ್ಠ ಅಗಲವನ್ನು ಹೊಂದಿರತಕ್ಕಂಥ ಸಾರ್ವಜನಿಕ ರಸ್ತೆಗಳ ಮೇಲೆ ಸಾರ್ವಜನಿಕರಿಗೆ ಸೂಕ್ತ ಪ್ರವೇಶ ಮತ್ತು ನಿರ್ಗಮನ ಸಾಧನಗಳನ್ನು ಹೊಂದಿರುವ ಹೊರತು;

(ಎಫ್) ಸಿನಿಮಾ ನಿವೇಶನವು, ಈ ನಿಯಮಗಳು ಪ್ರಾರಂಭವಾದಂದು ಇದ್ದಂತೆ ಇರುವ ಚಿತ್ರಮಂದಿರಕ್ಕಾಗಿ,-

(i) ಹತ್ತು ಲಕ್ಷ ಮತ್ತು ಅದಕ್ಕೂ ಮೇಲ್ಪಟ್ಟ ಜನಸಂಖ್ಯೆಯನ್ನು ಹೊಂದಿರುವ ಸ್ಥಳಗಳಲ್ಲಿ ಇಪ್ಪತ್ತು ಕಾರುಗಳಿಗಾಗಿ ಕನಿಷ್ಠ ಸ್ಥಳಾವಕಾಶಕ್ಕೆ ಒಳಪಟ್ಟು, ಪ್ರತಿ ಐವತ್ತು ಆಸನಗಳಿಗೆ ಒಂದು ಕಾರು ನಿಲ್ದಾಣದಂತೆ;

(ii) ಒಂದರಿಂದ ಹತ್ತು ಲಕ್ಷದ ಒಳಗಿನ ಜನಸಂಖ್ಯೆ ಹೊಂದಿರುವ ಸ್ಥಳಗಳಲ್ಲಿ ಹದಿನೈದು ಕಾರುಗಳಿಗಾಗಿ ಕನಿಷ್ಠ ಸ್ಥಳಾವಕಾಶಕ್ಕೆ ಒಳಪಟ್ಟು ಪ್ರತಿ ಐವತ್ತು ಆಸನಗಳಿಗೆ ಒಂದು ಕಾರು ನಿಲ್ದಾಣದಂತೆ;

(iii) ಐವತ್ತು ಸಾವಿರ ಮತ್ತು ಒಂದು ಲಕ್ಷದ ಒಳಗಿನ ಜನ ಸಂಖ್ಯೆಯನ್ನು ಹೊಂದಿರುವ ಸ್ಥಳಗಳಲ್ಲಿ ಹತ್ತು ಕಾರುಗಳಿಗಾಗಿ ಕನಿಷ್ಠ ಸ್ಥಳಾವಕಾಶಕ್ಕೆ ಒಳಪಟ್ಟು, ಪ್ರತಿ ಐವತ್ತು ಆಸನಗಳಿಗೆ ಒಂದು ಕಾರು ನಿಲ್ದಾಣದಂತೆ;

(iv) ಐವತ್ತು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ಸ್ಥಳಗಳಲ್ಲಿ ಐದು ಕಾರುಗಳಿಗಾಗಿ ಕನಿಷ್ಠ ಸ್ಥಳಾವಕಾಶಕ್ಕೆ ಒಳಪಟ್ಟು ಪ್ರತಿ ಐವತ್ತು ಆಸನಗಳಿಗೆ ಒಂದು ಕಾರು ನಿಲ್ದಾಣದಂತೆ;

- ಸೂಕ್ತ ನಿಲ್ದಾಣ ಸ್ಥಳಾವಕಾಶ ಹೊಂದಿರುವ ಹೊರತು; ಮತ್ತು

(ಜಿ) ಸಿನಿಮಾ ನಿವೇಶನವು, ಈ ನಿಯಮಗಳ ಪ್ರಾರಂಭದ ದಿನಾಂಕದಂದು ಮತ್ತು ದಿನಾಂಕದಿಂದ ಪ್ರಸ್ತಾವಿತ ಥಿಯೇಟರುಗಳಿಗಾಗಿ,-

(i) ಹತ್ತು ಲಕ್ಷ ಮತ್ತು ಅದಕ್ಕೂ ಮೇಲ್ಪಟ್ಟ ಜನಸಂಖ್ಯೆಯನ್ನು ಹೊಂದಿರುವ ಸ್ಥಳಗಳಲ್ಲಿ ಇಪ್ಪತ್ತು ಕಾರುಗಳಿಗಾಗಿ ಕನಿಷ್ಠ ಸ್ಥಳಾವಕಾಶಕ್ಕೆ ಒಳಪಟ್ಟು, ಖಾಯಂ ಸಿನಿಮಾ ಥಿಯೇಟರುಗಳಿಗಾಗಿ ಪ್ರತಿ ಇಪ್ಪತ್ತೈದು ಆಸನಗಳಿಗೆ ಒಂದು ಕಾರು ನಿಲ್ದಾಣದಂತೆ ಮತ್ತು ಮಲ್ಟಿಪ್ಲೆಕ್ಸ್‌ಗಳಿಗಾಗಿ ಪ್ರತಿ ಇಪ್ಪತ್ತೈದು ಆಸನಗಳಿಗೆ ಒಂದು ಕಾರು ನಿಲ್ದಾಣದಂತೆ;

(ii) ಒಂದರಿಂದ ಹತ್ತು ಲಕ್ಷದ ಒಳಗಿನ ಜನಸಂಖ್ಯೆ ಹೊಂದಿರುವ ಸ್ಥಳಗಳಲ್ಲಿ ಹದಿನೈದು ಕಾರುಗಳಿಗಾಗಿ ಕನಿಷ್ಠ ಸ್ಥಳಾವಕಾಶಕ್ಕೆ ಒಳಪಟ್ಟು, ಖಾಯಂ ಸಿನಿಮಾ ಥಿಯೇಟರುಗಳಿಗಾಗಿ ಪ್ರತಿ ಐವತ್ತು ಆಸನಗಳಿಗೆ ಒಂದು ಕಾರು ನಿಲ್ದಾಣದಂತೆ ಮತ್ತು ಮಲ್ಟಿಪ್ಲೆಕ್ಸ್‌ಗಳಿಗಾಗಿ ಪ್ರತಿ ಇಪ್ಪತ್ತೈದು ಆಸನಗಳಿಗೆ ಒಂದು ಕಾರು ನಿಲ್ದಾಣದಂತೆ;

(iii) ಐವತ್ತು ಸಾವಿರ ಮತ್ತು ಒಂದು ಲಕ್ಷದ ಒಳಗಿನ ಜನ ಸಂಖ್ಯೆಯನ್ನು ಹೊಂದಿರುವ ಸ್ಥಳಗಳಲ್ಲಿ ಹತ್ತು ಕಾರುಗಳಿಗಾಗಿ ಕನಿಷ್ಠ ಸ್ಥಳಾವಕಾಶಕ್ಕೆ ಒಳಪಟ್ಟು, ಸಿನಿಮಾ ಥಿಯೇಟರುಗಳಿಗಾಗಿ ಪ್ರತಿ ಐವತ್ತು ಆಸನಗಳಿಗೆ ಒಂದು ಕಾರು ನಿಲ್ದಾಣದಂತೆ ಮತ್ತು ಮಲ್ಟಿಪ್ಲೆಕ್ಸ್‌ಗಳಿಗಾಗಿ ಪ್ರತಿ ಇಪ್ಪತ್ತೈದು ಆಸನಗಳಿಗೆ ಒಂದು ಕಾರು ನಿಲ್ದಾಣದಂತೆ;

(iv) ಐವತ್ತು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ಸ್ಥಳಗಳಲ್ಲಿ ಐದು ಕಾರುಗಳಿಗಾಗಿ ಕನಿಷ್ಠ ಸ್ಥಳಾವಕಾಶಕ್ಕೆ ಒಳಪಟ್ಟು, ಸಿನಿಮಾ ಥಿಯೇಟರುಗಳಿಗಾಗಿ ಪ್ರತಿ ಐವತ್ತು ಆಸನಗಳಿಗೆ ಒಂದು ಕಾರು ನಿಲ್ದಾಣದಂತೆ ಮತ್ತು ಮಲ್ಟಿಪ್ಲೆಕ್ಸ್‌ಗಳಿಗಾಗಿ ಪ್ರತಿ ಇಪ್ಪತ್ತೈದು ಆಸನಗಳಿಗೆ ಒಂದು ಕಾರು ನಿಲ್ದಾಣದಂತೆ;

- ಸೂಕ್ತ ನಿಲ್ದಾಣ ಸ್ಥಳಾವಕಾಶವನ್ನು ಹೊಂದಿರುವ ಹೊರತು;

(ಹೆಚ್) ಈ ನಿಯಮಗಳ ಪ್ರಾರಂಭದ ದಿನಾಂಕದಂದು ಇರುವ ಸಿನಿಮಾ ನಿವೇಶನವು ಮತ್ತು ಮಲ್ಟಿಪ್ಲೆಕ್ಸ್ ಮತ್ತು ಈ ನಿಯಮಗಳ ಪ್ರಾರಂಭದ ದಿನಾಂಕದಂದು ಮತ್ತು ದಿನಾಂಕದಿಂದ ಪ್ರಸ್ತಾವಿತ ಸಿನಿಮಾ ನಿವೇಶನ ಮತ್ತು ಮಲ್ಟಿಪ್ಲೆಕ್ಸ್ ಸೂಕ್ತ ನಿಲ್ದಾಣದ ಸ್ಥಳಾವಕಾಶವನ್ನು ಹೊಂದಿರಬೇಕು,-

(i) ಕಾರು ನಿಲ್ದಾಣಕ್ಕೆ ಅಗತ್ಯಪಡಿಸಿದ ಸಂಖ್ಯೆಯ ಶೇಕಡಾ ಇಪ್ಪತ್ತೈದರಷ್ಟು ಹೆಚ್ಚುವರಿಯಾಗಿ ಎರಡು ಮತ್ತು ಮೂರು ಚಕ್ರಗಳ ವಾಹನಗಳಿಗಾಗಿ, ಐವತ್ತು ಸೈಕಲುಗಳ ಕನಿಷ್ಠತೆಗೊಳಪಟ್ಟು ಸೈಕಲು ನಿಲ್ದಾಣಕ್ಕೆಂದು ಒಳಗೊಂಡು ಸ್ಥಳಾವಕಾಶವನ್ನು ಒದಗಿಸತಕ್ಕದ್ದು;

(ii) ಮಲ್ಟಿಪ್ಲೆಕ್ಸ್‌ನ ಸಂದರ್ಭದಲ್ಲಿ, ವಾಹನ ನಿಲ್ದಾಣ ಅಗತ್ಯತೆಯು, ಮೇಲೆ ನಿರ್ದಿಷ್ಟಪಡಿಸಿದಂತಿರತಕ್ಕದ್ದು ಅಥವಾ ಯಾವುದು ಹೆಚ್ಚು ಸ್ಥಳವೋ ಆ ಸಂಬಂಧಪಟ್ಟ ವಲಯ ನಿಯಂತ್ರಣಗಳಲ್ಲಿ ಒದಗಿಸಿದಂತಿರತಕ್ಕದ್ದು. ಅಂತಹ ಸಂದರ್ಭಗಳಲ್ಲಿ, ಥಿಯೇಟರಿನ ಭಾಗದ ವಾಹನ ನಿಲ್ದಾಣವನ್ನು, ಸಂಪೂರ್ಣ ಕಟ್ಟಡದ ಒಟ್ಟು ನಿಲ್ದಾಣ ಅಗತ್ಯತೆಯಲ್ಲಿ ಪ್ರತ್ಯೇಕವಾಗಿ ಮೀಸಲಿಡತಕ್ಕದ್ದು.

ಪರಂತು, ವಿಕಲಚೇತನ ವ್ಯಕ್ತಿಗಳಿಗಾಗಿ ಸೂಕ್ತ ನಿಲ್ದಾಣ ಏರ್ಪಾಟುಗಳನ್ನು ಮಾಡತಕ್ಕದ್ದು.

(ಐ) ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡದ ಮತ್ತು ಆವರಣ ಗೋಡೆಯ ಒಳಪರಿಮಿತಿಗಳ ನಡುವಣ ಮತ್ತು ಅದೇ ಆವರಣದಲ್ಲಿನ ಸಿನಿಮಾ ಕಟ್ಟಡ ಮತ್ತು ಎಲ್ಲ ಇತರ ಕಟ್ಟಡಗಳ ನಡುವಣ ಸ್ಪಷ್ಟ ದೂರವು ಪ್ರವೇಶ ದ್ವಾರದ ಕಡೆ ಎಂಟು ಮೀಟರುಗಳಿಗಿಂತ ಮತ್ತು ಇನ್ನೊಂದು ಕಡೆ ನಾಲ್ಕೂವರೆ ಮೀಟರುಗಳಿಗಿಂತ ಕಡಿಮೆಯಿಲ್ಲದಷ್ಟು ಇರುವ ಹೊರತು:

ಪರಂತು, ಇದು ಅಸ್ತಿತ್ವದಲ್ಲಿರುವ ಯಾವುದೇ ಸಿನಿಮಾ ಥಿಯೇಟರುಗಳಿಗೆ ಮತ್ತು ಕರ್ನಾಟಕ ಸಿನಿಮಾ (ನಿಯಂತ್ರಣ) ನಿಯಮಗಳು, 2014 ಜಾರಿಗೆ ಬರುವುದಕ್ಕೆ ಮುಂಚೆ ನಿರಾಕ್ಷೇಪಣ ಪ್ರಮಾಣಪತ್ರ ನೀಡಲಾದಂಥ ಸಿನಿಮಾ ಆವರಣಗಳಿಗೆ ಅನ್ವಯವಾಗತಕ್ಕದ್ದಲ್ಲ;

ಮತ್ತೂ ಪರಂತು, ಮಲ್ಟಿಪ್ಲೆಕ್ಸ್ ಕಟ್ಟಡದ ಸಂದರ್ಭದಲ್ಲಿ, ದೂರವು, ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು ಅಥವಾ ಸಂಬಂಧಪಟ್ಟ ವಲಯ ನಿಯಂತ್ರಣಗಳಲ್ಲಿ ಯಾವುದು ಹೆಚ್ಚೋ ಅದರಂತೆ ಇರತಕ್ಕದ್ದು.

(ಜೆ) ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ನಿವೇಶನವು, ಸಂಚಾರದ ತೊಂದರೆಗಳು ಅಥವಾ ಸಮಸ್ಯೆಗಳು ಉಂಟು ಮಾಡುವ ಸಂಭವವಿಲ್ಲದಿರುವ ಸ್ಥಳದಲ್ಲಿ ಇರುವ ಹೊರತು;

(ಕೆ) ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ನಿವೇಶನವು,-

(ಎ) (i) ಯಾವುದೇ ಅಸ್ತಿತ್ವದಲ್ಲಿರುವ ಪೆಟ್ರೋಲ್ ಬಂಕ್ ಅಥವಾ ಪೆಟ್ರೋಲ್ ಬಂಕ್‌ಗೆ ಲೈಸೆನ್ಸ್ ಪಡೆದಿರುವ ಸ್ಥಳ ಮತ್ತು ಆಗ್ನಿ ಸಂಭಾವ್ಯ ಇತರ ಸ್ಥಳಗಳು; ಅಥವಾ

(ii) ಉಪಯೋಗದಲ್ಲಿರುವ ಸಮುದಾಯ ಆರಾಧನೆಯ ಯಾವುದೇ ಸ್ಥಳ, ಸುಡುಗಾಡು, ಸಮಾಧಿ ಭೂಮಿ ಅಥವಾ ಗೋರಿ ಸ್ಥಳ; ಅಥವಾ

(iii) ಯಾವುದೇ ಮನ್ನಣೆ ಪಡೆದ ಶೈಕ್ಷಣಿಕ ಸಂಸ್ಥೆ ಅಥವಾ ಅಂತಹ ಶೈಕ್ಷಣಿಕ ಸಂಸ್ಥೆಗಳಿಗೆ ಹೊಂದಿಕೊಂಡಿರುವ ಯಾವುದೇ ವಸತಿ ಸಂಸ್ಥೆಯಿಂದ; ಅಥವಾ

(iv) ಯಾವುದೇ ಸಾರ್ವಜನಿಕ ಅಸ್ಪತ್ರೆ ಅಥವಾ ಖಾಸಗಿ ನರ್ಸಿಂಗ್ ಹೋಂನಿಂದ;

(v) ಯಾವುದೇ ಮನ್ನಣೆ ಪಡೆದ ಅನಾಥಾಲಯದಿಂದ; ಅಥವಾ

(vi) ಯಾವುದೇ ಜನನಿಬಿಡ ವಸತಿ ಪ್ರದೇಶ ಅಥವಾ ವ್ಯಾಪಾರ ಉದ್ದೇಶಗಳಿಂದ ಭಿನ್ನವಾದ ನಿವಾಸದ ಉದ್ದೇಶಗಳಿಗಾಗಿ ಸಾಮಾನ್ಯವಾಗಿ ಉಪಯೋಗಿಸಿದ ಪ್ರದೇಶದಿಂದ

- ಐವತ್ತು ಮೀಟರುಗಳಿಗಿಂತ ಕಡಿಮೆಯಿಲ್ಲದ ದೂರದಲ್ಲಿರತಕ್ಕ ಹೊರತು; ಮತ್ತು

ಪರಂತು, ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಪ್ರಸ್ತಾವನೆಯು ಧ್ವನಿನಿರೋಧಕ ಸಿನಿಮಾ ಕಟ್ಟಡವನ್ನು ನಿರ್ಮಿಸುವುದಕ್ಕೆ ಆಗಿದ್ದರೆ, ಆತನ ವಿವೇಚನಾನುಸಾರ, ಸಾರ್ವಜನಿಕ ಹಿತಾಸಕ್ತಿಯಲ್ಲಿ ಉದ್ದೇಶಿತ
ನಿವೇಶನವನ್ನು ಪರಿಶೀಲಿಸಿದ ತರುವಾಯ ಬರಹದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ, ಆ ಸ್ಥಳದ ಸೂಕ್ತತೆಯನ್ನು ಪರ್ಯಾಲೋಚಿಸಿ ಪ್ರತಿಯೊಂದು ಪ್ರಕರಣದಲ್ಲಿ ವಿಧಿಸಲು ಆತನು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಮೇಲೆ ನಿರ್ದಿಷ್ಟಪಡಿಸಿದ ಎಲ್ಲಾ ಅಥವಾ ಯಾವುದೇ ಷರತ್ತುಗಳನ್ನು ಸಡಿಲಗೊಳಿಸಬಹುದು;

ಮತ್ತೂ ಪರಂತು, ಪ್ರತಿಯೊಂದು ಪ್ರಕರಣದ ಸಂಗತಿಗಳು ಮತ್ತು ಸಂದರ್ಭಗಳನ್ನು ಪರ್ಯಾಲೋಚಿಸಿ ಬೇರೆ ಬೇರೆ ಪ್ರಕರಣಗಳಲ್ಲಿ ಬೇರೆ ಬೇರೆ ಹೆಚ್ಚುವರಿ ಷರತ್ತುಗಳನ್ನು ವಿಧಿಸಬಹುದು;

(ಬಿ) ಯಾವುದೇ ಸಂರಕ್ಷಿತ ಸ್ಮಾರಕ, ರಕ್ಷಣಾ ಸ್ಥಾವರಗಳು, ರಾಷ್ಟ್ರೀಯ ಉದ್ಯಾನವನಗಳು, ವಸ್ತು ಸಂಗ್ರಹಾಲಯಗಳು ಮತ್ತು ಪ್ರಧಾನ ಟೆಲಿಫೋನ್ ಅಥವಾ ಟೆಲಿಗ್ರಾಫ್ ಅಥವಾ ವೈರ್ಲೆಸ್ ಅಥವಾ ದೂರ ಸಂಪರ್ಕ ಸ್ಥಾವರಗಳು ಇರುವಂಥ ಕಟ್ಟಡಗಳಿಂದ ಒಂದು ನೂರು ಮೀಟರುಗಳಿಗಿಂತ ಕಡಿಮೆಯಿಲ್ಲದ ದೂರ ಇದ್ದ ಹೊರತು;

(1) ಸಿನಿಮಾ ನಿವೇಶನವು ಎತ್ತರದ ಸ್ಥಳದಲ್ಲಿರತಕ್ಕದ್ದು ಅಥವಾ ಸೂಕ್ತ ಚರಂಡಿ ವ್ಯವಸ್ಥೆಗಳನ್ನು ಹೊಂದಿದ್ದು ತೇವರಹಿತವಾಗಿದ್ದ ಹೊರತು;

(2) (ಎ) ಹತ್ತು ಸಾವಿರ ಅಥವಾ ಅದಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ ಸ್ಥಳಗಳಲ್ಲಿ, ಅನುಮತಿಸಬೇಕಾದ ಸಿನಿಮಾಗಳ ಸಂಖ್ಯೆಯನ್ನು,-

(i) ಅದು ಮಹಾನಗರ ಪ್ರದೇಶವಾಗಿದ್ದರೆ, ಪ್ರತಿ ಇಪ್ಪತ್ತು ಸಾವಿರ ಜನಸಂಖ್ಯೆ ಅಥವಾ ಹತ್ತು ಸಾವಿರವನ್ನು ಮೀರುವ ಅದರ ಭಾಗಕ್ಕಾಗಿ ಒಂದು ಸಿನಿಮಾದ ಆಧಾರದ ಮೇಲೆ; ಮತ್ತು

(ii) ಇತರ ಸ್ಥಳಗಳಲ್ಲಿ, ಪ್ರತಿ ಹತ್ತು ಸಾವಿರ ಜನಸಂಖ್ಯೆ ಅಥವಾ ಐದು ಸಾವಿರವನ್ನು ಮೀರುವ ಅದರ ಭಾಗಕ್ಕೆ ಒಂದು ಸಿನಿಮಾದ ಆಧಾರದ ಮೇಲೆ,

- ನಿರ್ಧರಿಸತಕ್ಕದ್ದು;

(ಬಿ) ಐದು ಲಕ್ಷ ಮತ್ತು ಅದಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಪಟ್ಟಣಗಳು ಮತ್ತು ನಗರಗಳಲ್ಲಿ ಒಂದರಿಂದ ಒಂದಕ್ಕೆ ನಾಲ್ಕು ನೂರು ಮೀಟರುಗಳ ದೂರದೊಳಗೆ ಸಿನಿಮಾವನ್ನು ಸ್ಥಾಪಿಸಲು ಅನುಮತಿಸತಕ್ಕದ್ದಲ್ಲ.

(3) (2)ನೇ ಉಪ-ನಿಯಮದಲ್ಲಿರುವುದಾವುದೂ, ಸಿನಿಮಾ ಕಟ್ಟಡವು, ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಒಡತನದಲ್ಲಿದ್ದರೆ, ಮಹಾನಗರ ಪ್ರದೇಶದಲ್ಲಿ ಸಿನಿಮಾಗಳ ಸ್ಥಾಪನೆಗಾಗಿ ಅನ್ವಯವಾಗತಕ್ಕದ್ದಲ್ಲ.

(4) ಮಹಾನಗರ ಪ್ರದೇಶದಲ್ಲಿನ ಪ್ರತಿಯೊಂದು ವಾರ್ಡು 7ನೇ ಪ್ರಕರಣದ ಉದ್ದೇಶಕ್ಕಾಗಿ ಒಂದು ಪ್ರದೇಶವಾಗಿರತಕ್ಕದ್ದು. ಲೈಸೆನ್ಸ್ ನೀಡುವ ಪ್ರಾಧಿಕಾರಿಯು 6ನೇ ಪ್ರಕರಣದ ಉಪಬಂಧಗಳು ಮತ್ತು (2)ನೇ ಉಪನಿಯಮದ ಉಪಬಂಧಗಳನ್ನು ಗಮನದಲ್ಲಿರಿಸಿ, ಸದರಿ (2)ನೇ ಉಪನಿಯಮದ ಉದ್ದೇಶಕ್ಕಾಗಿ ಅಂತಹ ಪ್ರತಿಯೊಂದು ವಾರ್ಡು ಸ್ಥಳವಾಗಿದಿದ್ದರೆ ಹೇಗೋ ಹಾಗೆ, ಅಂತಹ ಪ್ರತಿಯೊಂದು ವಾರ್ಡಿನಲ್ಲಿ ಸದರಿ ಅಧಿನಿಯಮದ ಮೇರೆಗೆ ಲೈಸನ್ಸ್ ನೀಡಬಹುದಾದ ಸ್ಥಳಗಳ ಸಂಖ್ಯೆಯನ್ನು ಪರಿಮಿತಿಗೊಳಿಸಬಹುದು;

ಪರಂತು, ಅಂತಹ ಎಲ್ಲಾ ವಾರ್ಡುಗಳಿಗೆ ಸಂಬಂಧಿಸಿದಂತೆ ಹಾಗೆ ನಿರ್ಧರಿಸಿದ ಸ್ಥಳಗಳ ಒಟ್ಟು ಸಂಖ್ಯೆಯು ಮಹಾನಗರ ಪ್ರದೇಶವನ್ನು ಒಟ್ಟಾರೆ ತೆಗೆದುಕೊಂಡು ಅದಕ್ಕೆ ಸಂಬಂಧಿಸಿದಂತೆ (2)ನೇ ಉಪ-ನಿಯಮದ ಮೇರೆಗೆ ಅನುಮತಿಸಬಹುದಾದ ಸಂಖ್ಯೆಯನ್ನು ಮೀರತಕ್ಕದ್ದಲ್ಲ;

**ವಿವರಣೆ.-** (2) (3) ಮತ್ತು (4)ನೇ ಉಪ-ನಿಯಮಗಳ ಉದ್ದೇಶಕ್ಕಾಗಿ,-

(1) "ದೂರ" ವನ್ನು ಎರಡು ಸಿನಿಮಾಗಳನ್ನು ಕೂಡಿಸುವ ಮತ್ತು ಸಾರ್ವಜನಿಕರು ಸಾಮಾನ್ಯವಾಗಿ ಉಪಯೋಗಿಸುವ ಅತಿ ಸಮೀಪದ ದಾರಿ, ಗಲ್ಲಿ, ಬೀದಿ ಅಥವಾ ರಸ್ತೆ ಉದ್ದವನ್ನು ಲೆಕ್ಕ ಹಾಕತಕ್ಕದ್ದು;

(2) "ಮಹಾನಗರ ಪ್ರದೇಶ" ಎಂದರೆ, ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ ಕೇಂದ್ರ ಅಧಿನಿಯಮ ಸಂಖ್ಯೆ:2) 8ನೇ ಪ್ರಕರಣದ ಮೇರೆಗೆ ಮಹಾನಗರ ಪ್ರದೇಶವೆಂದು ಘೋಷಿಸಲಾದ ನಗರ ಅಥವಾ ಪಟ್ಟಣ;

(3) "ಸ್ಥಳ" ಎಂದರೆ, ಹತ್ತು ಸಾವಿರ ಮತ್ತು ಅದಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಪಟ್ಟಣಗಳು ಮತ್ತು ನಗರಗಳ ಸಂದರ್ಭದಲ್ಲಿ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗೆ ಬರುವ ಪ್ರದೇಶ ಮತ್ತು ಇತರ ಸಂದರ್ಭಗಳಲ್ಲಿ ಸಿನಿಮಾವನ್ನು ಸ್ಥಾಪಿಸಲು ಉದ್ದೇಶಿಸಿದಂಥ ಸ್ಥಳೀಯ ಪ್ರಾಧಿಕಾರದ ಕೇಂದ್ರದಿಂದ ಐದು ಕಿಲೋ ಮೀಟರುಗಳ ವ್ಯಾಸದೊಳಗಿನ ಪ್ರದೇಶ.

**27. ನಿರಾಕ್ಷೇಪಣಾ ಪ್ರಮಾಣಪತ್ರವನ್ನು ನೀಡುವುದು.-** ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ 5ನೇ ಪ್ರಕರಣಕ್ಕೆ ಮತ್ತು 6ನೇ ಪ್ರಕರಣದ ಮೇರೆಗೆ ಅವನು ಮಾಡಿದ ಆದೇಶಗಳು ಯಾವುವಾದರೂ ಇದ್ದರೆ, ಅವುಗಳಿಗೆ ಒಳಪಟ್ಟು, 26ನೇ ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಎಲ್ಲಾ ಷರತ್ತುಗಳನ್ನು ನಿವೇಶನವು ಪೂರೈಸುತ್ತದೆ ಎಂದು ಮನದಟ್ಟಾದರೆ, ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡದ ನಿರ್ಮಾಣಕ್ಕಾಗಿ 'ಡಿ' ನಮೂನೆಯಲ್ಲಿ ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಅರ್ಜಿದಾರನಿಗೆ ಕೊಡತಕ್ಕದ್ದು. ಆ ಪ್ರಮಾಣಪತ್ರವು ಸಂಕೀರ್ಣ ಅಥವಾ ಸಂದರ್ಭಾನುಸಾರ ಕಟ್ಟಡದ ನಿರ್ಮಾಣದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಅವಧಿಗಾಗಿ ಸಿಂಧುವಾಗಿರತಕ್ಕದ್ದು, ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಈ ಪರವಾಗಿ ಮಾಡಲಾದ ಅರ್ಜಿಯ ಮೇಲೆ, ಅರ್ಜಿದಾರನು ಆ ಸಂಕೀರ್ಣ ಅಥವಾ ಕಟ್ಟಡವನ್ನು ಸದರಿ ಎರಡು ವರ್ಷಗಳ ಅವಧಿಯೊಳಗೆ ಸಿಂಧುವಾದ ಕಾರಣಗಳಿಗಾಗಿ ಪೂರ್ಣಗೊಳಿಸಲು ಅಗಲಿಲ್ಲವೆಂದು ಮನದಟ್ಟಾದರೆ, ಅಂತಹ ಪ್ರಮಾಣಪತ್ರದ ಸಿಂಧುತ್ವವನ್ನು ಒಂದು ವರ್ಷವನ್ನು ಮೀರದ ಅವಧಿಗಾಗಿ, ಆದಾಗ್ಯೂ ಮೂರು ವರ್ಷಗಳು ಮೀರದ ಒಟ್ಟು ಅವಧಿಗಾಗಿ ವಿಸ್ತರಿಸಬಹುದು.

(2) ಅರ್ಜಿದಾರನು ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಪಡೆದ ದಿನಾಂಕದಿಂದ ಹನ್ನೆರಡು ತಿಂಗಳೊಳಗೆ ಪ್ರೇಕ್ಷಣೆಯ ಸಿನಿಮಾಗಳನ್ನು ಒಳಗೊಂಡು ಆ ಕಟ್ಟಡದ ನಿರ್ಮಾಣವನ್ನು ಪ್ರಾರಂಭಿಸತಕ್ಕದ್ದು. ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಈ ಬಗ್ಗೆ ಅವನಿಗೆ ಸಲ್ಲಿಸಿದ ಅರ್ಜಿಯ ಮೇಲೆ, ಅರ್ಜಿದಾರನು ಸದರಿ ಅವಧಿಯೊಳಗಾಗಿ ಆ ಕಟ್ಟಡದ ನಿರ್ಮಾಣವನ್ನು ಸಿಂಧುವಾದ ಕಾರಣಗಳಿಗಾಗಿ ಪ್ರಾರಂಭಿಸಲು ಆಗಲಿಲ್ಲವೆಂದು ಅವನಿಗೆ ಮನದಟ್ಟಾದರೆ, ಆ ಅವಧಿಯನ್ನು, ಒಂದು ವರ್ಷಕ್ಕೆ ಮೀರದ ಮತ್ತಷ್ಟು ಅವಧಿಗೆ ವಿಸ್ತರಿಸಬಹುದು. ಕಟ್ಟಡದ ನಿರ್ಮಾಣವನ್ನು ಆ ಒಂದು ವರ್ಷದ ಸದರಿ ಆ ಅವಧಿಯೊಳಗೆ ಪ್ರಾರಂಭಿಸದಿದ್ದರೆ ಅಥವಾ ಒಂದು ವರ್ಷ ವಿಸ್ತರಿಸಲಾದ ಅವಧಿ ಯಾವುದಾದರೂ ಇದ್ದರೆ, ನಿರಾಕ್ಷೇಪಣಾ ಪ್ರಮಾಣಪತ್ರವು ಸದರಿ ಅವಧಿ ಮುಕ್ತಾಯವಾದ ಮೇಲೆ ಕೊನೆಗೊಳ್ಳತಕ್ಕದ್ದು.

(3) ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಸ್ವೀಕರಿಸಿದ ತರುವಾಯ ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಕೂಡಲೆ ಸಂಬಂಧಪಟ್ಟ ಇಲಾಖೆಗಳಿಗೆ ಅದನ್ನು ಕಳುಹಿಸತಕ್ಕದ್ದು, ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ಮೂವತ್ತು ದಿನಗಳ ಮೀರದ ಅವಧಿಯೊಳಗೆ ಸಾಧ್ಯವಾಗಬಹುದಾದಷ್ಟು ಬೇಗನೆ ಅವರ ಅಭಿಪ್ರಾಯವನ್ನು ಅಥವಾ ಸ್ಪಷ್ಟತೆಯನ್ನು ಕೊಡತಕದ್ದು. ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಸದರಿ ಇಲಾಖೆಗಳೊಂದಿಗೆ ಸಮಾಲೋಚಿಸಲು ಅದನ್ನು ಕಳುಹಿಸತಕ್ಕದ್ದು ಮತ್ತು ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ನಲವತ್ತೈದು ದಿನಗಳೊಳಗೆ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಮಂಜೂರು ಮಾಡಲು ಅರ್ಜಿಯನ್ನು ಪರಿಗಣಿಸತಕ್ಕದ್ದು ಅಥವಾ ನಲವತ್ತೈದು ದಿನಗಳ ಗೊತ್ತುಪಡಿಸಿದ ಸಮಯದೊಳಗೆ ಲಿಖಿತದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಅಂತಹ ಲೈಸೆನ್ಸ್‌ನ್ನು ನೀಡಲು ನಿರಾಕರಿಸತಕ್ಕದ್ದು.

**28. ಖಾಯಂ ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಸಂಬಂಧದಲ್ಲಿ ನಿರಾಕ್ಷೇಪಣಾ ಪ್ರಮಾಣಪತ್ರಕ್ಕಾಗಿ ಫೀಜು.-** ನಿರಾಕ್ಷೇಪಣಾ ಪ್ರಮಾಣಪತ್ರದ ಮಂಜೂರಾತಿಗಾಗಿ ಅರ್ಜಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಫೀಜು, ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು.

**29. ಖಾಯಂ ಸಿನಿಮಾ ಕಟ್ಟಡದ ಲೈಸೆನ್ಸ್ ಪಡೆದ ಆವರಣದೊಳಗೆ ಹೆಚ್ಚುವರಿ ಸಿನಿಮಾ ನಿರ್ಮಾಣಕ್ಕಾಗಿ ಅರ್ಜಿ.-** (1) ಅಸ್ತಿತ್ವದಲ್ಲಿರುವ ಸಿನಿಮಾ ಅಥವಾ ಪ್ರಸ್ತಾವಿತ ಸಿನಿಮಾದ ನೆಲಮಹಡಿಗೆ ಅಥವಾ ಮೇಲೆ ಅಥವಾ ಮೊದಲನೆಯ ಮಹಡಿ ಮೇಲೆ ಹೊಂದಿಕೊಂಡಂತೆ, ಒಂದು ಅಥವಾ ಹೆಚ್ಚು ಸಿನಿಮಾಗಳನ್ನು ಲೈಸೆನ್ಸ್ ಪಡೆದ ಆವರಣದೊಳಗೆ ನಿರ್ಮಿಸಲು ಉದ್ದೇಶಿಸಿರುವ ಯಾರೇ ವ್ಯಕ್ತಿ ಪ್ರತ್ಯೇಕ ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಪಡೆಯದೆ, 24ನೇ ನಿಯಮದ ಮೇರೆಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು. ಆದಾಗ್ಯೂ, ಈ ನಿಯಮಗಳಲ್ಲಿ ಖಾಯಂ ಸಿನಿಮಾ ಥಿಯೇಟರಿಗೆ ಸಂಬಂಧಪಟ್ಟ ಇತರ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಅಂತಹ ಹೆಚ್ಚುವರಿ ಸಿನಿಮಾ ಥಿಯೇಟರಿಗೆ ಅನ್ವಯವಾಗತಕ್ಕದ್ದು.

(2) ಉಪ ನಿಯಮ (1)ರಲ್ಲಿ ಉಲ್ಲೇಖಿಸಲಾದ ಹೆಚ್ಚುವರಿ ಸಿನಿಮಗಳಿಗೆ ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಮಂಜೂರು ಮಾಡಿದ ಸಿನಿಮಾ ನಿವೇಶನಗಳ ಸಂದರ್ಭದಲ್ಲಿ ಪರಂತು, ಹೆಚ್ಚುವರಿ ಸಿನಿಮಾಗಳು ಮತ್ತು ವ್ಯಕ್ತಿಗಳ ಅವಶ್ಯಕತೆಗಾಗಿ ತಿಂಡಿ ಅಂಗಡಿಗಳು ಮತ್ತು ಆ ಆವರಣಕ್ಕೆ ಪ್ರವೇಶಿಸುವ ವಾಹನಗಳ ನಿಲ್ದಾಣಕ್ಕೆ ನಿವೇಶನವು ಸಾಕಷ್ಟು ವಿಶಾಲವಾಗಿರುವಲ್ಲಿ, ಲೈಸೆನ್ಸ್ ನೀಡುವ ಪ್ರಾಧಿಕಾರವು ಅನುಮತಿ ನೀಡಬಹುದು. ಕಾರು ನಿಲ್ದಾಣಕ್ಕಾಗಿ ನಿರ್ಮಾಣದ ಹಂತದಲ್ಲಿರುವ ಎಲ್ಲಾ ಸಿನಿಮಾಗಳ ಒಟ್ಟು ಆಸನಗಳ ಸಾಮರ್ಥ್ಯದ ಆಧಾರದ ಮೇಲೆ 26(1)(ಎಫ್) ನಿಯಮಕ್ಕನುಸಾರವಾಗಿರತಕ್ಕದ್ದು. ಹೆಚ್ಚುವರಿ ಸಿನಿಮಾ ನೆಲಮಹಡಿಯ ಮೇಲೆ ಅಥವಾ ಮೊದಲನೆ ಮಹಡಿಯ ಮೇಲೆ ಇರುವಲ್ಲಿ ಅಂತಹ ಹೆಚ್ಚುವರಿ ಸಿನಮಾದಿಂದ ನಿವೇಶನವು ಮುಕ್ತ ಪ್ರವೇಶ ಪಡೆಯಲು ಸಾಕಷ್ಟು ಮುಕ್ತ ಸ್ಥಳವಕಾಶವನ್ನು ಒದಗಿಸತಕ್ಕದ್ದು.

(3) ಆಸನಗಳ ಒಟ್ಟು ಸಂಖ್ಯೆಯನ್ನು ಹೆಚ್ಚಿಸದೆ, ಲೈಸೆನ್ಸ್ ಪಡೆದ ಆವರಣದೊಳಗೆ ಸಣ್ಣ ಥಿಯೇಟರುಗಳನ್ನು ನಿರ್ಮಾಣ ಮಾಡುವ ಮೂಲಕ ಇರುವ ಸಿನಿಮಾ ಥಿಯೇಟರನ್ನು ಪರಿವರ್ತಿಸಲು ಅಥವಾ ಮಾರ್ಪಾಟು ಮಾಡಲು ಉದ್ದೇಶಿಸಿರುವ ಯಾರೇ ವ್ಯಕ್ತಿಯು, ಪ್ರತ್ಯೇಕ ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಪಡೆಯಬೇಕಾಗಿಲ್ಲದೆ, ಅರ್ಜಿಯನ್ನು 24ನೇ ನಿಯಮದ ಮೇರೆಗೆ

ಸಲ್ಲಿಸತಕ್ಕದ್ದು. ಆದಾಗ್ಯೂ, ಈ ನಿಯಮಗಳಲ್ಲಿ ಖಾಯಂ ಸಿನಿಮಾ ಥಿಯೇಟರಿಗೆ ಸಂಬಂಧಪಟ್ಟ ಇತರ ಉಪಬಂಧಗಳು, ಅಂತಹ ಹೆಚ್ಚುವರಿ ಸಿನಿಮಾ ಥಿಯೇಟರಿಗೆ ಯಥೋಚಿತ ವ್ಯತ್ಯಾಸಗಳಲ್ಲಿ ಅನ್ವಯವಾಗತಕ್ಕದ್ದು.

(4) (3)ನೇ ಉಪ ನಿಯಮದಲ್ಲಿ ಉಲ್ಲೇಖಿಸಲಾದ ಹೆಚ್ಚುವರಿ ಸಿನಿಮಗಳಿಗೆ ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಮಂಜೂರು ಮಾಡಿದ ಸಿನಿಮಾ ನಿವೇಶನಗಳ ಸಂದರ್ಭದಲ್ಲಿ, ಪರಂತು, ಹೆಚ್ಚುವರಿ ಸಿನಿಮಾಗಳು ಮತ್ತು ವ್ಯಕ್ತಿಗಳ ಅವಶ್ಯಕತೆಗಾಗಿ ತಿಂಡಿ ಅಂಗಡಿಗಳು ಮತ್ತು ಆ ಆವರಣಕ್ಕೆ ಪ್ರವೇಶಿಸುವ ವಾಹನಗಳ ನಿಲ್ದಾಣಕ್ಕೆ ನಿವೇಶನವು ಸಾಕಷ್ಟು ವಿಶಾಲವಾಗಿರುವಲ್ಲಿ, ಲೈಸೆನ್ಸ್ ನೀಡುವ ಪ್ರಾಧಿಕಾರವು ಅನುಮತಿ ನೀಡಬಹುದು. ಕಾರು ನಿಲ್ದಾಣಕ್ಕಾಗಿ ನಿರ್ಮಾಣದ ಹಂತದಲ್ಲಿರುವ ಎಲ್ಲಾ ಸಿನಿಮಾಗಳ ಒಟ್ಟು ಆಸನಗಳ ಸಾಮರ್ಥ್ಯದ ಆಧಾರದ ಮೇಲೆ 26(1)(ಎಫ್) ನಿಯಮಕ್ಕನುಸಾರವಾಗಿರತಕ್ಕದ್ದು. ಹೆಚ್ಚುವರಿ ಸಿನಿಮಾ ನೆಲಮಹಡಿಯ ಮೇಲೆ ಅಥವಾ ಮೊದಲನೆ ಮಹಡಿಯ ಮೇಲೆ ಇರುವಲ್ಲಿ ಅಂತಹ ಹೆಚ್ಚುವರಿ ಸಿನಿಮಾದಿಂದ ನಿವೇಶನವು ಮುಕ್ತ ಪ್ರದೇಶಕ್ಕಾಗಿ ಸಾಕಷ್ಟು ಮುಕ್ತ ಸ್ಥಳವಕಾಶವನ್ನು ಒದಗಿಸತಕ್ಕದ್ದು.

(5) ಮೇಲೆ (1) ರಿಂದ (4) ರ ವರೆಗಿನ ಉಪಬಂಧಗಳಲ್ಲಿ ಇದ್ದಂತೆ, ಹೆಚ್ಚುವರಿ ಸಿನಿಮಾ ನಿರ್ಮಾಣಕ್ಕಾಗಿ ಆವರಣವನ್ನು ಮಂಜೂರು ಮಾಡುವ ಮುನ್ನ, ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟ್/ ಸಂದರ್ಭನುಸಾರ ಜಿಲ್ಲಾ ಪೊಲೀಸ್ ಕಮೀಷನರ್, ಜಿಲ್ಲೆಯ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಜಿಲ್ಲಾ ಅಗ್ನಿಶಾಮಕ ಅಧಿಕಾರಿ, ನಗರ ಕಾರ್ಪೋರೇಷನ್ ಪಟ್ಟಣ ಯೋಜನಾಧಿಕಾರಿ, ಯೋಜನಾ ಪ್ರಾಧಿಕಾರ/ ನಗರ ಸ್ಥಳೀಯ ಪ್ರಾಧಿಕಾರ, ಜಿಲ್ಲಾ ಪಟ್ಟಣ ಮತ್ತು ಗ್ರಾಮಾಂತರ ಯೋಜನೆಯ ಸಹಾಯಕ ನಿರ್ದೇಶಕರು, ಜಿಲ್ಲಾ ಲೋಕೋಪಯೋಗಿ,ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು ಮತ್ತು ಜಿಲ್ಲಾ ಎಲೆಕ್ಟ್ರಿಕಲ್ ಎಂಜಿನಿಯರ್ ಇವರೊಂದಿಗೆ ಸಮಲೋಚಿಸತಕ್ಕದ್ದು.

## ಅಧ್ಯಾಯ – V

## ಖಾಯಂ ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡ ನಕ್ಷೆಯ ಅನುಮೋದನೆ

**30. ಅನುಮೋದನೆಗಾಗಿ ಅರ್ಜಿ.-** ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಸ್ವೀಕರಿಸಿದ ಮೇಲೆ, ಅರ್ಜಿದಾರನು, ಅನುಮೋದಿತ ನಿವೇಶನದ ಮೇಲೆ ನಿರ್ಮಿಸಬೇಕಾದ ಕಟ್ಟಡದ ನಕ್ಷೆಯ ಅನುಮೋದನೆಗಾಗಿ ಅರ್ಜಿಯನ್ನು ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ಸಲ್ಲಿಸತಕ್ಕದ್ದು, ಅಂತಹ ಅರ್ಜಿಯೊಂದಿಗೆ,-

(i) 27ನೇ ನಿಯಮದ ಮೇರೆಗೆ ಕೊಟ್ಟ ನಿರಾಕ್ಷೇಪಣಾ ಪ್ರಮಾಣಪತ್ರದ ಒಂದು ಪ್ರತಿ;

(ii) ಅನುಮೋದಿತ ನಿವೇಶನ ನಕ್ಷೆಯ ಒಂದು ಪ್ರತಿ;

(iii) ಫಿಲ್ಮಂ ಅನುಲೇಖನಗಳ ಮೇಲೆ ಮುದ್ರಿತ ಮೂಲದಲ್ಲಿನ ನಾಲ್ಕು ಪ್ರತಿಗಳ ಉನ್ನತಿ ನಕ್ಷೆ ಮತ್ತು ವಿಭಾಗಗಳ ಮತ್ತು ಆ ಆವರಣದ ಮತ್ತು ಅದರ ಮೇಲಿನ ನಿರ್ಮಿತಿಗಳ ಮತ್ತು ಕಟ್ಟಡಗಳ ಯಾವುದೇ ಮಾನಕ ಅಳತೆಯ ಅನುರೇಖನಗಳಿಂದ ತೆಗೆದುಕೊಂಡ ಪ್ರಿಂಟುಗಳ ಮೇಲೆ 1:100 ಕಡಿಮೆಯಲ್ಲದ ಪ್ರಮಾಣಕ್ಕೆ ಅದರ ಮೇಲೆ ಸರಿಯಾಗಿ ಬರೆದ ಮತ್ತು ಸ್ಪಷ್ಟವಾಗಿ ತೋರಿಸುವ ನಾಲ್ಕು ಪ್ರಿಂಟುಗಳೊಂದಿಗೆ ಡಿಜಿಟಲ್ ನಮೂನೆಯಲ್ಲಿರುವ ಪೂರ್ಣಗೊಂಡ ನಕ್ಷೆ,

(ಎ) ಮಿಲಿ ಮೀಟರುಗಳಲ್ಲಿ ಎಲ್ಲ ಉದ್ದಗಲಗಳು ಮತ್ತು ವಿಭಿನ್ನ ಬಣ್ಣಗಳಲ್ಲಿ ವಿಭಿನ್ನ ಸಾಮಗ್ರಿಗಳನ್ನು ಸೂಚಿಸುವ ನಿರ್ಮಾಣ ಸಾಮಗ್ರಿಗಳು ಮತ್ತು ಗೋಡೆಗಳು, ತೊಲೆಗಳು, ಸ್ಕಾಟಲಿಂಗ್‌ಗಳು ಮತ್ತು ಟ್ರಸ್ಸುಗಳ ಉದ್ದಗಲಗಳು, ಆಳವನ್ನು ಅಂಕಿಗಳಲ್ಲಿ ಕೊಡುವ;

(ಬಿ) ಎಲ್ಲಾ ಸ್ಟೇರ್ಕೇಸ್‌ಗಳ ಅಗಲ ಮತ್ತು ಮೆಟ್ಟಿಲುಗಳನ್ನು ಹತ್ತುವ ಪ್ರತಿಯೊಂದು ಮೆಟ್ಟಲುಗಳ ಸಂಖ್ಯೆ ಮತ್ತು ಮೇಲ್‌ತಳದೊಂದಿಗೆ ಪ್ರತಿಯೊಂದು ಸಾಲಿನಲ್ಲಿ ಮೆಟ್ಟಲುಗಳ ಸಂಖ್ಯೆ, ಮೊಗಸಾಲೆಗಳ ಸ್ಪಷ್ಟವಾದ ಅಗಲ, ದಾರಿಗಳ, ಹಜಾರಗಳು

ಮತ್ತು ನಡುದಾರಿಗಳ ಸ್ಪಷ್ಟವಾದ ವಿಸ್ತಾರವಾದ ನಡೆದಾಡುವ ಮೆಟ್ಟಿಲುಗಳು ಹಾಗೂ ಎಲ್ಲಾ ಗ್ಯಾಲರಿಗಳ, ಅಂತಸ್ತುಗಳ, ಬಾಲ್ಕನಿಗಳ ಮತ್ತು ವೇದಿಕೆಗಳ ಎತ್ತರ ಮತ್ತು ನಿರ್ಮಾಣ; ಮತ್ತು ಸ್ಟೇರ್ಕೇಸ್‌ಗಳ ಅಗ್ನಿನಿರೋಧಕ ಸಮಯವು ಒಂದು ಗಂಟೆಯಾಗಿರತಕ್ಕದ್ದು, ಇವುಗಳಿಗೆ ಅನಿಲ ಕೊಳವೆಗಳ ಮಾರ್ಗ ಅಥವಾ ವಿದ್ಯುತ್ ಮಾರ್ಗಗಳನ್ನು ಕೂಡಿಸತಕ್ಕದ್ದಲ್ಲ. ಮೆಟ್ಟಿಲುಗಳಲ್ಲಿ ಜಾರದಿರುವ ಹಾಗೆ ಲೋಹದ ಕಾಪುಗಳನ್ನು ಅಳವಡಿಸತಕ್ಕದ್ದು, ಕೈಯಿಂದ ಹಿಡಿದುಕೊಳ್ಳುವ ಕಂಬಿಯನ್ನು ಒಂದು ಮೀಟರ್ ಎತ್ತರದಲ್ಲಿರಿಸತಕ್ಕದ್ದು.

(ಸಿ) ಎಲ್ಲಾ ಬಾಗಿಲುಗಳು, ಕಿಟಕಿಗಳು ಮತ್ತು ವಾಯುಸಂಚಾರಕಗಳ ನಿರ್ಮಾಣ ಮತ್ತು ಅವು ತೆರೆಯುವಂಥ ರೀತಿ ಮತ್ತು ವಾಯುಸಂಚಾರಗಳ ಉದ್ದೇಶಿತ ವ್ಯವಸ್ಥೆಯನ್ನು ತೋರಿಸುವ ಅವುಗಳ ಗಾತ್ರಗಳು;

(ಡಿ) ಉದ್ದೇಶಿತ ಆಸನಗಳ ವ್ಯವಸ್ಥೆ;

(ಇ) ನೆಲ ಅಂತಸ್ತು ಮತ್ತು ಮೇಲೆ ಅಂತಸ್ತುಗಳಿಗೆ ಪ್ರತ್ಯೇಕವಾಗಿ ಚದರ ಮೀಟರುಗಳಲ್ಲಿ ಮತ್ತು ಗ್ಯಾಲರಿಗಳು ಅಥವಾ ಬಾಲ್ಕನಿಗಳಿಗೆ ಮೆಟ್ಟಿಲು ಸಾಲುಗಳಲ್ಲಿ ಪ್ರತಿ ಕಟ್ಟಡದ ಚಾಚುಭಾಗ ಪ್ರದೇಶ;

(ಎಫ್) ಸ್ಟೇರ್ಕೇಸ್‌ಗಳು;

(ಜಿ) ಶೌಚಗೃಹಗಳು ಮತ್ತು ಮೂತ್ರಿ ಮಾಡುವ ಸ್ಥಳಗಳು;

(ಹೆಚ್) ನಕ್ಷೆಗಳು ಮತ್ತು ವಿಭಾಗಗಳಲ್ಲಿನ ಕಟ್ಟಡದ ವಿವಿಧ ಭಾಗಗಳ ಮಟ್ಟಗಳು, ಮತ್ತು

(ಐ) ಪ್ರೊಜೆಕ್ಟರುಗಳು, ಪರದೆ, ಧ್ವನಿಪೆಟ್ಟಿಗೆ ಮತ್ತು ಇತರ ಸ್ಥಾವರಗಳು ಮತ್ತು ಸಾಧನ ಸಾಮಗ್ರಿ ವಿವರಗಳು ಮತ್ತು ಸ್ಥಾನಗಳು;

(iv) ಕಾಮಗಾರಿಗಳ ನಿರ್ದಿಷ್ಟವಾದ ವಿವರ ಪಟ್ಟಿಕೆಗಳನ್ನು ನಿರ್ವಹಿಸುವುದು, ನಿಯೋಜನೆಯಾದ ಸಾಕಷ್ಟು ಸಾಮಗ್ರಿಗಳು ಮತ್ತು ಲೆಕ್ಕಗಳೊಂದಿಗೆ ಅಳವಡಿಸಿಕೊಳ್ಳುವ ನಿರ್ಮಾಣದ ವಿಧಾನ, ಲೋಡ್‌ಗಳನ್ನು ತರಿಸುವುದಕ್ಕೆ ಸಂಬಂಧಪಟ್ಟಂತೆ ಅವುಗಳನ್ನು ತ್ರಿಪ್ರತಿಯಲ್ಲಿ ತೋರಿಸುವುದು ಮತ್ತು ಎಲ್ಲ ತಳಪಾಯಗಳು, ಕಂಬಗಳು, ಸ್ತಂಭಗಳು, ಊರುಗಂಬಗಳು, ಹಾಸುಮರಗಳು, ತೊಲೆಗಳು, ಹಾಸುಗಲ್ಲುಗಳು, ದೂಲಗಳು ಮತ್ತು ಟ್ರಸ್ಸುಗಳಲ್ಲಿ ಬರುವ ತೂಕಗಳಂಥ ಲೆಕ್ಕಗಳನ್ನು ಪದವಿ ಎಂಜಿನಿಯರ್ ಅಥವಾ ವಿನ್ಯಾಸ ಎಂಜಿನಿಯರ್ ಅಥವಾ ವಿನ್ಯಾಸ ವೃತ್ತಿಯ ಅರ್ಹ ವಾಸ್ತುಶಿಲ್ಪಿಯಿಂದ ಸರಿಯಾಗಿದೆ ಎಂಬುದನ್ನು ಪ್ರಮಾಣಿಕರಿಸುವುದು..

**31. ನಕ್ಷೆಗಳ ಅನುಮೋದನೆಗಾಗಿನ ಪ್ರಕ್ರಿಯೆ, ಇತ್ಯಾದಿ.-** (1) ಅರ್ಜಿಯನ್ನು ಮತ್ತು 30ನೇ ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ವಿವರಗಳನ್ನು ಸ್ವೀಕರಿಸಿದ ಮೇಲೆ, ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಕಟ್ಟಡದ ನಕ್ಷೆಗಳು ಈ ನಿಯಮಗಳ ಅಗತ್ಯತೆಗಳನ್ನು ಮನದಟ್ಟು ಮಾಡಿಕೊಂಡು ಮತ್ತು ಕಟ್ಟಲು ಉದ್ದೇಶಿಸಿದ ಕಟ್ಟಡವು ಸಿನಿಮಾಕ್ಕಾಗಿ ಸೂಕ್ತವಾಗಿದೆಯೇ ಎಂಬುದನ್ನು ಮನದಟ್ಟು ಮಾಡಿಕೊಂಡು ಪರಿಶೀಲಿಸಲು ನಗರ ಪಾಲಿಕೆಯ ಪಟ್ಟಣ ಯೋಜನಾ ಅಧಿಕಾರಿ/ ನಗರಾಭಿವೃದ್ಧಿ ಪ್ರಾಧಿಕಾರಿ/ ಯೋಜನಾ ಪ್ರಾಧಿಕಾರಿ/ ಪಟ್ಟಣ ಮತ್ತು ನಗರ ಯೋಜನಾ ಸಹಾಯಕ ನಿರ್ದೇಶಕರಿಗೆ ಅರ್ಜಿಗಳನ್ನು ಮತ್ತು ವಿವರಗಳನ್ನು ಏಕಕಾಲದಲ್ಲಿ ಕಳುಹಿಸತಕ್ಕದ್ದು ಮತ್ತು ಹದಿನೈದು ದಿನಗಳೊಳಗಾಗಿ ಲೈಸೆನ್ಸು ಪ್ರಾಧಿಕಾರಿಗೆ ಈ ಸಂಬಂಧದಲ್ಲಿನ ವರದಿಯನ್ನು ಸಲ್ಲಿಸತಕ್ಕದ್ದು.

(2) (1)ನೇ ಉಪ ನಿಯಮದ ಮೇರೆಗೆ ವರದಿಯನ್ನು ಸ್ವೀಕರಿಸಿದ ಮೇಲೆ, ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಸಂಬಂಧಪಟ್ಟ ದಾಖಲೆಗಳನ್ನು ಜಿಲ್ಲಾ ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರಿಗೆ ಕಳುಹಿಸತಕ್ಕದ್ದು. ಲೋಕೋಪಯೋಗಿ, ಬಂದರು ಮತ್ತು ಒಳನಾಡು ಸಾರಿಗೆ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರ, ವಿನ್ಯಾಸದ ಲೆಕ್ಕಗಳನ್ನು ಪರಿಶೀಲಿಸತಕ್ಕದ್ದು ಮತ್ತು ಪರಿಶೀಲನೆಯ ತರುವಾಯ ತಪಶೀಲು ಮತ್ತು ವಿನ್ಯಾಸಗಳಿಗೆ ಅನುಸಾರವಾಗಿ ಕಟ್ಟಡವನ್ನು ನಿರ್ಮಿಸಿದರೆ ಸಾಕಷ್ಟು ದೃಢವಾಗಿರುತ್ತದೆಯೆಂದು ಅವನಿಗೆ ಮನದಟ್ಟಾದರೆ ಅವನು ಹದಿನೈದು ದಿನಗಳೊಳಗೆ ತಪಶೀಲು ಮತ್ತು ವಿನ್ಯಾಸಗಳು

ಅಂಗೀಕಾರಾರ್ಹವಾಗಿವೆಯೆಂಬ ಪ್ರಮಾಣಪತ್ರವನ್ನು ಲಗತ್ತಿಸಿ ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ಅವನ ವರದಿಯನ್ನು ಕಳುಹಿಸಿಕೊಡತಕ್ಕದ್ದು.

(3) ಲೋಕೋಪಯೋಗಿ, ಬಂದರು ಮತ್ತು ಒಳನಾಡು ಸಾರಿಗೆ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರವರಿಂದ ವಿನ್ಯಾಸ ಮತ್ತು ತಪಶೀಲು ಒಪ್ಪಿಗೆಯನ್ನು ಸ್ವೀಕರಿಸಿದ ಮೇಲೆ, ನೀಲಿ ನಕ್ಷೆ (ಬ್ಲೂ ಪ್ರಿಂಟ್) ಅಥವಾ ಕಂಪ್ಯೂಟರ್ ನಕ್ಷೆಯಲ್ಲಿ ಮತ್ತು ಚಲನಚಿತ್ರ ಸಲಕರಣೆಗಳು ಇರುವಿಕೆಯನ್ನು ತೋರಿಸುವ ಡಿಜಿಟಲ್ ನಮೂನೆಯಲ್ಲಿ ಸಹ ನಕ್ಷೆ, ಉನ್ನತಿ ನಕ್ಷೆ ಮತ್ತು ಎಲೆಕ್ಟ್ರಿಕಲ್ ಡ್ರಾಯಿಂಗ್‌ಗಳನ್ನು ನಾಲ್ಕು ಪ್ರತಿಗಳಲ್ಲಿ ಮತ್ತು ಎಲ್ಲ ವೈರಿಂಗ್, ದೀಪದ ಪಾಯಿಂಟುಗಳು, ಸ್ವಿಚ್‌ಗಳು, ಪ್ಲಗ್ಗುಗಳು ಮತ್ತು ವಿತರಣಾ ಬೋರ್ಡ್‌ಗಳನ್ನು ತೋರಿಸುವ ವೈರಿಂಗ್ ರೇಖಾಚಿತ್ರದ ಮತ್ತು ವಿವಿಧ ಬಣ್ಣಗಳಲ್ಲಿ ವಿವಿಧ ಸರ್ಕ್ಯೂಟುಗಳನ್ನು ತೋರಿಸುವ ಇತರ ವಿದ್ಯುತ್ ಯಂತ್ರೋಪಕರಣದ ಸಂಪೂರ್ಣ ವಿದ್ಯುಚ್ಛಕ್ತಿ ಸ್ಥಾಪನೆಗಳು ಮತ್ತು ಅರ್ಥಿಂಗ್ ವಿವರಗಳನ್ನು ವಿದ್ಯುತ್ ಪರಿಶೀಲಕನಿಗೆ ಸಲ್ಲಿಸಲು ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಅರ್ಜಿದಾರನಿಗೆ ನಿರ್ದೇಶಿಸತಕ್ಕದ್ದು.

(4) ಆ ತರುವಾಯ, ಅರ್ಜಿದಾರನು ಒಪ್ಪಿಸಿದ ವಿದ್ಯುತ್ ಸಿಸ್ಟಂ ಅನ್ನು ತೋರಿಸುವ ವಿದ್ಯುತ್ ವೈರಿಂಗ್ ರೇಖಾಚಿತ್ರ ಮತ್ತು ನಕ್ಷೆಯ ವಿವರಗಳೊಂದಿಗೆ ವಿದ್ಯುತ್ ಪರಿಶೀಲಕನು ಚಲನಚಿತ್ರ ಸ್ಥಾವರ ವಿದ್ಯುಚ್ಛಕ್ತಿ ಸ್ಥಾಪನೆಗೆ ಸಂಬಂಧಿಸಿದ ವಿನ್ಯಾಸಗಳನ್ನು ಪರಿಶೀಲಿಸತಕ್ಕದ್ದು ಮತ್ತು ಪರಿಶೀಲನೆಯ ತರುವಾಯ, ವಿದ್ಯುತ್ ಸ್ಥಾಪನೆಗಳು ಸಂರಕ್ಷಣೆಗೆ ಸಂಬಂಧಪಟ್ಟ ಈ ನಿಯಮಗಳ ಉಪಬಂಧಗಳಿಗನುಸಾರವಾಗಿವೆಯೆಂದು ಅವನಿಗೆ ಮನದಟ್ಟಾದರೆ, ಅವನು ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಹದಿನೈದು ದಿನಗಳೊಳಗೆ ತನ್ನ ವರದಿಯನ್ನು ಕಳುಹಿಸತಕ್ಕದ್ದು.

**32. ನಕ್ಷೆಯ ಅನುಮೋದನೆಯ ಮಂಜೂರಾತಿ ಅಥವಾ ನಿರಾಕರಣೆ.-** 31ನೇ ನಿಯಮದ ಮೇರೆಗೆ ವರದಿಗಳನ್ನು ಸ್ವೀಕರಿಸಿದ ಮೇಲೆ ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ಈ ನಿಯಮಗಳ ಎಲ್ಲ ಅಗತ್ಯಗಳನ್ನು ಪೂರೈಸಲಾಗಿದೆ ಎಂದು ಮನದಟ್ಟಾದರೆ, ಕಟ್ಟಡದ ನಕ್ಷೆಯನ್ನು ಅನುಮೋದಿಸತಕ್ಕದ್ದು ಮತ್ತು ಲೈಸೆನ್ಸ್‌ನ್ನು ಮಂಜೂರು ಮಾಡತಕ್ಕದ್ದು. ಈ ನಿಯಮಗಳ ಅಗತ್ಯತೆಯನ್ನು ಪೂರೈಸಲಾಗಿಲ್ಲ ಎಂದು ಅವನಿಗೆ ಮನದಟ್ಟಾದರೆ, ಅವನು ಲೈಸೆನ್ಸ್‌ನ್ನು ನಿರಾಕರಿಸತಕ್ಕದ್ದು. ಈ ನಿಯಮದ ಮೇರೆಗಿನ ಲೈಸೆನ್ಸ್ ನೀಡುವ ಪ್ರಾಧಿಕಾರಿಯ ಆದೇಶವು ಲಿಖಿತದಲ್ಲಿರತಕ್ಕದ್ದು ಮತ್ತು ಅಂತಹ ತೀರ್ಮಾನಕ್ಕಾಗಿ ಕಾರಣಗಳು ಒಳಗೊಂಡಿರತಕ್ಕದ್ದು.

**33. ಲೈಸೆನ್ಸ್ ನೀಡುವ ಪ್ರಾಧಿಕಾರಿಯ ಆದೇಶವನ್ನು ತಿಳಿಸತಕ್ಕದ್ದು.-** 31ನೇ ನಿಯಮದ (3)ನೇ ಉಪ ನಿಯಮದಲ್ಲಿ ಉಲ್ಲೇಖಿಸಲಾದ ವರದಿಯನ್ನು ಸ್ವೀಕರಿಸಿದ ತರುವಾಯ, ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಮಂಜೂರಾತಿ ಅಥವಾ ನಿರಾಕರಣೆಗಾಗಿ ತನ್ನ ಆದೇಶವನ್ನು ಹದಿನೈದು ದಿವಸಗಳ ಅವಧಿಯೊಳಗೆ ಅರ್ಜಿದಾರನಿಗೆ ತಿಳಿಸತಕ್ಕದ್ದು.

## ಅಧ್ಯಾಯ – VI

## ಖಾಯಂ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡದ ಸಂಬಂಧದಲ್ಲಿ ಕಟ್ಟಡ ನಿರ್ಮಾಣದ ಅನುಮೋದನೆ ಮತ್ತು ಲೈಸೆನ್ಸ್‌ನ್ನು ನೀಡುವುದು

**34. ನಿರ್ಮಿಸಿದ ಖಾಯಂ ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡದ ಅನುಮೋದನೆ.-** (1) ಲೈಸೆನ್ಸ್‌ದಾರನು,-

(i) ಲೋಕೋಪಯೋಗಿ, ಬಂದರು ಮತ್ತು ಒಳನಾಡು ಸಾರಿಗೆ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರಿಗೆ, (3)ನೇ ಉಪ-ನಿಯಮದ ಮೇರೆಗೆ ಸುರಕ್ಷತೆಯ ಬಗ್ಗೆ ಪ್ರಮಾಣಪತ್ರವನ್ನು ನೀಡಲು ಅವನು ಅದನ್ನು ಸಮರ್ಥಗೊಳಿಸಲು ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಮತ್ತು ಸಹಾಯಕ ಕಟ್ಟಡಗಳ ನಿರ್ಮಾಣವನ್ನು ಪ್ರಾರಂಭಿಸುವುದಕ್ಕೆ ಹದಿನೈದು ದಿನಗಳಿಗೆ ಮುಂಚೆ; ಮತ್ತು

(ii) ವಿದ್ಯುಚ್ಛಕ್ತಿ ಪರಿಶೀಲಕನಿಗೆ, (4)ನೇ ಉಪ-ನಿಯಮದ ಮೇರೆಗೆ ವಿದ್ಯುಚ್ಛಕ್ತಿ ಪ್ರಮಾಣಪತ್ರವನ್ನು ನೀಡಲು ಅವನು ಅದನ್ನು ಸಮರ್ಥಗೊಳಿಸಲು ವಿದ್ಯುಚ್ಛಕ್ತಿ ಸ್ಥಾಪನೆಗಾಗಿ ವೈರಿಂಗ್‌ನ್ನು ಪ್ರಾರಂಭಿಸುವುದಕ್ಕೆ ಹದಿನೈದು ದಿವಸಗಳ ಮುಂಚೆ,

- ಅಂತಹ ನೋಟೀಸನ್ನು (8)ನೇ ಉಪನಿಯಮದ ಮೇರೆಗೆ ನಿರ್ದಿಷ್ಟಪಡಿಸಿದ ಶುಲ್ಕಗಳನ್ನು ಸಂದಾಯ ಮಾಡಲು ಖಜಾನೆ ಚಲನ್ ಮೂಲಕ ಲಗತ್ತಿಸತಕ್ಕದ್ದು.

(2) ಅನುಮೋದಿತ ನಕ್ಷೆಗೆ ಅನುಸಾರವಾಗಿ ಕಟ್ಟಡ ಮತ್ತು ವಿದ್ಯುಚ್ಛಕ್ತಿ ಸ್ಥಾಪನೆಯು ಪೂರ್ಣಗೊಂಡ ಮೇಲೆ, ಅರ್ಜಿದಾರನು ಅರ್ಜಿಯನ್ನು ಸಲ್ಲಿಸಿದ ತರುವಾಯ,-

(i) 43ರಿಂದ 56ನೇ ನಿಯಮಗಳಲ್ಲಿ ಒಳಗೊಂಡ ವಿಷಯಗಳಿಗೆ ಸಂಬಂಧಿಸಿದಂತೆ, ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರನಿಂದ ಪ್ರಮಾಣಪತ್ರವನ್ನು;

(ii) 3, 57 ರಿಂದ 73, 77(5) ಮತ್ತು 82ನೇ ನಿಯಮಗಳ ಮೂಲಕ ಒಳಗೊಂಡ ವಿಷಯಗಳಿಗೆ ಸಂಬಂಧಿಸಿದಂತೆ ವಿದ್ಯುಚ್ಛಕ್ತಿ ಪರಿಶೀಲಕನಿಂದ “ಇ-1”ರ ನಮೂನೆಯಲ್ಲಿ ಪ್ರಮಾಣಪತ್ರವನ್ನು;

(iii) IXನೇ ಅಧ್ಯಾಯದ ಮೇರೆಗೆ ಒಳಗೊಂಡ ವಿಷಯಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಗ್ನಿಶಾಮಕ ಅಧಿಕಾರಿಯಿಂದ “ಇ-2” ನಮೂನೆಯಲ್ಲಿ ಪ್ರಮಾಣಪತ್ರವನ್ನು;

(iv) ಆರೋಗ್ಯ ಮತ್ತು ಆವರಣಗಳ ಸ್ವಚ್ಛತೆಗೆ ಸಂಬಂಧಪಟ್ಟ ಉಪಬಂಧಗಳು ಒಳಗೊಳ್ಳುವ ವಿಷಯಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯಿಂದ “ಇ-3” ನಮೂನೆಯಲ್ಲಿ ಪ್ರಮಾಣಪತ್ರವನ್ನು

- ಪಡೆಯತಕ್ಕದ್ದು.

(v) ಮಲ್ಟಿಪ್ಲೆಕ್ಸ್ ಕಾಂಪ್ಲೆಕ್ಸ್‌ನ ಸಂದರ್ಭದಲ್ಲಿ, ಲೈಸೆನ್ಸ್‌ದಾರನು ಥಿಯೇಟರಿನ ಭಾಗವನ್ನು ಒಳಗೊಂಡು ಸಂಪೂರ್ಣ ಕಟ್ಟಡಕ್ಕಾಗಿ ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಇಲಾಖೆಯಿಂದ ಪ್ರತ್ಯೇಕ ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಪಡೆಯತಕ್ಕದ್ದು.

(3) ಲೋಕೋಪಯೋಗಿ, ಬಂದರು ಮತ್ತು ಒಳನಾಡು ಸಾರಿಗೆ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರನಿಗೆ ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡದ ನಿರ್ಮಾಣ ಸಾಮರ್ಥ್ಯದ ಬಗ್ಗೆ ಮನದಟ್ಟಾದರೆ, ಆತನು, (2)(ಎ)ನೇ ಉಪ ನಿಯಮದ ಮೇರೆಗೆ ಪರಿಣಾಮಕಾರಿಯಾಗಿ ಅರ್ಜಿಯನ್ನು ಸ್ವೀಕರಿಸಿದ ತರುವಾಯ ಹದಿನೈದು ದಿನಗಳೊಳಗಾಗಿ ಪ್ರಮಾಣಪತ್ರವನ್ನು ಕೊಡತಕ್ಕದ್ದು, ಅಂತಹ ಪ್ರಮಾಣಪತ್ರವು ಐದು ವರ್ಷಗಳ ಅವಧಿಯವರೆಗೆ ಸಿಂಧುವಾಗಿರತಕ್ಕದ್ದು. ಯಾವುದೇ ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಸಾರಿಗೆ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರ ಅಗತ್ಯತೆಗಳನ್ನು ಪೂರೈಸದಿದ್ದ ಸಂದರ್ಭದಲ್ಲಿ, ಐದು ವರ್ಷಗಳವರೆಗೆ ಪ್ರಮಾಣಪತ್ರವನ್ನು ನೀಡುವ ಅರ್ಜಿಯನ್ನು ತಿರಸ್ಕರಿಸತಕ್ಕದ್ದು, ಅಥವಾ ಲಿಖಿತದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಪ್ರಮಾಣಪತ್ರದ ಅವಧಿಯನ್ನು ಕಡಿಮೆ ಮಾಡಬಹುದು ಮತ್ತು ಅರ್ಜಿದಾರನು ತನ್ನ ಅಹವಾಲನ್ನು ಮತ್ತು ಕಾರಣಗಳನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ, ಲೈಸೆನ್ಸು ನೀಡುವ ಪ್ರಾಧಿಕಾರಿಗೆ ತಿಳಿಸತಕ್ಕದ್ದು.

(4) (2)ನೇ ಉಪ-ನಿಯಮದ ಮೇರೆಗೆ ಅರ್ಜಿಗಳನ್ನು ಸ್ವೀಕರಿಸಿದ ತರುವಾಯ, ಹದಿನೈದು ದಿನಗಳೊಳಗಾಗಿ ವಿದ್ಯುಚ್ಛಕ್ತಿ ಪರಿಶೀಲಕನಿಗೆ ವಿದ್ಯುಚ್ಛಕ್ತಿ ಸ್ಥಾಪನೆಗಳು ಮತ್ತು ಸಾಧನ ಸಾಮಗ್ರಿಗಳ ಸೂಕ್ತತೆಯ ಬಗ್ಗೆ ಅವನಿಗೆ ಮನದಟ್ಟಾದರೆ, ‘ಇ-I’ ನಮೂನೆಯಲ್ಲಿ ಪ್ರಮಾಣಪತ್ರವನ್ನು ನೀಡತಕ್ಕದ್ದು ಮತ್ತು ಅದನ್ನು ಕೊಟ್ಟ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಅದು ಸಿಂಧುವಾಗಿರತಕ್ಕದ್ದು. ಸಿನಿಮಾ ಥಿಯೇಟರು ಮತ್ತು ಮಲ್ಟಿಪ್ಲೆಕ್ಸ್ ಅಗತ್ಯತೆಗಳನ್ನು ಪೂರೈಸದಿದ್ದ ಸಂದರ್ಭದಲ್ಲಿ, ವಿದ್ಯುಚ್ಛಕ್ತಿ ಪರಿಶೀಲಕನು ಐದು ವರ್ಷಗಳವರೆಗೆ ಪ್ರಮಾಣಪತ್ರವನ್ನು ನೀಡುವ ಅರ್ಜಿಯನ್ನು ತಿರಸ್ಕರಿಸತಕ್ಕದ್ದು ಅಥವಾ ಲಿಖಿತದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಅಂತಹ ಪ್ರಮಾಣಪತ್ರದ ಅವಧಿಯನ್ನು ಕಡಿಮೆ ಮಾಡಬಹುದು ಮತ್ತು ಅರ್ಜಿದಾರನಿಗೆ ತನ್ನ ಅಹವಾಲನ್ನು ಮತ್ತು ಕಾರಣಗಳನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ, ಲೈಸೆನ್ಸು ನೀಡುವ ಪ್ರಾಧಿಕಾರಿಗೆ ತಿಳಿಸತಕ್ಕದ್ದು.

(5) ಅಗ್ನಿಶಾಮಕ ಅಧಿಕಾರಿಗೆ, IXನೇ ಅಧ್ಯಾಯದಲ್ಲಿ ನಿರ್ದಿಷ್ಟಪಡಿಸಿದ ಅಗ್ನಿಶಾಮಕ ಉಪಕರಣಗಳು ಅಥವಾ ಇತರ ಸಾಧನ-ಸಾಮಗ್ರಿಗಳನ್ನು ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡಕ್ಕೆ ಒದಗಿಸಲಾಗಿದೆ ಎಂದು ಮನದಟ್ಟಾದರೆ, ಆತನು, ಅರ್ಜಿಯನ್ನು ಸ್ವೀಕರಿಸಿದ ತರುವಾಯ ಹದಿನೈದು ದಿನಗಳೊಳಗಾಗಿ 'ಇ-2' ನಮೂನೆಯಲ್ಲಿ ಪ್ರಮಾಣಪತ್ರವನ್ನು ನೀಡತಕ್ಕದ್ದು ಮತ್ತು ಅದು ಐದು ವರ್ಷಗಳ ಅವಧಿಯವರೆಗೆ ಸಿಂಧುವಾಗಿರತಕ್ಕದ್ದು. ಸಿನಿಮಾ ಥಿಯೇಟರು ಮತ್ತು ಮಲ್ಟಿಪ್ಲೆಕ್ಸ್‌ಗೆ ಯಾವ ಅಗತ್ಯತೆಗಳನ್ನು ಪೂರೈಸದಿದ್ದ ಸಂದರ್ಭದಲ್ಲಿ, ಅಗ್ನಿಶಾಮಕ ಅಧಿಕಾರಿಯು, ಐದು ವರ್ಷಗಳವರೆಗೆ ಪ್ರಮಾಣಪತ್ರವನ್ನು ನೀಡುವ ಅರ್ಜಿಯನ್ನು ತಿರಸ್ಕರಿಸತಕ್ಕದ್ದು ಅಥವಾ ಲಿಖಿತದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಮತ್ತು ಅರ್ಜಿದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ, ಅಂತಹ ಪ್ರಮಾಣಪತ್ರದ ಅವಧಿಯನ್ನು ಕಡಿಮೆ ಮಾಡಬಹುದು ಮತ್ತು ಕಾರಣಗಳನ್ನು ಲೈಸೆನ್ಸು ನೀಡುವ ಪ್ರಾಧಿಕಾರಿಗೆ ತಿಳಿಸತಕ್ಕದ್ದು. ಪ್ರತಿಯೊಂದು ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್‌ಗಳಲ್ಲಿ ಅಗ್ನಿಶಾಮಕ ಉಪಕರಣಗಳ ಕಾರ್ಯಕ್ಷಮತೆ/ ಸೂಕ್ತತೆ/ ಕಾರ್ಯನಿರ್ವಹಣಾ ಸ್ಥಿತಿಯ ಬಗ್ಗೆ ಜಿಲ್ಲಾ ಅಗ್ನಿಶಾಮಕ ಅಧಿಕಾರಿಯು ವರ್ಷವಾರು ತಪಾಸಣೆಗೊಳಪಡಿಸತಕ್ಕದ್ದು.

(6) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗೆ ನೈರ್ಮಲ್ಯ ಸೌಲಭ್ಯ, ಸಾರ್ವಜನಿಕ ಆರೋಗ್ಯ, ನೈರ್ಮಲ್ಯ ಮತ್ತು ಆವರಣಗಳ ಸ್ವಚ್ಛತೆಗಾಗಿ ಮಾಡಿದ ವ್ಯವಸ್ಥೆಗಳ ಬಗ್ಗೆ ಮನದಟ್ಟಾದರೆ, ಆತನು, ಅರ್ಜಿಯನ್ನು ಸ್ವೀಕರಿಸಿದ ತರುವಾಯ ಹದಿನೈದು ದಿನಗಳೊಳಗೆ 'ಇ-3' ನಮೂನೆಯಲ್ಲಿ ಪ್ರಮಾಣಪತ್ರವನ್ನು ಕೊಡತಕ್ಕದ್ದು. ಸಿನಿಮಾ ಥಿಯೇಟರ್ ಅಥವಾ ಮಲ್ಟಿಪ್ಲೆಕ್ಸ್‌ನ ಸಂದರ್ಭದಲ್ಲಿ ಅದು ಐದು ವರ್ಷಗಳ ಅವಧಿಯವರೆಗೆ ಸಿಂಧುವಾಗಿರತಕ್ಕದ್ದು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯ ಅಗತ್ಯತೆಗಳನ್ನು ಪೂರೈಸಿಲ್ಲವೆಂದು ಮನದಟ್ಟಾದರೆ, ಆತನು, ಐದು ವರ್ಷಗಳವರೆಗೆ ಪ್ರಮಾಣಪತ್ರವನ್ನು ನೀಡುವ ಅರ್ಜಿಯನ್ನು ತಿರಸ್ಕರಿಸತಕ್ಕದ್ದು ಅಥವಾ ಲಿಖಿತದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಮತ್ತು ಅರ್ಜಿದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ, ಅಂತಹ ಪ್ರಮಾಣಪತ್ರದ ಅವಧಿಯನ್ನು ಕಡಿಮೆ ಮಾಡಬಹುದು ಮತ್ತು ಕಾರಣಗಳನ್ನು ಲೈಸೆನ್ಸು ನೀಡುವ ಪ್ರಾಧಿಕಾರಿಗೆ ತಿಳಿಸತಕ್ಕದ್ದು.

(7) (3), (4), (5) ಮತ್ತು (6) ಉಪನಿಯಮಗಳ ಮೇರೆಗೆ ಪ್ರಮಾಣಪತ್ರವನ್ನು ನೀಡುವ ಉದ್ದೇಶಗಳಿಗಾಗಿ, ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು, ವಿದ್ಯುಚ್ಛಕ್ತಿ ಪರಿಶೀಲಕ, ಅಗ್ನಿಶಾಮಕ ಅಧಿಕಾರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡವನ್ನು ಮತ್ತು ಆವರಣಗಳನ್ನು ಪ್ರವೇಶಿಸಬಹುದು ಮತ್ತು ಅದನ್ನು ಪರಿಶೀಲಿಸಬಹುದು ಮತ್ತು ಅವರ ಪರಿಶೀಲನೆಯ ವರದಿಗಳು ಲೈಸೆನ್ಸು ನೀಡುವ ಪ್ರಾಧಿಕಾರಿಗೆ ಸಲ್ಲಿಸಿದ ಆ ವರದಿಯ ಭಾಗವಾಗಿರತಕ್ಕದ್ದು.

(8) ಸಿನಿಮಾ ಥಿಯೇಟರ್‌ಗಳು ಮತ್ತು ಮಲ್ಟಿಪ್ಲೆಕ್ಸ್‌ಗಳ ಪ್ರಮಾಣಪತ್ರಗಳನ್ನು ಪರಿಶೀಲಿಸುವ ಮತ್ತು ನೀಡುವ ಸಂಬಂಧದಲ್ಲಿನ ಫೀಜುಗಳು, ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು ಮತ್ತು ಹಾಗೆ ನಿರ್ದಿಷ್ಟಪಡಿಸಿದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡತಕ್ಕದ್ದು.

(9) ಮೇಲಿನ ಅಧಿಕಾರಿಗಳು ನೀಡಿದ ಪ್ರಮಾಣಪತ್ರದ ಪ್ರತಿಯನ್ನು ಸರ್ಕಾರವು ನಿರ್ದಿಷ್ಟಪಡಿಸಿದ ಫೀಜುಗಳ ಸಂದಾಯದ ಮೇಲೆ ಪಡೆಯಬಹುದು.

**35. ಲೈಸೆನ್ಸಿಗಾಗಿ ಅರ್ಜಿ.-** 34ನೇ ನಿಯಮದಲ್ಲಿ ಉಲ್ಲೇಖಿಸಿದ ಪ್ರಮಾಣಪತ್ರಗಳನ್ನು ಪಡೆದ ತರುವಾಯ, ಅರ್ಜಿದಾರನು ಲೈಸನ್ಸನ್ನು ನೀಡುವುದಕ್ಕಾಗಿ ಲಿಖಿತದಲ್ಲಿ ಅವನ ಅರ್ಜಿಯನ್ನು ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ಸಲ್ಲಿಸಬಹುದು, ಅರ್ಜಿಯೊಂದಿಗೆ,-

(i) 34ನೇ ನಿಯಮದ (3)ನೇ ಉಪ-ನಿಯಮದ ಮೇರೆಗೆ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಸಾರಿಗೆ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರನು ನೀಡಿದ ಪ್ರಮಾಣಪತ್ರ ;

(ii) 34ನೇ ನಿಯಮದ (4)ನೇ ಉಪ-ನಿಯಮದ ಮೇರೆಗೆ ಜಿಲ್ಲಾ ವಿದ್ಯುಚ್ಛಕ್ತಿ ಪರಿಶೀಲಕನು ನೀಡಿದ ಪ್ರಮಾಣಪತ್ರ;

(iii) 34ನೇ ನಿಯಮದ (5)ನೇ ಉಪ-ನಿಯಮದ ಮೇರೆಗೆ ಅಗ್ನಿಶಾಮಕ ಅಧಿಕಾರಿಯು ನೀಡಿದ ಪ್ರಮಾಣಪತ್ರ;

(iv) 34ನೇ ನಿಯಮದ (6)ನೇ ಉಪ-ನಿಯಮದ ಮೇರೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯು ನೀಡಿದ ಪ್ರಮಾಣಪತ್ರ;

(v) ಅಂತಹ ವ್ಯವಸ್ಥೆಗಳನ್ನು ಮಾಡಲಾಗಿದೆಯೆಂದು ಸ್ಥಿರೀಕರಿಸುವ ಸರಬರಾಜುದಾರರು ನೀಡಿದ ವಿವರ ಪತ್ರದ ಜೊತೆಗೆ ಆ ಪ್ರತಿಯೊಂದು ಪ್ರದರ್ಶನದಲ್ಲಿ, ಪ್ರದರ್ಶನಕ್ಕಾಗಿ ಚಲನಚಿತ್ರ ವಿಭಾಗದ ಪೂರ್ವಾನುಮೋದನೆಯೊಂದಿಗೆ ಕೇಂದ್ರ ಸರ್ಕಾರವು ಅನುಮೋದಿಸಿದ ಚಲನಚಿತ್ರಗಳನ್ನು ಪಡೆಯುವುದಕ್ಕಾಗಿ ಅಂತಹ ಎಲ್ಲಾ ವ್ಯವಸ್ಥೆಗಳನ್ನು ಅವನು ಪೂರ್ಣಗೊಳಿಸಿದ್ದಾನೆಂದು ಅರ್ಜಿದಾರನ ಘೋಷಣೆಯು; ಮತ್ತು

(vi) ಸರ್ಕಾರವು ನಿರ್ದಿಷ್ಟಪಡಿಸಿದಂಥ ಲೈಸೆನ್ಸ್ ಫೀಜುಗಳನ್ನು ಸಂದಾಯ ಮಾಡಿರುವುದಕ್ಕಾಗಿ ಖಜಾನೆ ಚಲನು

- ಇವುಗಳನ್ನು ಲಗತ್ತಿಸತಕ್ಕದ್ದು.

**36. ಲೈಸನ್ಸಿನ ಮಂಜೂರಾತಿ ಅಥವಾ ನಿರಾಕರಣೆ.**- (1) ಲೈಸೆನ್ಸಿಗಾಗಿನ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಅನುಮೋದಿತ ನಕ್ಷೆಗಳ ಪ್ರಕಾರ ಎಲ್ಲಾ ಕಾಮಗಾರಿಗಳನ್ನು ಕಾರ್ಯಗತಗೊಳಿಸಲಾಗಿದೆ ಮತ್ತು ಚಲನಚಿತ್ರದ ಪ್ರದರ್ಶನಕ್ಕಾಗಿ ಎಲ್ಲಾ ವ್ಯವಸ್ಥೆಗಳನ್ನು ಮಾಡಲಾಗಿದೆ ಎಂದು ಅವನಿಗೆ ಮನದಟ್ಟಾದರೆ, ಅದನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗೆ ಅರ್ಜಿದಾರನಿಗೆ 'ಎಫ್' ನಮೂನೆಯಲ್ಲಿ ಲೈಸೆನ್ಸನ್ನು ನೀಡತಕ್ಕದ್ದು ಅಥವಾ ಲಿಖಿತದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಅಂತಹ ಲೈಸೆನ್ಸ್ ನೀಡುವುದನ್ನು ನಿರಾಕರಿಸತಕ್ಕದ್ದು ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಲೈಸೆನ್ಸಿಗಾಗಿನ ಅರ್ಜಿಯನ್ನು ನಿರಾಕ್ಷೇಪಣಾ ಪ್ರಮಾಣಪತ್ರದ ಸಿಂಧುತ್ವದ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಮಾಡಿಕೊಳ್ಳಲಾಗಿಲ್ಲದಿದ್ದರೆ, ಲೈಸೆನ್ಸ್ ನೀಡುವುದನ್ನು ನಿರಾಕರಿಸಬಹುದು. ಈ ಉದ್ದೇಶಕ್ಕಾಗಿ ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಅವನು ಅವಶ್ಯವೆಂದು ಪರ್ಯಾಲೋಚಿಸುವಂಥ ಸ್ಥಳೀಯ ಪರಿಶೀಲನೆಯನ್ನು ಮಾಡಬಹುದು, 32ನೇ ನಿಯಮದಲ್ಲಿ ಉಲ್ಲೇಖಿಸಿದ ನಕ್ಷೆ ಮತ್ತು ರೇಖಾಚಿತ್ರಗಳ ಪ್ರತಿಯನ್ನು ಲೈಸೆನ್ಸ್‌ಗೆ ಲಗತ್ತಿಸತಕ್ಕದ್ದು.

(2) ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದ ಫೀಜುಗಳ ಸಂದಾಯ ಮೇಲೆ ಲೈಸೆನ್ಸು ನೀಡುವ ಪ್ರಾಧಿಕಾರಿಯಿಂದ ದ್ವಿಪ್ರತಿ ಅಥವಾ ಒಂದು ಪ್ರತಿಯಲ್ಲಿ ಲೈಸೆನ್ಸ್‌ನ್ನು ಪಡೆಯಬಹುದು.

**37. ಲೈಸೆನ್ಸಿನ ಅವಧಿ.**- 36ನೇ ನಿಯಮದ ಮೇರೆಗೆ ಕೊಟ್ಟ ಲೈಸೆನ್ಸ್, ಆ ಲೈಸೆನ್ಸನ್ನು ಕೊಟ್ಟ ದಿನಾಂಕದಿಂದ ಐದು ವರ್ಷಗಳ ಅವಧಿಗಾಗಿ ಆದರೆ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಮತ್ತು ವಿದ್ಯುತ್ ಪರಿವೀಕ್ಷಕರ ಇಲಾಖೆಯಿಂದ ವಾರ್ಷಿಕ ಪರಿಶೀಲನೆಗೊಳಪಟ್ಟು ಮೂರು ವರ್ಷಗಳಿಗಿಂತ ಕಡಿಮೆಯಿಲ್ಲದಂತೆ ಸಿಂಧುವಾಗಿರತಕ್ಕದ್ದು:

ಪರಂತು, ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಲಿಖಿತದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ, ಐದು ವರ್ಷಗಳಿಗಿಂತ ಕಡಿಮೆ ಅವಧಿಗಾಗಿ ಲೈಸೆನ್ಸ್‌ನ್ನು ನೀಡಬಹುದು.

**38. ಸ್ಥಳಕ್ಕೆ ತರುವಾಯದ ಸೇರ್ಪಡೆಗಳು ಮತ್ತು ಬದಲಾವಣೆಗಳು.**- 39 ಮತ್ತು 40ನೇ ನಿಯಮಗಳಿಗೆ ಅನುಸಾರವಾಗಿ ಪಡೆದ ಲೈಸೆನ್ಸ್ ನೀಡುವ ಪ್ರಾಧಿಕಾರಿಯಿಂದ ಪಡೆದ ಪೂರ್ವಾನುಮೋದನೆ ಹೊರತು, ಲೈಸೆನ್ಸನ್ನು ನೀಡಲಾಗಿರುವಂಥ ಆ ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡಕ್ಕೆ ಸಂಬಂಧಿಸಿದಂತೆ ಯಾವುದೇ ತರುವಾಯದ ಸೇರ್ಪಡೆಯನ್ನು ಅಥವಾ ಬದಲಾವಣೆಯನ್ನು ಮಾಡತಕ್ಕದ್ದಲ್ಲ.

**39. ತರುವಾಯದ ಸೇರ್ಪಡೆಗಳು ಮತ್ತು ಬದಲಾವಣೆಗಳ ಅನುಮೋದನೆಗಾಗಿನ ಪ್ರಕ್ರಿಯೆ.**-(1) ಲೈಸೆನ್ಸ್‌ದಾರನು, ಲೈಸೆನ್ಸ್ ಪಡೆದ ಸ್ಥಳ ಅಥವಾ ಅದರ ಯಾವುದೇ ಭಾಗಕ್ಕೆ ಸೇರ್ಪಡೆಯನ್ನು ಅಥವಾ ಬದಲಾವಣೆಯನ್ನು ಮಾಡುವ ಅವನ ಉದ್ದೇಶದ ಬಗ್ಗೆ ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ಲಿಖಿತದಲ್ಲಿ ನೋಟೀಸನ್ನು ನೀಡತಕ್ಕದ್ದು, ಅಂತಹ ನೋಟೀಸು, ಉದ್ದೇಶಿತ ಸೇರ್ಪಡೆಗಳು ಅಥವಾ ಬದಲಾವಣೆಗಳನ್ನು ಸುಸ್ಪಷ್ಟವಾಗಿ ತಿಳಿಸತಕ್ಕದ್ದು ಮತ್ತು ಅದರ ಜೊತೆಗೆ ಮೂಲ ಪ್ರಮಾಣಪತ್ರಗಳ

ಜೊತೆಗೆ 30ನೇ ನಿಯಮದ ಮೂಲಕ ಅಗತ್ಯಪಡಿಸಿದ ರೀತಿಯಲ್ಲಿ ನಾಲ್ಕು ಪ್ರತಿಗಳಲ್ಲಿ ಬರೆಯಲಾದ, ನಿರ್ವಹಿಸಬೇಕಾದ ಕಾಮಗಾರಿಯ ಸಂಪೂರ್ಣ ನಕ್ಷೆಗಳು, ಉನ್ನತಿಗಳು ಮತ್ತು ವಿಭಾಗಗಳು ಮತ್ತು ಬ್ಲಾಕ್ ನಕ್ಷೆಗಳು ಮತ್ತು ತಪಶೀಲುಗಳೊಂದಿಗೆ ಇರತಕ್ಕದ್ದು. ಈ ಉದ್ದೇಶಕ್ಕಾಗಿ ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಪಡೆಯುವುದು ಅವಶ್ಯವಿರತಕ್ಕದ್ದಲ್ಲ. ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಉದ್ದೇಶಿತ ಸೇರ್ಪಡೆಗಳು ಅಥವಾ ಬದಲಾವಣೆಗಳಿಗೆ ಮಂಜೂರಾತಿಯನ್ನು ನೀಡುವುದಕ್ಕೆ ಮುಂಚೆ 31ನೇ ನಿಯಮದ (1)ನೇ ಮತ್ತು (2)ನೇ ಉಪ-ನಿಯಮಗಳಲ್ಲಿ ವಿಧಿಸಿದ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು. ಲೈಸೆನ್ಸ್ ನೀಡುವ ಪ್ರಾಧಿಕಾರಿಯು 31ನೇ ನಿಯಮದ ಮೇರೆಗೆ ಅಭಿಪ್ರಾಯವನ್ನು ಸ್ವೀಕರಿಸಿದ ತರುವಾಯ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಅಂತಹ ಸೇರ್ಪಡೆಗಳ ಅಥವಾ ಬದಲಾವಣೆಗಳ ಪ್ರಸ್ತಾವನೆಯನ್ನು ಅನುಮೋದಿಸತಕ್ಕದ್ದು.

(2) ಸಿನಿಮಾ ಥಿಯೇಟರನ ಸೇರ್ಪಡೆಗಳು ಮತ್ತು ಬದಲಾವಣೆಗಳು ಆ ಪ್ರದೇಶವನ್ನು ವಿಸ್ತರಿಸದೇ ಪ್ರಸ್ತುತ ಲೈಸೆನ್ಸು ಪಡೆದ ಆವರಣಗಳಲ್ಲಿ ಒಂದರಿಂದ ಎರಡು ಅಥವಾ ಮೂರು ಪರದೆಗಳ ಸಂಖ್ಯೆಯನ್ನು ಅಥವಾ ಒಂದೇ ಪರದೆಯಲ್ಲಿ ವೀಕ್ಷಿಸಲು ಅನುಮೋದನೆ ಪಡೆದ ಆಸನಗಳ ಒಟ್ಟು ಸಂಖ್ಯೆಯನ್ನು ವಿಸ್ತರಿಸುವುದು ಒಳಗೊಂಡಿರತಕ್ಕದ್ದು. ಈ ನಿಯಮಗಳಲ್ಲಿ ಖಾಯಂ ಸಿನಿಮಾ ಥಿಯೇಟರಿಗೆ ಸಂಬಂಧಿಸಿದ ಎಲ್ಲಾ ಇತರ ಉಪಬಂಧಗಳು ಸಿನಿಮಾ ಥಿಯೇಟರನ ಅಥವಾ ಮಲ್ಟಿಪ್ಲೆಕ್ಸ್‌ಗಳಿಗೆ ಅಂತಹ ಸೇರ್ಪಡೆಗಳು ಮತ್ತು ಬದಲಾವಣೆಗಳು ಅನ್ವಯಿಸತಕ್ಕದ್ದು.

**40. ವಿದ್ಯುಚ್ಛಕ್ತಿ ಸ್ಥಾಪನೆಗಳಿಗೆ ತರುವಾಯದ ಸೇರ್ಪಡೆಗಳು ಮತ್ತು ಬದಲಾವಣೆಗಳ ಮಂಜೂರಾತಿಗಾಗಿನ ಪ್ರಕ್ರಿಯೆ.- (**1) ಲೈಸೆನ್ಸ್‌ದಾರನು, ವಿದ್ಯುಚ್ಛಕ್ತಿ ಸ್ಥಾಪನೆಗಳಿಗೆ ಅಥವಾ ಸಲಕರಣೆಗಳಿಗೆ ಸೇರ್ಪಡೆಗಳನ್ನು ಅಥವಾ ಬದಲಾವಣೆಗಳನ್ನು ಮಾಡುವ ಅವನ ಉದ್ದೇಶದ ಬಗ್ಗೆ ಲಿಖಿತದಲ್ಲಿ ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ತಿಳುವಳಿಕೆ ನೀಡತಕ್ಕದ್ದು. ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಅಂತಹ ತಿಳುವಳಿಕೆಯನ್ನು ವಿದ್ಯುಚ್ಛಕ್ತಿ ಪರಿಶೀಲಕನಿಗೆ ಕಳುಹಿಸತಕ್ಕದ್ದು. ವಿದ್ಯುಚ್ಛಕ್ತಿ ಪರಿಶೀಲಕನು ಆ ಉದ್ದೇಶಿತ ಬದಲಾವಣೆಗಳ ಅಥವಾ ಸೇರ್ಪಡೆಗಳ ಪರಿಶೀಲನೆಯ ತರುವಾಯ ಈ ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿದೆಯೆಂದು ವರದಿ ಮಾಡಿದಲ್ಲಿ, ಲೈಸೆನ್ಸ್ ನೀಡುವ ಪ್ರಾಧಿಕಾರಿಯು 31ನೇ ನಿಯಮದ (3)ನೇ ಉಪ-ನಿಯಮದಲ್ಲಿ ವಿಧಿಸಿದ ಪ್ರಕ್ರಿಯೆಯನ್ನು ಸಾಧ್ಯವಾಗಬಹುದಾದಷ್ಟು ಅನುಸರಿಸಿ ಪ್ರಸ್ತಾವನೆಯನ್ನು ಅನುಮೋದಿಸತಕ್ಕದ್ದು.

(2) ಲೈಸೆನ್ಸ್ ನೀಡುವ ಪ್ರಾಧಿಕಾರಿಯ ಅಭಿಪ್ರಾಯದಲ್ಲಿ, ಹೆಚ್ಚಿನ ತಪಾಸಣೆಯು ಅವಶ್ಯವಿದ್ದರೆ ಅವನು ಅದಕ್ಕಾಗಿ ನಿರ್ದೇಶಿಸಬಹುದು ಮತ್ತು ಈ ಸಂಬಂಧದಲ್ಲಿ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದ ಫೀಜುಗಳನ್ನು ಮುಂಗಡವಾಗಿ ಸಂದಾಯ ಮಾಡಲು ಲೈಸೆನ್ಸ್‌ದಾರನನ್ನು ಅಗತ್ಯಪಡಿಸಬಹುದು.

(3) ಎರಡು ನಿಯತಕಾಲಿಕ ಪರಿಶೀಲನೆಗಳ ನಡುವಣ ಮಧ್ಯಂತರದ ಅವಧಿಯಲ್ಲಿ, 4ನೇ ನಿಯಮದ (2)ನೇ ಉಪನಿಯಮದ ಮೇರೆಗೆ ಹೊರಡಿಸಿದ ಅಂತಹ ಅಧಿಕಾರಿಯ ಯಾವುದೇ ಲಿಖಿತದಲ್ಲಿನ ಆದೇಶಗಳನ್ನು ಅವನು ನಿರ್ದಿಷ್ಟಪಡಿಸಿದ ಸಮಯದೊಳಗೆ ಕಾರ್ಯಗತಗೊಳಿಸುವಲ್ಲಿ ಪ್ರಭಾರದಲ್ಲಿರುವ ವ್ಯಕ್ತಿಯ ನಿರ್ಲಕ್ಷ್ಯ ಅಥವಾ ವಿಫಲತೆಯ ಕಾರಣದಿಂದಾಗಿ ಯಾವುದೇ ಮತ್ತಷ್ಟು ಪರಿಶೀಲನೆಯು ಅವಶ್ಯವೆಂದು ವಿದ್ಯುಚ್ಛಕ್ತಿ ಪರಿಶೀಲಕನು ಅಭಿಪ್ರಾಯಪಟ್ಟರೆ ಅಥವಾ ಯಾವುದೇ ತಪಾಸಣೆ ಮಾಡುವ ಅವಧಿಯಲ್ಲಿ, ಸ್ಥಾಪನೆಯು ದೋಷಪೂರ್ಣವೆಂದು ಕಂಡುಬಂದರೆ, ಈ ಸಂಬಂಧದಲ್ಲಿ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದ ಫೀಜುಗಳನ್ನು ವಿಧಿಸತಕ್ಕದ್ದು ಮತ್ತು ಅಂತಹ ಫೀಜನ್ನು ಲೈಸೆನ್ಸ್‌ದಾರನು ಸಂದಾಯ ಮಾಡತಕ್ಕದ್ದು.

**41. ಆಟಗಳ ಪ್ರದರ್ಶನಕ್ಕಾಗಿ ನಿರ್ಬಂಧಿತ ಸಮಯ.-** ಯಾರೇ ಲೈಸೆನ್ಸ್‌ದಾರನು, ಬೆಳಿಗ್ಗೆ 8.00 ಗಂಟೆಗೆ ಮುಂಚಿತವಾಗಿ ಚಲನಚಿತ್ರ ಪ್ರದರ್ಶನ ಮಾಡತಕ್ಕದ್ದಲ್ಲ. ಕೊನೆಯ ಪ್ರದರ್ಶನ ರಾತ್ರಿ 10.00 ಗಂಟೆಯ ನಂತರ ಪ್ರಾರಂಭಿಸತಕ್ಕದ್ದಲ್ಲ.

## ಅಧ್ಯಾಯ –VII

## ಖಾಯಂ ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡಗಳಿಗೆ ಸಂಬಂಧಪಟ್ಟ ಉಪಬಂಧ

**42. ಪರಿಭಾಷೆಗಳು.-** ಈ ಅಧ್ಯಾಯದ ಉದ್ದೇಶಕ್ಕಾಗಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(1) **"ಹಜಾರುಗಳು"** ಎಂದರೆ, ಆಸನಗಳ ಸಮೂಹದೊಳಕ್ಕೆ ಅಥವಾ ಅದರಿಂದ ಹೊರಕ್ಕೆ ನಡೆದು ಹೋಗುವುದಕ್ಕಾಗಿ ಆಸನವನ್ನು ಒದಗಿಸಿದ ಪ್ರದೇಶದ ಒಳಗೆ ಮತ್ತು ಸುತ್ತಲೂ ಬಿಟ್ಟಿರುವ ನಡುದಾರಿ;

(2) **"ವೇದಿಕೆ ಹಿಂಬದಿ ಗೋಡೆ"** ಎಂದರೆ, ಪ್ರೇಕ್ಷಕರಿಗೆ ಅಭಿಮುಖವಾಗಿರುವ ವೇದಿಕೆಯ ಹಿಂದೆ ಇರುವ ಗೋಡೆ;

(3) **"ಬಾಲ್ಕನಿ ಅಂತಸ್ತು"** ಎಂದರೆ, ಹಿಂಬದಿಯ ಗೋಡೆಯಿಂದ ಹೊರಗೆ ಮುಂಚಾಚಿರಬಹುದಾದ ಅಥವಾ ಮುಂಚಾಚದೆಇರಬಹುದಾದ ಹೆಚ್ಚಿನ ಪ್ರೇಕ್ಷಕರು ಕುಳಿತುಕೊಳ್ಳುವುದಕ್ಕಾಗಿ ಚಿತ್ರಮಂದಿರದ ಭಾಗದಲ್ಲಿ ನಿರ್ಮಿಸಿದ ಹೆಚ್ಚುವರಿ ಅಂತಸ್ತು;

(4) **"ಬಾಲ್ಕನಿ ತಳ"** ಎಂದರೆ, ಸಭಾಂಗಣದೊಳಗೆ ಬಾಲ್ಕನಿಯ ಕೆಳಮೇಲ್ಮೈ ಪ್ರದೇಶ;

(5) **"ಚಲನಚಿತ್ರ ಆವರಣಗಳು"** ಎಂದರೆ, ಸಿನಿಮಾವನ್ನು ನಡೆಸುವುದಕ್ಕಾಗಿ ಲೈಸೆನ್ಸ್ ಪಡೆದ ಇಡೀ ನಿವೇಶನದ ಪ್ರದೇಶ ಮತ್ತು ಸಿನಿಮಾ ಕಟ್ಟಡ ಮತ್ತು ನಿವೇಶನದೊಳಗೆ ಇತರ ಲಗತ್ತುಗಳನ್ನು ಅದು ಒಳಗೊಳ್ಳುತ್ತದೆ;

(6) "ಮಲ್ಟಿಪ್ಲೆಕ್ಸ್" ಎಂದರೆ, ಸಿನಿಮಾವನ್ನು ನಡೆಸುವುದಕ್ಕಾಗಿ ಲೈಸೆನ್ಸು ಪಡೆದ ಪ್ರದೇಶ ಮತ್ತು ಲೈಸೆನ್ಸು ಪಡೆದ ಆವರಣಗಳಲ್ಲಿನ ಕಟ್ಟಡ ಮತ್ತು ಪ್ರದೇಶಕ್ಕೆ ಸಂಬಂಧಪಟ್ಟ ಅದರ ಭಾಗಗಳು;

(7) **"ಮೊಗಸಾಲೆ" ,** "ದಾರಿ" , "ವರಾಂಡ" ಎಂದರೆ, ಸಿನಿಮಾ ಕಟ್ಟಡಗಳಿಗೆ, ಆದರೆ ಸಭಾಂಗಣದ ಹೊರಗೆ ವ್ಯಕ್ತಿಗಳ ಓಡಾಟದ ಉದ್ದೇಶಕ್ಕಾಗಿ ಒದಗಿಸಿದ ಜಾಗ;

(8) **"ಕ್ರಷ್ ಹಾಲ್"** ಎಂದರೆ, ಟಿಕೆಟ್‌ಗಳನ್ನು ಕೊಳ್ಳುವ ಮತ್ತು ನಿರೀಕ್ಷಣೆಯಂಥ ಉದ್ದೇಶಗಳಿಗಾಗಿ ಮುಖ್ಯ ಸಭಾಂಗಣದ ಹೊರಗಡೆಯ ಮೊದಲ ಪ್ರವೇಶದ ಸಭಾಂಗಣ (ಇದನ್ನು ಆರಾಮ ಕೋಣೆಯ ಜೊತೆಗೆ ಒದಗಿಸಬಹುದು);

(9) **"ಆರಾಮ ಕೋಣೆ"** ಎಂದರೆ, ಪ್ರೇಕ್ಷಕರು ಸಿನಿಮಾ ಮಂದಿರದೊಳಕ್ಕೆ ವಾಸ್ತವವಾಗಿ ಪ್ರವೇಶಿಸುವುದಕ್ಕೆ ಮುಂಚೆ ಕಾಯಬಹುದಾದಂಥ ಪ್ರವೇಶದ ಮುಂದಿರುವ ಸಭಾಂಗಣ;

(10) **"ಮೊಗಸಾಲೆ"** ಎಂದರೆ, ಒಂದು ಅಥವಾ ಹೆಚ್ಚು ಕೊಠಡಿಗಳಿಗೆ ಮುಕ್ತವಾಗಿ ಹೋಗುವಂಥ ದಾರಿ ಅಥವಾ ಚಿಕ್ಕ ಹೊರಕೊಠಡಿ;

(11) **"ಆರಾಮಶಾಲೆ"** ಎಂದರೆ, ಕುಳಿತುಕೊಳ್ಳುವ ಕೊಠಡಿ ಅಥವಾ ವಿಶ್ರಾಂತಿಯ ಸ್ಥಳ;

(12) **"ರಂಗಸ್ಥಳದ ಮುಂಭಾಗ"** ಎಂದರೆ, ವೇದಿಕೆ ಮೇಲಿನ ಪ್ರದರ್ಶನವನ್ನು ಪ್ರೇಕ್ಷಕರು ವೀಕ್ಷಿಸುವುದರ ಮೂಲಕ, ವೇದಿಕೆ ಮತ್ತು ಸಭಾಂಗಣದ ಮಧ್ಯೆ ಒಟ್ಟು ಮುಕ್ತವಾಗಿರುವ ಸ್ಥಳ;

(13) **"ವೇದಿಕೆ ಮುಂಭಾಗದ ಚಾಚು"** ಎಂದರೆ, ಪರದೆಯನ್ನು ಕೆಳಗಿಳಿಸಿದಾಗಲೂ ಪ್ರೇಕ್ಷಕರಿಗೆ ಕಾಣುವ ವೇದಿಕೆ ಮುಂಭಾಗದ ಪ್ರದೇಶ ಮತ್ತು ಅದು ಪರದೆಯನ್ನು ಮತ್ತು ಅದನ್ನು ಹಿಡಿದುಕೊಂಡಿರುವ ಚೌಕಟ್ಟಿನ ಕಮಾನನ್ನು ಒಳಗೊಳ್ಳುತ್ತದೆ;

(14) **"ಆಸನಗಳ ಶ್ರೇಣೀಕರಣ"** ಎಂದರೆ, ಪ್ರೇಕ್ಷಕರಿಗೆ ರಂಗಸ್ಥಳದ ಪ್ರದರ್ಶನದ ಅಪ್ರತಿಬಂಧಿತ ವೀಕ್ಷಣೆಯನ್ನು ಸಾಧ್ಯಗೊಳಿಸುವ ಹಾಗೆ ವೇದಿಕೆಯಿಂದ ಸ್ವಲ್ಪ ದೂರ ಅನುಕ್ರಮ ಸಾಲುಗಳಲ್ಲಿ ಆಸನಗಳ ಮಟ್ಟಗಳಲ್ಲಿ ಕ್ರಮೇಣ ಏರಿಕೆ;

(15) **"ಇಳಿಜಾರು ದಾರಿ"** ಎಂದರೆ, ವಿಕಲಚೇತನರಿಗಾಗಿ ಒದಗಿಸಲಾದ ಇಳಿಜಾರು ದಾರಿ;

(16) **"ಹಿಂಭಾಗದ ಗೋಡೆ"** ಎಂದರೆ, ಸಭಾಂಗಣದ ಕೊನೆಯಲ್ಲಿ ವೇದಿಕೆಗೆ ಅಭಿಮುಖವಾಗಿರುವ ಗೋಡೆ;

(17) **"ವೇದಿಕೆಯ ಮುಂಭಾಗದ ಅಗ್ರಭಾಗ"** ಎಂದರೆ, ವೇದಿಕೆಯ ಮುಂಭಾಗದ ಸ್ವಲ್ಪದೂರ ಮಂದಿರದೊಳಕ್ಕೆ ವಿಸ್ತರಿಸುವ ವೇದಿಕೆಯ ಭಾಗ;

(18) **“ಆಸನಗಳ ವ್ಯವಸ್ಥೆ”** ಎಂದರೆ, ಪ್ರತಿಯೊಂದು ಅನುಕ್ರಮ ಸಾಲಿನಲ್ಲಿ ಅರ್ಧ ಆಸನ ಇಳಿಜಾರು ಮಟ್ಟದ ಮೂಲಕ (ಪ್ರತಿಯೊಂದು ಸಾಲಿಗೆ ಸಂಬಂಧಪಟ್ಟಂತೆ) ಆಸನಗಳನ್ನು ಸ್ಥಾನಾಂತರ ಮಾಡುವ ರೀತಿಯಲ್ಲಿ ಆಸನಗಳ ಏರ್ಪಾಟುಗಳು.

**43. ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ನಿವೇಶನದ ಬಗ್ಗೆ ಪೂರೈಸಬೇಕಾಗಿರುವ ಷರತ್ತುಗಳು.-** (1) ನಿವೇಶನದ ಮಟ್ಟ ಅಥವಾ ಅದು ಇರುವ ಸ್ಥಳದ ಕಾರಣದಿಂದ ಅದರೊಳಕ್ಕೆ ಹರಿದು ಬರುವ ಮಳೆಯ ನೀರು ಸೇರುವಂಥ ಯಾವುದೇ ನಿವೇಶನವನ್ನು, ಮಳೆ ನೀರಿನ ಮಾರ್ಗ, ಲಭ್ಯವಿರುವುದು ಯಾವುದಾದರೂ ಇದ್ದರೆ ಅದರೊಳಕ್ಕೆ ಹರಿಸುವ ಮೂಲಕವಾಗಿಯಾಗಲಿ ಅಥವಾ ಮರಳು ಮತ್ತು ಕೊಳೆಯದೆ ಇರುವ ಸಾಮಗ್ರಿಗಳ ಪದರಗಳನ್ನು ಹಾಕುವ ಮೂಲಕ ಆ ನಿವೇಶನದ ಮಟ್ಟವನ್ನು ಸಾಕಷ್ಟು ಎತ್ತರಕ್ಕೆ ಏರಿಸುವ ಮೂಲಕವಾಗಿಯಾಗಲಿ ಪರಿಣಾಮಕಾರಿಯಾಗಿ ಪ್ರವಾಹವನ್ನು ತಡೆಗಟ್ಟಲು ಏರ್ಪಾಟುಗಳನ್ನು ಮಾಡಿದ ಹೊರತು ಕಟ್ಟಡದ ನಿರ್ಮಾಣಕ್ಕಾಗಿ ಉಪಯೋಗಿಸತಕ್ಕದ್ದಲ್ಲ.

(2) ಕಟ್ಟಡಕ್ಕೆ ಅನಿವಾರ್ಯವಾಗಿರುವ ಅಂತಸ್ತು ಮತ್ತು ಗೋಡೆಗಳ ತೇವಾಂಶದಿಂದ ಕೂಡಿದ ನೀರಿನೊಂದಿಗೆ ಮಣ್ಣು ಮತ್ತು ಒಳ ಮಣ್ಣನ್ನು ನಿವೇಶನದಲ್ಲಿ ಪೂರ್ಣವಾಗಿ ನೆನೆಸತಕ್ಕದ್ದಲ್ಲ, ಅತಿ ಕೆಳಗಿನ ಅಂತಸ್ತಿನ ಮಟ್ಟಕ್ಕಿಂತ ಎತ್ತರವಾಗಿಲ್ಲದಂತೆ ಕಟ್ಟಡದ ತಳ ಮಹಡಿಯಲ್ಲಿ ಆರ್ದ್ರತಾ ನಿರೋಧಕ ವ್ಯವಸ್ಥೆ ಒದಗಿಸಿದ ಹೊರತು ಮತ್ತು ಆ ಕಟ್ಟಡದ ನೆಲ ಅಂತಸ್ತಿನಲ್ಲಿ ಪರಿಣಾಮಕಾರಿಯಾಗಿ ತೇವವು ಹೆಚ್ಚಾಗುವುದನ್ನು ಪರಿಣಾಮಕಾರಿಯಾಗಿ ತಡೆಗಟ್ಟುವಂತೆ ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಅನುಮೋದಿಸಿದ ಸಾಮಗ್ರಿಯಿಂದ ನೆಲಗಟ್ಟು ಮಾಡಿದ ಹೊರತು ಕಟ್ಟಡದ ನಿರ್ಮಾಣಕ್ಕಾಗಿ ಉಪಯೋಗಿಸತಕ್ಕದ್ದಲ್ಲ.

(3) ಕಟ್ಟಡವನ್ನು ನಿರ್ಮಿಸುವ, ಪುನರ್ನಿರ್ಮಿಸುವ ಅಥವಾ ಮಾರ್ಪಡಿಸುವ ಅಥವಾ ಅದಕ್ಕೆ ಸೇರ್ಪಡೆ ಮಾಡುವ ಪ್ರತಿಯೊಬ್ಬ ವ್ಯಕ್ತಿಯು, ನಿವೇಶನವು, ಯಾವುದೇ ಕೆರೆ, ಜಲಾಶಯ, ಜಲಮಾರ್ಗ, ನದಿ, ಸಿಹಿನೀರಿನ ಕಾಲುವೆ ಅಥವಾ ಬಾವಿಯಿಂದ ಹದಿನೈದು ಮೀಟರುಗಳೊಳಗಿರುವಾಗ ಅಂತಹ ಕೆರೆ, ಜಲಾಶಯ, ಜಲಮಾರ್ಗ, ನದಿ, ಸಿಹಿ ನೀರು, ಕಾಲುವೆ, ಅಥವಾ ಬಾವಿಯಿಂದ ಹರಿದು ಕಟ್ಟಡದ ಚರಂಡಿಯು ಅಥವಾ ಯಾವುದೇ ಅಪಾಯವನ್ನು ತಡೆಗಟ್ಟುವ ಉದ್ದೇಶಕ್ಕಾಗಿ ಅವಶ್ಯವಾಗಬಹುದಾದಂಥೆ ಅಥವಾ ಲೈಸೆನ್ಸ್ ನೀಡುವ ಪ್ರಾಧಿಕಾರಿಯು ನಿರ್ದೇಶಿಸಬಹುದಾದಂಥ ಕ್ರಮಗಳನ್ನು ನಿರ್ವಹಿಸತಕ್ಕದ್ದು.

**44. ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಆವರಣವನ್ನು ಆವೃತಗೊಳಿಸತಕ್ಕದ್ದು.-** ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಆವರಣವನ್ನು, ಅನುಕ್ರಮವಾಗಿ 350 ಎಮ್‌ಎಮ್, 400 ಎಮ್‌ಎಮ್, 300 ಎಮ್‌ಎಮ್ ಮತ್ತು 150 ಎಮ್‌ಎಮ್‌ಗಳಿಗಿಂತ ಕಡಿಮೆಯಿಲ್ಲದಂಥ ಮತ್ತು ಸಾಕಷ್ಟು ಎತ್ತರದ ಇಟ್ಟಿಗೆ, ಕಲ್ಲು, ಕಾಂಕ್ರೀಟ್ ಮತ್ತು ಆರ್‌ಸಿಸಿ ಪದರದ ಸರಿಯಾದ ಹೊರ ಅಥವಾ ಅಡ್ಡಲಾಗಿ ನಿರ್ಮಿಸಿದ ಗೋಡೆಗಳಿಂದ ಆವೃತವಾಗಿರತಕ್ಕದ್ದು.

**45. ಕಟ್ಟಡ ಸಾಮಗ್ರಿಗಳು.-** ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಆವರಣದೊಳಗಿನ ಎಲ್ಲಾ ಕಟ್ಟಡಗಳು ಮತ್ತು ನಿರ್ಮಿತಿಗಳನ್ನು ಮತ್ತು ನೆಲ ಛಾವಣಿ, ಛತ್ತು, ಬಾಲ್ಕನಿಗಳು, ಗ್ಯಾಲರಿಗಳು, ಅಂತಸ್ತುಗಳು, ವಿಭಜಕಗಳು ಮತ್ತು ಅಂತಹ ಕಟ್ಟಡಗಳಲ್ಲಿನ ಪ್ರತಿಯೊಂದು ಕೊಠಡಿ, ಮೊಗಸಾಲೆ, ನಡೆವ ದಾರಿಗಳು, ಹಾದುಹೋಗುವ ಮಾರ್ಗಗಳು ಮತ್ತು ಸ್ಟೇರ್‌ಕೇಸ್‌ಗಳು ಮತ್ತು ಪ್ರದರ್ಶನದ ಕಾಲದಲ್ಲಿ ಸಾರ್ವಜನಿಕರ ಅನನ್ಯ ಉಪಯೋಗಕ್ಕಾಗಿ ಉದ್ದೇಶಿಸಿದ ಅಂತಹ ಕಟ್ಟಡಗಳು ಮತ್ತು ನಿರ್ಮಿತಿಗಳನ್ನು, ಅಗ್ನಿ ಪ್ರತಿರೋಧಕ ಸಾಮಗ್ರಿಗಳಿಂದ ನಿರ್ಮಿಸತಕ್ಕದ್ದು ಮತ್ತು ಎಲ್ಲಾ ಉಕ್ಕು ಮತ್ತು ಎರಕ ಕಬ್ಬಿಣದ ಟ್ರಸ್ಸುಗಳು ಮತ್ತು ಸ್ತಂಭಗಳು, ಕಂಬಗಳು, ಊರುಗಂಬಗಳನ್ನು, ಅಗ್ನಿ ಪ್ರತಿರೋಧಕ ಸಾಮಗ್ರಿಗಳಿಂದ ಸಂರಕ್ಷಿಸತಕ್ಕದ್ದು, ಎಂದರೆ 'ಬಿ' ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂಥವುಗಳಾದ ಐ.ಎಸ್ ತಪಶೀಲುಗಳು:

ಪರಂತು, ಛತ್ತು ಮತ್ತು ಗೋಡೆಗಳಿಗಾಗಿ ಈ ಕೆಳಕಂಡ ಸಾಮಗ್ರಿಗಳನ್ನು ಉಪಯೋಗಿಸಬಹುದು, ಎಂದರೆ:-

(1) ರಂಧ್ರ ಕೊರೆಯದ ಮತ್ತು ರಂಧ್ರ ಕೊರೆದ ಸಂಕುಚಿಸಿದ ಬೆತ್ತ ಅಥವಾ ಮರದ ನಾರಿನ ಹಲಗೆ;

(2) ಮರದ ಕಣದ ಹಲಗೆ;

(3) ಸಂಕುಚಿಸಿದ ಮರದ ತುಂಡು;

(4) ಖನಿಜ ಅಥವಾ ಗಾಜು ತುಪ್ಪಟ ಕ್ವಿಲೆಟ್ಸ್ ಮತ್ತು ನಟ್ಟುಗಳು;

(5) ಖನಿಜ ಅಥವಾ ಸಂಕುಚಿಸಿದ ಗಾಜು ತುಪ್ಪಟ ಹೆಂಚುಗಳು;

(6) ಖನಿಜ ಅಥವಾ ಗಾಜು ತುಪ್ಪಟ ಕ್ವಿಲ್ಟ್ ಅಥವಾ ಹಲಗೆಯಿಂದ ಕೂಡಿದ ರಂಧ್ರ ಕೊರೆದ ಹಲಗೆಯ (ಹಾರ್ಡ್‌ಬೋರ್ಡ್, ಆಸ್ಬೆಸ್ಟಾಸ್ ಹಲಗೆ ಅಥವಾ ಮೆಟಲ್ ಷೀಟ್) ಸಂಯುಕ್ತ ಘಟಕಗಳು;

(7) ಗಾಳಿ ಆಧಾರಿತ ಗಟ್ಟಿ ಹಲಗೆ ತೇಗದ ಪದರದಿಂದ ಮಾಡಿದ ವಿಶೇಷ ಹೀರುಕಗಳು, ಅಂತಸ್ತುಗಳು, ಗ್ಯಾಲರಿ ಅಥವಾ ಬಾಲ್ಕನಿಗೆ ಎತ್ತರದ ಭಾಗದ ನೆಲ ಮತ್ತು ಭಾವಣಿ ಛತ್ತುವಿನ ಮೇಲಿನ ಅತ್ಯಂತ ಕಡಿಮೆ ಭಾಗ ಇವುಗಳು, 3.35 ಮೀಟರುಗಳಿಗಿಂತ ಕಡಿಮೆಯಾಗಿ ಯಾವುದೇ ಭಾಗದಲ್ಲಿರತಕ್ಕದ್ದಲ್ಲ; ಯಾವುದೇ ಅಂತಸ್ತು, ಗ್ಯಾಲರಿ ಅಥವಾ ಬಾಲ್ಕನಿಯ ನಡುವಿನ ಎತ್ತರ ಮತ್ತು ಅದರ ಮೇಲಿನ ಮತ್ತೊಂದು ಅಂತಸ್ತು, ಗ್ಯಾಲರಿ ಅಥವಾ ಬಾಲ್ಕನಿಯ ತಳ ಛತ್ತುವಿನ ಸಂದರ್ಭದಲ್ಲಿ 2.75 ಮೀಟರುಗಳಿಗಿಂತ ಕಡಿಮೆಯಿರತಕ್ಕದ್ದಲ್ಲ;

(8) ರಂಧ್ರ ಕೊರೆದ ನಾರಿನ ಹಲಗೆ ಆಧಾರಿತ ರಂಧ್ರ ಕೊರೆದ ಗಟ್ಟಿ ಹಲಗೆಯ ಸಂಯುಕ್ತ ಘಟಕಗಳು; ಮತ್ತು

(9) ಪ್ಲಾಸ್ಟರ್ ಆಫ್ ಪ್ಯಾರಿಸ್, ಇತ್ಯಾದಿಗಳು ಮತ್ತು ಲೈಸೆನ್ ನೀಡುವ ಪ್ರಾಧಿಕಾರಿಯು ಅನುಮೋದಿಸಿದ ಇತರ ಅಂತಹವೇ ಸಾಮಗ್ರಿಗಳು.

**46. ಸಭಾಂಗಣ.-** (1) ಸಭಾಂಗಣವು, ನೆಲ ಮಹಡಿಯಲ್ಲಿರತಕ್ಕದ್ದು ಮತ್ತು ಅದು ಮೊದಲ ಮಹಡಿಯಲ್ಲಿದ್ದರೆ, ಬೆಂಕಿ ಮತ್ತು ಇತರ ಅಪಘಾತಗಳ ಸಂದರ್ಭದಲ್ಲಿ ಮುಖ್ಯ ಆರಾಮಕೋಣೆ ಮತ್ತು ಪಕ್ಕದ ವರಾಂಡಗಳಿಂದ ಮುಕ್ತವಾಗಿ ಹೋಗುವುದಕ್ಕಾಗಿ ಸಾರ್ವಜನಿಕರು ಸುಲಭವಾಗಿ ಹೊರಗೆ ಹೋಗುವುದಕ್ಕಾಗಿ, ಸಭಾಂಗಣದ ನೆಲಪ್ರದೇಶದ ಪ್ರತಿಯೊಂದು ಐವತ್ತು ಚದರ ಮೀಟರುಗಳಿಗಾಗಿ ಒಂದು ಮೀಟರು ರೇಖಾತ್ಮಕ ಅಗಲದ ಸ್ಟೇರ್‌ಕೇಸ್‌ಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಒದಗಿಸತಕ್ಕದ್ದು. ಎಲ್ಲ ಅಂತಸ್ತುಗಳು, ಗ್ಯಾಲರಿಗಳು ಮತ್ತು ಬಾಲ್ಕನಿಗಳನ್ನು ಸಭಾಂಗಣದ ಮುಂಭಾಗದ ಮೇಲೆ ಮತ್ತು ಅದರ ಪಾರ್ಶ್ವಗಳಲ್ಲಿ ಸರಿಯಾಗಿ ವಿತರಿಸಿರಬೇಕು:

ಪರಂತು, ಮಲ್ಟಿಪ್ಲೆಕ್ಸ್‌ಗಳ ಸಂದರ್ಭದಲ್ಲಿ, ಸ್ಟೇರ್‌ಕೇಸ್‌ಗಳು ಸಾಕಷ್ಟು ಸಂಖ್ಯೆಯಲ್ಲಿ ಇರುವಲ್ಲಿ ಸಭಾಂಗಣವು ಯಾವುದೇ ಮಹಡಿಯಲ್ಲಿ ಇರಬಹುದು ಮತ್ತು ಯಾವುದೇ ತುರ್ತು ಸಂದರ್ಭದಲ್ಲಿ ಪ್ರವೇಶಕ್ಕಾಗಿ ಮತ್ತು ಹೊರಗೆ ಹೋಗುವುದಕ್ಕಾಗಿ ಮಲ್ಟಿಪ್ಲೆಕ್ಸ್ ಕಾಂಪ್ಲೆಕ್ಸ್‌ನಲ್ಲಿ ಲಿಫ್ಟುಗಳನ್ನು ಒದಗಿಸತಕ್ಕದ್ದು.

(2) ನೆಲ ಮಹಡಿಯು, ಪರದೆ ಚೆನ್ನಾಗಿ ಕಾಣುವಂತೆ ಮಾಡುವ ಸಲುವಾಗಿ ಇಳಿಜಾರು ಆಗಿರತಕ್ಕದ್ದು, ಆದರೆ, ಅದು 1:4ರ ಪ್ರಮಾಣಕ್ಕಿಂತ ಹೆಚ್ಚು ಕಡಿದಾಗಿರತಕ್ಕದ್ದಲ್ಲ ಮತ್ತು ಮಹಡಿಯ ಯಾವುದೇ ಭಾಗವು, ಹೊಂದಿಕೊಂಡಿರುವ ವರಾಂಡಕ್ಕಿಂತ 0.9 ಮೀಟರುಗಳಿಗಿಂತ ಹೆಚ್ಚಿಗೆ ಕೆಳಗಿರತಕ್ಕದ್ದಲ್ಲ ಅಥವಾ 1:3 ಮೀಟರುಗಳಿಗಿಂತ ಎತ್ತರವಾಗಿರತಕ್ಕದ್ದಲ್ಲ.

(3) ಪರದೆಯು ಚೆನ್ನಾಗಿ ಕಾಣುವಂತೆ ಮಾಡುವ ಸಲುವಾಗಿ ಸಭಾಂಗಣದ ನೆಲವು ಇಳುಜಾರು ಆಗಿರತಕ್ಕದ್ದು ಮತ್ತು ಸಭಾಂಗಣದಲ್ಲಿನ ಇಳಕಲು ನೆಲದ ಉನ್ನತಿ ಕೋನವು 1:7ಕ್ಕಿಂತ ಕಡಿಮೆಯಾಗಿರತಕ್ಕದ್ದಲ್ಲ ಮತ್ತು 1:4ಕ್ಕಿಂತ ಹೆಚ್ಚಾಗಿರತಕ್ಕದ್ದಲ್ಲ ಮತ್ತು ನೆಲದ ಯಾವುದೇ ಭಾಗವು ಹೊಂದಿಕೊಂಡಿರುವ ದಾರಿ ಅಥವಾ ವರಾಂಡಕ್ಕಿಂತ ಒಂದು ಮೀಟರಿಗಿಂತ ಹೆಚ್ಚಿಗೆ ಕೆಳಗೆ ಅಥವಾ ಒಂದೂವರೆ ಮೀಟರುಗಳಿಗಿಂತ ಹೆಚ್ಚಿಗೆ ಎತ್ತರವಾಗಿರತಕ್ಕದ್ದಲ್ಲ.

(4) ಸಭಾಂಗಣಕ್ಕಾಗಿ ಕೃತಕ ಭಾವಣಿ ಒಳತಾರಸಿ ಯಾವುದಾದರೂ ಇದ್ದರೆ, ಅದು 45ನೇ ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಸಾಮಗ್ರಿಗಳೊಂದಿಗೆ ಇರತಕ್ಕದ್ದು.

**47.** **ಅಂತಸ್ತುಗಳು, ಗ್ಯಾಲರಿಗಳು ಮತ್ತು ಬಾಲ್ಕನಿಗಳು.-** ಮೊದಲನೆಯ ಮಹಡಿ, ಅಂತಸ್ತು, ಗ್ಯಾಲರಿ ಅಥವಾ ಬಾಲ್ಕನಿಯು ಸಭಾಂಗಣದ ಯಾವುದೇ ಭಾಗದ ಮೇಲೆ ವ್ಯಾಪಿಸಿರುವಲ್ಲಿ, ಸಭಾಂಗಣದ ನೆಲ ಮಹಡಿ ಮತ್ತು ಅಂತಹ ಮಹಡಿ ಗ್ಯಾಲರಿ ಅಥವಾ ಬಾಲ್ಕನಿಯ ತಳದ ಒಳತಾರಸಿ ನಡುವಣ ಎತ್ತರವು, ಯಾವುದೇ ಭಾಗದಲ್ಲಿ ಮೂರು ಮೀಟರುಗಳಿಗಿಂತ ಕಡಿಮೆಯಿರತಕ್ಕದ್ದಲ್ಲ.

**48.** **ಪ್ರೊಜೆಕ್ಷನ್ ಕೊಠಡಿ.-** (1) ಚಲನಚಿತ್ರಗ್ರಾಹಕ ಯಂತ್ರದ ಸಲಕರಣೆಯನ್ನು, 2-4 ಗಂಟೆ ರೇಟಿಂಗ್ ಮಾಡುವ ಅಗ್ನಿನಿರೋಧಕ ಸಾಮಗ್ರಿಯಿಂದ ದೃಢವಾಗಿ ನಿರ್ಮಿಸಲಾದ ಕೊಠಡಿಯಲ್ಲಿ ಇಡತಕ್ಕದ್ದು. ಅದರ ನೆಲ ಮಹಡಿಯು, 67ನೇ ನಿಯಮದ ಮೇರೆಗೆ ಕೇಬಲ್ಲುಗಳನ್ನು ಹೂಳಲು ಕನಿಷ್ಠ ಐವತ್ತು ಮಿಲಿ ಮೀಟರುಗಳ ಪೂರ್ಣಗೊಳಿಸಿದ ನೆಲವನ್ನು ಹೊಂದಿರತಕ್ಕದ್ದು:

**ಪರಂತು, ಡಿಜಿಟಲ್ ಪ್ರೊಜೆಕ್ಟರ್‌ಗಳು, ಡಿಜಿಟಲ್ ಧ್ವನಿ ವ್ಯವಸ್ಥೆಯಂಥ ಮುಂದುವರೆದ ತಂತ್ರಜ್ಞಾನದೊಂದಿಗೆ ಇರುವ ಪ್ರಸ್ತುತ ಮತ್ತು ಪ್ರಸ್ತಾವಿತ ಸಿನಿಮಾ ಮಂದಿರಗಳು ಅಥವಾ ಮಲ್ಟಿಪ್ಲೆಕ್ಸ್‌ಗಳ ಸಂದರ್ಭದಲ್ಲಿ, ಪ್ರತ್ಯೇಕ ಪ್ರೊಜೆಕ್ಷನ್ ಕೊಠಡಿಯು ಕಡ್ಡಾಯವಾಗತಕ್ಕದ್ದಲ್ಲ.**

(2) ಪ್ರೊಜೆಕ್ಷನ್ ಮತ್ತು ಪ್ರೇಕ್ಷಕ ಕಿಂಡಿಗಳನ್ನು ಹೊರತುಪಡಿಸಿ, ಪ್ರೊಜೆಕ್ಷನ್ ಕೊಠಡಿಯು ಸಭಾಂಗಣದೊಂದಿಗೆ ಯಾವುದೇ ಸಂಪರ್ಕವನ್ನು ಹೊಂದಿರತಕ್ಕದ್ದಲ್ಲ.

(3) ಒಂದು ಪ್ರೊಜೆಕ್ಟರನ್ನು ಹೊಂದಿರುವ ಪ್ರೊಜೆಕ್ಷನ್ ಕೊಠಡಿಯು, ಅತಿ ಚಿಕ್ಕ ಉದ್ದಗಲವಾದ 2.5 ಮೀಟರುಗಳ ಮತ್ತು 3 ಮೀಟರುಗಳಿಗೆ ಕಡಿಮೆಯಿಲ್ಲದ ಪೂರ್ತಿ ಎತ್ತರದ ಕನಿಷ್ಠ ಪಕ್ಷ ಏಳೂವರೆ ಚದುರ ಮೀಟರುಗಳ ನೆಲ ಪ್ರದೇಶವನ್ನು ಹೊಂದಿರಬೇಕು. ಪ್ರತಿಯೊಂದು ಹೆಚ್ಚುವರಿ ಪ್ರೊಜೆಕ್ಟರಿಗಾಗಿ 2.3 ಚದರ ಮೀಟರುಗಳ ನೆಲದ ಜಾಗವು ಇರತಕ್ಕದ್ದು.

(4) ನೆಲ ಅಂತಸ್ತು ಅಥವಾ ಅದರ ಕೆಳಗಿನ ಅಂತಸ್ತಿಗೆ ಹೋಗಲು ಕ್ರಮವಾದ ಸ್ಟೇರ್‌ಕೇಸ್‌ಗಳು ಇರತಕ್ಕದ್ದು.

(5) ಪ್ರೊಜೆಕ್ಷನ್ ಕೊಠಡಿಯ ಬಾಗಿಲು ಅಗ್ನಿ ನಿರೋಧಕದ್ದಾಗಿರತಕ್ಕದ್ದು ಮತ್ತು ಎಲ್ಲಾ ಸಂದುಗಳು, ಬುಷ್‌ಗಳು ಮತ್ತು ಜೋಡಣೆಗಳು ಸಭಾಂಗಣದೊಳಕ್ಕೆ ಯಾವುದೇ ಹೊಗೆಯು ಹೋಗುವುದನ್ನು ಸಾಧ್ಯವಾದಷ್ಟು ಮಟ್ಟಿಗೆ ತಡೆಗಟ್ಟುವ ಹಾಗೆ ನಿರ್ಮಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು, ಪ್ರೊಜೆಕ್ಷನ್ ಕೊಠಡಿಗಾಗಿ ವಾಯು ಸಂಚಾರವನ್ನು ಒದಗಿಸತಕ್ಕದ್ದು. ಆದರೆ ವಾಯು ಸಂಚಾರ ನಾಳಗಳು ಸಭಾಂಗಣದೊಂದಿಗೆ ನೇರ ಸಂಪರ್ಕವನ್ನು ಹೊಂದಿರತಕ್ಕದ್ದಲ್ಲ. ವಾಯು ಸಂಚಾರವನ್ನು ಪೈಪುಗಳ ಮೂಲಕ ಹರಿಸುವ ಪ್ರದೇಶವು ಪ್ರೊಜೆಕ್ಷನ್ ಕೊಠಡಿಯ ನೆಲಪ್ರದೇಶದ ಶೇಕಡಾ ಒಂದಕ್ಕಿಂತ ಕಡಿಮೆಯಿರತಕ್ಕದ್ದಲ್ಲ.

**ವಿವರಣೆ.-** ಈ ನಿಯಮದಲ್ಲಿ, ಬುಷ್ ಎಂದರೆ, ಯಾವ ರಂಧ್ರಗಳ ಮೂಲಕ ಪೈಪುಗಳು ಮತ್ತು ಕೇಬಲ್ಲುಗಳನ್ನು ಹಾಯಿಸಲಾಗಿದೆಯೋ, ಅಂತಹ ರಂಧ್ರಗಳನ್ನು ಯುಕ್ತವಾಗಿ ಹೊಗೆ ನಿರೋಧಕಗೊಳಿಸುವ ದೃಷ್ಟಿಯಿಂದ ಸೇರಿಸಲಾದ ಪ್ಯಾಕಿಂಗ್.

(6) ಫಿಲ್ಮುಗಳನ್ನು ಸುತ್ತುವ ಉದ್ದೇಶಕ್ಕಾಗಿ ಪ್ರೊಜೆಕ್ಷನ್ ಕೊಠಡಿಯ ಪಕ್ಕದಲ್ಲಿ ರಿವೈಂಡಿಂಗ್ ಕೊಠಡಿ ಅಥವಾ ಆವರಣ ಇರತಕ್ಕದ್ದು ಮತ್ತು ರಿವೈಂಡಿಂಗ್ ಕೊಠಡಿ ಅಥವಾ ಆವರಣವು ಪ್ರೊಜೆಕ್ಷನ್ ಕೊಠಡಿಗೆ ಹೊಂದಿಕೊಂಡಿರುವಲ್ಲಿ ಮತ್ತು ಒಂದರಿಂದ ಮತ್ತೊಂದಕ್ಕೆ ಹೋಗಲು ಅವುಗಳ ನಡುವೆ ಬಾಗಿಲು ಇರುವಲ್ಲಿ, ಅಗ್ನಿ ನಿರೋಧಕ ಬಾಗಿಲು ಅದೇ ಮುಚ್ಚಿಕೊಳ್ಳುವಂತೆ ಬಾಗಿಲು ಇರತಕ್ಕದ್ದು.

(7) ಆವರಣವು ಸಭಾಂಗಣದೊಳಗಿದ್ದರೆ, ಆವರಣದ ಪ್ರೊಜೆಕ್ಷನ್‌ಗಾಗಿ ಮತ್ತು ವೀಕ್ಷಣೆಗಾಗಿ ಅಗತ್ಯವಾದುವುಗಳನ್ನು ಹೊರತುಪಡಿಸಿ ಯಾವುದೇ ಸಂದುಗಳಿಗೆ ಸಭಾಂಗಣದೊಂದಿಗೆ ಸಂಪರ್ಕಿಸಲು ಅವಕಾಶವಿರತಕ್ಕದ್ದಲ್ಲ. ರಿವೈಂಡಿಂಗ್ ಕೊಠಡಿಗಳ ಉದ್ದೇಶಕ್ಕಾಗಿ ಪ್ರೊಜೆಕ್ಷನ್ ಕೊಠಡಿಯ ಪಕ್ಕ / ಒಳಗೆ ರಿವೈಂಡಿಂಗ್ ಕೊಠಡಿ ಅಥವಾ ಆವರಣವು, ಅಗ್ನಿ ನಿರೋಧಕ ಬಾಗಿಲು ಅದೇ ಮುಚ್ಚಿಕೊಳ್ಳುವಂಥದ್ದನ್ನು ಹೊಂದಿರತಕ್ಕದ್ದು:

**ಪರಂತು, ಡಿಜಿಟಲ್ ಪ್ರೊಜೆಕ್ಟರ್ಗಳು, ಡಿಜಿಟಲ್ ಧ್ವನಿ ವ್ಯವಸ್ಥೆಯಂಥ ಮುಂದುವರೆದ ತಂತ್ರಜ್ಞಾನದೊಂದಿಗೆ ಇರುವ ಪ್ರಸ್ತುತ ಮತ್ತು ಪ್ರಸ್ತಾವಿತ ಸಿನಿಮಾ ಮಂದಿರಗಳು ಅಥವಾ ಮಲ್ಟಿಪ್ಲೆಕ್ಸ್‌ಗಳ ಸಂದರ್ಭದಲ್ಲಿ ರಿವೈಂಡಿಂಗ್ ಕೊಠಡಿಯು ಕಡ್ಡಾಯವಾಗತಕ್ಕದ್ದಲ್ಲ.**

(8) ಪ್ರೊಜೆಕ್ಟರ್ ಸಂದುಗಳು, 35 ಮಿಲಿಮೀಟರ್ಗಳು, 70 ಮಿಲಿಮೀಟರಿನ ಸಿನಿಮಾ ಸ್ಕೋಪ್ ಮತ್ತು ಸಿನೇರಾಮ, ವೈಡ್-ಆ್ಯಂಗಲ್, ವಿಸ್ಟಾ ವಿಷನ್‌ಗಳಂಥ ಪ್ರೊಜೆಕ್ಷನ್ ಮಾದರಿಗಳಿಗೆ ಅನುಸಾರವಾಗಿರತಕ್ಕದ್ದು:

**ಪರಂತು, ಡಿಜಿಟಲ್ ಪ್ರೊಜೆಕ್ಟರ್ಗಳು, ಡಿಜಿಟಲ್ ಧ್ವನಿ ವ್ಯವಸ್ಥೆಯಂಥ ಮುಂದುವರೆದ ತಂತ್ರಜ್ಞಾನದೊಂದಿಗೆ ಇರುವ ಪ್ರಸ್ತುತ ಮತ್ತು ಪ್ರಸ್ತಾವಿತ ಸಿನಿಮಾ ಮಂದಿರಗಳು ಅಥವಾ ಮಲ್ಟಿಪ್ಲೆಕ್ಸ್‌ಗಳ ಸಂದರ್ಭದಲ್ಲಿ ಈ ಉಪ ನಿಯಮವು ಅನ್ವಯವಾಗತಕ್ಕದ್ದಲ್ಲ.**

(9) ಪ್ರತಿಯೊಂದು ಸಂದುವು ದಪ್ಪದಲ್ಲಿ 5 ಮಿಲಿಮೀಟರಿಗಿಂತ ಕಡಿಮೆಯಿಲ್ಲದ ಪ್ಲೇಟ್ ಗಾಜು ಪರದೆಯನ್ನು, ಹೊಗೆ ಬರದಂತೆ ಜೋಡಣೆ ಸ್ಥಿತಿಯಲ್ಲಿ ಕೂಡಿಸಿ ಒದಗಿಸತಕ್ಕದ್ದು:

ಪರಂತು, 250 ಚದರ ಮಿಲಿಮೀಟರ್ಗಳಿಗಿಂತ ಹೆಚ್ಚಿಗೆ ಆದ ಸಂದುಗಳಿಗಾಗಿ,-

(i) ಉಪಯೋಗಿಸಿದ ಗಾಜಿನ ಪರದೆಗಳು ದಪ್ಪ ಅಥವಾ ತಂತಿ ಕೂಡಿದ ದಪ್ಪ ಗಾಜಿನವು ಆಗಿರತಕ್ಕದ್ದು;

(ii) ಗಾಜಿನ ಪರದೆಗಳ ಜೊತೆಗೆ ಲೋಹದ ಪರದೆಗಳನ್ನು ಒದಗಿಸತಕ್ಕದ್ದು ಮತ್ತು ಪ್ರೊಜೆಕ್ಷನ್‌ಗಾಗಿ ಉಪಯೋಗಿಸದೆ ಇರುವಾಗ ಸಂದುಗಳನ್ನು ಲೋಹ ಪರದೆಗಳಿಂದ ಮುಚ್ಚತಕ್ಕದ್ದು; ಮತ್ತು

(iii) ಸಂದುಗಳು ಉಪಯೋಗದಲ್ಲಿಲ್ಲದೆ ಇರುವಾಗ ಆ ಸಂದುಗಳನ್ನು ಲೋಹ ಪರದೆಗಳಿಂದ ಮುಚ್ಚಿಸತಕ್ಕದ್ದೆಂದು ಕ್ಯಾಬಿನ್‌ನಲ್ಲಿ ನೋಟೀಸು ಹಾಕತಕ್ಕದ್ದು.

(10) (i) ಪ್ರೊಜೆಕ್ಷನ್ ಕೊಠಡಿಯು 18 ವರ್ಷ ವಯಸ್ಸು ತುಂಬಿದ ಮತ್ತು ಸರ್ಕಾರದ ಮುಖ್ಯ ವಿದ್ಯುಚ್ಛಕ್ತಿ ಇನ್‌ಸ್ಪೆಕ್ಟರ್ ಕೊಟ್ಟ ಸಿನಿಮಾ ಆಪರೇಟರ್ ಲೈಸೆನ್ಸ್‌ನ್ನು ಹೊಂದಿರುವ ವ್ಯಕ್ತಿಯ ಪ್ರಭಾರದಲ್ಲಿರತಕ್ಕದ್ದು:

ಪರಂತು, ಕರ್ನಾಟಕದಲ್ಲಿ ಸಿನಿಮಾಟೋಗ್ರಫಿಯ ತಾಂತ್ರಿಕ ಶಿಕ್ಷಣ ಮಂಡಳಿಯು ನಡೆಸಿದ ಸಿನಿಮಾಟೋಗ್ರಫಿಯಲ್ಲಿ ಸಿನಿಮಾ ಆಪರೇಷನ್ ಅಥವಾ ಡಿಪ್ಲೊಮಾದಲ್ಲಿ ಕ್ರಾಫ್ಟ್ ಕೋರ್ಸ್ ಉತ್ತೀರ್ಣಗೊಂಡು ಅಥವಾ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದಿಂದ ಮನ್ನಣೆ ಪಡೆದ ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್‌ನಲ್ಲಿ ಪದವಿ ಮತ್ತು ಡಿಪ್ಲೊಮಾದಲ್ಲಿ ಪ್ರಮಾಣಪತ್ರವನ್ನು ಅಭ್ಯರ್ಥಿಯು ಹೊಂದಿರುವಲ್ಲಿ, ಸಿನಿಮಾ ಆಪರೇಟರ್ ಲೈಸೆನ್ಸ್ ಪಡೆಯುವುದಕ್ಕಾಗಿ ಕರ್ನಾಟಕ ಸಿನಿಮಾ ಚಾಲಕರ ಪರೀಕ್ಷಾ ಮಂಡಳಿಯು ನಡೆಸುವ ಪರೀಕ್ಷೆಗೆ ಹಾಜರಾಗುವುದರಿಂದ ವಿನಾಯಿತಿ ನೀಡತಕ್ಕದ್ದು:

(ii) ಆಪರೇಟರ್, ಎಲ್ಲ ಕೇಬಲ್ಲುಗಳು, ಲೀಡ್‌ಗಳು, ಸಂಯೋಗಗಳು ಮತ್ತು ಪ್ರತಿರೋಧಗಳು ಮತ್ತು ಪ್ರೊಜೆಕ್ಷನ್ ಕೊಠಡಿಯಲ್ಲಿರುವ ಸಾಗಿಸಬಹುದಾದ ಅಗ್ನಿಶಾಮಕ ಉಪಕರಣಗಳು ಸರಿಯಾದ ಸುಸ್ಥಿತಿಯಲ್ಲಿವೆಂಬುದನ್ನು ಪ್ರತಿಯೊಂದು ಪ್ರದರ್ಶನವು ಪ್ರಾರಂಭವಾಗುವುದಕ್ಕೆ ಮುಂಚೆ ಅವನು ಮನದಟ್ಟು ಮಾಡಿಕೊಳ್ಳತಕ್ಕದ್ದು, ಅವನು ಯಂತ್ರ ಚಾಲನೆಯಲ್ಲಿರುವ ಸಮಯದಲ್ಲಿ ಪ್ರೊಜೆಕ್ಷನ್ ಕೊಠಡಿಯಲ್ಲಿ ಹಾಜರು ಇರತಕ್ಕದ್ದು:

ಪರಂತು, ಡಿಜಿಟಲ್ ಪ್ರೊಜೆಕ್ಟರ್ಗಳು, ಡಿಜಿಟಲ್ ಧ್ವನಿ ವ್ಯವಸ್ಥೆಯಂಥ ಮುಂದುವರೆದ ತಂತ್ರಜ್ಞಾನದೊಂದಿಗೆ ಇರುವ ಮಲ್ಟಿಪ್ಲೆಕ್ಸ್ ಅಥವಾ ಪ್ರಸ್ತುತ ಅಥವಾ ಉದ್ದೇಶಿತ ಸಿನಿಮಾ ಥಿಯೇಟರಿನ ಸಂದರ್ಭದಲ್ಲಿ, ಆದಾಗ್ಯೂ, ಪ್ರೊಜೆಕ್ಷನ್ ಕೊಠಡಿಯು ಕಡ್ಡಾಯವಾಗಿರದಿದ್ದಾಗ್ಯೂ. ಆಪರೇಟರ್ ಯಂತ್ರ ಚಾಲನೆಯಲ್ಲಿರುವ ಸಮಯದಲ್ಲಿ ಪ್ರೊಜೆಕ್ಷನ್ ಕೊಠಡಿಯಲ್ಲಿ ಹಾಜರಿರತಕ್ಕದ್ದು.

(iii) ಇಬ್ಬರು ಆಪರೇಟರುಗಳು ಸಾಂಪ್ರಾದಾಯಿಕ ಪ್ರೊಜೆಕ್ಟರ್ಗಳೊಂದಿಗೆ ಥಿಯೇಟರಿನ ಹೆಸರಿನಲ್ಲಿ ಪ್ರಮಾಣೀಕರಣವನ್ನು ಪಡೆಯತಕ್ಕದ್ದು ಮತ್ತು ಒಬ್ಬ ಆಪರೇಟರನು ಪ್ರತಿ ಪರದೆಗಾಗಿ, ಡಿಜಿಟಲ್ ಪ್ರೊಜೆಕ್ಷನ್ ಸಿಸ್ಟಂನಂಥ ಮುಂದುವರೆದ ತಂತ್ರಜ್ಞಾನದೊಂದಿಗೆ ಇರುವ ಮಲ್ಟಿಪ್ಲೆಕ್ಸ್ ಮತ್ತು ಥಿಯೇಟರಿನ ಸಂದರ್ಭದಲ್ಲಿ ಕೂಡ ವಿದ್ಯುಚ್ಛಕ್ತಿ ಪರಿಶೀಲನಾಲಯ ಇಲಾಖೆಯಿಂದ ಥಿಯೇಟರಿನ ಹೆಸರಿನಲ್ಲಿ ಪ್ರಮಾಣೀಕರಣವನ್ನು ಪಡೆಯತಕ್ಕದ್ದು:

ಪರಂತು, ಡಿಜಿಟಲ್ ಪ್ರೊಜೆಕ್ಟರ್‌ಗಳು, ಡಿಜಿಟಲ್ ಧ್ವನಿ ವ್ಯವಸ್ಥೆಯಂಥ ಮುಂದುವರೆದ ತಂತ್ರಜ್ಞಾನದೊಂದಿಗೆ ಇರುವ ಮಲ್ಟಿಪ್ಲೆಕ್ಸ್ ಅಥವಾ ಪ್ರಸ್ತುತ ಅಥವಾ ಉದ್ದೇಶಿತ ಸಿನಿಮಾ ಥಿಯೇಟರಿನ ಸಂದರ್ಭದಲ್ಲಿ, ಆದಾಗ್ಯೂ, ಪ್ರೊಜೆಕ್ಷನ್ ಕೊಠಡಿಯು ಕಡ್ಡಾಯವಾಗಿರದಿದಾಗ್ಯೂ. ಆಪರೇಟರ್ ಯಂತ್ರ ಚಾಲನೆಯಲ್ಲಿರುವ ಸಮಯದಲ್ಲಿ ಪ್ರೊಜೆಕ್ಷನ್ ಕೊಠಡಿಯಲ್ಲಿ ಹಾಜರಿರತಕ್ಕದ್ದು.

(iv) ಆಪರೇಟರನ ನಿಯೋಜನೆಗೆ ವಿಫಲವಾಗಿದ್ದಲ್ಲಿ ತಡೆಹಿಡಿಯುವಿಕೆಗೆ ಅಥವಾ ರದ್ದಿಯಾತಿಗೆ ಹೊಣೆಯಾಗಬಹುದಾದ ಸಿನಿಮಾ ಥಿಯೇಟರನ ಅಥವಾ ಮಲ್ಟಿಪ್ಲೆಕ್ಸ್‌ನ ವಿದ್ಯುಚ್ಛಕ್ತಿ ಪ್ರಮಾಣಪತ್ರವನ್ನು ಒಪ್ಪಿಸತಕ್ಕದ್ದು.

(11) ಕರ್ನಾಟಕ ಸಿನಿಮಾ ಆಪರೇಟರುಗಳ ಪರೀಕ್ಷಾ ಮಂಡಳಿಯ ರಚನೆ.- ರಾಜ್ಯ ಸರ್ಕಾರವು, ಪ್ರತ್ಯೇಕ ಅಧಿಸೂಚನೆಯ ಮೂಲಕ ಈ ನಿಯಮಗಳ ಉದ್ದೇಶಕ್ಕಾಗಿ ಸಿನಿಮಾ ಆಪರೇಟರುಗಳ ಲೈಸೆನ್ಸ್ ನೀಡುವುದಕ್ಕಾಗಿ ಅಗತ್ಯಪಡಿಸಲಾದ ಪರೀಕ್ಷೆಯನ್ನು ನಡೆಸಲು ಪರೀಕ್ಷಕರ ಮಂಡಳಿಯನ್ನು ರಚಿಸಬಹುದು.

**49. ಆಸನ ವ್ಯವಸ್ಥೆಯ ಬಗ್ಗೆ ಷರತ್ತುಗಳು.-** (1) ಈ ನಿಯಮಗಳು ಪ್ರಾರಂಭದ ದಿನಾಂಕದ ಮುಂಚಿತವಾಗಿ ಪ್ರಸ್ತುತ ಸಿನಿಮಾ ಥಿಯೇಟರುಗಳು ಮತ್ತು ಮಲ್ಟಿಪ್ಲೆಕ್ಸ್‌ಗಾಗಿ, ಯಾವುದೇ ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್‌ನ ಸಭಾಂಗಣದಲ್ಲಿ ಪ್ರತಿ ಹತ್ತು ಚದರ ಮೀ.ಗಳಿಗೆ ಇಪ್ಪತ್ತಕ್ಕಿಂತ ಹೆಚ್ಚು ವ್ಯಕ್ತಿಗಳಿಗೆ ಸ್ಥಳಾವಕಾಶ ನೀಡಲು ಲೈಸೆನ್ಸ್ ನೀಡತಕ್ಕದ್ದಲ್ಲ:

ಪರಂತು, ಪ್ರವೇಶಗಳು, ನಡುದಾರಿಗಳು, ರಂಗಸ್ಥಳಗಳು ಮೊದಲಾದವುಗಳಿಂದ ಆಕ್ರಮಿತ ಪ್ರದೇಶದಂಥವನ್ನು ಹೊರತುಪಡಿಸಿದ ತರುವಾಯ ಆಸನಕ್ಕಾಗಿ ಪ್ರತಿಯೊಬ್ಬ ವ್ಯಕ್ತಿಗೆ 0.5 ಚದರ ಮೀಟರುಗಳ ಪ್ರದೇಶವನ್ನು ಒದಗಿಸತಕ್ಕದ್ದು. ತದನುಸಾರವಾಗಿ, ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಸಭಾಂಗಣಕ್ಕೆ ಪ್ರವೇಶಿಸಬೇಕಾದ ವ್ಯಕ್ತಿಗಳ ಸಂಖ್ಯೆಯನ್ನು ನಿರ್ದಿಷ್ಟಪಡಿಸತಕ್ಕದ್ದು.

(2) ಈ ನಿಯಮಗಳು ಪ್ರಾರಂಭದ ದಿನಾಂಕದಂದು ಮತ್ತು ತರುವಾಯ, ಪ್ರಸ್ತಾವಿತ ಸಿನಿಮಾ ಥಿಯೇಟರ್‌ಗಳು ಅಥವಾ ಮಲ್ಟಿಪ್ಲೆಕ್ಸ್‌ಗಳಿಗಾಗಿ, ಸಭಾಂಗಣದಲ್ಲಿ ಪ್ರತಿ ಹನ್ನೆರಡು ಚದರ ಮೀಟರಿಗೆ ಇಪ್ಪತ್ತಕ್ಕಿಂತ ಹೆಚ್ಚು ವ್ಯಕ್ತಿಗಳಿಗೆ ಸ್ಥಳಾವಕಾಶವನ್ನು ನೀಡಲು ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್‌ಗೆ ಲೈಸೆನ್ಸು ನೀಡತಕ್ಕದ್ದಲ್ಲ.

ಪರಂತು, ಪ್ರವೇಶಗಳು, ನಡುದಾರಿಗಳು, ರಂಗಸ್ಥಳಗಳು ಮೊದಲಾದವುಗಳಿಂದ ಆಕ್ರಮಿತ ಪ್ರದೇಶದಂಥವನ್ನು ಹೊರತುಪಡಿಸಿದ ತರುವಾಯ ಆಸನಕ್ಕಾಗಿ ಪ್ರತಿಯೊಬ್ಬ ವ್ಯಕ್ತಿಗೆ 0.6 ಚದರ ಮೀಟರುಗಳ ಪ್ರದೇಶವನ್ನು ಒದಗಿಸತಕ್ಕದ್ದು. ತದನುಸಾರವಾಗಿ, ಲೈಸೆನ್ಸು ನೀಡುವ ಪ್ರಾಧಿಕಾರಿಯು, ಸಭಾಂಗಣಕ್ಕೆ ಪ್ರವೇಶಿಸಬೇಕಾದ ವ್ಯಕ್ತಿಗಳ ಸಂಖ್ಯೆಯನ್ನು ನಿರ್ದಿಷ್ಟಪಡಿಸತಕ್ಕದ್ದು.

(3) ಆಸನ ವ್ಯವಸ್ಥೆಯನ್ನು ನಿರ್ಧರಿಸುವುದಕ್ಕಾಗಿ ಲಭ್ಯವಿರುವ ಪ್ರದೇಶವನ್ನು ಲೆಕ್ಕ ಹಾಕುವುದಕ್ಕೆ ಮುಂಚೆ ಪ್ರವೇಶಗಳು, ಹಜಾರಗಳು, ವೇದಿಕೆ, ವೇದಿಕೆ ಸ್ಥಳದ ಮುಂಭಾಗದ ಮೆಟ್ಟಿಲುಗಳು, ಸ್ಟೇರ್‌ಕೇಸ್‌ಗಳು, ದಾರಿಗಳು, ಕಾರಿಡಾರು ಕಳೆಯತಕ್ಕದ್ದು.

(4) ಆಸನಗಳ ಸಾಲುಗಳನ್ನು ಸಭಾಂಗಣದ ಹಿಂದಿನ ಗೋಡೆಯಿಂದ ಪರದೆಯ ಅಂತರದಷ್ಟು ಅದರ ಕೇಂದ್ರಕ್ಕೆ ಆದಷ್ಟು ಹಿಂದುಗಡೆ ಇರುವ ಕೇಂದ್ರದಿಂದ ಎಳೆದ ವೃತ್ತಗಳ ಸಮಾನ ಕೇಂದ್ರ ಪ್ರದೇಶಗಳ ರೂಪದಲ್ಲಿ ವ್ಯವಸ್ಥೆ ಮಾಡತಕ್ಕದ್ದು.

(5) ಆಸನಗಳು ಪರದೆಗೆ ಬಹಳ ಹತ್ತಿರ ಇರತಕ್ಕದ್ದಲ್ಲ. ಈ ಉದ್ದೇಶಕ್ಕಾಗಿ ಮುಂದಿನ ಸಾಲಿನಲ್ಲಿನ ಪ್ರೇಕ್ಷಕನ ಕಣ್ಣಿನಿಂದ (ನೆಲಮಟ್ಟದ ಮೇಲೆ 1,066 ಮಿಲಿಮೀಟರ್‌ಗಳು ಎಂದು ಊಹಿಸಿಕೊಳ್ಳಬೇಕಾದ) ಸಭಾಂಗಣದ ರೇಖಾಂಶದ ಭಾಗದಲ್ಲಿ ಪರದೆಯ ಮೇಲ್ ತುದಿಯವರೆಗೆ ಎಳೆದ ಗೆರೆಯು ಸಮತಲ ರೇಖೆಯೊಂದಿಗೆ 35 ಡಿಗ್ರಿಗಳಿಗಿಂತ ಹೆಚ್ಚಿನ ಕೋನವನ್ನು ರೂಪಿಸತಕ್ಕದ್ದಲ್ಲ. ಪರದೆಯ ಕಟ್ಟೆ ಕಡೆಯಿಂದ ಮುಂದಿನ ಸಾಲಿನ ಅತಿ ಕೊನೆಯಲ್ಲಿ ಪ್ರೇಕ್ಷಕನ ಕಣ್ಣಿನಿಂದ ನಕ್ಷೆಯಲ್ಲಿ ಎಳೆದ ಗೆರೆಯು ಪರದೆಯೊಂದಿಗೆ 25 ಡಿಗ್ರಿಗಳಿಗಿಂತ ಕಡಿಮೆಯಾದ ಕೋನವನ್ನು ರೂಪಿಸತಕ್ಕದ್ದಲ್ಲ.

(6) ವೇದಿಕೆಯಿಂದ ಹೊರಗಡೆ ಆಸನಗಳ ಅನುಕ್ರಮ ಸಾಲುಗಳನ್ನು ಪ್ರದರ್ಶನದ ಅಪ್ರತಿಬಂಧಿತ ವೀಕ್ಷಣೆಯನ್ನು ಸುನಿಶ್ಚಿತಗೊಳಿಸುವ ಹಾಗೆ ವ್ಯವಸ್ಥೆ ಮಾಡತಕ್ಕದ್ದು.

(7) ಯಾವುದೇ ಸಿನಿಮಾ ಥಿಯೇಟರ್ ಅಥವಾ ಮಲ್ಟಿಪ್ಲೆಕ್ಸ್‌ನಲ್ಲಿ, ಒಂದು ಸಾಲಿನಲ್ಲಿ ಹದಿನೈದಕ್ಕಿಂತ ಹೆಚ್ಚಿಲ್ಲದ ಆಸನಗಳಿಗೆ ಪಕ್ಕದ ಹಜಾರದಿಂದ ಮತ್ತು ಐದಕ್ಕಿಂತ ಹೆಚ್ಚಿಲ್ಲದ ಆಸನಗಳಿಗೆ ಮಧ್ಯದ ಹಜಾರದಿಂದ ಪ್ರವೇಶಕ್ಕೆ ಅವಕಾಶ ಇರತಕ್ಕದ್ದು.

(8) ಈ ನಿಯಮಗಳ ಪ್ರಾರಂಭದ ದಿನಾಂಕದ ಮುಂಚೆ ಪ್ರಸ್ತುತ ಸಿನಿಮಾ ಥಿಯೇಟರ್‌ಗಳು ಅಥವಾ ಮಲ್ಟಿಪ್ಲೆಕ್ಸ್‌ಗಳಿಗಾಗಿ, ಪ್ರತಿಯೊಂದು ಆಸನಕ್ಕೆ ಕನಿಷ್ಠ ಪಕ್ಷ 0.50 ಮೀಟರುಗಳ ಆಗಲದ ಮತ್ತು 1.00 ಮೀಟರುಗಳ ಆಳದಷ್ಟಿರುವ ನೆಲದ ಜಾಗವನ್ನು ಒದಗಿಸತಕ್ಕದ್ದು.

(9) ಈ ನಿಯಮಗಳ ಪ್ರಾರಂಭದ ದಿನಾಂಕದಿಂದ ಪ್ರಸ್ತುತ ಸಿನಿಮಾ ಥಿಯೇಟರ್‌ಗಳು ಅಥವಾ ಮಲ್ಟಿಪ್ಲೆಕ್ಸ್‌ಗಳಿಗಾಗಿ, ಪ್ರತಿಯೊಂದು ಆಸನಕ್ಕೆ ಕನಿಷ್ಠ ಪಕ್ಷ 0.50 ಮೀಟರುಗಳ ಆಗಲದ ಮತ್ತು 1.20 ಮೀಟರುಗಳ ಆಳದಷ್ಟಿರುವ ನೆಲದ ಜಾಗವನ್ನು ಒದಗಿಸತಕ್ಕದ್ದು.

(10) ಎಲ್ಲ ಸಂದರ್ಭಗಳಲ್ಲಿ, ಆಧಾರ ರೇಖೆಗಳ ನಡುವೆ ಅಳತೆ ಮಾಡಿದ ಒಂದು ಆಸನದ ಹಿಂಬದಿ ಮತ್ತು ಅದರ ನಿಕಟ ಹಿಂದಿನ ಆಸನದ ಮುಂಬದಿಯ ನಡುವೆ ಕನಿಷ್ಠ ಪಕ್ಷ 0.5 ಮೀಟರುಗಳಷ್ಟು ಮಧ್ಯ ಬರುವ ಜಾಗ ಇರತಕ್ಕದ್ದು.

(11) ಒಳ ಹಜಾರಗಳು ಇರಲಿ ಇಲ್ಲದಿರಲಿ ಪಕ್ಕದ ಹಜಾರಗಳು ಇರತಕ್ಕದ್ದು. ಯಾವುದೇ ಪಕ್ಕದ ಹಜಾರವು ಅಗಲದಲ್ಲಿ 0.915 ಮೀಟರುಗಳಿಗಿಂತ ಕಡಿಮೆಯಿರತಕ್ಕದ್ದಲ್ಲ ಮತ್ತು ಯಾವುದೇ ಒಳ ಹಜಾರವು ಅಗಲದಲ್ಲಿ 1.12 ಮೀಟರುಗಳಿಗಿಂತ ಕಡಿಮೆಯಿರತಕ್ಕದ್ದಲ್ಲ.

(12) ಆಸನಗಳನ್ನು ಪ್ರೇಕ್ಷಕನ ಮುಂದೆ ಇರುವ ವ್ಯಕ್ತಿಯ ತಲೆಯ ಮೇಲೆ ನೇರವಾಗಿ ಯಾವುದೇ ಸಾಲಿನಲ್ಲಿರುವ ಅವನು ನೋಡದೆ ಹಾಗೆ ಮುಂಬದಿಯಲ್ಲಿರುವವುಗಳಿಗೆ ಸಂಬಂಧಪಟ್ಟಂತೆ ಪಕ್ಕವಾಗಿ ವ್ಯವಸ್ಥೆಗೊಳಿಸತಕ್ಕದ್ದು:

ಪರಂತು, ಯಾವುದೇ ಆಸನಗಳ ವ್ಯವಸ್ಥೆಯು ಗ್ಯಾಲರಿ ಮಾದರಿಯ ಆಸನದ ವ್ಯವಸ್ಥೆಯನ್ನು ಒದಗಿಸಿದ್ದರೆ ಮತ್ತು ಪ್ರದರ್ಶನದ ಅಪ್ರತಿಬಂಧಿತ ವೀಕ್ಷಣೆಯನ್ನು ಸುನಿಶ್ಚಿತಗೊಳಿಸಿದ್ದರೆ ಅವಶ್ಯವಿರತಕ್ಕದ್ದಲ್ಲ.

(13) ಮಧ್ಯದ ಬಾಗಿಲು ಅಥವಾ ಬಾಗಿಲುಗಳನ್ನು ವ್ಯವಸ್ಥೆ ಮಾಡಿದ್ದರೆ ಅವುಗಳನ್ನು ಹೊರತುಪಡಿಸಿ ಪ್ರತಿ ನೂರು ಆಸನಗಳಿಗಾಗಿ ಒಂದು ಹೊರಗೆ ಹೋಗುವ ದಾರಿಯನ್ನು ಒದಗಿಸತಕ್ಕದ್ದು ಮತ್ತು ಹೊರಹೋಗುವ ದಾರಿಯು ದೀಪಗಳಿಂದ ಪ್ರಕಾಶಮಾನವಾಗಿ ಪ್ರಕಾಶಿಸತಕ್ಕದ್ದು.

(14) ಸಭಾಂಗಣದ ಯಾವುದೇ ಭಾಗದೊಳಕ್ಕೆ ಪ್ರವೇಶಿಸಿದ ವ್ಯಕ್ತಿಗಳ ಸಂಖ್ಯೆಯು ಸಭಾಂಗಣದ ಆ ಭಾಗಕ್ಕಾಗಿ ಲೈಸೆನ್ಸಿನಲ್ಲಿ ನಿರ್ದಿಷ್ಟಪಡಿಸಿದ ಸಂಖ್ಯೆಯನ್ನು ಮೀರತಕ್ಕದ್ದಲ್ಲ.

(15) ಬಾಕ್ಸ್‌ಗಳಲ್ಲಿನ ಆಸನಗಳನ್ನು ಹೊರತುಪಡಿಸಿ, ಎಲ್ಲಾ ಆಸನಗಳನ್ನು ಪೂರ್ತಿಯಾಗಿ ಉದ್ದಕ್ಕೂ ಒಟ್ಟಿಗೆ ಪಟ್ಟಿ ಹೊಡೆದಿರತಕ್ಕದ್ದು ಮತ್ತು ನೆಲಕ್ಕೆ ಖಾಯಂ ಆಗಿ ಜೋಡಿಸಿರತಕ್ಕದ್ದು.

(16) ಪ್ರತಿ ಕುರ್ಚಿಗಾಗಿ 0.65 ಚದರ ಮೀಟರುಗಳ ನೆಲ ಪ್ರದೇಶವನ್ನು ಒದಗಿಸುವ ಬಾಕ್ಸ್‌ಗಳಲ್ಲಿ (ಪ್ರತಿ ಬಾಕ್ಸಿಗೆ ಎಂಟು ಆಸನಗಳಿಗಿಂತ ಹೆಚ್ಚಿಲ್ಲದ) ಆಸನಗಳನ್ನು ಹೊರತುಪಡಿಸಿ ಯಾವುದೇ ಬಿಡಿ ಕುರ್ಚಿಗಳು ಇರತಕ್ಕದ್ದಲ್ಲ.

(17) ಸಭಾಂಗಣದಲ್ಲಿ ವಿವಿಧ ವರ್ಗಗಳ ನಡುವೆ ಅಡ್ಡಗಟ್ಟೆಯಂತೆ ಇರುವುದಕ್ಕಲ್ಲದೆ ಯಾವುದೇ ದಾರಿ, ಹಜಾರ ಅಥವಾ ಸ್ಟೇರ್‌ಕೇಸ್ ಇಳಿಯುವ ಸ್ಥಳದಲ್ಲಿ ಯಾವುದೇ ಕುರ್ಚಿ ಅಥವಾ ಇತರ ಅಡ್ಡಿಯನ್ನು ಇಡತಕ್ಕದ್ದಲ್ಲ.

(18) ಆಸನ ವ್ಯವಸ್ಥೆಗೆ ಅಡ್ಡಲಾಗಿ ಹಜಾರದಲ್ಲಿ ಯಾರೇ ವ್ಯಕ್ತಿಯು ಕುಳಿತುಕೊಳ್ಳಲು ಅಥವಾ ನಿಂತುಕೊಳ್ಳಲು ಅಥವಾ ಪರದೆ ಮತ್ತು ಕೊನೆಯ ಸಾಲಿನ ನಡುವಣ ಯಾವುದೇ ಹಜಾರದಲ್ಲಿ ಕುಳಿತುಕೊಳ್ಳಲು ಅವಕಾಶ ಕೊಡತಕ್ಕದ್ದಲ್ಲ.

(19) ಮಧ್ಯದ ಹಜಾರವನ್ನು ಪಕ್ಕದ ಹಜಾರಗಳಿಗೆ (i) ಒಂದು ವರ್ಗದಲ್ಲಿನ ಮೂರು ನೂರು ಆಸನಗಳ ಪ್ರತಿಯೊಂದು ಬ್ಲಾಕಿಗಾಗಿ ಅಗಲದಲ್ಲಿ 1.22 ಮೀಟರುಗಳಿಗಿಂತ ಕಡಿಮೆಯಿಲ್ಲದ ಒಂದು ಅಡ್ಡ ಹಜಾರದ ಮತ್ತು (ii) ಪ್ರತಿಯೊಂದು ವರ್ಗದಲ್ಲಿ ಆಸನಗಳ ಕೊನೆಯ ಸಾಲಿನ ತರುವಾಯ ಅಗಲದಲ್ಲಿ 1.22 ಮೀಟರುಗಳಿಗಿಂತ ಕಡಿಮೆಯಿಲ್ಲದ ಒಂದು ಅಡ್ಡ ಹಜಾರದ ಮೂಲಕ ಸಂಪರ್ಕವನ್ನು ಒದಗಿಸತಕ್ಕದ್ದು:

ಪರಂತು, ಯಾವುದೇ ಅಡ್ಡಿ ಇಲ್ಲದೆ ಮಧ್ಯದ ಹಜಾರವು ಹೊರಕ್ಕೆ ಹೋಗುವ ಹಾಗೆ ಅಥವಾ ಮಧ್ಯದ ಬಾಗಿಲಿಗೆ ಹೋಗುವ ಹಾಗೆ ಇದ್ದರೆ ಯಾವುದೇ ಅಡ್ಡ ಹಜಾರವು ಅವಶ್ಯವಿರತಕ್ಕದ್ದಲ್ಲ.

(20) ಲೈಸೆನ್ಸುದಾರನು, ಸಾರ್ವಜನಿಕರಿಗೆ (ಪ್ರೇಕ್ಷಕರಿಗೆ) ಸುರಕ್ಷತೆಯ, ಅನುಕೂಲಕರ ಮತ್ತು ಸೌಲಭ್ಯವಿರಬಹುದಾದ ಆಸನದ ವ್ಯವಸ್ಥೆಯನ್ನು ಮತ್ತು ಆಸನಗಳನ್ನು ಒದಗಿಸತಕ್ಕದ್ದು ಮತ್ತು ಅವರಿಗೆ ಉತ್ತಮ ಸ್ಥಿತಿಯಲ್ಲಿ ಆಸನದ ವ್ಯವಸ್ಥೆ ಮಾಡತಕ್ಕದ್ದು.

**50. ದಾರಿಗಳು, ಮೊಗಸಾಲೆಗಳು, ಇತ್ಯಾದಿ.-** (1) ಸಭಾಂಗಣವು (ಪಕ್ಕದ ಪ್ರವೇಶಗಳ ದ್ವಾರಗಳಿರುವೆಡೆಯಲ್ಲೆಲ್ಲಾ ವರಾಂಡ ಅಥವಾ ಮುಚ್ಚಿದ ಹಜಾರವನ್ನು) ಹೊಂದಿರತಕ್ಕದ್ದು. ಹೊರಕ್ಕೆ ಹೋಗುವ ದಾರಿಯಾಗಿ ಉಪಯೋಗಿಸುವುದಕ್ಕಾಗಿ ಉದ್ದೇಶಿಸಿದ ಆಸನಗಳ ಸಾಲುಗಳ ನಡುವಣ ಒಳದಾರಿಯಾಗಿಲ್ಲದ ಯಾವುದೇ ಮೊಗಸಾಲೆ, ವರಾಂಡ, ದಾರಿ ಅಥವಾ ಸ್ಟೇರ್ಕೇಸ್ ಇಳಿಯುವ ಸ್ಥಳದ ಮೊಗಸಾಲೆಯು ಅಗಲದಲ್ಲಿ ಪೂರ್ತಿ 1.83 ಮೀಟರುಗಳಿಗಿಂತ ಕಡಿಮೆ ಇರತಕ್ಕದ್ದಲ್ಲ ಮತ್ತು ನೆಲದಿಂದ 2.1 ಮೀಟರುಗಳ ಎತ್ತರದ ಒಳಗೆ ಅಂತಹ ಮೊಗಸಾಲೆಗಳು, ವರಾಂಡಗಳು, ದಾರಿಗಳು ಅಥವಾ ಸ್ಟೇರ್ಕೇಸ್ ಇಳಿಯುವ ಸ್ಥಳದ ಮೊಗಸಾಲೆಯ ಗೋಡೆಯಲ್ಲಿ ದೀಪಗಳ ಯಾವುದೇ ಚಾಚುವಿಕೆ ಇರತಕ್ಕದ್ದಲ್ಲ.

(2) ಸಾಧ್ಯವಿರುವೆಡೆಗಳಲ್ಲೆಲ್ಲ ಮೆಟ್ಟಿಲುಗಳ ಬದಲಾಗಿ ಏರಿಳಿವಿನ ಪ್ರಮಾಣ ಅಥವಾ ಇಳಿಜಾರು ಸಮತಲಗಳನ್ನು ಉಪಯೋಗಿಸತಕ್ಕದ್ದು. ಆದರೆ ಅಂತಹ ಏರಿಳಿವಿನ ಪ್ರಮಾಣ ಅಥವಾ ಇಳಿಜಾರು ಸಮತಲಗಳು 10ರಲ್ಲಿ 1ಕ್ಕಿಂತ ಕಡಿದಾಗಿರತಕ್ಕದ್ದಲ್ಲ.

(3) ಯಾವುದೇ ಮೊಗಸಾಲೆ, ವರಾಂಡ ಅಥವಾ ದಾರಿ ಅಥವಾ ನಡುದಾರಿಯನ್ನು ಸಾಮಗ್ರಿಗಳನ್ನು ಇಡುವ ಕೋಣೆಯನ್ನಾಗಿ ಉಪಯೋಗಿಸತಕ್ಕದ್ದಲ್ಲ ಮತ್ತು ಅವುಗಳಲ್ಲಿ ಯಾವುದೇ ಟೋಪಿಗಳನ್ನು ಅಥವಾ ಬಟ್ಟೆಬರೆಗಳನ್ನು ನೇತುಹಾಕುವುದಕ್ಕಾಗಿ ಯಾವುದೇ ಗೂಟಗಳಿಗೆ ಅವಕಾಶ ಕೊಡತಕ್ಕದ್ದಲ್ಲ. ಯಾವುದೇ ಅಂತಹ ಮೊಗಸಾಲೆ, ವರಾಂಡ, ದಾರಿ ಅಥವಾ ನಡುದಾರಿಯನ್ನು ಸಭಾಂಗಣದಿಂದ ಹೊರಕ್ಕೆ ಹೋಗುವ ದಾರಿ ಮತ್ತು ಅದರೊಳಗೆ ಪ್ರವೇಶಕ್ಕಾಗಿ ಅಲ್ಲದೆ ದಾಸ್ತಾನಿನ ಉದ್ದೇಶಕ್ಕಾಗಿ ಅಥವಾ ಯಾವುದೇ ಉದ್ದೇಶಕ್ಕಾಗಿಯೇ ಆಗಲಿ ಉಪಯೋಗಿಸತಕ್ಕದ್ದಲ್ಲ.

(4) ಸಾಮಾನು ಇಡುವ ಕೋಣೆಗಳನ್ನು ಒದಗಿಸಿರುವಲ್ಲಿ ಅವುಗಳ ಉಪಯೋಗವು ಯಾವುದೇ ಮೊಗಸಾಲೆ, ವರಾಂಡ, ದಾರಿ ಅಥವಾ ಹೊರಕ್ಕೆ ಹೋಗುವ ದಾರಿಯಾಗಿ ಮುಕ್ತ ಉಪಯೋಗವನ್ನು ಅಡ್ಡಿಪಡಿಸದ ಹಾಗೆ ಇರತಕ್ಕದ್ದು.

(5) ಮೊಗಸಾಲೆಗಳು, ಕಾರಿಡಾರುಗಳು ಮತ್ತು ಆರಾಮ ಶಾಲೆಗಳಲ್ಲಿ ಪ್ರದರ್ಶನ ಕಿಟಕಿಗಳು, ಷೋಕೇಸುಗಳು ಮತ್ತು ಸ್ಲಾಟಿಂಗ್ ಯಂತ್ರಗಳಿಗೆ ಅವಕಾಶ ಮಾಡಿಕೊಟ್ಟಿರುವಾಗಲೆಲ್ಲ, ಲೈಸೆನ್ಸ್ ಕೊಡುವ ಪ್ರಾಧಿಕಾರಿಯು, ಲೈಸೆನ್ಸನ್ನು ಕೊಡುವುದಕ್ಕೆ ಮತ್ತು ಅದನ್ನು ಮರು ಮಂಜೂರು ಮಾಡುವುದಕ್ಕೆ ಮುಂಚೆ (1)ನೇ ಉಪ-ಪ್ರಕರಣದ ಮೇರೆಗೆ ನಿಯಮಿಸಿದ ಪೂರ್ಣ ಜಾಗವು ಉಳಿದಿದೆ ಮತ್ತು ಅವುಗಳು ಪ್ರವೇಶ ದ್ವಾರಗಳು ಮತ್ತು ಹೊರಗಡೆ ಹೋಗುವುದಕ್ಕಾಗಿನ ದಾರಿಗಳ ಹತ್ತಿರ ಸಾರ್ವಜನಿಕರು ಜಮಾಯಿಸುವುದನ್ನು ಮತ್ತು ಸುಲಭ ಓಡಾಟಕ್ಕೆ ಅಡ್ಡಿಯನ್ನು ತಪ್ಪಿಸುವ ಹಾಗೆ ಇರುವುದಿಲ್ಲ ಎಂಬ ಬಗ್ಗೆ ಅವನು ಮನದಟ್ಟು ಮಾಡಿಕೊಳ್ಳತಕ್ಕದ್ದು.

**51. ಬಾಗಿಲುಗಳ ಬಗ್ಗೆ ಷರತ್ತುಗಳು.-** (1) ಅಧಿನಿಯಮವು ಅನ್ವಯಿಸುವಂತಹ ಸಿನಿಮಾ ಥಿಯೇಟರ್ ಅಥವಾ ಮಲ್ಟಿಪ್ಲೆಕ್ಸ್‌ಗಾಗಿ ಯಾವುದೇ ಕಟ್ಟಡವನ್ನು ಪ್ರೇಕ್ಷಕರಿಗೆ ಸುರಕ್ಷಿತವಾಗಿ ಹೊರಕ್ಕೆ ಹೋಗುವ ಸಾಕಷ್ಟು ಸಾಧನವನ್ನು ಸುಲಭವಾಗಿ ಒದಗಿಸುವ ಹಾಗೆ ಇಟ್ಟ ಮತ್ತು ನಿರ್ವಹಿಸಿದ ಸ್ಪಷ್ಟವಾಗಿ ತೋರಿಸಿದ ಹೊರಕ್ಕೆ ಹೋಗುವ ದಾರಿಗಳನ್ನು ಸಾಕಷ್ಟು ಸಂಖ್ಯೆಯಲ್ಲಿ

ಒದಗಿಸಿದ್ದ ಹೊರತು ಉಪಯೋಗಿಸತಕ್ಕದ್ದಲ್ಲ. ಸಭಾಂಗಣ, ಬಾಲ್ಕನಿ, ಅಂತಸ್ತು ಅಥವಾ ಗ್ಯಾಲರಿಯಲ್ಲಿ ಪ್ರತಿ ಒಂದು ನೂರು ಆಸನಗಳಿಗಾಗಿ ತೆರೆದ ಸ್ಥಿತಿಯಲ್ಲಿ ಬಾಗಿಲಿನ ಕದಗಳ ನಡುವೆ ಅಳತೆ ಮಾಡಿದ 1.5 ಮೀಟರುಗಳ ಪೂರ್ಣ ಅಗಲದ ಮತ್ತು 2.2 ಮೀಟರುಗಳ ಪೂರ್ಣ ಎತ್ತರದ ಕನಿಷ್ಠ ಪಕ್ಷ ಒಂದು ಬಾಗಿಲು, ಆದರೆ ಸಭಾಂಗಣ, ಬಾಲ್ಕನಿ, ಅಂತಸ್ತು ಅಥವಾ ಗ್ಯಾಲರಿಯ ವಿವಿಧ ಗೋಡೆಗಳಲ್ಲಿ ಎರಡಕ್ಕಿಂತ ಕಡಿಮೆ ಇಲ್ಲದ ಬಾಗಿಲುಗಳು ಇರತಕ್ಕದ್ದು.

(2) ನಿರ್ಗಮನದ ಸಾಮಾನ್ಯ ಸ್ಥಳವು ಸಭಾಂಗಣದ ಎಲ್ಲ ಅಂತಸ್ತುಗಳಿಗಾಗಿ ಹೊರಕ್ಕೆ ಹೋಗುವ ದಾರಿಯಾಗಿರಬಹುದಾದ ದಾರಿಯಾಗಿರತಕ್ಕದ್ದು. ಅಂತಹ ನಿರ್ಗಮನದ ಸ್ಥಳದ ಸಾಮರ್ಥ್ಯವು ಅಂತಹ ಮಹಡಿ ಅಥವಾ ಅಂತಸ್ತಿನಿಂದ ಹೋಗಲು ಅವಶ್ಯ ಹೊರದಾರಿಗಳಿಗಾಗಿ (1)ನೇ ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಿದ ಒಟ್ಟು ಸಾಮರ್ಥ್ಯಕ್ಕೆ ಸಮನಾಗಿರಬೇಕು.

(3) ಸಭಾಂಗಣದ ಮಹಡಿ ಅಥವಾ ಯಾವುದೇ ಅಂತಸ್ತನ್ನು ಎರಡು ಅಥವಾ ಹೆಚ್ಚಿನ ಭಾಗಗಳಿಗಾಗಿ ವಿಭಾಗಿಸಿದ್ದರೆ, ಅಂತಹ ಭಾಗಕ್ಕಾಗಿ ಈ ನಿಯಮದಲ್ಲಿ ನಿರ್ದಿಷ್ಟಪಡಿಸಿದಂತೆ ಪ್ರತ್ಯೇಕ ಹೊರಕ್ಕೆ ಹೋಗುವ ದಾರಿಗಳನ್ನು ಒದಗಿಸತಕ್ಕದ್ದು.

(4) ನಿರ್ಗಮನದ ಸಾಧನವಾಗಿ ಉಪಯೋಗಿಸಬೇಕಾದ ಎಲ್ಲ ಬಾಗಿಲುಗಳು, ಅಗ್ನಿ ನಿರೋಧಕ ರಚನೆಗಳಿಂದ ಆಗಿರತಕ್ಕದ್ದು. ಆದರೆ, 4.4 ಸೆಂಟಿಮೀಟರ್ಗಳ ದಪ್ಪಕ್ಕೆ ಕಡಿಮೆ ಇಲ್ಲದ ಭಾರವಾದ ಮರದ ಬಾಗಿಲನ್ನು ನಿರ್ಗಮನದ ಸಾಧನವಾಗಿ ಉಪಯೋಗಿಸಬಹುದು.

(5) ಸಭಾಂಗಣಕ್ಕಾಗಿ ಯಾವುದೇ ಸುತ್ತ ತಿರುಗುವ, ಸುರುಳಿ ಸುತ್ತುವ, ಸರಿದಾಡುವ, ಮಡಚಿಕೊಳ್ಳುವ, ಮಡಿಸಬಹುದಾದ ಬಾಗಿಲುಗಳಿಗೆ ಅನುಮತಿ ಕೊಡತಕ್ಕದ್ದಲ್ಲ.

(6) ಎಲ್ಲಾ ಬಾಗಿಲುಗಳು, ಹೊರಕ್ಕೆ ಹೋಗುವ ದಾರಿಗೆ ಸಾರ್ವಜನಿಕರು ಹೋಗುವಂತೆ ಆ ಕಡೆಗೆ ಪ್ರತ್ಯೇಕವಾಗಿ ತೆಗೆಯುವ ಎರಡು ಬಾಗಿಲುಗಳು ಇರತಕ್ಕದ್ದು ಮತ್ತು ಎಲ್ಲಾ ಬೋಲ್ಟುಗಳನ್ನು ತುರ್ತು ಸಂದರ್ಭಗಳಲ್ಲಿ ಒಳಗಡೆಯಿಂದ ಅವುಗಳನ್ನು ತೆಗೆಯಬಹುದಾದ ಹಾಗೆ ವ್ಯವಸ್ಥೆ ಮಾಡಿರತಕ್ಕದ್ದು. ಸಾರ್ವಜನಿಕರಿಗಾಗಿನ ಬಾಗಿಲಿಗೆ ಯಾವುದೇ ಹೊರಗಡೆ ಬೋಲ್ಟುಗಳನ್ನು ಅಥವಾ ಬೀಗಗಳನ್ನು ಜೋಡಿಸತಕ್ಕದ್ದಲ್ಲ. ತೆರೆದ ಬಾಗಿಲುಗಳು 50ನೇ ನಿಯಮದ (1)ನೇ ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಿದಂಥ ದಾರಿಗೆ ಅಡ್ಡಿಯುಂಟು ಮಾಡತಕ್ಕದ್ದಲ್ಲ ಅಥವಾ ಅದರ ಪೂರ್ಣ ಅಗಲವನ್ನು ಕಡಿಮೆ ಮಾಡತಕ್ಕದ್ದಲ್ಲ. ಯಾವುದೇ ಬಾಗಿಲು ಮೆಟ್ಟಿಲುಗಳ ಸಾಲಿಗೆ ನೇರವಾಗಿ ತೆರೆದಿರತಕ್ಕದ್ದಲ್ಲ. ನೆಲದೊಂದಿಗೆ ಕನಿಷ್ಠ ಪಕ್ಷ 1.5 ಮೀಟರುಗಳ ಮಟ್ಟದ ಇಳಿಯುವಿಕೆ ಇರತಕ್ಕದ್ದು.

(7) ಎಲ್ಲಾ ಹೊರಕ್ಕೆ ಹೋಗುವ ಬಾಗಿಲುಗಳನ್ನು ಪ್ರದರ್ಶನ ಸಮಯದಲ್ಲಿ ಬೋಲ್ಟ್ ಹಾಕಿರತಕ್ಕದ್ದಲ್ಲ. ಅಂತಹ ಬಾಗಿಲುಗಳ ಮೇಲಿನ ಮತ್ತು ಕೆಳಗಿನ ಬೋಲ್ಟುಗಳು ಸಾಧ್ಯವಾಗಿರುವಾಗಲೆಲ್ಲಾ ಪ್ರತಿಯೊಂದು ಬಾಗಿಲುಗಳ ಷಟರ್ಗಳ ಮೇಲೆ ಮಧ್ಯದ ಒಂದು ಹಿಡಿಕೆಯಿಂದ ನಿರ್ವಹಿಸುವಂತೆ ಸಮರ್ಥವಾಗಿರತಕ್ಕದ್ದು.

(8) ಹೊರಕ್ಕೆ ಹೋಗುವ ಬಾಗಿಲುಗಳ ಮೇಲೆ ತೆಗೆಯುವ ವಿಧಾನವನ್ನು ತೋರಿಸುವ ನೋಟೀಸನ್ನು ಸ್ಪಷ್ಟವಾಗಿ ಬಣ್ಣದಲ್ಲಿ ಬರೆಯತಕ್ಕದ್ದು.

(9) ಸಭಾಂಗಣದಿಂದ ಹೊರಕ್ಕೆ ಹೋಗುವ ಪ್ರತಿಯೊಂದು ಬಾಗಿಲಿನ ಮೇಲೆ “ಇxiಣ” ಅಥವಾ ಪ್ರಾದೇಶಿಕ ಭಾಷೆಯಲ್ಲಿ ಅದರ ಸಮಾನ ಪದವನ್ನು ಅಥವಾ ಅವೆರಡನ್ನು ಮೇಲುಗಡೆ 150 ಮಿಲಿಮೀಟರುಗಳ ಎತ್ತರದ ಕೆಂಪು ಅಕ್ಷರಗಳಲ್ಲಿ ಬಣ್ಣದಿಂದ ಬರೆದಿರತಕ್ಕದ್ದು. ಅದು ಸಾರ್ವಜನಿಕರು ಸಭಾಂಗಣದಲ್ಲಿರುವ ಆ ಸಮಯದಲ್ಲಿ ಉರಿಯುತ್ತಿರುವ ದೀಪವನ್ನು ಇಟ್ಟಿರತಕ್ಕದ್ದು.

(10) ಬಾಗಿಲು ದಾರಿಯನ್ನು ಮುಚ್ಚಲು ಪರದೆಯನ್ನು ಉಪಯೋಗಿಸಿರುವಲ್ಲಿ, ಅದನ್ನು ಪಕ್ಕಕ್ಕೆ ಸುಲಭವಾಗಿ ತಳ್ಳುವ ಹಾಗೆ ತೂಗು ಹಾಕಿರತಕ್ಕದ್ದು ಮತ್ತು ಆ ಪರದೆಯ ಕೆಳತುದಿಯು ನೆಲದ ಮಟ್ಟದಿಂದ ಮೇಲೆ ಒಂದು ನೂರು ಮಿಲಿಮೀಟರುಗಳಿಗಿಂತ ಕಡಿಮೆಯಿರತಕ್ಕದ್ದಲ್ಲ.

**52. ಗವಾಕ್ಷಿಗಳು.-** (1) ನೆಲಪ್ರದೇಶದ ಎಂಟನೇ ಒಂದಕ್ಕಿಂತ ಕಡಿಮೆಯಿಲ್ಲದ ಪ್ರದೇಶವನ್ನು ಹೊಂದಿರುವ ಪ್ರತಿಯೊಂದು ಸಿನಿಮಾ ಥಿಯೇಟರ್ ಅಥವಾ ಮಲ್ಟಿಪ್ಲೆಕ್ಸ್‌ದಲ್ಲಿನ ಪ್ರತಿಯೊಂದು ಕೊಠಡಿ ಅಥವಾ ದಾರಿಗಳಿಗಾಗಿ ಸಾಕಷ್ಟು ಸಂಖ್ಯೆಯ ಗವಾಕ್ಷಿಗಳು ಇರತಕ್ಕದ್ದು. ಆ ನೆಲಪ್ರದೇಶದ ಮೂರನೇ ಎರಡರಷ್ಟನ್ನು ಪ್ರದರ್ಶನದ ಸಮಯದಲ್ಲಿ ತೆಗೆದಿಟ್ಟಿರುವ ಹಾಗೆ ವ್ಯವಸ್ಥೆ ಮಾಡಿರತಕ್ಕದ್ದು. ಪ್ರತಿ ಐವತ್ತು ಆಸನಗಳಿಗಾಗಿ ಒಂದು ಸೀಲಿಂಗ್ ಫ್ಯಾನು ಮತ್ತು ಸಭಾಂಗಣದ ಪ್ರತಿ ಐವತ್ತು ಚದರ ಮೀಟರುಗಳಿಗಾಗಿ ಒಂದು ಎಕ್ಸಾಸ್ಟ್ ಫ್ಯಾನು-ಇದಕ್ಕೆ ಕಡಿಮೆಯಿಲ್ಲದ ಫ್ಯಾನಿನ ಸಹಾಯದಿಂದ ಕೃತಕ ವಾಯುಸಂಚಾರದ ಸಾಕಷ್ಟು ಸಾಧನಗಳೂ ಸಹ ಇರತಕ್ಕದ್ದು. ಅವುಗಳನ್ನು ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು ಅನುಮೋದಿಸಿರಬೇಕು. ಪರ್ಯಾಯವಾಗಿ, ಸಾಕಷ್ಟು ಸಾಮರ್ಥ್ಯದ ಸೂಕ್ತ ಕೇಂದ್ರೀಕೃತ ವ್ಯವಸ್ಥೆಯಿರತಕ್ಕದ್ದು. ಅದನ್ನು ಲೋಕೋಪಯೋಗಿ ಇಲಾಖೆ, ಬಂದರು ಮತ್ತು ಒಳನಾಡು ಸಾರಿಗೆ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು ಅನುಮೋದಿಸಿರತಕ್ಕದ್ದು.

(2) ಹವಾನಿಯಂತ್ರಿತ ಥಿಯೇಟರುಗಳು ಅಥವಾ ಮಲ್ಟಿಪ್ಲೆಕ್ಸ್ ಅಥವಾ ಹವಾ ನಿಯಂತ್ರಕ ಥಿಯೇಟರುಗಳು ಅಥವಾ ಮಲ್ಟಿಪ್ಲೆಕ್ಸ್ ಸಭಾಂಗಣಕ್ಕಾಗಿ ಸಾಕಷ್ಟು ಗವಾಕ್ಷಿಗಳ ವ್ಯವಸ್ಥೆಯಿರತಕ್ಕದ್ದು. ಅದನ್ನು ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು ಅನುಮೋದಿಸಿರತಕ್ಕದ್ದು.

ಪರಂತು, ಪ್ರದರ್ಶನದ ಕಾಲದಲ್ಲಿ ವಾಯುಸಂಚಾರ ವ್ಯವಸ್ಥೆ ವಿಫಲವಾದಾಗ, ಆ ಅವಧಿಯಲ್ಲಿ ಪ್ರದರ್ಶನವನ್ನು ನಿಲ್ಲಿಸತಕ್ಕದ್ದು.

**53. ಸ್ಟೇರ್‌ಕೇಸ್‌ಗಳು.-** (1) ಐವತ್ತಕ್ಕಿಂತ ಹೆಚ್ಚಿನ ಆಸನಗಳನ್ನುಳ್ಳ ಪ್ರತಿಯೊಂದು ಅಂತಸ್ತು, ಗ್ಯಾಲರಿ ಅಥವಾ ಬಾಲ್ಕನಿಯು ಹೊರಗಡೆಯಿರುವ ಬಾಗಿಲುಗಳೊಂದಿಗಿನ ನೆಲ ಮಹಡಿ, ದಾರಿ ಅಥವಾ ವರಾಂಡಕ್ಕೆ ನೇರವಾಗಿ ಕೊಂಡೊಯ್ಯುವ ಕನಿಷ್ಠ ಪಕ್ಷ ಎರಡು ಪ್ರತ್ಯೇಕ ಸ್ಟೇರ್‌ಕೇಸ್‌ಗಳನ್ನು ಹೊಂದಿರತಕ್ಕದ್ದು.

(2) ಯಾವುದೇ ಸ್ಟೇರ್‌ಕೇಸ್ 1.5 ಮೀಟರುಗಳ ಅಗಲಕ್ಕಿಂತ ಕಡಿಮೆ ಇರತಕ್ಕದ್ದಲ್ಲ. ಅವುಗಳ ಅಗಲವನ್ನು ಹಿಡಿ ಕಂಬಿಗಳ ನಡುವೆ ಅಳತೆ ಮಾಡಬೇಕು.

(3) ಎಲ್ಲಾ ಸ್ಟೇರ್‌ಕೇಸ್‌ಗಳನ್ನು ಅಗ್ನಿ ನಿರೋಧಕ ಛಾವಣಿ ಮತ್ತು ಒಳತಾರಸಿಯಿಂದ ಕೂಡಿದ ಅಗ್ನಿ ನಿರೋಧಕ ಸಾಮಗ್ರಿಗಳಿಂದ ನಿರ್ಮಿಸತಕ್ಕದ್ದು ಮತ್ತು ಅವುಗಳು ಜಾರದಂತೆ ಪೂರ್ಣಗೊಳಿಸಿದ ತುದಿಯಿಂದ ತುದಿಯ ನಡುವೆ ಸಮತಲದಲ್ಲಿ ಅಳತೆ ಮಾಡಿದ 300 ಮಿಲಿಮೀಟರುಗಳಿಗೆ ಕಡಿಮೆಯಿಲ್ಲದ ಮೆಟ್ಟಿಲುಗಳೊಂದಿಗೆ ಮತ್ತು ಹದಿನೈದಕ್ಕಿಂತ ಹೆಚ್ಚಿಲ್ಲದ ಅಥವಾ ಮೂರಕ್ಕಿಂತ ಕಡಿಮೆಯಿಲ್ಲದ ಮೆಟ್ಟಿಲುಗಳ ಎತ್ತರವುಳ್ಳ ಒಂದು ನೂರ ಅರವತ್ತೈದು ಮಿಲಿಮೀಟರುಗಳಿಗಿಂತ ಹೆಚ್ಚಿಲ್ಲದ ಗಟ್ಟಿಯಾಗಿ ನಿಲ್ಲುವ ಪಟ್ಟಿಯಿಂದ ಮಧ್ಯೆದಲ್ಲಿ ನಿಲ್ಲುವ ಗಟ್ಟಿ ಮೆಟ್ಟಿಲುಗಳನ್ನು ಹೊಂದಿರತಕ್ಕದ್ದು:

ಪರಂತು, ಅಂಡಾಕೃತಿ ಮತ್ತು ತಿರುವು ರೂಪದ ಮೆಟ್ಟಿಲುಗಳ ಸಂದರ್ಭದಲ್ಲಿ, ಒಳಭಾಗದಲ್ಲಿನ ಮೆಟ್ಟೈ 250 ಮಿಲಿಮೀಟರುಗಳಿಗಿಂತ ಕಡಿಮೆಯಿರತಕ್ಕದ್ದಲ್ಲ.

(4) ಯಾವುದೇ ಸ್ಟೇರ್‌ಕೇಸ್ ತಿರುವಿಲ್ಲದೆ ಹದಿನೈದು ಮೆಟ್ಟಿಲುಗಳ ಎರಡಕ್ಕಿಂತ ಹೆಚ್ಚು ಸಾಲುಗಳನ್ನು ಹೊಂದಿರತಕ್ಕದ್ದಲ್ಲ ಮತ್ತು ಅಂತಹ ಸಾಲುಗಳ ನಡುವಣ ಇಳಿಯುವಿಕೆ ದಾರಿಯ ಅಗಲವೂ ಅದು ಕನಿಷ್ಠ ಪಕ್ಷ ಸ್ಟೇರ್‌ಕೇಸ್ ಅಗಲದಷ್ಟು ಇರತಕ್ಕದ್ದು.

(5) ಇಳಿಜಾರು 1:10ಕ್ಕಿಂತ ಕಡಿದಾಗಿರತಕ್ಕದ್ದಲ್ಲ.

(6) ಯಾವುದೇ ಸ್ಟೇರ್ಕೇಸ್‌ನಲ್ಲಿ ಯಾವುದೇ ವೈಂಡರುಗಳನ್ನು ಉಪಯೋಗಿಸತಕ್ಕದ್ದಲ್ಲ.

(7) ಸಭಾಂಗಣದ ಮೇಲಿನ ಅಂತಸ್ತು, ಗ್ಯಾಲರಿ ಅಥವಾ ಬಾಲ್ಕನಿಯಿಂದ ನಿರ್ಗಮನವು ಪ್ರತಿಯೊಂದು ಸ್ಟೇರ್ಕೇಸ್‌ಗು ಅದು ಹಾದು ಹೋಗುವಂಥ ಮಹಡಿಗಳಲ್ಲಿ ಇಟ್ಟಿಗೆ ಅಥವಾ ಅಗ್ನಿ ಪ್ರತಿರೋಧಕ ಸಾಮಗ್ರಿಗಳ ಗೋಡೆಗಳಿಂದ ಎರಡೂ ಪಕ್ಕಗಳಲ್ಲಿ ಆವೃತವಾಗಿರತಕ್ಕದ್ದು:

ಪರಂತು, ಮೊದಲ ಅಥವಾ ಕೆಳಗಿನ ಅಂತಸ್ತು, ಗ್ಯಾಲರಿ ಅಥವಾ ಬಾಲ್ಕನಿಗೆ ಹೋಗುವ ಸ್ಟೇರ್ಕೇಸ್‌ಗಳನ್ನು ಒಂದು ಪಕ್ಕದಲ್ಲಿ ಖಾಲಿ ಬಿಟ್ಟಿರಬಹುದು ಇಂಥ ಸಂದರ್ಭದಲ್ಲಿ ಖಾಲಿ ಬಿಟ್ಟಿರುವ ಪಕ್ಕಕ್ಕೆ ಅತಿ ದಪ್ಪನಾದ ಹಿಡಿ ಕಂಬಿಗಳು ಮತ್ತು ಚಿಕ್ಕ ಕಂಬಿಗಳನ್ನು ಒದಗಿಸತಕ್ಕದ್ದು, ಆದರೆ ಯಾವುದೇ ಸಂದರ್ಭದಲ್ಲಿ ಸ್ಟೇರ್ಕೇಸ್‌ನ್ನು ಎರಡೂ ಪಕ್ಕಗಳಲ್ಲಿ ಖಾಲಿ ಬಿಡತಕ್ಕದ್ದಲ್ಲ.

(8) ಪ್ರತಿಯೊಂದು ಸ್ಟೇರ್ಕೇಸ್ ಮೇಲಿನ ಮೆಟ್ಟಿಲುಗಳ ಮೇಲಿನ ಮತ್ತು ನಿಲುಪಟ್ಟಿಗಳು ಏಕರೂಪದ ಮಧ್ಯಗಲ ಮತ್ತು ಎತ್ತರದ್ದಾಗಿರತಕ್ಕದ್ದು.

(9) ಮೆಟ್ಟಿಲುಗಳ ಸಾಲು ಅದರ ಮೇಲೆಯೇ ಬರುವಲ್ಲಿ, ತಿರುಗಿ ಆರಂಭವಾಗುವ ಗೋಡೆಯನ್ನು ಹಿಡಿ ಕಂಬಿಗಳು ಇಳಿಯುವಿಕೆ ದಾರಿ ಮೇಲೆ ಮುಂಚಾಚದಂತೆ ಹೋಗುವ ಹಾಗೆ ಮುಂದುವರಿಸತಕ್ಕದ್ದು.

(10) ಎಲ್ಲ ಸ್ಟೇರ್ಕೇಸ್‌ಗಳು ಅವುಗಳ ಎರಡೂ ಪಕ್ಕಗಳಲ್ಲಿ ಅದರಿಂದ ಪೂರ್ಣ ಸುಮಾರು ಎಪ್ಪತ್ತೈದು ಮಿಲಿಮೀಟರು ಮತ್ತು ಮೆಟ್ಟಿಲುಗಳ ಮೇಲೆ ಸುಮಾರು ಒಂದು ಮೀಟರಿನ ಮೇಲೆ ಬಲವುಳ್ಳ ಲೋಹದ ಬ್ರಾಕೆಟ್‌ಗಳಿಂದ ಗೋಡೆಗೆ ಸ್ಥಿರವಾಗಿ ಭದ್ರಪಡಿಸಿದ ಬಲವುಳ್ಳ ಹಿಡಿ ಕಂಬಿಗಳನ್ನು ಹೊಂದಿರತಕ್ಕದ್ದು. ಆದರೆ ಅಂತಹ ಹಿಡಿ ಕಂಬಿಗಳು ಮೆಟ್ಟಲುಗಳ ಅಗಲವನ್ನು ಮೀರುವಲ್ಲಿ ಅಂತಹ ಜಗಲಿಗಳ ಅಥವಾ ಇಳಿಯುವಿಕೆ ದಾರಿಯ ಉದ್ದವು ಅಂತಹ ಮಟ್ಟದ ಜಗಲಿಗಳು ಮತ್ತು ಇಳಿಯುವಿಕೆ ದಾರಿ ಮೇಲೆ ಹೋಗತಕ್ಕದ್ದಲ್ಲ.

(11) ನೆಲದ 2.2 ಮೀಟರುಗಳೊಳಗೆ ಅಂತಹ ಸ್ಟೇರ್ಕೇಸ್‌ಗಳ ಗೋಡೆಗಳಲ್ಲಿ ಯಾವುವೇ ಗೂಡುಗಳು ಅಥವಾ ಮುಂಚಾಚುಗಳಿರತಕ್ಕದ್ದಲ್ಲ ಮತ್ತು ದೀಪ ವ್ಯವಸ್ಥೆಗಾಗಿನ ಯಾವುದೇ ಜೋಡಣೆಗಳು, ಮೆಟ್ಟಿಲುಗಳು ಅಥವಾ ಇಳಿಯುವಿಕೆ ದಾರಿಯ ಮೇಲೆ ಕನಿಷ್ಠ ಪಕ್ಷ 2.2 ಮೀಟರುಗಳಷ್ಟು ಮೇಲಿರತಕ್ಕದ್ದು.

(12) ಕನಿಷ್ಠ ಪಕ್ಷ 2.15 ಮೀಟರುಗಳಷ್ಟು ಮೇಲಿನ ಜಾಗ ಇರತಕ್ಕದ್ದು.

**54. ಶೌಚಾಲಯಗಳು ಮತ್ತು ಮೂತ್ರಿಗಳು ಮತ್ತು ನೀರಿನ ಸೌಲಭ್ಯಗಳು.-** (1) ಪ್ರತಿಯೊಂದು ಸಿನಿಮಾ ಥಿಯೇಟರಿನಲ್ಲಿ ಅಥವಾ ಮಲ್ಟಿಪ್ಲೆಕ್ಸ್‌ನಲ್ಲಿ ಪ್ರಧಾನ ಕಟ್ಟಡದೊಳಗೆ ಪುರುಷರು, ಮಹಿಳೆಯರು ಮತ್ತು ಮಕ್ಕಳು, ಮಂಗಳಮುಖಿಯರು ಮತ್ತು ವಿಕಲಚೇತನರಿಗೆ ಪ್ರತ್ಯೇಕವಾಗಿ ಸಾಕಷ್ಟು ಸಂಖ್ಯೆಯಲ್ಲಿ ಶೌಚಾಲಯಗಳು ಮತ್ತು ಮೂತ್ರಿಗಳನ್ನು ಒದಗಿಸತಕ್ಕದ್ದು.

(2) ಒದಗಿಸಬೇಕಾದ ನೈರ್ಮಲ್ಯ ಸ್ಥಳಾವಕಾಶದ ಶ್ರೇಣಿಯು 'ಸಿ' ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು.

(3) ಶೌಚಾಲಯಗಳು ಮತ್ತು ಮೂತ್ರಿಗಳನ್ನು ಒಳ ಚರಂಡಿ ಲೈನಿಗೆ ಸೇರಿಸತಕ್ಕದ್ದು.

(4) ನೀರನ್ನು ಸಮರ್ಥವಾಗಿ ಸಂರಕ್ಷಿಸಲು ಮತ್ತು ಬಳಸಲು ಮಳೆ ನೀರು ಕೋಯ್ಲು ವ್ಯವಸ್ಥೆಯನ್ನು ಅಳವಡಿಸತಕ್ಕದ್ದು.

(5) ಪ್ರತಿಯೊಂದು ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್‌ನಲ್ಲಿ ಪುರುಷರು ಮತ್ತು ಸ್ತ್ರೀಯರಿಗಾಗಿ ಪ್ರತ್ಯೇಕವಾಗಿ ಕುಡಿಯುವ ನೀರಿನ ನಲ್ಲಿಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಒದಗಿಸತಕ್ಕದ್ದು. ಆದರೆ, ಯಾವುದೇ ಸಂದರ್ಭದಲ್ಲಿ ಪುರುಷರಿಗೆ ಒಂದು ಮತ್ತು ಸ್ತ್ರೀಯರಿಗೆ ಇನ್ನೊಂದರಂತೆ ಎರಡಕ್ಕಿಂತ ಕಡಿಮೆ ನೀರಿನ ನಲ್ಲಿಗಳಿರತಕ್ಕದ್ದಲ್ಲ. ನೀರಿನ ನಲ್ಲಿಗಳನ್ನು ನೀರು ಸರಬರಾಜು

ಕೊಳವೆಗೆ ಜೋಡಿಸತಕ್ಕದ್ದು ಅಥವಾ ಕೊಳವೆಯ ಮೂಲಕ ನೀರಿನ ಸರಬರಾಜನ್ನು ನಿಲ್ಲಿಸಿದಾಗ ಅಥವಾ ನೀರು ಸರಬರಾಜು ಕೊಳವೆಯಿಲ್ಲದಿರುವಾಗ, ಶುದ್ಧ ಕುಡಿಯುವ ನೀರಿನ ತೊಟ್ಟಿ ಅಥವಾ ನೀರಿನ ಪಾತ್ರೆಗೆ ಅವುಗಳನ್ನು ಜೋಡಿಸತಕ್ಕದ್ದು.

**55. ಟಿಕೆಟ್ ಬೂತುಗಳು.-** (1) ಸಾರ್ವಜನಿಕ ರಸ್ತೆಯಲ್ಲಿ ಸಂಚಾರಕ್ಕೆ ಯಾವುದೇ ಅಡ್ಡಿಯನ್ನುಂಟು ಮಾಡದಂತೆ ಆ ಆವರಣದೊಳಗೆ ಟಿಕೆಟ್ಟುಗಳನ್ನು ಖರೀದಿಸುವವರ ಕ್ಯೂಗಳಿಗಾಗಿ ನಿಲ್ಲಲು ಸ್ಥಳವಿರುವಂತೆ ಅಂತಹ ಸ್ಥಳವು ಆವರಣದೊಳಗೆ ಸೂಕ್ತ ರೀತಿಯಲ್ಲಿ ಟಿಕೇಟುಗಳನ್ನು ಮಾರುವ ಕಿಟಕಿಗಳನ್ನು ವಿವಿಧ ವರ್ಗಗಳಿಗಾಗಿ ಒದಗಿಸತಕ್ಕದ್ದು.

(2) ಟಿಕೇಟು ಬೂತಿನ ಮುಂದೆ ಸಾರ್ವಜನಿಕರಿಗೆ ಸೂಕ್ತ ಪ್ರವೇಶ ಮತ್ತು ನಿರ್ಗಮನದ ಸಾಧನಗಳನ್ನು ಒದಗಿಸತಕ್ಕದ್ದು.

(3) (i) ಲೈಸೆನ್ಸ್‌ದಾರ ಅಥವಾ ಬರಹದಲ್ಲಿ ಅವನು ಕ್ರಮಬದ್ಧವಾಗಿ ಅಧಿಕೃತಗೊಳಿಸಿದ ಆತನ ಏಜೆಂಟನನ್ನು ಹೊರತುಪಡಿಸಿ ಯಾರೇ ಇತರ ವ್ಯಕ್ತಿಯು ಯಾವುದೇ ಟಿಕೇಟು ಅಥವಾ ಪಾಸು ಅಥವಾ ಯಾವುದೇ ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್‌ಗೆ ಪ್ರವೇಶದ ಹಕ್ಕಿನ ಯಾವುದೇ ಇತರ ಸಾಕ್ಷ್ಯವನ್ನು ಮಾರಾಟ ಮಾಡತಕ್ಕದ್ದಲ್ಲ ಅಥವಾ ಇಟ್ಟುಕೊಳ್ಳತಕ್ಕದ್ದಲ್ಲ ಅಥವಾ ಮಾರಾಟಕ್ಕಾಗಿ ಕೊಡ ಮಾಡತಕ್ಕದ್ದಲ್ಲ ಅಥವಾ ಮಾರಾಟ ಮಾಡುವಂತೆ ಮಾಡತಕ್ಕದ್ದಲ್ಲ ಅಥವಾ ಮಾರಾಟಕ್ಕಾಗಿ ಇಟ್ಟುಕೊಳ್ಳುವಂತೆ ಅಥವಾ ಇಡುವಂತೆ ಮಾಡತಕ್ಕದ್ದಲ್ಲ.

(ii) ಯಾವುದೇ ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್‌ಗೆ ಪ್ರವೇಶದ ಹಕ್ಕಿನ ಯಾವುದೇ ಟಿಕೇಟು ಅಥವಾ ಪಾಸು ಅಥವಾ ಯಾವುದೇ ಇತರ ಸಾಕ್ಷ್ಯವನ್ನು ಆ ಉದ್ದೇಶಕ್ಕಾಗಿ ಒದಗಿಸಿದ ಟಿಕೆಟ್ ಮಾರುವ ಕಿಟಕಿಗಳನ್ನು ಹೊರತುಪಡಿಸಿ ಇತರ ಯಾವುದೇ ಸ್ಥಳದಲ್ಲಿ ಮಾರಾಟ ಮಾಡತಕ್ಕದ್ದಲ್ಲ ಅಥವಾ ಮಾರಾಟಕ್ಕಾಗಿ ಇಡತಕ್ಕದ್ದಲ್ಲ ಅಥವಾ ಕೊಡ ಮಾಡತಕ್ಕದ್ದಲ್ಲ ಅಥವಾ ಮಾರಾಟಕ್ಕಾಗಿ ಇಡತಕ್ಕದ್ದಲ್ಲ ಮತ್ತು ಟಿಕೆಟ್ ಮಾರುವ ಕಿಟಕಿಯ ಮುಂದೆ ಕ್ಯೂ ಯಾವುದಾದರೂ ಇದ್ದರೆ, ಅದರಲ್ಲಿ ಸಾಲಾಗಿ ನಿಲ್ಲುವ ವ್ಯಕ್ತಿಯನ್ನು ಹೊರತುಪಡಿಸಿ ಯಾರೇ ಇತರ ವ್ಯಕ್ತಿಗೆ ಮಾರಾಟ ಮಾಡತಕ್ಕದ್ದಲ್ಲ:

ಪರಂತು, ಧರ್ಮಾರ್ಥ ಪ್ರದರ್ಶನಗಳ ಸಂದರ್ಭದಲ್ಲಿ, ಟಿಕೆಟ್ ಮಾರುವ ಕಿಟಕಿಗಳನ್ನು ಹೊರತುಪಡಿಸಿ ಇತರ ಸ್ಥಳಗಳಲ್ಲಿ ಮತ್ತು ಲೈಸೆನ್ಸ್‌ದಾರನನ್ನು ಹೊರತುಪಡಿಸಿ ಇತರ ವ್ಯಕ್ತಿಗಳು ಟ್ವಿಕೆಟ್‌ಗಳು, ಪಾಸುಗಳು ಅಥವಾ ಪ್ರವೇಶದ ಹಕ್ಕಿನ ಯಾವುದೇ ಇತರ ಸಾಕ್ಷ್ಯದ ಮಾರಾಟವನ್ನು ಲೈಸೆನ್ಸ್ ನೀಡುವ ಪ್ರಾಧಿಕಾರವು ಲಿಖಿತದಲ್ಲಿ ಅನುಮತಿಸಬಹುದು.

(4) ಲೈಸೆನ್ಸ್‌ದಾರನು ಚಲನಚಿತ್ರ ಪ್ರದರ್ಶನದ ದಿವಸಕ್ಕೆ ಹಿಂದಿನ ಏಳು ದಿವಸಗಳಿಗಿಂತ ಮುಂಚಿತವಾಗಿ ಟ್ವಿಕೆಟ್‌ಗಳನ್ನು ಮಾರಾಟ ಮಾಡುವುದರ ಮೂಲಕ ಅಥವಾ ಅನ್ಯಥಾ ಮುಂಗಡವಾಗಿ ಯಾವುದೇ ವರ್ಗದಲ್ಲಿ ಆಸನಗಳನ್ನು ಕಾಯ್ದಿರಿಸತಕ್ಕದ್ದಲ್ಲ.

(5) ಸಂಬಂಧಪಟ್ಟ ನಿಯಮಗಳನುಸಾರವಾಗಿ ಯಾವುದೇ ಸಿನಿಮಾ ಥಿಯೇಟರುಗಳು ಮತ್ತು ಮಲ್ಟಿಪ್ಲೆಕ್ಸ್‌ನಲ್ಲಿ ಆನ್‌ಲೈನ್ ಟಿಕೇಟುಗಳ ಮಾರಾಟವನ್ನು ಅನುಮತಿಸತಕ್ಕದ್ದು.

(6) ಪ್ರತಿಯೊಂದು ಟ್ವಿಕೆಟ್ ಚಾರ್ಜುಗಳು ಅಂತೆಯೇ ಇತರ ಚಾರ್ಜುಗಳು ಸಂಬಂಧಪಟ್ಟ ಅಧಿನಿಯಮಗಳು ಮತ್ತು ನಿಯಮಗಳಲ್ಲಿರುವಂತೆ ಅನ್ವಯವಾಗತಕ್ಕದ್ದು.

**56. ಉಪಗೃಹಗಳು ಇತ್ಯಾದಿ.-** (1) ಉಪ-ನಿಯಮ (2) ಮತ್ತು (3) ರಲ್ಲಿ ಉಪಬಂಧಿಸಿದಂತೆ ಹೊರತುಪಡಿಸಿ, ಸಿನಿಮಾ ಕಟ್ಟಡ ಅಥವಾ ಮಲ್ಟಿಪ್ಲೆಕ್ಸ್‌ನಲ್ಲಿ ಯಾವುದೇ ಪ್ರದರ್ಶನ ಕೊಠಡಿಗಳು, ಹೋಟೆಲುಗಳು, ಅಂಗಡಿಗಳು, ಕಛೇರಿಗಳು, ಬ್ಯಾಂಕುಗಳು ಮತ್ತು ಕ್ಯಾಂಟೀನುಗಳಿಗೆ ಅವಕಾಶ ನೀಡತಕ್ಕದ್ದಲ್ಲ.

(2) ಸಿನಿಮಾ ಕಟ್ಟಡವನ್ನು ದಹ್ಯವಲ್ಲದ ಸಾಮಗ್ರಿಗಳಿಂದ ಮತ್ತು ಶಬ್ದ ಕೇಳಿಸದಿರುವಂತೆ ನಿರ್ಮಿಸಿದ್ದರೆ, ಲೈಸೆನ್ಸ್ ನೀಡುವ ಪ್ರಾಧಿಕಾರವು ಆ ಸ್ಥಳದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸ್ಥಳೀಯ ಪ್ರಾಧಿಕಾರದೊಂದಿಗೆ ಸಮಾಲೋಚಿಸಿದ ತರುವಾಯ, ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್ ಇರುವ ಅಂತಸ್ತನ್ನು ಹೊರತುಪಡಿಸಿ ಬೇರೊಂದು ಅಂತಸ್ತಿನಲ್ಲಿ ಪ್ರದರ್ಶನ

ಕೊಠಡಿಗಳು, ಹೋಟೆಲುಗಳು, ಅಂಗಡಿಗಳು, ಕ್ಯಾಂಟೀನುಗಳು, ಬ್ಯಾಂಕುಗಳು ಮತ್ತು ಕಛೇರಿಗಳಂಥ ಸ್ಥಾಪನೆಗಳನ್ನು ತೆರೆಯಲು ಅನುಮತಿಸಬಹುದು ಮತ್ತು ಆಲ್ಕೋಹಾಲ್ ಮತ್ತು ನಿಷೇದಿತ ವಸ್ತುಗಳನ್ನು ಮಾರಾಟ ಮಾಡುವ ಮತ್ತು ನೀಡುವ ಅಂಗಡಿಗಳು ಮತ್ತು ಸ್ಥಾಪನೆಗಳಿಗೆ ಅನುಮತಿ ನೀಡತಕ್ಕದ್ದಲ್ಲ.

(3) (2)ನೇ ಉಪ ನಿಯಮದ ಮೇರೆಗೆ ಯಾವುದೇ ಅನುಮತಿಯನ್ನು ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ,-

(ಎ) ಅಂತಹ ಸ್ಥಾಪನೆಗಳನ್ನು ತೆರೆಯಬೇಕಾಗಿರುವಂಥ ಅಂತಸ್ತಿನಲ್ಲಿ ಅಗ್ನಿಯನ್ನು ತಡೆಗಟ್ಟುವುದಕ್ಕಾಗಿ ಮತ್ತು ಆರಿಸುವುದಕ್ಕಾಗಿ ಸಾಕಷ್ಟು ವ್ಯವಸ್ಥೆಯನ್ನು ಮಾಡಲಾಗಿದೆಯೆಂದು;

(ಬಿ) ಬೆಂಕಿ ಹೊತ್ತಿಕೊಂಡ ಸಂದರ್ಭದಲ್ಲಿ ಸುಲಭವಾಗಿ ಮತ್ತು ಶೀಘ್ರವಾಗಿ ಹೋಗಲು ಅಂತಹ ವ್ಯವಸ್ಥಾಪನೆಗಳಿಗೆ ಬರುವ ಸಂದರ್ಶಕರಿಗೆ ಅವಕಾಶವಿರುವ ಹಾಗೆ ಅಂತಹ ಸ್ಥಾಪನೆಗಳಿಗೆ ಪ್ರತ್ಯೇಕ ಪ್ರವೇಶಾವಕಾಶ ಮತ್ತು ಹೊರಕ್ಕೆ ಹೋಗುವ ದಾರಿಯನ್ನು ಒದಗಿಸಲಾಗಿದೆಯೆಂದು;

(ಸಿ) ಯಾವ ರಸ್ತೆಗೆ ಅಂತಹ ಸ್ಥಾಪನೆಗಳು ತೆರೆದಿರುವುವೋ ಆ ರಸ್ತೆಯು ಅಗ್ನಿಶಾಮಕ ಇಂಜಿನ್ನು ಮತ್ತು ಉಪಕರಣಗಳು ತಲುಪುವುದಕ್ಕೆ ಮುಖ್ಯ ರಸ್ತೆಯಾಗಿದೆಯೆಂದು

- ಮನದಟ್ಟಾದ ಹೊರತು ಅನುಮತಿಯನ್ನು ನೀಡತಕ್ಕದ್ದಲ್ಲ.

## ಅಧ್ಯಾಯ – VIII

## ಖಾಯಂ ಸಿನಿಮಾಗಳ ಅಥವಾ ಮಲ್ಟಿಪ್ಲೆಕ್ಸ್ ಸಂಬಂಧದಲ್ಲಿ ವಿದ್ಯುತ್ ಸ್ಥಾಪನೆಗಳು

**57. ಪರಿಭಾಷೆ.**- ಈ ಅಧ್ಯಾಯದ ಉದ್ದೇಶಗಳಿಗಾಗಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(1) 'ಬುಷ್' ಎಂದರೆ ಯಾವ ರಂಧ್ರಗಳ ಮೂಲಕ ಕೊಳವೆಗಳು ಮತ್ತು ಕೇಬಲ್ಲುಗಳನ್ನು ಹಾಯಿಸಲಾಗಿದೆಯೋ ಆ ರಂಧ್ರಗಳಲ್ಲಿ ಅಂತಹ ರಂಧ್ರಗಳನ್ನು ಯುಕ್ತವಾಗಿ ಹೊಗೆ ನಿರೋಧಕಗೊಳಿಸುವ ದೃಷ್ಟಿಯಿಂದ ಸೇರಿಸಲಾದ ಪ್ಯಾಕಿಂಗ್.

(2) ಈ ಅಧ್ಯಾಯದಲ್ಲಿ ನಿರ್ದಿಷ್ಟವಾಗಿ ಈ ನಿಯಮಗಳಲ್ಲಿ ಪರಿಭಾಷಿಸಿಲ್ಲದ ಯಾವುದೇ ಪದವು, ವಿದ್ಯುಚ್ಛಕ್ತಿ ಅಧಿನಿಯಮ, 2003 ಮತ್ತು ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರ (ಸುರಕ್ಷತೆ ಮತ್ತು ವಿದ್ಯುತ್ ಸರಬರಾಜಿಗೆ ಸಂಬಂಧಪಟ್ಟ ಕ್ರಮಗಳು) ವಿನಿಯಮಗಳು, 2010 ಮತ್ತು ಅದರ ಮೇರೆಗೆ ಮಾಡಲಾದ ನಿಯಮಗಳು ಮತ್ತು ವಿನಿಯಮಗಳಲ್ಲಿ ಪರಿಭಾಷಿಸಿದಂಥ ಅದೇ ಅರ್ಥ ಮತ್ತು ಪದಾವಳಿಗಳನ್ನು ಹೊಂದಿರತಕ್ಕದ್ದು.

**58. ಮುಖ್ಯ ಸರ್ಕ್ಯೂಟುಗಳು.**- ಆವರಣಗಳ ವಿದ್ಯುತ್ ದೀಪ ವ್ಯವಸ್ಥೆಯು ಕನಿಷ್ಠ ಪಕ್ಷ ಮೂರು ಪ್ರತ್ಯೇಕ ಮತ್ತು ವಿಭಿನ್ನ ಮುಖ್ಯ ಸರ್ಕ್ಯೂಟ್‌ಗಳನ್ನು ಹೊಂದಿರತಕ್ಕದ್ದು ಮತ್ತು ಅವುಗಳು,-

(i) ಪ್ರೊಜೆಕ್ಷನ್ ಕೊಠಡಿಗಾಗಿ ಮತ್ತು ಅಲ್ಲಿಂದ ಡಿಮ್ಮಿಂಗ್ ರೆಗ್ಯುಲೇಟರು ಯಾವುದಾದರೂ ಇದ್ದರೆ, ಅದರ ಮೂಲಕ ಸಭಾಂಗಣದ ಕೇಂದ್ರ ದೀಪ ವ್ಯವಸ್ಥೆಗಾಗಿ 'ಎ' ಸರ್ಕ್ಯೂಟ್;

(ii) ಸಭಾಂಗಣದ ಸರಿಸುಮಾರು ಅರ್ಧಭಾಗ ಸಾರ್ವಜನಿಕರಿಗೆ ತೆರೆದಿರುವ ದಾರಿಗಳು, ಮೆಟ್ಟಲು ದಾರಿಗಳು, ಹೊರಕ್ಕೆ ಹೋಗುವ ದಾರಿಗಳು ಮತ್ತು ಕಟ್ಟಡಗಳ ಭಾಗಗಳಿಗಾಗಿ 'ಬಿ' ಸರ್ಕ್ಯೂಟ್; ಮತ್ತು

(iii) ಸಭಾಂಗಣದ ಉಳಿದ ಅರ್ಧಭಾಗ ಸಾರ್ವಜನಿಕರಿಗೆ ತೆರೆದಿರುವ ದಾರಿಗಳು, ಮೆಟ್ಟಲು ದಾರಿಗಳು, ಹೊರಕ್ಕೆ ಹೋಗುವ ದಾರಿ ಮತ್ತು ಕಟ್ಟಡಗಳ ಭಾಗಗಳಿಗಾಗಿ 'ಸಿ', ಸರ್ಕ್ಯೂಟ್ ಗಳು

- ಇರತಕ್ಕದ್ದು.

(2) 'ಬಿ' ಮತ್ತು 'ಸಿ' ಸರ್ಕ್ಯೂಟ್ಗಳಿಗೆ ಸಂಬಂಧಿಸಿದಂತೆ ಸರ್ಕ್ಯೂಟ್ಗಳು ನಿಯಂತ್ರಣವು ಒಂದರಿಂದ ಇನ್ನೊಂದಕ್ಕೆ ದೂರದಲ್ಲಿರತಕ್ಕದ್ದು.

**59. ಸರಬರಾಜು ವ್ಯವಸ್ಥೆ.-** (1) ಸರಬರಾಜು ಮೂರು ಹಂತಗಳ ಎಸಿ ವ್ಯವಸ್ಥೆಯಲ್ಲಿ ಲಭ್ಯವಿರುವಲ್ಲಿ, 'ಎ' 'ಬಿ' ಮತ್ತು 'ಸಿ' ಸರ್ಕ್ಯೂಟ್ ಗಳ ಲೋಡನ್ನು ಸರಿತೂಗಿಸಲು ಮೂರು ವಿವಿಧ ಸ್ಥಳಗಳಿಂದ ಸರಬರಾಜು ಮಾಡತಕ್ಕದ್ದು.

(2) "ಎ" , "ಬಿ" ಮತ್ತು "ಸಿ" ಮುಖ್ಯ ಸರ್ರ್ಕ್ಯೂಟ್‌ಗಳನ್ನು ಅವಶ್ಯವೆಂದು ಪರ್ಯಾಲೋಚಿಸಬಹುದಾದಷ್ಟು ಉಪ-ಸರ್ಕ್ಯೂಟ್‌ಗಳಿಗಾಗಿ ಉಪ-ವಿಭಾಗಿಸಬಹುದು. ಪ್ರತಿಯೊಂದು ಉಪ-ಸರ್ಕ್ಯೂಟ್ ವಿತರಣಾ ಫಲಕದಿಂದ ಪ್ರಾರಂಭವಾಗತಕ್ಕದ್ದು ಮತ್ತು ಅರ್ಥ್ ಲಿಕೇಜುಗಳ ಸರ್ಕ್ಯೂಟ್ ಬ್ರೇಕರ್ಗಳ (ಇಎಲ್‌ಸಿಬಿ) ಸೂಕ್ತ ಸಾಮರ್ಥ್ಯದಿಂದ ಇರತಕ್ಕದ್ದು.

(3) ಆವರಣದ ಒಳಗಡೆ ಮತ್ತು ಹೊರಗಡೆಯ ದೀಪಗಳಿಗೆ ಪ್ರತ್ಯೇಕ ಸರ್ಕ್ಯೂಟ್ ಇರತಕ್ಕದ್ದು. ಫ್ಯಾನುಗಳು, ವಿದ್ಯುತ್ ಮತ್ತು ತಂಪುಗೊಳಿಸುವ ಉದ್ದೇಶಗಳಿಗಾಗಿನ ಸರ್ಕ್ಯೂಟ್‌ಗಳನ್ನು ದೀಪ ಸರ್ರ್ಕ್ಯೂಟ್‌ಗಳಿಂದ ವಿಭಿನ್ನ ಮತ್ತು ಪ್ರತ್ಯೇಕವಾಗಿ ಇಡತಕ್ಕದ್ದು.

(4) ಎಲ್‌ಇಡಿಯ ಹಾಗೆ ವಿದ್ಯುತ್ ಉಳಿತಾಯ ಮತ್ತು ಆಧುನಿಕ ತಂತ್ರಜ್ಞಾನ ದೀಪ ವ್ಯವಸ್ಥೆಯನ್ನು ಅಳವಡಿಸಿಕೊಳ್ಳತಕ್ಕದ್ದು.

**60. ಸ್ವಿಚ್ಚು ಮತ್ತು ಫ್ಯೂಸ್.-** ಎಲ್ಲ ವಿದ್ಯುತ್ ಸ್ಥಾಪನೆಗಳ ನಿಯಂತ್ರಣಕ್ಕಾಗಿ ಮುಖ್ಯ ಸ್ವಿಚ್ಚು ಬೋರ್ಡಿನಲ್ಲಿ ಓವರ್ ಲೋಡ್ ಮತ್ತು ಅರ್ಥ್ ಲೀಕೇಜ್ ಸಂರಕ್ಷಣೆಗೆ ಮುಖ್ಯ ಸ್ವಿಚ್ಚನ್ನು ಒದಗಿಸತಕ್ಕದ್ದು. ಎಲ್ಲ ಸರ್ಕ್ಯೂಟ್‌ಗಳನ್ನು ಸಿಬ್ಬಂದಿ ವರ್ಗಕ್ಕೆ ಸುಲಭವಾಗಿ ಸಿಗಬಹುದಾದ ಸ್ಥಾನಗಳಲ್ಲಿ ಮತ್ತು ಅವುಗಳು ಯಾವುದೇ ದಾರಿ ಅಥವಾ ಹೊರಕ್ಕೆ ಹೋಗುವ ದಾರಿಗೆ ಅಡ್ಡಿಪಡಿಸುವ ಸಂಭವವಿಲ್ಲದಿರಬಹುದಾದ ಸ್ಥಳದಲ್ಲಿ ಇಟ್ಟು ಸೂಕ್ತ ಸಾಮರ್ಥ್ಯದ ಸರ್ಕ್ಯೂಟ್ ಬ್ರೇಕರ್ಗಳ ಮೂಲಕ ಸಮರ್ಥವಾಗಿ ಪರಿರಕ್ಷಿಸತಕ್ಕದ್ದು.

(2) ಸ್ವಿಚ್ಚುಗಳು ಮತ್ತು ಫ್ಯೂಸ್ ಫಲಕಗಳಿಗೆ ಅವು ಸಾರ್ವಜನಿಕರಿಗೆ ಸಿಗುವಂತಿದ್ದರೆ ಮತ್ತು ಅವು ಟಿಕೆಟ್ ಕಿಟಕಿಗಳಲ್ಲಿ ಇದ್ದರೆ, ಗಾಜು ಅಥವಾ ಲೋಹದ ಮುಂಭಾಗದಿಂದ ಸರಿಯಾದ ಬೀಗ ಹಾಕುವ ಪೆಟ್ಟಿಗೆಗಳನ್ನು ಒದಗಿಸತಕ್ಕದ್ದು ಮತ್ತು ಗಾಜನ್ನು (ಸಾಕಷ್ಟು ದಪ್ಪವಾಗಿದ್ದ ಹೊರತು) ಸೂಕ್ತ ಅಗ್ನಿ ನಿರೋಧ ಸಾಧನವನ್ನು ಬಳಸುವ ಮೂಲಕ ಅಗ್ನಿ ನಿರೋಧಕದಿಂದ ಮಾಡಿದ ರಕ್ಷಕ ತಂತಿಯ ಮೂಲಕ ಅಥವಾ ಪರ್ಯಾಯವಾಗಿ ಮುಚ್ಚಳವಿರುವ ಮತ್ತು ಪ್ರಾಸಂಗಿಕ ಪೆಟ್ಟಿಗೆಗಳಿಂದ ಪರಿರಕ್ಷಿಸತಕ್ಕದ್ದು.

(3) ಎಲ್ಲ ಸ್ವಿಚ್ಚುಗಳು ಮತ್ತು ಸೂಕ್ತ ಸಾಮರ್ಥ್ಯದ ಸರ್ಕ್ಯೂಟ್ ಬ್ರೇಕರ್ಗಳನ್ನು ಯಾವ, ದೀಪಗಳ ಸರ್ಕ್ಯೂಟ್‌ನ್ನು ಅಥವಾ ಲ್ಯಾಂಪ್‌ಗಳನ್ನು ಅವುಗಳು ನಿಯಂತ್ರಿಸುವುವೋ ಅವುಗಳನ್ನು ಸ್ಪಷ್ಟವಾಗಿ ತೋರಿಸುವ ಹಾಗೆ ಗುರುತು ಮಾಡತಕ್ಕದ್ದು.

**61. ಸಂಚಾಯಕ ಸಲಕರಣೆ.-** ವಿದ್ಯುಚ್ಛಕ್ತಿ ಪರಿಶೀಲಕನು ಅನುಮೋದಿಸಬಹುದಾದಂಥ ಬಗೆಯ ಸಂಚಾಯಕ ಸಲಕರಣೆಗಳನ್ನು ಅಥವಾ ಸ್ವಯಂಚಾಲಿತ ಡಿಸಿ ದೀಪಗಳ ಸಂಖ್ಯೆ ಮತ್ತು ತುರ್ತು ಪರಿಸ್ಥಿತಿ ಅಥವಾ ವಿದ್ಯುಚ್ಛಕ್ತಿಯು ನಿಂತು ಹೋದ ಸಮಯದಲ್ಲಿ, ಸಭಾಂಗಣವನ್ನು ದೀಪದಿಂದ ಬೆಳಗಿಸುವ ವ್ಯವಸ್ಥೆಯನ್ನು ಮಾಡತಕ್ಕದ್ದು.

(2) ಸಂಚಾಯಕ ಸಲಕರಣೆಗಳನ್ನು ಹೊರಗಿನ ಗಾಳಿಗೆ ಸಾಕಷ್ಟು ವಾಯು ಸಂಚಾರವಿರುವ ಕೊಠಡಿಯಲ್ಲಿ ಇಡತಕ್ಕದ್ದು ಮತ್ತು ಈ ಕೊಠಡಿಯು ಅಗ್ನಿ ನಿರೋಧಕ ಬಾಗಿಲುಗಳೊಂದಿಗೆ ಅಗ್ನಿ ನಿರೋಧಕ ರಚನೆಯದ್ದಾಗಿರತಕ್ಕದ್ದು ಮತ್ತು ಅದನ್ನು ಯಾವುದೇ ಇತರ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ.

**62. ರೂಪಾಂತರಿಸುವ ಮತ್ತು ಪರಿವರ್ತಿಸುವ ಯಂತ್ರಸಾಮಗ್ರಿ.-** ನಿಯಂತ್ರಿಸುವ ಸ್ವಿಚ್ಚುಗಳು ಮತ್ತು ಸರ್ಕ್ಯೂಟ್ ಬ್ರೇಕರ್ಗಳೊಂದಿಗೆ ರೂಪಾಂತರಿಸುವ ಮತ್ತು ಪರಿವರ್ತಿಸುವ ಯಂತ್ರ ಸಾಮಗ್ರಿಯನ್ನು, ಹೊರಗಿನ ಗಾಳಿಗೆ ಸಾಕಷ್ಟು ವಾಯು ಸಂಚಾರವಿರುವ, ಸರಿಯಾಗಿ ಬೆಳಕಿರುವ ಮತ್ತು ಆಡಳಿತ ವರ್ಗಕ್ಕೆ ಸಿಗುವ ಸ್ಥಳದಲ್ಲಿಡತಕ್ಕದ್ದು ಮತ್ತು ಅದನ್ನು ಯಾವುದೇ ಇತರ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ.

**63. ಮೋಟಾರುಗಳು, ಇತ್ಯಾದಿ.-** ಎಲ್ಲ ಮೋಟಾರುಗಳು ಮತ್ತು ವಿದ್ಯುಚ್ಛಕ್ತಿ ಸಾಧನ ಸಾಮಗ್ರಿಗಳು, ಅವುಗಳಿಗೆ ಅವಕಾಶ ಕೊಟ್ಟಿದ್ದರೆ, ಅವುಗಳು ವಿಶೇಷ ಷರತ್ತುಗಳಿಗೊಳಪಟ್ಟಿರತಕ್ಕದ್ದು. ಆದರೆ, ಮುನ್ನೂರು ವ್ಯಾಟ್‌ಗಳಿಗಿಂತ ಹೆಚ್ಚಾಗಿ ತೆಗೆದುಕೊಳ್ಳದ ವಿದ್ಯುತ್ ಫ್ಯಾನ್‌ಗಳು ಮತ್ತು ಅಂತಹವೇ ಮೋಟಾರುಗಳನ್ನು ಸೂಕ್ತ ವಿತರಣಾ ಫಲಕದ ಮೇಲೆ ಸರ್ಕ್ಯೂಟ್ ಬ್ರೇಕರ್‌ಗಳಿಂದ ಪ್ರತ್ಯೇಕವಾಗಿ ವೈರಿಂಗ್ ಮಾಡಿದ್ದರೆ ಉಪಯೋಗಿಸಬಹುದು.

**64. ಪ್ರತಿರೋಧಗಳು.-** ನಿಯಂತ್ರಣ ಉದ್ದೇಶಕ್ಕಾಗಿ ಪ್ರತಿರೋಧವನ್ನು ಹೊರತುಪಡಿಸಿ ಎಲ್ಲ ಪ್ರತಿರೋಧಗಳನ್ನು ಪ್ರೊಜೆಕ್ಷನ್ ಕೊಠಡಿಯ ಹೊರಗೆ ಮತ್ತು ಯುಕ್ತವಾಗಿ ಕಾರ್ಯಸಾಧ್ಯವಿದ್ದರೆ ಸಭಾಂಗಣದ ಹೊರಗಡೆ ಇಡತಕ್ಕದ್ದು, ಸಭಾಂಗಣದ ಒಳಗಡೆ ಇಟ್ಟರೆ, ಅಂತಹ ಪ್ರತಿರೋಧವನ್ನು ಹೂತ ತಂತಿಯ ರಕ್ಷಕದ ಮೂಲಕ ಅಥವಾ ಆಕಸ್ಮಿಕ ಸಂಪರ್ಕಗಳನ್ನು ತಡೆಗಟ್ಟುವ ಇತರ ಸಮರ್ಥ ಸಾಧನಗಳಿಂದ ಪರಿರಕ್ಷಿಸತಕ್ಕದ್ದು.

**65. ಚಾಪ ದೀಪಗಳು.-** (1) ಯಾವುದೇ ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್‌ನಲ್ಲಿ, ವಿದ್ಯುಚ್ಛಕ್ತಿ ಪರಿಶೀಲಕನ ಅನುಮತಿಯಿಲ್ಲದೆ ಸಭಾಂಗಣದಲ್ಲಿ ಅಥವಾ ಸಾರ್ವಜನಿಕರಿಗಾಗಿ ತೆರೆದಿರುವ ಯಾವುದೇ ಭಾಗದಲ್ಲಿ ಚಾಪ ದೀಪಗಳನ್ನು ಉಪಯೋಗಿಸತಕ್ಕದ್ದಲ್ಲ. ಅಂತಹ ಆವರಣಗಳ ಯಾವುದೇ ಭಾಗದಲ್ಲಿ ಅವುಗಳನ್ನು ಉಪಯೋಗಿಸಿದಾಗ, ಬೀಳುವ ಗಾಜು ಮತ್ತು ಪ್ರಜ್ವಲಿಸುವ ಕಣಗಳು ಅಥವಾ ಇಂಗಾಲದಿಂದ ಅಪಾಯದ ವಿರುದ್ಧ ರಕ್ಷಿಸಲು ವಿಶೇಷ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳತಕ್ಕದ್ದು. ಬೇರೆಯವರು ಸ್ಪರ್ಶಿಸಬಹುದಾದಂಥ ದೀಪಗಳು, ಲಾಂದ್ರಗಳ ಮತ್ತು ಜೋಡಣೆಗಳ ಎಲ್ಲ ಭಾಗಗಳನ್ನು (ಅವುಗಳನ್ನು ಸ್ಪರ್ಶಿಸಲು ನಿಯೋಜಿತನಾದ ವ್ಯಕ್ತಿಯ ಹೊರತು) ಚೌಕಟ್ಟಿನಿಂದ ವಿದ್ಯುತ್ ನಿರೋಧಕಗೊಳಿಸತಕ್ಕದ್ದು.

(2) ಸೀನರಿ ಅಥವಾ ಇತರ ಸುಲಭವಾಗಿ ಬೆಂಕಿ ಹತ್ತುವ ಸಾಮಗ್ರಿಗಳೊಂದಿಗೆ ಸಂಪರ್ಕದಿಂದ ಮೂಲಕ ಬೆಂಕಿ ಹೊತ್ತಿಕೊಳ್ಳಲು ಸಾಕಷ್ಟು ಉಷ್ಣಾಂಶ ಹೆಚ್ಚಾಗಬಹುದಾದ ಚಾಪ ದೀಪದ ಲೋಹದ ಕೆಲಸ ಯಾವುದೇ ತೆರೆದ ಭಾಗವನ್ನು ತಂತಿ ರಕ್ಷಕ ಮೂಲಕ ಪರಿರಕ್ಷಿಸತಕ್ಕದ್ದು. ಯಾವುದೇ ಸಂದರ್ಭದಲ್ಲಿ ಚಾಪ ದೀಪಗಳನ್ನು ಸಂವಾಹಕಗಳ ಮೂಲಕ ತೂಗುಬಿಡತಕ್ಕದ್ದಲ್ಲ.

(3) ಎಲ್ಲ ಚಾಪ ದೀಪಗಳನ್ನು ವಾತಾವರಣಕ್ಕೆ ಒಯ್ಯುವ ಗಾಳಿ ತೂರದ ನಾಳಗಳೊಂದಿಗೆ ಸಂಪರ್ಕಿಸತಕ್ಕದ್ದು.

(4) ಡಿಜಿಟಲ್ ಪ್ರಾಜೆಕ್ಟರ್‌ಗಳು, ಡಿಜಿಟಲ್ ಶಬ್ದ ವ್ಯವಸ್ಥೆಯಂಥ ಮುಂದುವರೆದ ತಂತ್ರಜ್ಞಾನದ ಪ್ರೊಜೆಕ್ಟರ್ ಮತ್ತು ಶಬ್ದ ವ್ಯವಸ್ಥೆ ಮತ್ತು ಮುಂದುವರೆದ ತಂತ್ರಜ್ಞಾನದ ಯಾವುದೇ ಇತರ ವಿಧಾನಗಳನ್ನು ಅಳವಡಿಸಿಕೊಳ್ಳಬಹುದು ಮತ್ತು ಜಿಲ್ಲಾ ಅಥವಾ ಆ ಪ್ರದೇಶದ ವಿದ್ಯುಚ್ಛಕ್ತಿ ಪರಿಶೀಲಕನಿಂದ ಅನುಮತಿಯನ್ನು ಪಡೆದ ತರುವಾಯ ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್‌ನ ಯಾವುದೇ ಭಾಗದಲ್ಲಿ ಬಳಸಬಹುದು.

**66. ಚಲನಚಿತ್ರ ದೀಪಗಳಿಗಾಗಿ ಕೇಬಲ್‌ಗಳು.-** ಚಲನಚಿತ್ರ ದೀಪಗಳು ಅಥವಾ ಡಿಜಿಟಲ್ ಪ್ರೊಜೆಕ್ಟರ್‌ಗಾಗಿ ಕೇಬಲ್‌ಗಳನ್ನು ಪ್ರೊಜೆಕ್ಟರ್ ಕೊಠಡಿಯಿಂದ ವಿದ್ಯುತ್ ಸರಬರಾಜು ಬೋರ್ಡಿನಿಂದ ಪ್ರತ್ಯೇಕ ಸರ್ಕ್ಯೂಟ್‌ಗಳನ್ನು ತೆಗೆದುಕೊಳ್ಳತಕ್ಕದ್ದು, ಸೂಕ್ತವಾದ ಫ್ಯೂಜ್ ರಕ್ಷಣೆಯೊಂದಿಗೆ ಸ್ವಿಚ್ಚನ್ನು ಸಮರ್ಥ ಜೋಡಿ ಕಂಬದಿಂದ ಚಲನಚಿತ್ರ ದೀಪ ಪಥದಲ್ಲಿ ಪ್ರೊಜೆಕ್ಷನ್ ಕೊಠಡಿಯೊಳಗೆ ಜೋಡಿಸತಕ್ಕದ್ದು.

**67. ಕೇಬಲ್‌ಗಳಿಗಾಗಿ ವಿದ್ಯುತ್ ನಿರೋಧಕ ಸಾಮಗ್ರಿ.-** ಪ್ರೊಜೆಕ್ಷನ್ ಕೊಠಡಿಯೊಳಗೆ, ಅಗ್ನಿ ಪ್ರತಿರೋಧಕ ಕಡಿಮೆ ಹೊಗೆ ಬರುವ ರೀತಿಯ ಎಲ್ಲಾ ವಿದ್ಯುತ್ ಕೇಬಲ್‌ಗಳನ್ನು ಮತ್ತು ಎಲ್ಲಾ ಕೇಬಲ್‌ಗಳನ್ನು ನಳಿಕೆಗಳಿಂದ ಮುಚ್ಚತಕ್ಕದ್ದು. ಸ್ವಿಚ್ಚು ಬೋರ್ಡಿನಿಂದ ಪ್ರೊಜೆಕ್ಟರು ಮತ್ತು ಮೋಟಾರುಗಳಿಗೆ ಹೋಗುವ ಎಲ್ಲಾ ನಳಿಕೆಗಳನ್ನು ನೆಲದ ಹಾಸನ್ನು ಅಗೆಯದೆ ಪೂರ್ಣಗೊಳಿಸಿದ ನೆಲದಲ್ಲಿ ಹೂಳತಕ್ಕದ್ದು ಮತ್ತು ಯಾವುದೇ ಸಂದರ್ಭದಲ್ಲಿ ಕೇಬಲ್‌ಗಳ ಮೇಲಿನ ನಳಿಕೆಗಳಿಗೆ ನೆಲದ ಮೇಲ್ಮೈ ಮೇಲೆ ಅವಕಾಶ ಕೊಡತಕ್ಕದ್ದಲ್ಲ.

**68. ನಿರ್ಗಮನ ಚಿಹ್ನೆ, ದಾರಿಗಳು, ಇತ್ಯಾದಿಗಳಿಗಾಗಿ ಸಹಾಯಕ ಸರಬರಾಜು.-** (1) ಸಭಾಂಗಣದೊಳಗೆ ನಡುದಾರಿಗಳು ಮತ್ತು ದಾರಿಗಳಲ್ಲಿ ನೆಲದೀಪಗಳನ್ನು ಒದಗಿಸತಕ್ಕದ್ದು, ಅವುಗಳ ವೋಲ್ಟೇಜ್ ಇಪ್ಪತ್ನಾಲ್ಕು ವೋಲ್ಟುಗಳನ್ನು ಮೀರತಕ್ಕದ್ದಲ್ಲ.

(2) ಸಾರ್ವಜನಿಕರು ಸಿನಿಮಾ ಥಿಯೇಟರನೊಳಗೆ ಇರುವ ಸಮಯದಲ್ಲಿ ಸ್ಟೇರ್ಕೇಸ್‌ಗಳಲ್ಲಿ, ಮೊಗಸಾಲೆಗಳಲ್ಲಿ, ದಾರಿಗಳಲ್ಲಿ ಮತ್ತು ಹೊರಕ್ಕೆ ಹೋಗುವ ದಾರಿಗಳಲ್ಲಿ ಎಲ್ಲಾ ದೀಪಗಳನ್ನು ಹೊತ್ತಿಸಿಟ್ಟಿರತಕ್ಕದ್ದು.

(3) ಸಾರ್ವಜನಿಕರು ಆವರಣದಲ್ಲಿರುವಾಗ ಆದ್ಯಂತವಾಗಿ ಆವರಣದಲ್ಲಿ ಸುಸ್ಥಿತಿಯಲ್ಲಿರುವ ಕನಿಷ್ಠ ಪಕ್ಷ ಆರು ಟಾರ್ಚುಗಳನ್ನು ಇಟ್ಟಿರತಕ್ಕದ್ದು ಮತ್ತು ಅದು ದ್ವಾರಪಾಲಕರಿಗೆ ಸುಲಭವಾಗಿ ಸಿಗುವ ಹಾಗೆ ಇಡೀ ಕಟ್ಟಡದಲೆಲ್ಲಾ ಹಂಚಿರತಕ್ಕದ್ದು.

(4) ಎಲ್ಲ ಹೊರಗೆ ಹೋಗುವ ದಾರಿಗಳಲ್ಲಿ ತುರ್ತು ದೀಪಗಳನ್ನು ಸಹ ಒದಗಿಸತಕ್ಕದ್ದು.

(5) ತುರ್ತು ಚಿಹ್ನೆಯ ಫಲಕಗಳನ್ನು (ಅಗ್ನಿ ಹೊತ್ತಿಕೊಂಡಾಗ ಹೊರಗೆ ಹೋಗುವ ದಾರಿ/ ಸ್ಟೇರ್ಕೇಸ್‌ಗೆ, ಸುರಕ್ಷತೆಯ ಜಾಗ, ಅಗ್ನಿಶಾಮಕ, ತುರ್ತು ಅಲಾರಂ ಸ್ವಿಚ್ಚು ಇತ್ಯಾದಿ..) ಪ್ರಕಾಶಮಾನವಾಗಿ ಮತ್ತು ಸ್ಪಷ್ಟವಾಗಿ ಕಾಣುವಂತೆ ಇಟ್ಟಿರತಕ್ಕದ್ದು.

**69. ವೈರಿಂಗ್.-** (1) ಇಡೀ ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಆವರಣಗಳ ವಿದ್ಯುತ್ ವೈರಿಂಗ್‌ನ್ನು ಲೋಹ ಅಥವಾ ಅನುಮೋದಿತ ಗಟ್ಟಿ ಪಾಲಿ ವಿನೈಲ್ ಕ್ಲೋರೈಡ್‌ನ ನಳಿಕೆ ಕೊಳವೆಗಳಲ್ಲಿ ಮಾಡತಕ್ಕದ್ದು.

(2) ಲೋಹದ ನಳಿಕೆ ಕೊಳವೆಗಳಿಗಾಗಿ ಬುಷ್‌ಗಳನ್ನು ಅವಶ್ಯವಿರುವಾಗಲೆಲ್ಲಾ ಉಪಯೋಗಿಸತಕ್ಕದ್ದು. ಎಲ್ಲಾ ಲೋಹದ ಕೊಳವೆಗಳನ್ನು ಸಮರ್ಥವಾಗಿ ಭೂಮಿಗೆ ಸಂಪರ್ಕಿಸತಕ್ಕದ್ದು ರಕ್ಷಾಸಂಪುಟಗಳು ಮತ್ತು ಇತರ ಜೋಡಣೆಗಳೊಂದಿಗೆ ಮುಂದುವರಿಸತಕ್ಕಂಥ ಉತ್ತಮ ಮತ್ತು ಖಾಯಂ ವಿದ್ಯುತ್ ಸಂಪರ್ಕ ಸುನಿಶ್ಚಿತಗೊಳಿಸುವ ಸ್ಕ್ರೂ ಜಾಯಿಂಟುಗಳು ಮತ್ತು ಇತರೆ ಸಾಧನಗಳನ್ನು ಒದಗಿಸತಕ್ಕದ್ದು.

**70. ಜೋಡಣೆಗಳು.-** (1) ಎಲ್ಲ ತೂಗು ಹಾಕಿದ ಜೋಡಣೆಗಳನ್ನು ಭದ್ರವಾಗಿ ಜೋಡಿಸತಕ್ಕದ್ದು.

(2) ಸಂಯೋಜಿತ ಅನಿಲ ಮತ್ತು ವಿದ್ಯುತ್ ಜೋಡಣೆಗಳನ್ನು ಉಪಯೋಗಿಸತಕ್ಕದ್ದಲ್ಲ.

(3) ಸಭಾಂಗಣದಲ್ಲಿ ಮತ್ತು ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡದ ಮುಂಭಾಗದಲ್ಲಿ ಯಾವುದೇ ವಿದ್ಯುತ್ ದೀಪದ ಲೋಲಕಗಳು ಅಥವಾ ಬ್ರ್ಯಾಕೆಟ್ಟುಗಳು ನೆಲದ ಮೇಲೆ ಜೋಡಣೆಗಳ ಅತಿ ಕೆಳಗಿನ ಮುಂಚಾಚಿರುವ ಭಾಗಕ್ಕೆ ಕನಿಷ್ಠ ಪಕ್ಷ ಎರಡೂವರೆ ಮೀಟರುಗಳಿರತಕ್ಕದ್ದು. ಯಾವುದೇ ವಿದ್ಯುತ್ ಜೋಡಣೆಗಳು ಅಥವಾ ಯಾವುದೇ ವಿವರಣೆಯ ಸಲಕರಣೆಗಳನ್ನು ಸುರಕ್ಷಾ ಪರದೆಯು ಸರಿಯಾಗಿ ಕೆಲಸ ಮಾಡುವುದಕ್ಕೆ ಯಾವುದೇ ಸಮಯದಲ್ಲಿ ಅಡ್ಡಿಯಾಗುವ ಹಾಗೆ ಜೋಡಿಸತಕ್ಕದ್ದಲ್ಲ ಅಥವಾ ಅಳವಡಿಸತಕ್ಕದ್ದಲ್ಲ.

(4) (i) ವಿದ್ಯುಚ್ಛಕ್ತಿ ಸ್ಥಾಪನೆಯನ್ನು, ಕರ್ನಾಟಕ ಸರ್ಕಾರದ ಲೈಸೆನ್ಸ್ ನೀಡುವ ಸಲಹಾ ಮತ್ತು ಪರೀಕ್ಷಾ ಮಂಡಲಿಯು ಕೊಟ್ಟ ವೈರ್‌ಮ್ಯಾನ್ ಅಥವಾ ಮೇಲ್ವಿಚಾರಕರ ಪರ್ಮಿಟ್ಟನ್ನು ಹೊಂದಿರುವ ಸರಿಯಾದ ಅರ್ಹತೆ ಪಡೆದ ವ್ಯಕ್ತಿಯ ಪ್ರಭಾರದಲ್ಲಿರತಕ್ಕದ್ದು ಅಥವಾ ಅದು ಲೈಸೆನ್ಸ್ ಪಡೆದ ವಿದ್ಯುಚ್ಛಕ್ತಿ ಕಾಂಟ್ರಾಕ್ಟರನ ಪ್ರಭಾರದಲ್ಲಿರತಕ್ಕದ್ದು, ಅವನ ಹೆಸರನ್ನು ಜಿಲ್ಲಾ ಅಥವಾ ಆ ಕ್ಷೇತ್ರದ ವಿದ್ಯುಚ್ಛಕ್ತಿ ಪರಿಶೀಲಿಕನಿಗೆ ತಿಳಿಸತಕ್ಕದ್ದು.

(ii) ಲೈಸೆನ್ಸು ಪಡೆದ ವಿದ್ಯುಛ್ಛಕ್ತಿ ಕಂಟ್ರಾಕ್ಟರನು, ಜಿಲ್ಲಾ ವಿದ್ಯುಚ್ಛಕ್ತಿ ಪರಿಶೀಲಿಕನಿಗೆ ವಾರ್ಷಿಕವಾಗಿ ಎಲ್ಲ ಸರ್ಕ್ಯೂಟುಗಳಿಗೆ ಮತ್ತು ವಿದ್ಯುತ್ ನಿರೋಧಕ ಅಳವಡಿಸಿದನ್ನು ಮತ್ತು ಎಲೆಕ್ಟ್ರಾನ್ ವ್ಯಾಲ್ಯೂಗಳನ್ನು ಒದಗಿಸತಕ್ಕದ್ದು.

(5) ವಿದ್ಯುತ್ ಶಾಕ್‌ನಿಂದ ನರಳುತ್ತಿರುವ ವ್ಯಕ್ತಿಗಳ ಚೇತರಿಕೆಗಾಗಿ ಇಂಗ್ಲಿಷ್, ಹಿಂದಿ ಮತ್ತು ಪ್ರಾದೇಶಿಕ ಭಾಷೆಗಳೆರಡರಲ್ಲೂ ಸೂಚನೆಗಳನ್ನು ಎದ್ದು ಕಾಣುವ ಸ್ಥಳದಲ್ಲಿ ಅಂಟಿಸತಕ್ಕದ್ದು ಮತ್ತು ವೈರ್‌ಮ್ಯಾನ್ ಉಪಯೋಗಕ್ಕಾಗಿ ಕನಿಷ್ಠ ಪಕ್ಷ ಸುಸ್ಥಿತಿಯಲ್ಲಿರುವ ಒಂದು ಜೊತೆ ರಬ್ಬರ್ ಕೈಚೀಲಗಳನ್ನು ಒದಗಿಸತಕ್ಕದ್ದು.

(6) ವಿದ್ಯುಚ್ಛಕ್ತಿ ಅಧಿನಿಯಮ, 2003 ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರ (ಸುರಕ್ಷತೆ ಮತ್ತು ವಿದ್ಯುತ್ ಪೂರೈಕೆಗೆ ಸಂಬಂಧಪಟ್ಟ ಕ್ರಮಗಳು) ವಿನಿಯಮಗಳು, 2010 ಮತ್ತು ಅದರ ತರುವಾಯ ಐಎಸ್ಎಸ್ 3043/1987ರ ನಿಯಮಗಳು ಮತ್ತು ವಿನಿಯಮಗಳ ಮೇರೆಗೆ ಭೂಸಂಪರ್ಕವನ್ನು ಸಮರ್ಥವಾಗಿ ಮತ್ತು ಪೂರ್ಣವಾಗಿ ಮಾಡತಕ್ಕದ್ದು ಮತ್ತು ಅದನ್ನು ಸರಿಯಾಗಿ ಇಟ್ಟುಕೊಂಡು ಬರತಕ್ಕದ್ದು. ಭೂ ವಿದ್ಯುತ್ ಧ್ರುವಗಳನ್ನು ತೆರೆದಿಡತಕ್ಕದ್ದು ಮತ್ತು ನಿಯತವಾಗಿ ನೀರು ಹಾಕುವುದು, ಪರಿಶೀಲನೆ ಮತ್ತು ಪರೀಕ್ಷೆಯನ್ನು ಅನುಗೊಳಿಸುವ ಹಾಗೆ ಐ.ಎಸ್. ಮಾನಕಗಳ ಪ್ರಕಾರ ಕಲ್ಲುಕಟ್ಟಡ ಆವೃತಗಳಲ್ಲಿ ಆವೃತಗೊಳಿಸತಕ್ಕದ್ದು.

**71. ಜನರೇಟರ್ ಸರಬರಾಜಿನ ಉತ್ಪಾದಕತೆ ಪರ್ಯಾಯ ಮೂಲ.-** ಪ್ರಸ್ತುತ ವಿದ್ಯುತ್ ಸರಬರಾಜನ್ನು ಆವರಣದಲ್ಲಿನ ವಿಶೇಷ ಸ್ಥಾವರದಿಂದ ಪಡೆದಿರುವಲ್ಲಿ, ಅಂತಹ ಸ್ಥಾವರವನ್ನು ಎಲ್ಲಾ ಸಂದರ್ಭಗಳಲ್ಲಿ ಜಿಲ್ಲಾ ಅಥವಾ ಆ ಕ್ಷೇತ್ರದ ವಿದ್ಯುಚ್ಛಕ್ತಿ ಪರಿಶೀಲಕನು ಅನುಮೋದಿಸಿರಬೇಕು.

**72. ವೈರಿಂಗ್ ಯೋಜನೆ.-** ವಿದ್ಯುಚ್ಛಕ್ತಿ ಸ್ಥಾಪನೆಯ ಎಲ್ಲಾ ಸರ್ಕ್ಯೂಟುಗಳು ಮತ್ತು ಉಪ ಸರ್ಕ್ಯೂಟುಗಳ ವ್ಯವಸ್ಥೆಯನ್ನು ವಿತರಣಾ ಫಲಕಗಳ ಸ್ಥಾನವನ್ನು ಮತ್ತು ಕೇಬಲ್‌ಗಳ ಗಾತ್ರವನ್ನು ಸ್ಪಷ್ಟವಾಗಿ ಸೂಚಿಸುವ ಏಕರೇಖೆಯಲ್ಲಿ ಚೌಕಟ್ಟು ಹಾಕಿರುವ ವೈರಿಂಗ್ ರೇಖಾಚಿತ್ರವನ್ನು ಆವರಣದಲ್ಲಿ ಪ್ರದರ್ಶಿಸತಕ್ಕದ್ದು ಮತ್ತು ಅದನ್ನು ತಹಲ್‌ವರೆಗೆ ಇಡತಕ್ಕದ್ದು, ಅಂತಹ ರೇಖಾಚಿತ್ರವನ್ನು ವಿದ್ಯುಚ್ಛಕ್ತಿ ಪರಿಶೀಲಕನು ಕ್ರಮಬದ್ಧವಾಗಿ ಅನುಮೋದಿಸಿ ಡಿಜಿಟಲ್ ನಮೂನೆಯಲ್ಲಿ ಸಹ ನಿರ್ವಹಿಸತಕ್ಕದ್ದು.

**73. ದೀಪ ವ್ಯವಸ್ಥೆಯ ಸಂವಾಹಕಗಳು.-** (1) ದೀಪ ವ್ಯವಸ್ಥೆಯ ಸಂವಾಹಕಗಳನ್ನು ಪ್ರತಿಯೊಂದು ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡದಲ್ಲಿ ಸಂಬಂಧಪಟ್ಟ ಐ.ಎಸ್. ಮಾನಕಗಳಿಗೆ ಅನುಗುಣವಾಗಿ ಒದಗಿಸತಕ್ಕದ್ದು.

(2) ನಿಯಾನ್ ಚಿಹ್ನೆಗಳನ್ನು ಸ್ಥಾಪಿಸಿದ್ದರೆ ಅವುಗಳನ್ನು ಪ್ರಾರಂಭಿಸುವ ಮುಂಚೆ ವಿದ್ಯುಚ್ಛಕ್ತಿ ಪರಿಶೀಲಕನಿಂದ ಪರಿಶೀಲಿಸಿಕೊಳ್ಳತಕ್ಕದ್ದು.

## ಅಧ್ಯಾಯ –IX

## ಖಾಯಂ ಸಿನಿಮಾ ಥಿಯೇಟರು ಮತ್ತು ಮಲ್ಟಿಪ್ಲೆಕ್ಸ್‌ನ ಸಂಬಂಧದಲ್ಲಿ ಅಗ್ನಿ ನಂದಿಸುವುದನ್ನು ಸ್ಥಾಪಿಸುವುದು

**74. ದೂರವಾಣಿ.-** (1) ಪ್ರತಿಯೊಂದು ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್‌ಗೆ ಸುಲಭವಾಗಿ ಲಭ್ಯವಾಗಬಹುದಾದ ಸ್ಥಳದಲ್ಲಿ ದೂರವಾಣಿಯನ್ನು ಒದಗಿಸತಕ್ಕದ್ದು. ಅಗ್ನಿಶಾಮಕ, ಆಂಬುಲೆನ್ಸ್, ಪೊಲೀಸು, ಆಸ್ಪತ್ರೆ ಮೊದಲಾದವುಗಳನ್ನು ಒಳಗೊಂಡು ಎಲ್ಲ ತುರ್ತುಪರಿಸ್ಥಿತಿ ಸಂಪರ್ಕ ಸಂಖ್ಯೆಗಳನ್ನು ಎದ್ದುಕಾಣುವ ಜಾಗದಲ್ಲಿ ಪ್ರದರ್ಶಿಸತಕ್ಕದ್ದು. ಹತ್ತಿರದ ಅಗ್ನಿಶಾಮಕ ಠಾಣೆಯ ದೂರವಾಣಿ ಸಂಖ್ಯೆಯು ನಿಯಂತ್ರಣ ಕೊಠಡಿ ಸಂಖ್ಯೆ. 101 ರೊಂದಿಗೆ ಎದ್ದು ಕಾಣುವಂತಿರತಕ್ಕದ್ದು

(2) ಸಮಗ್ರ ದೂರವಾಣಿ ಸಂಪರ್ಕದ ಸ್ಥಾಪನೆ ಮತ್ತು ನಿರ್ವಹಣೆಯನ್ನು ಲೈಸೆನ್ಸ್‌ದಾರನು ತನ್ನ ಖರ್ಚಿನಲ್ಲಿ ನಿರ್ವಹಿಸತಕ್ಕದ್ದು.

**75. ಅಗ್ನಿನಂದಿಸುವ ಸಲಕರಣೆ.-** (1) ಪ್ರತಿಯೊಂದು ಸಿನಿಮಾ ಥಿಯೇಟರ್ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡಕ್ಕೆ ಈ ಕೆಳಕಂಡ ಅಗ್ನಿನಂದಿಸುವ ಉಪಕರಣಗಳನ್ನು ಒದಗಿಸತಕ್ಕದ್ದು, ಎಂದರೆ:-

(ಎ) ಪ್ರೊಜೆಕ್ಷನ್ ಕೊಠಡಿಯಲ್ಲಿ,-

(i) ಒಂದು ದಪ್ಪ ಉಣ್ಣೆ ಕಂಬಳಿ;

(ii) ಎರಡು ಬಕೆಟ್ ನೀರು, ಪ್ರತಿಯೊಂದು ಒಂಬತ್ತು ಲೀಟರುಗಳ ಸಾಮರ್ಥ್ಯವುಳ್ಳದ್ದು ;

(iii) ಪ್ರತಿಯೊಂದು ಎರಡು ಕಿಲೋಗ್ರಾಂ ಸಾಮರ್ಥ್ಯವುಳ್ಳ ಕಾರ್ಬನ್ ಡೈಆಕ್ಸೈಡ್ (ಇಂಗಾಲಾಮ್ಲ) ನಂದಿಗೆಗಳು ಅಥವಾ ಐದು ಕಿಲೋಗ್ರಾಂ ಸಾಮರ್ಥ್ಯವುಳ್ಳ ಒಂದು ಕಾರ್ಬನ್ ಡೈಆಕ್ಸೈಡ್ ನಂದಿಗೆ;

(ಬಿ) ಸಭಾಂಗಣ ಮತ್ತು ಬಾಲ್ಕನಿಯಲ್ಲಿ,-

(i) ಸಭಾಂಗಣದಲ್ಲಿ ಪ್ರತಿಯೊಂದು ಐದು ಕಿಲೋಗ್ರಾಂ ಸಾಮರ್ಥ್ಯವುಳ್ಳ ನಾಲ್ಕು ಎಬಿಸಿ ಪೌಡರ್ ನಂದಿಗೆಗಳು ಮತ್ತು ಬಾಲ್ಕನಿಯು ಇರುವಲ್ಲೆಲ್ಲಾ ಬಾಲ್ಕನಿಯಲ್ಲಿ ಎರಡು ಅಂತಹ ನಂದಿಗೆಗಳು;

(ii) ಸಭಾಂಗಣದಲ್ಲಿ ಉದ್ದದಲ್ಲಿ ಆರು ಮೀಟರುಗಳಿಗಿಂತ ಕಡಿಮೆಯಿಲ್ಲದ ಬಗ್ಗಿಸಬಹುದಾದ ನೀರ್ಕೊಳವೆಗೆ ಲಗತ್ತಿಸಿದ ಎರಡು ರಿಕಾಪು ಪಂಪುಗಳು ಮತ್ತು ಬಾಲ್ಕನಿಯು ಇರುವಲ್ಲೆಲ್ಲಾ ಬಾಲ್ಕನಿಯಲ್ಲಿ ಒಂದು ರಿಕಾಪು ಪಂಪು. ಪ್ರತಿಯೊಂದು ರಿಕಾಪು ಪಂಪಿಗೆ ಯಾವಾಗಲೂ ನೀರು ತುಂಬಿಡಬೇಕಾದ ಪ್ರತಿಯೊಂದು ಹತ್ತು ಲೀಟರು ಸಾಮರ್ಥ್ಯದ ಸಮತಲವುಳ್ಳ ಎರಡು ಚಪ್ಪಟೆ ತಳ ಬಕೆಟುಗಳನ್ನು ಒದಗಿಸತಕ್ಕದ್ದು ಮತ್ತು ಅಗತ್ಯಪಡಿಸಲಾದಂತೆ ಇನ್ ಬಿಲ್ಟ್ ಅಗ್ನಿ ನಂದಿಸುವ ಉಪಕರಣವನ್ನು ಒದಗಿಸತಕ್ಕದ್ದು;

(iii) ಪ್ರತಿಯೊಂದು ಎರಡು ಕಿಲೋಗ್ರಾಂ ಸಾಮರ್ಥ್ಯವುಳ್ಳ ಎರಡು ಕಾರ್ಬನ್ ಡೈಆಕ್ಸೈಡ್ ನಂದಿಗೆಗಳು ಮತ್ತು ಐದು ಕಿಲೋಗ್ರಾಂ ಸಾಮರ್ಥ್ಯವುಳ್ಳ ಒಂದು ಕಾರ್ಬನ್ ಡೈಆಕ್ಸೈಡ್ ನಂದಿಗೆ;

(iv) ನೆಲ ಪ್ರದೇಶದ ಪ್ರತಿ ಒಂದು ನೂರು ಚದರ ಮೀಟರುಗಳು ಅಥವಾ ಅದರ ಭಾಗಕ್ಕಾಗಿ ನೀರು ತುಂಬಿದ ಹತ್ತು ಲೀಟರುಗಳ ಸಾಮರ್ಥ್ಯವುಳ್ಳ ಒಂದು ಅಗ್ನಿಶಾಮಕ ಬಕೆಟ್, ಸಭಾಂಗಣದಲ್ಲಿ ಕನಿಷ್ಠ ಪಕ್ಷ ಹನ್ನೆರಡು ಬಕೆಟುಗಳನ್ನು ಮತ್ತು ಬಾಲ್ಕನಿಯಲ್ಲಿ ಎರಡು ಬಕೆಟಗಳನ್ನು ಇಡತಕ್ಕದ್ದು;

(ಸಿ) ವಿದ್ಯುಚ್ಛಕ್ತಿ ಸ್ಥಾಪನೆಗಳ ಹತ್ತಿರ,-

(i) ಪ್ರತಿಯೊಂದು ಮುಖ್ಯ ಸ್ವಿಚ್ ಫಲಕದ ಹತ್ತಿರದಲ್ಲಿ ಐದು ಕಿಲೋಗ್ರಾಂ ಸಾಮರ್ಥ್ಯವುಳ್ಳ ಒಂದು ಎಬಿಸಿ ಪೌಡರ್ ನಂದಿಗೆಗಳು;

(ii) ವಿದ್ಯುಚ್ಛಕ್ತಿ ಮೀಟರುಗಳು, ರೋಟರಿ ಕನ್ವರ್ಟರುಗಳು ಅಥವಾ ಯಾವುದೇ ಇತರ ವಿದ್ಯುಚ್ಛಕ್ತಿ ಯಂತ್ರ ಸಾಮಗ್ರಿ ಅಥವಾ ಸಲಕರಣೆಯನ್ನು ಸ್ಥಾಪಿಸಿರುವಾಗಲೆಲ್ಲಾ, ಐದು ಕಿಲೋಗ್ರಾಂ ಸಾಮರ್ಥ್ಯವುಳ್ಳ ಒಂದು ಎಬಿಸಿ ಪೌಡರ್ ನಂದಿಗೆಯನ್ನು ಒದಗಿಸತಕ್ಕದ್ದು.

(2) ಎಲ್ಲ ಅಗ್ನಿಶಾಮಕ ಉಪಕರಣಗಳನ್ನು ಉಪಯೋಗಕ್ಕೆ ಸಿದ್ಧವಾಗಿ ಲಭ್ಯವಾಗುವಂಥ ರೀತಿಯಲ್ಲಿ ಇಡತಕ್ಕದ್ದು. ಸಭಾಂಗಣದಲ್ಲಿನ ಅಗ್ನಿಶಾಮಕ ಉಪಕರಣಗಳ ಬಹುಭಾಗವನ್ನು 1.20 ಮೀಟರಿನ ಎತ್ತರದಲ್ಲಿ ಪರದೆಯ ಅಕ್ಕಪಕ್ಕದಲ್ಲಿ ಜೋಡಿಸತಕ್ಕದ್ದು.

(3) ಅಗ್ನಿಶಾಮಕ ಬಕೆಟುಗಳು ದುಂಡನೆಯ ತಳವನ್ನು, ಪ್ರತಿಯೊಂದು ಒಂಭತ್ತು ಲೀಟರುಗಳ ಸಾಮರ್ಥ್ಯವನ್ನು ಹೊಂದಿರತಕ್ಕದ್ದು. ಅವುಗಳಿಗೆ ಸ್ವಚ್ಛ ಒಣ ಮರಳನ್ನು ತುಂಬಿ ಇಂಗ್ಲೀಷ್, ಹಿಂದಿ ಮತ್ತು ಕನ್ನಡದಲ್ಲಿ ದೊಡ್ಡ ಬಿಳಿಯ ಅಕ್ಷರಗಳಲ್ಲಿ “ಈiDe'' ಎಂಬ ಪದವನ್ನು ಕೆಂಪು ಬಣ್ಣದಲ್ಲಿ ಬರೆದಿರತಕ್ಕದ್ದು.

(4) ಸಾಗಿಸಲು ಸುಲಭವಾದ ಎಲ್ಲ ನಂದಿಗೆಗಳನ್ನು ನಿಯತಕಾಲಿಕವಾಗಿ ನಿರ್ವಹಿಸತಕ್ಕದ್ದು ಮತ್ತು ಅಗ್ನಿಶಾಮಕ ಅಧಿಕಾರ ವ್ಯಾಪ್ತಿಯಲ್ಲಿ ಅಥವಾ ಸರ್ಕಾರವು ಈ ಬಗ್ಗೆ ಅಧಿಕೃತಗೊಳಿಸಿದ ಎಂಜಿನಿಯರಿಂಗ್ ಫರ್ಮ್ ಹೈಡ್ರಾಲಿಕ್ ಒತ್ತಡದ ಮೂಲಕ ಒಳಪಡಿಸತಕ್ಕದ್ದು. ಇಪ್ಪತ್ತು ಕಿಲೋಗ್ರಾಂ/ ಎರಡು ಚದರ ಸೆಂಟೀ ಮೀಟರ್ ಒತ್ತಡವನ್ನು ಒಂದು ನಿಮಿಷ ತಡೆದುಕೊಳ್ಳಬಲ್ಲದು ಎಂದು ತೋರಿಸಲು ಮತ್ತು ಅಂತಹ ಪರೀಕ್ಷೆಯ ಪ್ರಮಾಣಪತ್ರವನ್ನು ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ಒಪ್ಪಿಸತಕ್ಕದ್ದು, ಆ ತರುವಾಯ ವಾರ್ಷಿಕವಾಗಿ ಅಂತಹವೇ ಪರೀಕ್ಷೆಗಳನ್ನು ಪುನರಾವರ್ತಿಸತಕ್ಕದ್ದು.

(5) ಸಿನಿಮಾ ಕಟ್ಟಡ ಅಥವಾ ಮಲ್ಟಿಪ್ಲೆಕ್ಸ್‌ನ ಸಿನಿಮಾ ಆಪರೇಟರನ್ನು ಒಳಗೊಂಡು ಸೇವಕರು ಮತ್ತು ಸಿಬ್ಬಂದಿಗೆ ಮೂರು ದಿನಗಳಿಗಿಂತ ಕಡಿಮೆಯಿಲ್ಲದ ಅವಧಿಯವರೆಗೆ ಪ್ರತಿಯೊಬ್ಬರಿಗೂ ರಾಜ್ಯದಲ್ಲಿರುವ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿಯಲ್ಲಿನ ಆವರಣಗಳಲ್ಲಿ ಇಟ್ಟುಕೊಂಡು ಬಂದಿರುವ ಎಲ್ಲ ಅಗ್ನಿಶಾಮಕ ಸಾಧನ ಸಾಮಗ್ರಿಯ ಉಪಯೋಗದಲ್ಲಿ ತರಬೇತಿ ಕೊಡತಕ್ಕದ್ದು.

(6) ಲೈಸೆನ್ಸ್‌ದಾರನು,-

(i) ತಯಾರಿಕೆದಾರರ ತಪಶೀಲುಗಳ ಮೇರೆಗೆ ಮತ್ತು ಜಿಲ್ಲಾ ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಅಗ್ನಿಶಾಮಕ ಅಧಿಕಾರಿಯ ನಿರ್ದೇಶನಗಳ ಮೇರೆಗೆ ಲೈಸೆನ್ಸು ಪಡೆದ ಆವರಣಗಳಲ್ಲಿ ಒದಗಿಸಿದ ಸುಲಭವಾಗಿ ಸಾಗಿಸಬಹುದಾದ ಅಗ್ನಿ ನಂದಿಗೆಯನ್ನು ನಿಯತಕಾಲಿಕವಾಗಿ ನಿರ್ವಹಿಸಿಕೊಂಡು ಬರತಕ್ಕದ್ದು ಮತ್ತು ಅದನ್ನು ಪುನಃ ತುಂಬತಕ್ಕದ್ದು ಮತ್ತು ಹಾಗೆ ಮಾಡಿರುವುದರ ಬಗ್ಗೆ ಕಾಗದದ ಚೀಟಿಯ ಮೇಲೆ ದಿನಾಂಕವನ್ನು ದಾಖಲು ಮಾಡತಕ್ಕದ್ದು ಮತ್ತು ಅದನ್ನು ಅಂತಹ ಸಂಪುಟದ (ಕಂಟೈನರ್) ಹೊರಗಡೆ ಅಂಟಿಸತಕ್ಕದ್ದು;

(ii) ಲೈಸೆನ್ಸ್ ಪಡೆದ ಆವರಣದಲ್ಲಿ ಒದಗಿಸಿದ ಸುಲಭವಾಗಿ ಸಾಗಿಸಬಹುದಾದ ಪ್ರತಿಯೊಂದು ಅಗ್ನಿ ನಂದಿಗೆಯನ್ನು ಪ್ರತಿ ಒಂದು ವರ್ಷಕ್ಕೊಮ್ಮೆ ಅಥವಾ ತಯಾರಿಕೆದಾರನು ನಿರ್ದೇಶಿಸಿದಂತೆ ಮತ್ತು ಜಿಲ್ಲಾ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಗ್ನಿಶಾಮಕ ಅಧಿಕಾರಿಯ ನಿರ್ದೇಶನಗಳಂತೆ ವಿಸರ್ಜಿಸತಕ್ಕದ್ದು ಮತ್ತು ಅದನ್ನು ಪುನಃ ತುಂಬತಕ್ಕದ್ದು ಮತ್ತು ಅಂತಹ ಪುನಃ ತುಂಬಿದ ದಿನಾಂಕವನ್ನು ಸುಲಭವಾಗಿ ಸಾಗಿಸಬಹುದಾದ ಅಗ್ನಿ ನಂದಿಗೆÉಯ ಕಂಟೈನರ್‍ನ ಹೊರಮೈ ಮೇಲೆ ಸೂಕ್ತ ಜಾಗದಲ್ಲಿ ದಾಖಲು ಮಾಡತಕ್ಕದ್ದು.

**76. ಅಗ್ನಿಯ ಬಗ್ಗೆ ಮುನ್ನೆಚ್ಚರಿಕೆ.-** (1) ಬಾಗಿಲುಗಳು ಮತ್ತು ದಾರಿಗಳನ್ನು ಮುಚ್ಚುವ ಎಲ್ಲ ಪರದೆಗಳನ್ನು, ನೆಲದ ಮೇಲೆ ಎಳದಾಡದ ಹಾಗೆ ತೂಗು ಹಾಕತಕ್ಕದ್ದು ಮತ್ತು ಅದರ ಕೆಳತುದಿಯು ನೆಲದ ಮಟ್ಟದ ಮೇಲೆ ಕನಿಷ್ಠ ಪಕ್ಷ ಹತ್ತು ಸೆಂಟಿ ಮೀಟರ್ ಮೇಲೆ ಇರತಕ್ಕದ್ದು, ಪರದೆಗಳು ಅಗ್ನಿ ವಿಲಂಬಕ ನಿವಾರಣೋಪಾಯಗಳೊಂದಿಗೆ ಇರತಕ್ಕದ್ದು.

(2) ಯಾರೇ ಅನಧಿಕೃತ ವ್ಯಕ್ತಿಗೆ ಪ್ರೊಜೆಕ್ಷನ್ ಕೊಠಡಿಯನ್ನು ಪ್ರವೇಶಿಸಲು ಅವಕಾಶ ಕೊಡತಕ್ಕದ್ದಲ್ಲ.

(3) ಇಡೀ ಸಿನಿಮಾ ಥಿಯೇಟರಿನ ಆವರಣಗಳಲ್ಲಿ ಧೂಮಪಾನ, ಆಲ್ಕೋಹಾಲ್ ಬಳಕೆ, ತಂಬಾಕು ಅಥವಾ ಯಾವುದೇ ನಿಷೇದಿತ ವಸ್ತುವಿಗೆ ಇಡೀ ಸಿನಿಮಾ ಥಿಯಟೇರ್ ಆವರಣದಲ್ಲಿ ಅವಕಾಶ ಕೊಡತಕ್ಕದ್ದಲ್ಲ.

(4) ಪ್ರೊಜೆಕ್ಷನ್ ಕೊಠಡಿಯೊಳಕ್ಕೆ ಯಾವುದೇ ದಹ್ಯ ವಸ್ತುವನ್ನು ತೆಗೆದುಕೊಂಡು ಹೋಗತಕ್ಕದ್ದಲ್ಲ ಅಥವಾ ಅದರಲ್ಲಿ ಉಳಿಯಲು ಅವಕಾಶ ಕೊಡತಕ್ಕದ್ದಲ್ಲ.

(5) ಚಲನಚಿತ್ರ ಪ್ರೊಜೆಕ್ಟರುಗಳಿಗೆ ದೃಢವಾದ ರಚನೆಯ ಎರಡು ಲೋಹದ ಫಿಲ್ಮಂ ಪೆಟ್ಟಿಗೆಗಳೊಂದಿಗೆ ಜೋಡಿಸತಕ್ಕದ್ದು, ಅದಕ್ಕೆ ಮತ್ತು ಅದರಿಂದ ಫಿಲ್ಮಂ ಹೋಗುವಂತೆ ಮತ್ತು ಬರುವಂತೆ ಮಾಡತಕ್ಕದ್ದು:

ಪರಂತು, ಡಿಜಿಟಲ್ ಪ್ರೊಜೆಕ್ಟರ್, ಡಿಜಿಟಲ್ ಶಬ್ದ ವ್ಯವಸ್ಥೆಯಂಥ ಮುಂದುವರೆದ ತಂತ್ರಜ್ಞಾನದಲ್ಲಿ ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್ ಇರುವ ಸಂದರ್ಭದಲ್ಲಿ, ಈ ಸಂಬಂಧ ಅಗತ್ಯ ಉಪಕರಣವನ್ನು ಬಳಸತಕ್ಕದ್ದು.

(6) ಫಿಲ್ಮು ಪೆಟ್ಟಿಗೆಗಳಿಗೆ, ಪೆಟ್ಟಿಗೆಯ ಒಳಕ್ಕೆ ಜ್ವಾಲೆ ಹೋಗುವುದನ್ನು ತಡೆಗಟ್ಟುವ ಹಾಗೆ ರಚಿಸಿದ ಫಿಲ್ಮ್ ಸ್ಲಾಟ್‌ನೊಂದಿಗೆ ಜೋಡಿಸತಕ್ಕದ್ದು.

(7) ಫಿಲ್ಮುಗಳನ್ನು, ಚಲನಚಿತ್ರ ಸುರುಳಿ ಪಕ್ಕ ಪಟ್ಟಿಗಳ ಅಂಚುಗಳಾಚೆ ಸುತ್ತಿದ ಫಿಲ್ಮು ಯಾವುದೇ ಸಮಯದಲ್ಲಿ ಹೋಗದ ಅಥವಾ ಮುಂಚಾಚದ ರೀತಿಯಲ್ಲಿ ಅಂತಹ ಚಲನಚಿತ್ರದ ಸುರುಳಿಗಳ ಮೇಲೆ ಒಂದು ಸುರಳಿ ಸುತ್ತತಕ್ಕದ್ದು, ಫಿಲ್ಮುಗಳ ರಿವೈಂಡಿಂಗನ್ನು ರಿವೈಂಡಿಂಗ್ ರೂಮು ಅಥವಾ ಆವರಣದಲ್ಲಿ ಮಾತ್ರ ನಡೆಸತಕ್ಕದ್ದು:

ಪರಂತು, ಡಿಜಿಟಲ್ ಪ್ರೊಜೆಕ್ಟರ್, ಡಿಜಿಟಲ್ ಶಬ್ದ ವ್ಯವಸ್ಥೆಯಂಥ ಮುಂದುವರೆದ ತಂತ್ರಜ್ಞಾನದಲ್ಲಿ ಸಂದರ್ಭದಲ್ಲಿ, ರಿವೈಂಡಿಂಗ್ ರೂಮು ಕಡ್ಡಾಯವಾಗತಕ್ಕದ್ದಲ್ಲ.

(8) ಮುಚ್ಚಿದ ಲೋಹ ಪೆಟ್ಟಿಗೆಗಳನ್ನು ದಾಸ್ತಾನು ಮಾಡುವುದಕ್ಕಾಗಿ ತುಂಬದ ಪೆಟ್ಟಿಗೆಯನ್ನು ಒದಗಿಸತಕ್ಕದ್ದು, ಫಿಲ್ಮುಗಳನ್ನು ಪ್ರತ್ಯೇಕ ದಾಸ್ತಾನು ಕೊಠಡಿಯಲ್ಲಿ ದಾಸ್ತಾನು ಮಾಡತಕ್ಕದ್ದು ಮತ್ತು ಪ್ರೊಜೆಕ್ಷನ್ ಕೊಠಡಿಯಲ್ಲಿ ದಾಸ್ತಾನು ಮಾಡತಕ್ಕದ್ದಲ್ಲ.

(9) ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್‌ನಲ್ಲಿ ಜಮಖಾನೆಗಳನ್ನು ಹಾಸಿದ್ದರೆ, ಅವುಗಳು ಅಗ್ನಿ ನಿರೋಧಕ ಸಾಮಗ್ರಿಯದಾಗಿರತಕ್ಕದ್ದು ಮತ್ತು ಅವುಗಳ ಅಂಚುಗಳು ಸುತ್ತಿಕೊಳ್ಳದಂತೆ ಅಥವಾ ಮಡಚಿಕೊಳ್ಳದಂತೆ ನೆಲಕ್ಕೆ ಭದ್ರವಾಗಿ ಜೋಡಿಸತಕ್ಕದ್ದು. ಚಾಪೆಗಳನ್ನು ಉಪಯೋಗಿಸಿದರೆ, ಅವುಗಳು ಅಗ್ನಿ ನಿರೋಧಕ ಸಾಮಗ್ರಿಯದ್ದಾಗಿರತಕ್ಕದ್ದು ಮತ್ತು ಅವುಗಳನ್ನು ಚಾಪೆಯ ಗಾತ್ರವನ್ನು ಮೀರದ ಮತ್ತು ಚಾಪೆಯ ದಪ್ಪಕ್ಕಿಂತ ಆಳವಲ್ಲದ ತಗ್ಗಿನಲ್ಲಿ ನೆಲದೊಳಕ್ಕೆ ಬಿಡತಕ್ಕದ್ದು,

(10) ವಿದ್ಯುತ್ ಸ್ವಿಚ್ಚುಗಳನ್ನು ಟಿಕೆಟ್ ಬೂತುಗಳಲ್ಲಿ ಸ್ಥಾಪಿಸಿದ್ದರೆ, ಅವುಗಳನ್ನು ಸರಿಯಾಗಿ ಮುಚ್ಚುವುದರ ಮೂಲಕ ಸಾರ್ವಜನಿಕರಿಗೆ ನಿಲುಕದಂತೆ ಮಾಡತಕ್ಕದ್ದು.

## ಅಧ್ಯಾಯ – X

## ಖಾಯಂ ಸಿನಿಮಾಗಳು ಮತ್ತು ಮಲ್ಟಿಪ್ಲೆಕ್ಸ್‌ನ ಸಂಬಂಧದಲ್ಲಿ ಆವರಣದ ನಿರ್ವಹಣೆ

**77. ಸ್ವಚ್ಛತೆಯ ನಿರ್ವಹಣೆ ಇತ್ಯಾದಿ.- ಲೈಸೆನ್ಸ್‌ದಾರನು,-**

(1) ಕಟ್ಟಡದಲ್ಲಿನ ಎಲ್ಲ ಕಿಟಕಿಗಳು ಮತ್ತು ವಾಯುಸಂಚಾರದ ಇತರ ಸಾಧನಗಳನ್ನು ಸುಸ್ಥಿತಿಯಲ್ಲಿಟ್ಟುಕೊಂಡಿರುವಂತೆ;

(2) ಅಂತಹ ಕಟ್ಟಡ ಅಥವಾ ಸ್ಥಳದ ಪ್ರತಿಯೊಂದು ಭಾಗವನ್ನು ಸರಿಯಾದ ನೈರ್ಮಲ್ಯ ಸ್ಥಿತಿಗಳಲ್ಲಿ ಇಟ್ಟುಕೊಂಡಿರುವಂತೆ;

(3) ಕಟ್ಟಡದ ಗೋಡೆಗಳಿಗೆ ಕನಿಷ್ಠ ಪಕ್ಷ ಪ್ರತಿ ಆರು ತಿಂಗಳಿಗೊಂದು ಸಲ ಸುಣ್ಣ ಬಳಿಸುವಂತೆ ಅಥವಾ ಪ್ರತಿ ಎರಡು ವರ್ಷಗಳಿಗೊಂದು ಸಲ ಬಣ್ಣ ಬಳಿಸುವಂತೆ ಅಥವಾ ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಅಥವಾ ಇತರ ಸಕ್ಷಮ ಪೌರ ಅಥವಾ ಆರೋಗ್ಯ ಪ್ರಾಧಿಕಾರಿಯು ಹಾಗೆ ಅಗತ್ಯಪಡಿಸಿದರೆ ಮೇಲಿಂದ ಮೇಲೆ ಬಣ್ಣ ಬಳಿಸುವಂತೆ;

(4) ಆವರಣವನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸುವಂತೆ ಮತ್ತು ಪ್ರತಿಯೊಂದು ಪ್ರದರ್ಶನದ ತರುವಾಯ ತೆಗೆದುಹಾಕಬೇಕಾದ ಎಲ್ಲ ಬೇಡದ ವಸ್ತುಗಳನ್ನು ಅಥವಾ ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಅಥವಾ ಇತರ ಸಕ್ಷಮ ಪೌರ ಅಥವಾ ಆರೋಗ್ಯ ಪ್ರಾಧಿಕಾರಿಯು ಹಾಗೆ ಅಗತ್ಯಪಡಿಸಿದರೆ ಮೇಲಿಂದ ಮೇಲೆ ಎಲ್ಲ ಕಸಕುಪ್ಪೆ ವಸ್ತುಗಳನ್ನು ತೆಗೆದುಹಾಕುವಂತೆ; ಮತ್ತು

(5) ಫ್ಯಾನುಗಳು, ಗಾಜುಗಳು ಮತ್ತು ಷೇಡುಗಳು ಮುಂತಾದವುಗಳಂಥ ವಿದ್ಯುತ್ ಸಾಧನ ಸಾಮಗ್ರಿಗಳನ್ನು ನಿಯತ ಕಾಲಿಕವಾಗಿ ಸ್ವಚ್ಛಗೊಳಿಸುವಂತೆ ಮತ್ತು ಅಂದವಾದ ಸ್ಥಿತಿಯಲ್ಲಿಡುವಂತೆ

- ಮಾಡತಕ್ಕದ್ದು.

**78. ಧೂಮಪಾನ ನಿಷೇಧ.-** ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್ ಆವರಣದಲ್ಲಿ ಯಾರೇ ವ್ಯಕ್ತಿಯು ಧೂಮಪಾನ ಮಾಡತಕ್ಕದ್ದಲ್ಲ ಮತ್ತು ಯಾರೇ ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್‌ನ ಲೈಸೆನ್ಸ್‌ಧಾರಕನು ಅಥವಾ ಆತನ ನಾಮನಿರ್ದೇಶಿತ ವ್ಯವಸ್ಥಾಪಕ ಅಥವಾ ವ್ಯವಸ್ಥಾಪಕರು ಇಡೀ ಸಿನಿಮಾ ಥಿಯೇಟರಿನ ಆವರಣದಲ್ಲಿ ಧೂಮಪಾನ ನಿಷೇದಿಸಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

**79. ಸ್ವಚ್ಚತೆ ಮತ್ತು ನೈರ್ಮಲ್ಯವನ್ನು ಕಾಪಾಡುವುದು.**- ಲೈಸೆನ್ಸ್‌ದಾರನು ಅಥವಾ ಆತನ ವ್ಯವಸ್ಥಾಪಕನು ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್ ಆವರಣಗಳಲ್ಲಿ ಸ್ವಚ್ಚತೆ ಮತ್ತು ನೈರ್ಮಲ್ಯವನ್ನು ಕಾಪಾಡಿಕೊಂಡುಬರಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಆವರಣದಲ್ಲಿ ಉಗುಳುವುದು ಮತ್ತು ಇತರ ರೀತಿಗಳ ಮಾಲಿನ್ಯವನ್ನು ತಡೆಗಟ್ಟಲಾಗಿದೆಯೇ ಎಂಬುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

**80. ತಿರುಗು ವ್ಯಾಪಾರದ ನಿಷೇಧ.-** ಯಾರೇ ವ್ಯಕ್ತಿಯು ಆಟ ಅಥವಾ ಪ್ರದರ್ಶನ ಅಥವಾ ಆಟ ಅಥವಾ ಪ್ರದರ್ಶನದ ಮಧ್ಯಂತರ ಸಮಯದಲ್ಲಿ ಮತ್ತು ಯಾರೇ ಲೈಸೆನ್ಸ್‌ದಾರನು ಅಥವಾ ಆತನ ನಾಮನಿರ್ದೇಶಿತನು ಆಟ ಅಥವಾ ಪ್ರದರ್ಶನದ ಅವಧಿಯಲ್ಲಿ ಅಥವಾ ಆಟ ಅಥವಾ ಪ್ರದರ್ಶನದ ಮಧ್ಯಂತರ ಕಾಲದಲ್ಲಿ ಯಾರೇ ವ್ಯಕ್ತಿಗೆ,-

(1) ಸಭಾಂಗಣದಲ್ಲಿ ತಿರುಗಿಕೊಂಡು ವ್ಯಾಪಾರ ಮಾಡಲು; ಅಥವಾ

(2) ಸಭಾಂಗಣದಲ್ಲಿಯೇ ಪ್ರೇಕ್ಷಕ ವರ್ಗದ ಯಾರೇ ಸದಸ್ಯನಿಗೆ ಯಾವುದೇ ತಿಂಡಿ ತಿನಿಸು ಅಥವಾ ಪಾನೀಯಗಳನ್ನು ಮಾರಾಟ ಮಾಡಲು ಅಥವಾ ಸರಬರಾಜು ಮಾಡಲು; ಅಥವಾ

(3) ಸಭಾಂಗಣದಲ್ಲಿಯೇ ಪ್ರೇಕ್ಷಕ ವರ್ಗದ ಯಾರೇ ಸದಸ್ಯನಿಗೆ ಯಾವುದೇ ವಸ್ತುಗಳನ್ನು ಅಥವಾ ಪದಾರ್ಥವನ್ನು ಪ್ರತಿಫಲಕ್ಕಾಗಿಯೇ ಆಗಲಿ ಅಥವಾ ಅಗಿಲ್ಲದೆಯೇ ಆಗಲಿ ವಿತರಿಸಲು ಅಥವಾ ಮಾರಾಟ ಮಾಡಲು

- ಅವಕಾಶ ಕೊಡತಕ್ಕದ್ದಲ್ಲ.

**81. ಮಿತಿಮೀರಿದ ಜನಸಂದಣಿ ನಿಷೇಧ.-** ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್‌ನ ಯಾರೇ ಲೈಸೆನ್ಸ್‌ದಾರನು ಸಭಾಂಗಣದ ಯಾವುದೇ ಭಾಗಕ್ಕೆ ಅಂತಹ ಭಾಗದಲ್ಲಿ ಆ ಸ್ಥಳಾವಕಾಶ ಒದಗಿಸಲು ಲೈಸೆನ್ಸ್‌ನಲ್ಲಿ ಅಧಿಕೃತಗೊಳಿಸಿದ ಗರಿಷ್ಠ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯ ವ್ಯಕ್ತಿಗಳನ್ನು ಸೇರಿಸತಕ್ಕದ್ದಲ್ಲ. ಈ ಗರಿಷ್ಠತೆಯು ಮೀರಿಲ್ಲವೆಂಬುದನ್ನು ನಿಶ್ಚಿತಪಡಿಸಿಕೊಳ್ಳುವುದಕ್ಕಾಗಿ ಮತ್ತು ಇನ್ನೂ ವಿಶೇಷವಾಗಿ ಯಾವುದೇ ಸಮಯದಲ್ಲಿ ಸಕ್ಷಮ ಪ್ರಾಧಿಕಾರಿಯು ಪರಿಶೀಲಿಸಲು ಸಾಧ್ಯವಾಗುವಂತೆ ಲೈಸೆನ್ಸ್‌ದಾರನು ಪ್ರತಿಗಳು ಮತ್ತು ಪಕ್ಕ ಪ್ರತಿಗಳ ಮೇಲೆ ಕ್ರಮ ಸಂಖ್ಯೆಗಳು ಮತ್ತು ಪ್ರದರ್ಶನದ ದಿನಾಂಕ ಮತ್ತು ಸಂಖ್ಯೆಯನ್ನು ಹೊಂದಿರುವ ಟಿಕೇಟುಗಳನ್ನು ಕೊಡತಕ್ಕದ್ದು. ಪ್ರತಿಯೊಂದು ಪ್ರದರ್ಶನದ ತರುವಾಯ, ಟಿಕೆಟ್ ಪುಸ್ತಕಗಳಲ್ಲಿ ಕೊಟ್ಟ ಕೊನೆಯ ಪಕ್ಕ ಪ್ರತಿಯ ಮೇಲೆ 'ಮುಕ್ತಾಯವಾಗಿದೆ' ಎಂದು ಗುರುತು ಮಾಡತಕ್ಕದ್ದು.

**82. ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್‌ನ ಆಪರೇಟರುಗಳ ಕರ್ತವ್ಯ ಇತ್ಯಾದಿ.-** ಪ್ರೊಜೆಕ್ಟಿಂಗ್ ಸಲಕರಣೆ, ವಿದ್ಯುಚ್ಛಕ್ತಿ ಸ್ಥಾಪನೆಗಳು ಮತ್ತು ಸ್ಥಿರ ಯಂತ್ರ ಮತ್ತು ಎಂಜಿನ್ ಕೊಠಡಿಗಳು (ಯಾವುವಾದರೂ ಇದ್ದರೆ). ಅವುಗಳ ಪ್ರಭಾರದಲ್ಲಿರುವ ವ್ಯಕ್ತಿಗಳು ಪ್ರತಿಯೊಂದು ಪ್ರದರ್ಶನವು ಪ್ರಾರಂಭವಾಗುವುದಕ್ಕೆ ಮುಂಚೆ ಅವರ ಅನುಕ್ರಮ ಪ್ರಭಾರದಲ್ಲಿರುವ ಡಿಜಿಟಲ್ ವ್ಯವಸ್ಥೆಯಂಥ ಮುಂದುವರೆದ ತಂತ್ರಜ್ಞಾನವನ್ನು ಒಳಗೊಂಡು, ಸಲಕರಣೆಗಳು ಅಥವಾ ಸ್ಥಿರ ಯಂತ್ರವು ಕೆಲಸ ಮಾಡುವ ಸ್ಥಿತಿಯಲ್ಲಿದೆ ಎಂದು ಆತನು ಸ್ವತಃ ಮನದಟ್ಟು ಮಾಡಿಕೊಳ್ಳತಕ್ಕದ್ದು.

**83. ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡವನ್ನು ಯಾವುದೇ ಇತರೆ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ.-** ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್‌ನ ಕಟ್ಟಡವನ್ನು ಲೈಸೆನ್ಸ್ ನೀಡುವ ಪ್ರಾಧಿಕಾರಿಯ ಬರಹದಲ್ಲಿನ ಪೂರ್ವಾನುಮತಿಯ ಹೊರತು ಚಲನಚಿತ್ರ ಫಿಲ್ಮ್‌ಗಳ ಪ್ರದರ್ಶನಕ್ಕಾಗಿ ಅಲ್ಲದೆ ಯಾವುದೇ ಇತರ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ:

ಪರಂತು, ಸಿನಿಮಾ ಥಿಯೇಟರು ಮತ್ತು ಟಿಕೇಟು ನೀಡುವ ಕಿಟಕಿಗಳಿಗೆ ಲಗತ್ತಾದ ಪ್ರೊಜೆಕ್ಟರ್ ಕೊಠಡಿ, ಶೌಚಾಲಯಗಳು, ಪ್ರವೇಶದ್ವಾರ/ ಹೊರಗೆ ಹೋಗುವ ಮೊಗಸಾಲೆಗಳು/ ನಡೆವೆಗಳು/ ಆಹಾರ ಅಂಗಡಿಗಳು/ ಕಾಫಿ ಅಂಗಡಿಗಳು/ ಉಪಾಹಾರ ಗೃಹಗಳಂಥ ಎಲ್ಲ ಪೂರಕ ಉಪಯೋಗಗಳಿಗಾಗಿನ ಪ್ರದೇಶಗಳನ್ನು ಒಳಗೊಂಡು ಸಿನಿಮಾ ಥಿಯೇಟರು ಮತ್ತು ಸಭಾಂಗಣದ ಉದ್ದೇಶಕ್ಕಾಗಿ ಬಳಸಿಕೊಳ್ಳಲಾದ ಖಾಯಂ ಕಟ್ಟಡದ ಭಾಗವಾಗಿರುವ ಮಲ್ಟಿಪ್ಲೆಕ್ಸ್ ಕಾಂಪ್ಲೆಕ್ಸ್‌ನ ಸಂದರ್ಭದಲ್ಲಿ, ಈ ನಿಯಮದ ಅನ್ವಯಕ್ಕಾಗಿ ಮಾತ್ರ ಪರಿಗಣಿಸತಕ್ಕದ್ದು.

**84. ಸ್ಲಾಟ್ ಯಂತ್ರದ ನಿಷೇಧ.-** ಯಾವುದೇ ಸ್ಲಾಟ್ ಅಥವಾ ಮನೋರಂಜನಾ ಯಂತ್ರವನ್ನು, ಲೈಸೆನ್ಸ್ ನೀಡುವ ಪ್ರಾಧಿಕಾರಿಯ ಲಿಖಿತದಲ್ಲಿನ ಅನುಮತಿಯ ಹೊರತು ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್‌ನಲ್ಲಿ ನಡೆಸತಕ್ಕದ್ದಲ್ಲ. ಸ್ಥಳೀಯ ಪ್ರಾಧಿಕಾರದೊಂದಿಗೆ ಸಮಾಲೋಚಿಸಿದ ತರುವಾಯ ಅದನ್ನು ನಿರ್ಧರಿಸತಕ್ಕದ್ದು:

ಪರಂತು, ಸಿಹಿ ತಿಂಡಿಗಳು, ಕಾಫಿ, ಟೀ, ತಿಂಡಿಗಳಂಥ ವಸ್ತುಗಳ ಮಾರಾಟಕ್ಕಾಗಿ ಮತ್ತು ಮಾದಕವಲ್ಲದ ಪಾನೀಯಗಳನ್ನು ಮಾರುವ ಯಂತ್ರಗಳಿಗಾಗಿ ಅಥವಾ ತೂಕದ ದಾಖಲಾತಿಗಾಗಿ ಅಥವಾ ಟಿಕೇಟುಗಳನ್ನು ಕೊಡುವುದಕ್ಕಾಗಿ ಅಂತಹ ಅನುಮತಿಯನ್ನು ಅಗತ್ಯಪಡಿಸತಕ್ಕದ್ದಲ್ಲ.

## ಅಧ್ಯಾಯ –XI

## ಖಾಯಂ ಸಿನಿಮಾಗಳು ಮತ್ತು ಮಲ್ಟಿಪ್ಲೆಕ್ಸ್‌ನ ಸಂಬಂಧದಲ್ಲಿ ಲೈಸೆನ್ಸ್‌ಗಳ ಮರು ಮಂಜೂರಾತಿ

**85. ಮರು ಮಂಜೂರಾತಿಗಾಗಿ ಅರ್ಜಿ.**- (1) (i) ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್‌ಗೆ ಲೈಸೆನ್ಸ್‌ನ ಮರು ಮಂಜೂರಾತಿಗಾಗಿ ಪ್ರತಿಯೊಂದು ಅರ್ಜಿಯನ್ನು, ಲೈಸೆನ್ಸ್ ಮುಕ್ತಾಯವಾಗುವುದಕ್ಕೆ ಒಂದು ತಿಂಗಳ ಮುಂಚಿತವಾಗಿ ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ಸಲ್ಲಿಸತಕ್ಕದ್ದು. ಅಂತಹ ಅರ್ಜಿಯು,-

(i) 35ನೇ ನಿಯಮದ (i)ನೇ, (ii)ನೇ, (iii)ನೇ ಮತ್ತು (iv)ನೇ ಖಂಡಗಳಲ್ಲಿ ಉಲ್ಲೇಖಿಸಿದ ಪ್ರಮಾಣಪತ್ರಗಳು ಮತ್ತು (v)ನೇ ಖಂಡಗಳಲ್ಲಿ ಉಲ್ಲೇಖಿಸಿದ ಘೋಷಣೆ;

(ii) 87ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ದರಗಳಲ್ಲಿ ಫೀಜುಗಳನ್ನು ಸಂದಾಯ ಮಾಡಿದ ಬಗ್ಗೆ ಸಾಕ್ಷ್ಯವಾಗಿರುವ ಖಜಾನೆ ಚಲನ್ ಅನ್ನು;

(iii) ಸಿನಿಮಾ ಕಟ್ಟಡದ ಸಂಬಂಧದಲ್ಲಿ ಬಾಡಿಗೆಯನ್ನು ತಹಲ್‌ವರೆಗೆ ಸಂದಾಯ ಮಾಡಿರುವ ಮತ್ತು ಅಂತಹ ಕಟ್ಟಡ ಇರುವ ಅಂತಹ ಭೂಮಿಯನ್ನು ರಾಜ್ಯ ಸರ್ಕಾರ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರದಿಂದ ಗುತ್ತಿಗೆಯ ಮೇಲೆ ಪಡೆದಿರುವ ಸಂದರ್ಭದಲ್ಲಿ ಸಕ್ಷಮ ಪ್ರಾಧಿಕಾರವು ನೀಡಿದ ಪ್ರಮಾಣಪತ್ರ

- ಇವುಗಳೊಂದಿಗೆ ಲಗತ್ತಾಗಿರತಕ್ಕದ್ದು.

(2) (1)ನೇ ಉಪ-ನಿಯಮದ ಮೇರೆಗೆ ಪ್ರಮಾಣಪತ್ರವನ್ನು ನೀಡುವುದಕ್ಕಾಗಿ ಸಂದಾಯ ಮಾಡಲಾದ ಫೀಜಗಳ ಖಜಾನೆ ಚಲನ್ ಹಾಗೂ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದ ಫೀಜುಗಳೊಂದಿಗೆ ಲಗತ್ತು ಮಾಡಿ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರಿಗೆ ಅರ್ಜಿಯ ಪ್ರತಿಯನ್ನು ಕಳುಹಿಸತಕ್ಕದ್ದು. ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡವಾಗಲಿ ಈ ನಿಯಮಗಳ ಅಗತ್ಯತೆಗಳನ್ನು ಪೂರೈಸಿರುವವೆಂಬ ಬಗ್ಗೆ ಪರಿಶೀಲಿಸತಕ್ಕದ್ದು ಮತ್ತು ಲೈಸೆನ್ಸ್ ನೀಡುವ ಪ್ರಾಧಿಕಾರಕ್ಕೆ ವರದಿ ಮಾಡತಕ್ಕದ್ದು. ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡವು ಈ ನಿಯಮಗಳ ಅಗತ್ಯತೆಗಳನ್ನು ಪೂರೈಸಿರುವವೆಂದು ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರಿಗೆ ಮನದಟ್ಟಾದರೆ, ಆತನು ಅರ್ಜಿಯನ್ನು ಸ್ವೀಕರಿಸಿದ ತರುವಾಯ 15 ದಿನಗಳೊಳಗೆ ಪ್ರಮಾಣಪತ್ರವನ್ನು ನೀಡತಕ್ಕದ್ದು. ಆದಾಗ್ಯೂ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು, ಅದರಲ್ಲಿ ಯಾವುದೇ ನ್ಯೂನತೆಯನ್ನು ಕಂಡುಹಿಡಿದರೆ, ಆತನು ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ಅದನ್ನು ಲಿಖಿತದಲ್ಲಿ ವರದಿ ಮಾಡತಕ್ಕದ್ದು. ಆ ತರುವಾಯ ಕೂಡಲೇ ಅವುಗಳನ್ನು ಸರಿಪಡಿಸುವುದಕ್ಕಾಗಿ ಮಾಲೀಕನಿಗೆ ಲಿಖಿತದಲ್ಲಿ ನೋಟೀಸನ್ನು ನೀಡತಕ್ಕದ್ದು ಮತ್ತು ಯಾವ ಕಾಲದೊಳಗೆ ಅಂತಹ ಸರಿಪಡಿಸುವಿಕೆಯನ್ನು ಕಾರ್ಯಗತಗೊಳಿಸತಕ್ಕದ್ದೋ ಆ ಕಾಲದೊಳಗೆ ಸೂಕ್ತ ಕಾಲವನ್ನು ನಿರ್ದಿಷ್ಟಪಡಿಸತಕ್ಕದ್ದು. ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಂತಹ ನೋಟೀಸಿನ ನಿಬಂಧನೆಗಳನ್ನು ಪಾಲಿಸಲು ಲೈಸೆನ್ಸ್‌ದಾರನು ತಪ್ಪಿದ ತರುವಾಯ, ಲೈಸೆನ್ಸನ್ನು ನೀಡುವ ಪ್ರಾಧಿಕಾರಿಯು, ಲೈಸೆನ್ಸ್‌ದಾರನು ಅಂತಹ ಸರಿಪಡಿಸುವಿಕೆಗಳನ್ನು ಮಾಡುವವರೆಗೆ, ಸಂದರ್ಭಾನುಸಾರ ಅಸ್ತಿತ್ವದಲ್ಲಿರುವ ಲೈಸೆನ್ಸ್‌ನ್ನು ತಡೆಹಿಡಿಯತಕ್ಕದ್ದು ಅಥವಾ ರದ್ದುಪಡಿಸತಕ್ಕದ್ದು ಅಥವಾ ಮರುಮಂಜೂರಾತಿ ಮಾಡತಕ್ಕದ್ದಲ್ಲ:

ಪರಂತು, ಯಾವುದೇ ಸಿನಿಮಾ ಥಿಯೇಟರ್ ಅಥವಾ ಮಲ್ಟಿಪ್ಲೆಕ್ಸ್ ಈ ನಿಯಮಗಳ ಅಗತ್ಯತೆಗಳನ್ನು ಪೂರೈಸದೇ ಇರುವ ಸಂದರ್ಭದಲ್ಲಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು ಐದು ವರ್ಷಗಳವರೆಗೆ ಪ್ರಮಾಣಪತ್ರವನ್ನು ನೀಡುವ ಅರ್ಜಿಯನ್ನು ತಿರಸ್ಕರಿಸಬಹುದು ಅಥವಾ ಲಿಖಿತದಲ್ಲಿ ದಾಖಲುಮಾಡಬೇಕಾದ ಕಾರಣಗಳಿಗಾಗಿ ಪ್ರಮಾಣಪತ್ರದ ಆ ಅವಧಿಯನ್ನು ಕಡಿಮೆ ಮಾಡಬಹುದು ಮತ್ತು ಅರ್ಜಿದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ಕೊಟ್ಟ ತರುವಾಯ, ಇದಕ್ಕಾಗಿನ ಕಾರಣಗಳನ್ನು ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ತಿಳಿಸತಕ್ಕದ್ದು.

(3) (1)ನೇ ಉಪನಿಯಮದ ಮೇರೆಗೆ ಪ್ರಮಾಣಪತ್ರವನ್ನು ನೀಡುವುದಕ್ಕಾಗಿ ಸಂದಾಯ ಮಾಡಲಾದ ಫೀಜಗಳ ಖಜಾನೆ ಚಲನ್ ಹಾಗೂ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದ ಫೀಜುಗಳೊಂದಿಗೆ ಲಗತ್ತು ಮಾಡಿ ವಿದ್ಯುಚ್ಛಕ್ತಿ ಪರಿಶೀಲಕನಿಗೆ ಅರ್ಜಿಯ ಪ್ರತಿಯನ್ನು ಕಳುಹಿಸತಕ್ಕದ್ದು. ವಿದ್ಯುಚ್ಛಕ್ತಿ ಪರಿಶೀಲಕನು ವಿದ್ಯುತ್ ಅನುಷ್ಠಾಪನೆಗಳ ಸ್ಥಾಪನೆಗಳ ಬಗ್ಗೆ ಈ ನಿಯಮಗಳ ಅಗತ್ಯತೆಗಳನ್ನು ಪೂರೈಸಿರುವವೆಂಬ ಬಗ್ಗೆ ಪರಿಶೀಲಿಸತಕ್ಕದ್ದು ಮತ್ತು ಲೈಸೆನ್ಸ್ ನೀಡುವ ಪ್ರಾಧಿಕಾರಕ್ಕೆ ವರದಿಮಾಡತಕ್ಕದ್ದು. ವಿದ್ಯುತ್ ಅನುಷ್ಠಾಪನೆಯ ಬಗ್ಗೆ ಈ ನಿಯಮಗಳ ಅಗತ್ಯತೆಗಳನ್ನು ಪೂರೈಸಿರುವವೆಂದು ವಿದ್ಯುಚ್ಛಕ್ತಿ ಪರಿಶೀಲಕನಿಗೆ ಮನದಟ್ಟಾದರೆ, ಆತನು ಅರ್ಜಿಯನ್ನು ಸ್ವೀಕರಿಸಿದ ತರುವಾಯ 15 ದಿನಗಳೊಳಗೆ ಪ್ರಮಾಣಪತ್ರವನ್ನು ನೀಡತಕ್ಕದ್ದು. ಆದಾಗ್ಯೂ, ವಿದ್ಯುಚ್ಛಕ್ತಿ ಪರಿಶೀಲಕನು, ಅದರಲ್ಲಿ ಯಾವುದೇ ನ್ಯೂನತೆಯನ್ನು ಕಂಡುಹಿಡಿದರೆ, ಆತನು ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ಅದನ್ನು ಲಿಖಿತದಲ್ಲಿ ವರದಿ ಮಾಡತಕ್ಕದ್ದು. ಆ ತರುವಾಯ ಕೂಡಲೇ ಅವುಗಳನ್ನು ಸರಿಪಡಿಸುವುದಕ್ಕಾಗಿ ಮಾಲೀಕನಿಗೆ ಲಿಖಿತದಲ್ಲಿ ನೋಟೀಸನ್ನು ನೀಡತಕ್ಕದ್ದು ಮತ್ತು ಯಾವ ಕಾಲದೊಳಗೆ ಅಂತಹ ಸರಿಪಡಿಸುವಿಕೆಯನ್ನು ಕಾರ್ಯಗತಗೊಳಿಸತಕ್ಕದ್ದೋ ಆ ಕಾಲದೊಳಗೆ ಸೂಕ್ತ ಕಾಲವನ್ನು ನಿರ್ದಿಷ್ಟಪಡಿಸತಕ್ಕದ್ದು. ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಂತಹ ನೋಟೀಸಿನ ನಿಬಂಧನೆಗಳನ್ನು ಪಾಲಿಸಲು ಲೈಸೆನ್ಸ್‌ದಾರನು ತಪ್ಪಿದ ತರುವಾಯ, ಲೈಸೆನ್ಸನ್ನು ನೀಡುವ ಪ್ರಾಧಿಕಾರಿಯು, ಲೈಸೆನ್ಸ್‌ದಾರನು ಅಂತಹ ಸರಿಪಡಿಸುವಿಕೆಗಳನ್ನು ಮಾಡುವವರೆಗೆ, ಸಂದರ್ಭಾನುಸಾರ ಅಸ್ತಿತ್ವದಲ್ಲಿರುವ ಲೈಸೆನ್ಸ್‌ನ್ನು ತಡೆಹಿಡಿಯತಕ್ಕದ್ದು ಅಥವಾ ರದ್ದುಪಡಿಸತಕ್ಕದ್ದು ಅಥವಾ ಮರುಮಂಜೂರಾತಿ ಮಾಡತಕ್ಕದ್ದಲ್ಲ:

ಪರಂತು, ಯಾವುದೇ ಸಿನಿಮಾ ಥಿಯೇಟರ್ ಅಥವಾ ಮಲ್ಟಿಪ್ಲೆಕ್ಸ್ ಈ ನಿಯಮಗಳ ಅಗತ್ಯತೆಗಳನ್ನು ಪೂರೈಸದೇ ಇರುವ ಸಂದರ್ಭದಲ್ಲಿ, ವಿದ್ಯುಚ್ಛಕ್ತಿ ಪರಿಶೀಲಕನು ಐದು ವರ್ಷಗಳವರೆಗೆ ಪ್ರಮಾಣಪತ್ರವನ್ನು ನೀಡುವ ಅರ್ಜಿಯನ್ನು ತಿರಸ್ಕರಿಸಬಹುದು ಅಥವಾ ಲಿಖಿತದಲ್ಲಿ ದಾಖಲುಮಾಡಬೇಕಾದ ಕಾರಣಗಳಿಗಾಗಿ ಪ್ರಮಾಣಪತ್ರದ ಆ ಅವಧಿಯನ್ನು ಕಡಿಮೆ ಮಾಡಬಹುದು ಮತ್ತು ಅರ್ಜಿದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ಕೊಟ್ಟ ತರುವಾಯ, ಇದಕ್ಕಾಗಿನ ಕಾರಣಗಳನ್ನು ಲೈಸೆನ್ಸು ನೀಡುವ ಪ್ರಾಧಿಕಾರಿಗೆ ತಿಳಿಸತಕ್ಕದ್ದು.

(4) (1)ನೇ ಉಪ-ನಿಯಮದ ಮೇರೆಗೆ ಪ್ರಮಾಣಪತ್ರವನ್ನು ನೀಡುವುದಕ್ಕಾಗಿ ಸಂದಾಯ ಮಾಡಲಾದ ಫೀಜಗಳ ಖಜಾನೆ ಚಲನ್ ಹಾಗೂ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದ ಫೀಜುಗಳೊಂದಿಗೆ ಲಗತ್ತು ಮಾಡಿ ಜಿಲ್ಲಾ ಆರೋಗ್ಯಾಧಿಕಾರಿಗೆ ಅರ್ಜಿಯ ಪ್ರತಿಯನ್ನು ಕಳುಹಿಸತಕ್ಕದ್ದು. ಜಿಲ್ಲಾ ಆರೋಗ್ಯಾಧಿಕಾರಿಯು ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡವಾಗಲಿ ಮತ್ತು ಆವರಣಗಳಾಗಲಿ ಈ ನಿಯಮಗಳ ಅಗತ್ಯತೆಗಳನ್ನು ಪೂರೈಸಿರುವವೆಂಬ ಬಗ್ಗೆ ಪರಿಶೀಲಿಸತಕ್ಕದ್ದು ಮತ್ತು ಲೈಸೆನ್ಸು ನೀಡುವ ಪ್ರಾಧಿಕಾರಕ್ಕೆ ವರದಿಮಾಡತಕ್ಕದ್ದು. ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡವು ಈ ನಿಯಮಗಳ ಅಗತ್ಯತೆಗಳನ್ನು ಪೂರೈಸಿರುವವೆಂದು ಜಿಲ್ಲಾ ಆರೋಗ್ಯಾಧಿಕಾರಿಗೆ ಮನದಟ್ಟಾದರೆ, ಆತನು ಅರ್ಜಿಯನ್ನು ಸ್ವೀಕರಿಸಿದ ತರುವಾಯ 15 ದಿನಗಳೊಳಗೆ ಪ್ರಮಾಣಪತ್ರವನ್ನು ನೀಡತಕ್ಕದ್ದು. ಆದಾಗ್ಯೂ, ಜಿಲ್ಲಾ ಆರೋಗ್ಯಾಧಿಕಾರಿಯು, ಅದರಲ್ಲಿ ಯಾವುದೇ ನ್ಯೂನತೆಯನ್ನು ಕಂಡುಹಿಡಿದರೆ, ಆತನು ಲೈಸೆನ್ಸು ನೀಡುವ ಪ್ರಾಧಿಕಾರಿಗೆ ಅದನ್ನು ಲಿಖಿತದಲ್ಲಿ ವರದಿ ಮಾಡತಕ್ಕದ್ದು. ಆ ತರುವಾಯ ಕೂಡಲೇ ಅವುಗಳನ್ನು ಸರಿಪಡಿಸುವುದಕ್ಕಾಗಿ ಮಾಲೀಕನಿಗೆ ಲಿಖಿತದಲ್ಲಿ ನೋಟೀಸನ್ನು ನೀಡತಕ್ಕದ್ದು ಮತ್ತು ಯಾವ ಕಾಲದೊಳಗೆ ಅಂತಹ ಸರಿಪಡಿಸುವಿಕೆಯನ್ನು ಕಾರ್ಯಗತಗೊಳಿಸತಕ್ಕದ್ದೋ ಆ ಕಾಲದೊಳಗೆ ಸೂಕ್ತ ಕಾಲವನ್ನು ನಿರ್ದಿಷ್ಟಪಡಿಸತಕ್ಕದ್ದು. ನಿರ್ದಿಷ್ಟಪಡಿಸಿದ

ಅವಧಿಯೊಳಗೆ ಅಂತಹ ನೋಟೀಸಿನ ನಿಬಂಧನೆಗಳನ್ನು ಪಾಲಿಸಲು ಲೈಸೆನ್ಸ್‌ದಾರನು ತಪ್ಪಿದ ತರುವಾಯ, ಲೈಸೆನ್ಸನ್ನು ನೀಡುವ ಪ್ರಾಧಿಕಾರಿಯು, ಲೈಸೆನ್ಸ್‌ದಾರನು ಅಂತಹ ಸರಿಪಡಿಸುವಿಕೆಗಳನ್ನು ಮಾಡುವವರೆಗೆ, ಸಂದರ್ಭಾನುಸಾರ ಅಸ್ತಿತ್ವದಲ್ಲಿರುವ ಲೈಸೆನ್ಸ್‌ನ್ನು ತಡೆಹಿಡಿಯತಕ್ಕದ್ದು ಅಥವಾ ರದ್ದುಪಡಿಸತಕ್ಕದ್ದು ಅಥವಾ ಮರುಮಂಜೂರಾತಿ ಮಾಡತಕ್ಕದ್ದಲ್ಲ.

ಪರಂತು, ಯಾವುದೇ ಸಿನಿಮಾ ಥಿಯೇಟರ್ ಅಥವಾ ಮಲ್ಟಿಪ್ಲೆಕ್ಸ್ ಈ ನಿಯಮಗಳ ಅಗತ್ಯತೆಗಳನ್ನು ಪೂರೈಸದೇ ಇರುವ ಸಂದರ್ಭದಲ್ಲಿ, ಜಿಲ್ಲಾ ಆರೋಗ್ಯಾಧಿಕಾರಿಯು ಐದು ವರ್ಷಗಳವರೆಗೆ ಪ್ರಮಾಣಪತ್ರವನ್ನು ನೀಡುವ ಅರ್ಜಿಯನ್ನು ತಿರಸ್ಕರಿಸಬಹುದು ಅಥವಾ ಲಿಖಿತದಲ್ಲಿ ದಾಖಲುಮಾಡಬೇಕಾದ ಕಾರಣಗಳಿಗಾಗಿ ಪ್ರಮಾಣಪತ್ರದ ಆ ಅವಧಿಯನ್ನು ಕಡಿಮೆ ಮಾಡಬಹುದು ಮತ್ತು ಅರ್ಜಿದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ಕೊಟ್ಟ ತರುವಾಯ, ಇದಕ್ಕಾಗಿನ ಕಾರಣಗಳನ್ನು ಲೈಸೆನ್ಸು ನೀಡುವ ಪ್ರಾಧಿಕಾರಿಗೆ ತಿಳಿಸತಕ್ಕದ್ದು.

(5) (1)ನೇ ಉಪ-ನಿಯಮದ ಮೇರೆಗೆ ಪ್ರಮಾಣಪತ್ರವನ್ನು ನೀಡುವುದಕ್ಕಾಗಿ ಸಂದಾಯ ಮಾಡಲಾದ ಫೀಜಗಳ ಖಜಾನೆ ಚಲನ್ ಹಾಗೂ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದ ಫೀಜುಗಳೊಂದಿಗೆ ಲಗತ್ತು ಮಾಡಿ ಅಗ್ನಿಶಾಮಕ ಅಧಿಕಾರಿಗೆ ಅರ್ಜಿಯ ಪ್ರತಿಯನ್ನು ಕಳುಹಿಸತಕ್ಕದ್ದು. ಅಗ್ನಿಶಾಮಕ ಅಧಿಕಾರಿಯು ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡವಾಗಲಿ ಈ ನಿಯಮಗಳ ಅಗತ್ಯತೆಗಳನ್ನು ಪೂರೈಸಿರುವವೆಂಬ ಬಗ್ಗೆ ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಅಧಿಕಾರಿ ಪರಿಶೀಲಿಸತಕ್ಕದ್ದು ಮತ್ತು ಲೈಸೆನ್ಸ್ ನೀಡುವ ಪ್ರಾಧಿಕಾರಕ್ಕೆ ವರದಿ ಮಾಡತಕ್ಕದ್ದು. ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡವು ಈ ನಿಯಮಗಳ ಅಗತ್ಯತೆಗಳನ್ನು ಪೂರೈಸಿರುವವೆಂದು ಜಿಲ್ಲಾ ಅಗ್ನಿಶಾಮಕ ಅಧಿಕಾರಿಗೆ ಮನದಟ್ಟಾದರೆ, ಆತನು ಅರ್ಜಿಯನ್ನು ಸ್ವೀಕರಿಸಿದ ತರುವಾಯ 15 ದಿನಗಳೊಳಗೆ ಪ್ರಮಾಣಪತ್ರವನ್ನು ನೀಡತಕ್ಕದ್ದು. ಆದಾಗ್ಯೂ, ಅಗ್ನಿಶಾಮಕ ಅಧಿಕಾರಿಯು, ಅದರಲ್ಲಿ ಯಾವುದೇ ನ್ಯೂನತೆಯನ್ನು ಕಂಡುಹಿಡಿದರೆ, ಆತನು ಲೈಸೆನ್ಸು ನೀಡುವ ಪ್ರಾಧಿಕಾರಿಗೆ ಅದನ್ನು ಲಿಖಿತದಲ್ಲಿ ವರದಿ ಮಾಡತಕ್ಕದ್ದು. ಆ ತರುವಾಯ ಕೂಡಲೇ ಅವುಗಳನ್ನು ಸರಿಪಡಿಸುವುದಕ್ಕಾಗಿ ಮಾಲೀಕನಿಗೆ ಲಿಖಿತದಲ್ಲಿ ನೋಟೀಸನ್ನು ನೀಡತಕ್ಕದ್ದು ಮತ್ತು ಯಾವ ಕಾಲದೊಳಗೆ ಅಂತಹ ಸರಿಪಡಿಸುವಿಕೆಯನ್ನು ಕಾರ್ಯಗತಗೊಳಿಸತಕ್ಕದ್ದೋ ಆ ಕಾಲದೊಳಗೆ ಸೂಕ್ತ ಕಾಲವನ್ನು ನಿರ್ದಿಷ್ಟಪಡಿಸತಕ್ಕದ್ದು. ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಂತಹ ನೋಟೀಸಿನ ನಿಬಂಧನೆಗಳನ್ನು ಪಾಲಿಸಲು ಲೈಸೆನ್ಸ್‌ದಾರನು ತಪ್ಪಿದ ತರುವಾಯ, ಲೈಸೆನ್ಸನ್ನು ಕೊಡುವ ಪ್ರಾಧಿಕಾರಿಯು, ಲೈಸೆನ್ಸ್‌ದಾರನು ಅಂತಹ ಸರಿಪಡಿಸುವಿಕೆಗಳನ್ನು ಮಾಡುವವರೆಗೆ, ಸಂದರ್ಭಾನುಸಾರ ಅಸ್ತಿತ್ವದಲ್ಲಿರುವ ಲೈಸೆನ್ಸ್‌ನ್ನು ತಡೆಹಿಡಿಯತಕ್ಕದ್ದು ಅಥವಾ ರದ್ದುಪಡಿಸತಕ್ಕದ್ದು ಅಥವಾ ಮರುಮಂಜೂರಾತಿ ಮಾಡತಕ್ಕದ್ದಲ್ಲ:

ಪರಂತು, ಯಾವುದೇ ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಈ ನಿಯಮಗಳ ಅಗತ್ಯತೆಗಳನ್ನು ಪೂರೈಸದೇ ಇರುವ ಸಂದರ್ಭದಲ್ಲಿ, ಅಗ್ನಿಶಾಮಕ ಅಧಿಕಾರಿಯು ಐದು ವರ್ಷಗಳವರೆಗೆ ಪ್ರಮಾಣಪತ್ರವನ್ನು ನೀಡುವ ಅರ್ಜಿಯನ್ನು ತಿರಸ್ಕರಿಸಬಹುದು ಅಥವಾ ಲಿಖಿತದಲ್ಲಿ ದಾಖಲುಮಾಡಬೇಕಾದ ಕಾರಣಗಳಿಗಾಗಿ ಪ್ರಮಾಣಪತ್ರದ ಆ ಅವಧಿಯನ್ನು ಕಡಿಮೆ ಮಾಡಬಹುದು ಮತ್ತು ಅರ್ಜಿದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ಕೊಟ್ಟ ತರುವಾಯ, ಇದಕ್ಕಾಗಿನ ಕಾರಣಗಳನ್ನು ಲೈಸೆನ್ಸು ನೀಡುವ ಪ್ರಾಧಿಕಾರಿಗೆ ತಿಳಿಸತಕ್ಕದ್ದು.

(6) (2)ನೇ ಉಪ ನಿಯಮದ ಮೇರೆಗೆ ವಿದ್ಯುಚ್ಛಕ್ತಿ ಪರಿಶೀಲಕನ ಪ್ರಮಾಣಪತ್ರ, (3)ನೇ ಉಪ ನಿಯಮದ ಮೇರೆಗೆ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರ ಪ್ರಮಾಣಪತ್ರ, (4)ನೇ ಉಪ ನಿಯಮದ ಮೇರೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯ ಪ್ರಮಾಣಪತ್ರ, (5)ನೇ ಉಪ ನಿಯಮದ ಮೇರೆಗೆ ಅಗ್ನಿಶಾಮಕ ಅಧಿಕಾರಿಯ ಪ್ರಮಾಣಪತ್ರವನ್ನು ಸ್ವೀಕರಿಸಿದ ತರುವಾಯ, ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಎಲ್ಲ ನಿಯಮಗಳನ್ನು ಅನುಪಾಲನೆ ಮಾಡಲಾಗಿದೆಯೇ ಎಂಬುದನ್ನು ಪರಿಶೀಲಿಸತಕ್ಕದ್ದು ಮತ್ತು ಅದನ್ನು ತಾನು ಮನದಟ್ಟುಮಾಡಿಕೊಳ್ಳತಕ್ಕದ್ದು ಹಾಗೂ ಐದು ವರ್ಷಗಳ ಅವಧಿಯವರೆಗೆ ಸಿಂಧುವಾದ ಲೈಸೆನ್ಸನ್ನು ನೀಡತಕ್ಕದ್ದು ಅಥವಾ ಲಿಖಿತದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಆ ಅವಧಿಯನ್ನು ಕಡಿಮೆಗೊಳಿಸತಕ್ಕದ್ದು.

**86. ತಾತ್ಕಾಲಿಕ ಪರವಾನಗಿ.-** (1) 85ನೇ ನಿಯಮದ ಮೇರೆಗೆ ಲೈಸೆನ್ಸ್ ಮರು ಮಂಜೂರಾತಿಗಾಗಿ ಮಾಡಿಕೊಂಡ ಅರ್ಜಿಯ ಮೇಲೆ, ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಲೈಸೆನ್ಸಿನ ಮುಕ್ತಾಯದ ದಿನಾಂಕಕ್ಕೆ ಮುಂಚೆ ಯಾವುದೇ ಕಾರಣಕ್ಕಾಗಿ ಲೈಸೆನ್ಸ್‌ನ್ನು ಮರು ಮಂಜೂರು ಮಾಡದಿದ್ದರೆ ಅಥವಾ ಅದನ್ನು ಪುನಃ ಮಾಡಲು ನಿರಾಕರಿಸದಿದ್ದರೆ, ವಿದ್ಯುಚ್ಛಕ್ತಿ ಪರಿಶೀಲಿಕನ ಪ್ರಮಾಣಪತ್ರವು ಸಿಂಧುವಾಗಿರುವುದು ಮುಂದುವರಿದಿದ್ದರೆ, ಆತನು 'ಹೆಚ್' ನಮೂನೆಯಲ್ಲಿ ಒಂದು ತಾತ್ಕಾಲಿಕ ಪರವಾನಗಿಯನ್ನು ಮಂಜೂರು ಮಾಡತಕ್ಕದ್ದು.

(2) ಅಂತಹ ತಾತ್ಕಾಲಿಕ ಪರವಾನಗಿಯನ್ನು ನವೀಕರಿಸಲು ಕೋರಿದ ಲೈಸೆನ್ಸು ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು ಮತ್ತು ಅದು ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಅರ್ಜಿಯನ್ನು ವಿಲೇ ಮಾಡುವವರಿಗೆ ಸಿಂಧುವಾಗಿರತಕ್ಕದ್ದು:

ಪರಂತು, ತಾತ್ಕಾಲಿಕ ಪರವಾನಗಿ ಸಿಂಧುವಾಗಿರುವುದು ನಿಂತುಹೋಗತಕ್ಕದ್ದು ಮತ್ತು ಅದನ್ನು ಅರ್ಜಿದಾರನು ಕ್ರಮಬದ್ಧವಾಗಿ ಮರುಮಂಜೂರಾತಿಯಾದ ಲೈಸೆನ್ಸ್‌ನ್ನು ಸ್ವೀಕರಿಸಿದ ಮೇಲೆ ಅಥವಾ ಆತನು ಆ ಲೈಸೆನ್ಸ್‌ನ ಮರುಮಂಜೂರಾತಿಯ ನಿರಾಕರಣೆಯ ಆದೇಶವನ್ನು ಸ್ವೀಕರಿಸಿದ ಮೇಲೆ ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ಒಪ್ಪಿಸತಕ್ಕದ್ದು:

ಮತ್ತೂ ಪರಂತು, ತಾತ್ಕಾಲಿಕ ಲೈಸೆನ್ಸನ್ನು ಆ ಬಗ್ಗೆ ಯಾವುದೇ ಕಾಲದಲ್ಲಿ ತಗಾದೆ ಮಾಡಿದ ಮೇಲೆ ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ಒಪ್ಪಿಸತಕ್ಕದ್ದು.

(3) ತಾತ್ಕಾಲಿಕ ಪರವಾನಗಿಯನ್ನು ಮಂಜೂರು ಮಾಡುವುದಕ್ಕಾಗಿ ಯಾವುದೇ ಫೀಜನ್ನು ವಿಧಿಸತಕ್ಕದ್ದಲ್ಲ.

(4) ತಾತ್ಕಾಲಿಕ ಪರವಾನಗಿಯನ್ನು ಮೂವತ್ತು ದಿನಗಳ ಅದರ ಸಿಂಧುತ್ವದ ಅವಧಿಯಲ್ಲಿ, ಈ ನಿಯಮಗಳ ಉದ್ದೇಶಕ್ಕಾಗಿ ಲೈಸೆನ್ಸ್ ಎಂಬುದಾಗಿ ಭಾವಿಸತಕ್ಕದ್ದು.

**87. ಲೈಸೆನ್ಸ್‌ನ ಮರುಮಂಜೂರಾತಿಗಾಗಿ ಫೀಜು.-** ಪ್ರತಿಯೊಂದು ಲೈಸೆನ್ಸಿನ ಮರು ಮಂಜೂರಾತಿಗಾಗಿ, 112ರ 18ನೇ ಉಪ ನಿಯಮದಲ್ಲಿ ನಿರ್ದಿಷ್ಟಪಡಿಸಿದಂಥ ದರದಲ್ಲಿಯೇ ಫೀಜನ್ನು ವಿಧಿಸತಕ್ಕದ್ದು.

## ಅಧ್ಯಾಯ – XII
## ಸಂಚಾರಿ ಸಿನಿಮಾಗಳು

**88. ಪರಿಭಾಷೆಗಳು.-** ಈ ಅಧ್ಯಾಯದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) ''ಕಟ್ಟಡ' 'ವು ಸಿನಿಮಾಟೋಗ್ರಫಿ ಸಿನಿಮಾಗಳು ಅಥವಾ ಪ್ರದರ್ಶಗಳ ಪ್ರದರ್ಶನಕ್ಕಾಗಿ ಉಪಯೋಗಿಸಲಾದ ಯಾವುದೇ ಬೂತು, ಟೆಂಟು (tent)ಅಥವಾ ಅಂತಹದೇ ನಿರ್ಮಾಣವನ್ನು ಒಳಗೊಳ್ಳುತ್ತದೆ.

(ಬಿ) "ಸಂಚಾರಿ ಸಿನಿಮಾ" ಎಂದರೆ, ಮೂರು ತಿಂಗಳು ಮೀರದ ಅವಧಿಯವರೆಗೆ ಯಾವುದೇ ಒಂದು ಸ್ಥಳದಲ್ಲಿ ಸಿನಿಮಾಟೋಗ್ರಫಿ ಸಿನಿಮಾಗಳು ಅಥವಾ ಪ್ರದರ್ಶನಗಳ ಪ್ರದರ್ಶನ ನೀಡುವುದಕ್ಕಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಧನ ಸಾಮಗ್ರಿಗಳನ್ನು ತೆಗೆದುಕೊಂಡು ಹೋದ ಸಿನಿಮಾ ಸಲಕರಣೆಗಳನ್ನು ಮತ್ತು ಉಪಸಾಧನಗಳನ್ನು ಒಳಗೊಂಡ ಸಜ್ಜು.

**89. ಸಂಚಾರಿ ಸಿನಿಮಾಗಳಿಗೆ ಲೈಸೆನ್ಸನ್ನು ಮಂಜೂರು ಮಾಡುವುದಕ್ಕಾಗಿ ಅರ್ಜಿ.-** (1) ಸಂಚಾರಿ ಸಿನಿಮಾದಲ್ಲಿ ಚಲನಚಿತ್ರಗಳ ಪ್ರದರ್ಶನಕ್ಕಾಗಿ ಲೈಸೆನ್ಸನ್ನು ಮಂಜೂರು ಮಾಡುವುದಕ್ಕಾಗಿ ಪ್ರತಿಯೊಂದು ಅರ್ಜಿಯನ್ನು ನಮೂನೆ 'ಎ-1' ರಲ್ಲಿ ಲೈಸೆನ್ಸ್ ನೀಡುವ ಪ್ರಾಧಿಕಾರಿಗಳಿಗೆ ಒಂಭತ್ತು ಸೆಟ್‌ಗಳಲ್ಲಿ ಸಲ್ಲಿಸತಕ್ಕದ್ದು.

(2) (1)ನೇ ಉಪನಿಯಮದ ಮೇರೆಗೆ ನಿಗದಿಪಡಿಸಲಾದ ಶುಲ್ಕವನ್ನು ಸಂದಾಯ ಮಾಡಿದ್ದಕ್ಕಾಗಿ ಖಜಾನೆ ಚಲನ್‌ದೊಂದಿಗೆ ಅರ್ಜಿಯನ್ನು ಲಗತ್ತಿಸತಕ್ಕದ್ದು.

(3) (2)ನೇ ಉಪನಿಯಮದ ಮೇರೆಗೆ ಲೈಸೆನ್ಸ್‌ನ್ನು ಮಂಜೂರು ಮಾಡುವುದಕ್ಕಾಗಿ ಫೀಜು ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಿದಂತಿರತಕ್ಕದ್ದು.

(4) ಲೈಸೆನ್ಸನ್ನು ನೀಡುವ ಪ್ರಾಧಿಕಾರವು ಅದರ ಅರ್ಜಿಯನ್ನು ಸ್ವೀಕರಿಸಿದ ತರುವಾಯ ಯಾವುದೇ ಜಾತ್ರೆ, ಮೇಳ ಅಥವಾ ಇತರ ಅದೇ ರೀತಿಯ ಸಂದರ್ಭಗಳಿಗೆ ಸಂಬಂಧಪಟ್ಟಂತೆ ಸಂಚಾರಿ ಸಿನಿಮಾಗಳನ್ನು ನಡೆಸುವ ಲೈಸೆನ್ಸನ್ನು, ಅದು ಮಂಜೂರು ಮಾಡಬಹುದು. ಅದು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ ನಿವೇಶನವು ಸಂಚಾರಿ ಸಿನಿಮಾಗೆ ಸೂಕ್ತವೆಂದು ಮತ್ತು 90ನೇ ನಿಯಮದ (2)ನೇ ಉಪ ನಿಯಮದ ಅಗತ್ಯತೆಗಳಿಗೆ ಅದು ಅನುರೂಪವಾಗಿರುವುದೆಂದು ತನಗೆ ಮನದಟ್ಟಾದರೆ, ಮೂರು ತಿಂಗಳು ಮೀರದ ಅವಧಿಯವರೆಗೆ ಜಾತ್ರೆ, ಮೇಳ ಅಥವಾ ಇತರ ಅದೇ ರೀತಿಯ ಸಂದರ್ಭಗಳ ಅವಧಿಗೆ ಸಂಚಾರಿ ಸಿನಿಮಾ ನಡೆಸುವುದಕ್ಕೆ ಲೈಸೆನ್ಸನ್ನು ಮಂಜೂರು ಮಾಡಬಹುದು.

**90. ಲೈಸೆನ್ಸಿನ ಮಂಜೂರಾತಿ ಅಥವಾ ನಿರಾಕರಣೆ,-** (1) 89ನೇ ನಿಯಮದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಲೈಸೆನ್ಸನ್ನು ನೀಡುವ ಪ್ರಾಧಿಕಾರವು,-

(ಎ) ಅರ್ಜಿಯು ಕ್ರಮಬದ್ಧವಾಗಿರುವಲ್ಲಿ, ಸಿನಿಮಾ ಪ್ರದರ್ಶನಗಳನ್ನು ಪ್ರದರ್ಶಿಸಲು ಉದ್ದೇಶಿಸಿದ ಅಥವಾ ಸಂದರ್ಭಾನುಸಾರ ಅವರ ಪ್ರಮಾಣಪತ್ರಕ್ಕಾಗಿ ಅಥವಾ ವರದಿಗಳಿಗಾಗಿ ಒಯ್ಯುವ ಪ್ರದೇಶದಲ್ಲಿ ಈ ಕೆಳಗೆÉ ಅಧಿಕಾರವ್ಯಾಪ್ತಿ ಹೊಂದಿರುವ ಗೊತ್ತುಪಡಿಸಿದ ಪ್ರಾಧಿಕಾರಿಗಳಿಗೆ ಅಂತಹ ಅರ್ಜಿಯ ಪ್ರತಿಗಳನ್ನು ಅದನ್ನು ಸ್ವೀಕರಿಸಿದ ದಿನಾಂಕದಿಂದ ಏಳು ದಿನಗಳೊ ಳಗಾಗಿ ಕಳುಹಿಸತಕ್ಕದ್ದು.

(i) ಬೆಂಗಳೂರು ನಗರದ ಸಂದರ್ಭದಲ್ಲಿ ಪೊಲೀಸ್ ಆಯುಕ್ತರು;

(ii) ನಗರ ಪೊಲೀಸ್ ಆಯುಕ್ತರು;

(iii) ಜಿಲ್ಲೆಯ ಸಂದರ್ಭದಲ್ಲಿ ಪೊಲೀಸ್ ಸೂಪರಿಂಟೆಂಡೆಂಟ್;

(iv) ಜಿಲ್ಲಾ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ;

(v) ಜಿಲ್ಲಾ ವಿದ್ಯುಚ್ಛಕ್ತಿ ಪರಿಶೀಲಕನು.

(vi) ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು;

(vii) ಬೆಂಗಳೂರು ನಗರದ ಸಂದರ್ಭದಲ್ಲಿ ಬಿಬಿಎಂಪಿ ಯಲ್ಲಿನ ಆರೋಗ್ಯಾಧಿಕಾರಿಗಳು;

(viii) ಬೆಂಗಳೂರು ನಗರದ ಸಂದರ್ಭದಲ್ಲಿ ವಿದ್ಯುಚ್ಛಕ್ತಿ ಪರಿಶೀಲನಾಲಯದ ವಿದ್ಯುಚ್ಛಕ್ತಿ ಪರಿಶೀಲಕನು.

(ix) ಬೆಂಗಳೂರು ನಗರದ ಸಂದರ್ಭದಲ್ಲಿ ಮುಖ್ಯ ಅಗ್ನಿಶಾಮಕಾಧಿಕಾರಿ;

(x) ಜಿಲ್ಲಾ ಅಗ್ನಿಶಾಮಕಾಧಿಕಾರಿ;

(xi) ಆ ಪ್ರದೇಶಗಳಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸ್ಥಳೀಯ ಪ್ರಾಧಿಕಾರಿ.

(ಬಿ) ಅರ್ಜಿಯು ಕ್ರಮಬದ್ಧವಾಗಿ ಇರದಿದ್ದರೇ, ಅರ್ಜಿಯನ್ನು ಸಲ್ಲಿಸಿದ ಹದಿನೈದು ದಿನಗಳ ಅವಧಿಯೊಳಗೆ ಅದನ್ನು ಹಿಂದಿರುಗಿಸಬಹುದು. ಇಲ್ಲದಿದ್ದರೆ, ಅರ್ಜಿಯನ್ನು ಅಂಗೀಕರಿಸಲಾಗಿದೆಯೆಂದು ಭಾವಿಸತಕ್ಕದ್ದು.

(2) ಮೇಲೆ ನಿರ್ದಿಷ್ಟಪಡಿಸಲಾದ ಪ್ರಾಧಿಕಾರಿಗಳು (1)ನೇ ಉಪನಿಯಮದ ಮೇರೆಗೆ ಅರ್ಜಿಗಳನ್ನು ಸ್ವೀಕರಿಸಿದ ತರುವಾಯ ಮತ್ತು ಸಂದರ್ಭಾನುಸಾರ ಪ್ರಮಾಣಪತ್ರ ಅಥವಾ ವರದಿಯನ್ನು ಕಳುಹಿಸುವ ಮುಂಚಿತವಾಗಿ, ಪ್ರಸ್ತಾವಿತ ಸಿನಿಮಾಗಳ ಪ್ರದರ್ಶನದ ಸಂಬಂಧದಲ್ಲಿ,-

(i) ಲೈಸೆನ್ಸ್ ಕೋರಿರುವ ಸ್ಥಳದಲ್ಲಿ ಸಿನಿಮಾಗಳ ಪ್ರದರ್ಶನವು ಅಗತ್ಯವಾಗಿದೆಯೇ;

(ii) ಸಿನಿಮಾಗಳ ಪ್ರದರ್ಶನವು, ಸಾರ್ವಜನಿಕ ಸಂರಕ್ಷಣೆ, ಕಾನೂನು ಮತ್ತು ಸುವ್ಯವಸ್ಥೆ, ಸಾರ್ವಜನಿಕ ಶಾಂತಿ ಮತ್ತು ಘನತೆಗೆ ಅಪಾಯವುಂಟು ಮಾಡಿಲ್ಲ;

(iii) ಸಿನಿಮಾಗಳ ಪ್ರದರ್ಶನಕ್ಕಾಗಿ ಕಟ್ಟಡ ಮತ್ತು ವಿದ್ಯುಚ್ಛಕ್ತಿ ಸ್ಥಾಪನೆಗಳು, ಸಾಕಷ್ಟು ಮತ್ತು ಸುಸ್ಥಿತಿಯಲ್ಲಿವೆಯೇ;

(iv) ನೈರ್ಮಲ್ಯ, ವಾಯುಸಂಚಾರ ಮತ್ತು ದೀಪದ ಬಗ್ಗೆ ಸಾಕಷ್ಟು ವ್ಯವಸ್ಥೆಗಳನ್ನು ಮಾಡಲಾಗಿದೆಯೇ;

(v) ಅಗ್ನಿ ನಂದಿಸುವ ಉಪಕರಣಗಳನ್ನು ಅಳವಡಿಸಲು ಅವಶ್ಯಕ ಮುಂಜಾಗರೂಕತೆಯನ್ನು ಮಾಡಲಾಗಿದೆಯೇ ಮತ್ತು ಅವುಗಳಿಗಾಗಿ ವ್ಯವಸ್ಥೆಗೊಳಿಸಲಾಗಿದೆಯೇ;

(vi) ಸಿನಿಮೋಟೋಗ್ರಾಫಿ ಅಧಿನಿಯಮ ಮತ್ತು ನಿಯಮಗಳ ಜಾರಿಯಲ್ಲಿರುವ ಉಪಬಂಧಗಳನ್ನು ಪಾಲಿಸಲಾಗಿದೆ; ಮತ್ತು

(vii) ಲೈಸೆನ್ಸನ್ನು ಮಂಜೂರು ಮಾಡುವುದಕ್ಕೆ ಯಾವುದೇ ಆಕ್ಷೇಪಣೆ ಇಲ್ಲವೆಂಬುದನ್ನು

- ತಾವಾಗಿಯೇ ಮನದಟ್ಟು ಮಾಡಿಕೊಳ್ಳತಕ್ಕದ್ದು.

(viii) ಪ್ರಾಧಿಕಾರಗಳು, (1)ನೇ ಉಪನಿಯಮದ ಮೇರೆಗೆ ಅರ್ಜಿಯ ಪ್ರತಿಗಳನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಲೈಸೆನ್ಸು ನೀಡುವ ಪ್ರಾಧಿಕಾರಿಗೆ ಪ್ರಮಾಣಪತ್ರಗಳು ಅಥವಾ ವರದಿಗಳನ್ನು ಕಳುಹಿಸತಕ್ಕದ್ದು, ಅಂತಹ ಪ್ರಮಾಣಪತ್ರ ಅಥವಾ ವರದಿಯನ್ನು, ಈ ಹಿಂದೆ ಹೇಳಿದ ಅವಧಿಯೊಳಗೆ ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಸ್ವೀಕರಿಸದಿದ್ದರೆ, ಲೈಸೆನ್ಸು ಮಂಜೂರು ಮಾಡಲು ಯಾವುದೇ ಆಕ್ಷೇಪಣೆಗಳಿಲ್ಲವೆಂಬುದಾಗಿ ಪೂರ್ವಭಾವನೆ ಮಾಡತಕ್ಕದ್ದು.

(3) (2)ನೇ ಉಪನಿಯಮದ ಮೇರೆಗೆ ನೀಡಲಾದ ಪ್ರಮಾಣಪತ್ರವು, ಅದನ್ನು ಕೊಟ್ಟ ದಿನಾಂಕದಿಂದ ಮೂರು ತಿಂಗಳ ಅವಧಿಯವರೆಗೆ ಸಿಂಧುವಾಗಿರತಕ್ಕದ್ದು.

(4) ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಈ ಮುಂದಿನ ವಿಷಯಗಳಿಗೆ ಸಂಬಂಧಪಟ್ಟಂತೆ, ಎಂದರೆ,-

(i) ಸಾಮಾನ್ಯವಾಗಿ ಸಾರ್ವಜನಿಕರ ಹಿತಾಸಕ್ತಿಯಿಂದ;

(ii) ಅರ್ಜಿದಾರನ ಸ್ಥಿತಿಗತಿ, ಈ ಮೊದಲಿನ ಮತ್ತು ಹಿಂದಿನ ಅನುಭವದಿಂದ ಸಿನಿಮಾಗಳ ಪ್ರದರ್ಶನಕ್ಕಾಗಿ ಲೈಸೆನ್ಸನ್ನು ಮಂಜೂರು ಮಾಡುವುದಕ್ಕಾಗಲೀ ಅಥವಾ ನಿರಾಕರಿಸುವುದಕ್ಕಾಗಲಿ

- ತೀರ್ಮಾನ ತೆಗೆದುಕೊಳ್ಳತಕ್ಕದ್ದು.

(5) ಲೈಸೆನ್ಸ್‌ಗಾಗಿ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಸಂಬಂಧಪಟ್ಟ ಇಲಾಖೆಗಳಿಗೆ ಅವುಗಳನ್ನು ಕೂಡಲೇ ಕಳುಹಿಸತಕ್ಕದ್ದು. ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ಹದಿನೈದು ದಿನಗಳು ಮೀರದಂಥ ಅವಧಿಯೊಳಗಾಗಿ ಸಾಧ್ಯವಾಗಬಹುದಾದಷ್ಟು ಬೇಗನೆ ಅವರ ಅಭಿಪ್ರಾಯ ಅಥವಾ ಸ್ಪಷ್ಟೀಕರಣವನ್ನು ನೀಡತಕ್ಕದ್ದು. ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಸದರಿ ಇಲಾಖೆಗಳೊಂದಿಗೆ ಆ ಬಗ್ಗೆ ಸಮಾಲೋಚನೆ ನಡೆಸತಕ್ಕದ್ದು ಮತ್ತು ಅರ್ಜಿಯ ದಿನಾಂಕದಿಂದ ಮೂವತ್ತು ದಿನಗಳೊಳಗೆ ನಿರಾಪೇಕ್ಷಣಾ ಪ್ರಮಾಣಪತ್ರದ ಮಂಜೂರಾತಿಗಾಗಿ ಅರ್ಜಿಯನ್ನು ಪರಿಗಣಿಸತಕ್ಕದ್ದು ಅಥವಾ ಮೂವತ್ತು ದಿನಗಳು ಗೊತ್ತುಪಡಿಸಲಾದ ಅವಧಿಯೊಳಗೆ, ಲಿಖಿತದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಅಂತಹ ಲೈಸೆನ್ಸನ್ನು ನೀಡಲು ನಿರಾಕರಿಸತಕ್ಕದ್ದು.

(6) ಲೈಸೆನ್ಸು ನೀಡುವ ಪ್ರಾಧಿಕಾರಿಯು,-

(i) ಈ ನಿಯಮಗಳನ್ನು ಬಹುಮಟ್ಟಿಗೆ ಪಾಲಿಸಲಾಗಿದೆಯೆಂದು; ಮತ್ತು

(ii) ಸಿನಿಮಾ ವೀಕ್ಷಣೆಗಾಗಿ ಬರುವ ವ್ಯಕ್ತಿಗಳ ಸುರಕ್ಷತೆ, ಅನುಕೂಲತೆ ಮತ್ತು ಸೌಕರ್ಯದ ಮತ್ತು ಸಾರ್ವಜನಿಕ ಹಿತಾಸಕ್ತಿ ಮತ್ತು ಸ್ವಚ್ಛತೆಯ ಸಂಬಂಧದಲ್ಲಿ ಆ ಸ್ಥಳದಲ್ಲಿ ಸಾಕಷ್ಟು ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಲಾಗಿದೆ ಎಂಬುದನ್ನು ಮನದಟ್ಟು ಮಾಡಿಕೊಂಡ ಹೊರತು

- ಈ ನಿಯಮಗಳ ಮೇರೆಗೆ ಲೈಸೆನ್ಸನ್ನು ಮಂಜೂರು ಮಾಡತಕ್ಕದ್ದಲ್ಲ.

(7) ಅಧಿನಿಯಮ ಮತ್ತು ನಿಯಮಗಳ ಮೇರೆಗೆ ರಚಿತವಾದ ಉಪಬಂಧಗಳಿಗೊಳಪಟ್ಟು, (2)ನೇ ಉಪನಿಯಮದ ಮೇರೆಗೆ ಪ್ರಮಾಣಪತ್ರವನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿವಸಗಳೊಳಗೆ ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಅಂತಹ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಮತ್ತು ನಿರ್ಧರಿಸಿರಬಹುದಾದಂಥ ಪರಿಬಂಧಗಳಿಗೆ ಒಳಪಟ್ಟು ನಮೂನೆ-ಜಿ ಯಲ್ಲಿ ಅರ್ಜಿದಾರನಿಗೆ ಲೈಸೆನ್ಸನ್ನು ಮಂಜೂರು ಮಾಡಬಹುದು.

(8) ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಯಾವುದೇ ಲೈಸೆನ್ಸನ್ನು ಮಂಜೂರು ಮಾಡಲು ನಿರಾಕರಿಸಿದಾಗ, ಅಂತಹ ನಿರಾಕರಣೆಗಾಗಿ ಕಾರಣಗಳನ್ನು ಅರ್ಜಿದಾರನಿಗೆ ಬರಹದಲ್ಲಿ ನೀಡುವ ಮೂಲಕ ಆದೇಶವನ್ನು ತಿಳಿಸುವುದರಿಂದ ಹಾಗೆ ಮಾಡತಕ್ಕದ್ದು.

(9) ಈ ನಿಯಮಗಳ ಮೇರೆಗೆ ಲೈಸೆನ್ಸನ್ನು ಮಂಜೂರು ಮಾಡಲಾದ ಲೈಸೆನ್ಸು, ಆ ಲೈಸೆನ್ಸನ್ನು ಕೊಟ್ಟ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯವರೆಗೆ ಸಿಂಧುವಾಗಿರತಕ್ಕದ್ದು.

**91. ಲೈಸೆನ್ಸಿನ ಪ್ರತಿಯ ಮಂಜೂರಾತಿ,-** ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದಂಥ ಫೀಜುಗಳನ್ನು ಅರ್ಜಿದಾರನು ಸಂದಾಯ ಮಾಡಿದ ಮೇಲೆ ಲೈಸೆನ್ಸಿನ ಪ್ರತಿಯನ್ನು ನೀಡಬಹುದು.

**92. ಲೈಸೆನ್ಸ್ ಫೀಜಿನ ಮರುಪಾವತಿ.-** ಲೈಸೆನ್ಸನ್ನು ಮಂಜೂರು ಮಾಡಲು ನಿರಾಕರಿಸಿದ ಸಂದರ್ಭದಲ್ಲಿ, ಸಂದಾಯ ಮಾಡಲಾದ ಲೈಸೆನ್ಸು ಫೀಜನ್ನು ಒಟ್ಟು ಮೊಬಲಗಿನ ಅರ್ಧದಷ್ಟು ದರದಲ್ಲಿ ಮರುಪಾವತಿ ಮಾಡಲು ನಿರಾಕರಣೆಯ ಆದೇಶದೊಂದಿಗೆ ಅರ್ಜಿದಾರನಿಗೆ ಮರುಪಾವತಿಯನ್ನು ಮಾಡತಕ್ಕದ್ದು:

**93. ಲೈಸೆನ್ಸ್‌ದಾರನು ಪ್ರಮಾಣೀಕೃತ ಫಿಲ್ಮುಗಳನ್ನು ಮಾತ್ರ ಪ್ರದರ್ಶಿಸತಕ್ಕದ್ದು,-** ಈ ನಿಯಮಗಳ ಮೇರೆಗೆ ಲೈಸೆನ್ಸ್ ಪಡೆದ ಯಾರೇ ವ್ಯಕ್ತಿಯು, ಚಲನಚಿತ್ರ ಅಧಿನಿಯಮ, 1952 (1952ರ ಕೇಂದ್ರ ಅಧಿನಿಯಮ, xxxvii)ರ 3ನೇ ಪ್ರಕರಣದ ಮೇರೆಗೆ ನೇಮಕಗೊಂಡ ಪ್ರಾಧಿಕಾರಿಯು ಸಾರ್ವಜನಿಕ ವೀಕ್ಷಣೆಗಾಗಿ ಯೋಗ್ಯವೆಂದು ಪ್ರಮಾಣೀಕರಿಸಿದಂಥ ಸಿನಿಮಾವನ್ನು ಹೊರತುಪಡಿಸಿ, ಆ ಪ್ರಾಧಿಕಾರಿಯು ಪ್ರದರ್ಶನ ಗೊತ್ತುಪಡಿಸಿದ ಗುರುತನ್ನು ಹೊಂದಿರುವ, ಯಾವುದೇ ಸಿನಿಮಾವನ್ನು ಪ್ರದರ್ಶಿಸಬೇಕೆಂದು ಪ್ರದರ್ಶಿಸತಕ್ಕದ್ದಲ್ಲ ಅಥವಾ ಅನುಮತಿಸತಕ್ಕದ್ದಲ್ಲ.

**94. ಕಟ್ಟಡದ ಬಗ್ಗೆ ಷರತ್ತುಗಳು.-** (1) ಕಟ್ಟಡದ ಎಲ್ಲಾ ಕಡೆಗಳಲ್ಲಿ ಖಾಲಿ ಜಾಗವನ್ನು ಒದಗಿಸತಕ್ಕದ್ದು. ಅದರ ಯಾವುದೇ ಭಾಗವು ಅಗಲದಲ್ಲಿ ಹತ್ತು ಮೀಟರುಗಳಿಗಿಂತ ಕಡಿಮೆಯಿರತಕ್ಕದ್ದಲ್ಲ.

(2) ಯಾವ ಮುಖ್ಯ ರಸ್ತೆಯಲ್ಲಿ ಅಂತಹ ಕಟ್ಟಡದ ನಿವೇಶನವು ಹೊಂದಿಕೊಂಡಿರುವುದೋ ಆ ಸಾರ್ವಜನಿಕ ಮುಖ್ಯ ರಸ್ತೆಯಲ್ಲಿ ಕಟ್ಟಡವು ರಸ್ತೆ ಮುಂಭಾಗವನ್ನು ಹೊಂದಿರತಕ್ಕದ್ದು.

(3) ಅಂತಹ ಮುಂಭಾಗದಲ್ಲಿ ಸಾರ್ವಜನಿಕರಿಗಾಗಿ ಪ್ರವೇಶ ಹಾಗೂ ನಿರ್ಗಮನದ ಸೂಕ್ತ ಸಾಧನಗಳು ಇರತಕ್ಕದ್ದು.

95. ನೈರ್ಮಲ್ಯ ಅನುಕೂಲತೆಗಳು.- ಲೈಸೆನ್ಸ್‌ದಾರನು, 54ನೇ ನಿಯಮದಲ್ಲಿನ ಪ್ರಮಾಣಕ್ಕನುಸಾರವಾಗಿ ಪ್ರತಿಯೊಬ್ಬ ಪುರುಷ, ಮಹಿಳೆ ಮತ್ತು ಮಕ್ಕಳು, ತೃತೀಯ ಲಿಂಗ (ಮಂಗಳಮುಖಿ) ಮತ್ತು ವಿಕಲಚೇತನ ವ್ಯಕ್ತಿಗಳ ಪ್ರತ್ಯೇಕ ಉಪಯೋಗಕ್ಕಾಗಿ ಲೈಸೆನ್ಸ್ ನೀಡುವ ಪ್ರಾಧಿಕಾರಿಯು ನಿರ್ದಿಷ್ಟಪಡಿಸಬಹುದಾದಂಥ ನೈರ್ಮಲ್ಯ ಅನುಕೂಲತೆಗಳನ್ನು ಒದಗಿಸತಕ್ಕದ್ದು ಮತ್ತು ಅವುಗಳನ್ನು ಉತ್ತಮ ನೈರ್ಮಲ್ಯ ಸ್ಥಿತಿಯಲ್ಲಿ ಇಟ್ಟುಕೊಂಡು ಬರುವಂತೆ ಮಾಡತಕ್ಕದ್ದು.

**96. ದಹ್ಯ ಸಾಮಗ್ರಿಗಳಿಂದ ನಿರ್ಮಿಸಿದ ಕಟ್ಟಡ.-** ದಹ್ಯ ಸಾಮಗ್ರಿಗಳಿಂದ ನಿರ್ಮಿಸಿದ ಪ್ರತಿಯೊಂದು ಕಟ್ಟಡದಲ್ಲಿ, ಪ್ರತಿಯೊಂದು ಭಾಗದಲ್ಲಿ ಕನಿಷ್ಠ ಪಕ್ಷ ಎರಡು ಮೀಟರು ಎತ್ತರ ಹಾಗೂ ಐದೂವರೆ ಮೀಟರುಗಳ ಅಗಲ ಕಿಟಕಿ ಇರತಕ್ಕದ್ದು. ಈ ಕಿಟಕಿಯನ್ನು ಸೀಳಿದ ಬಿದಿರಿನ ಚೌಕಟ್ಟಿನ ಮೇಲೆ ಜೋಡಿಸಿದ ಮತ್ತು ಒಳಗಡೆ ಟ್ವೈನ್‌ದಾರದಿಂದ ಬಲವಾಗಿ ಕಟ್ಟಿದ ಹಗ್ಗ(ತಟ್ಟಿ)ಗಳಿಂದ ಮುಚ್ಚಬಹುದು:

ಪರಂತು, ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಕಟ್ಟಡವನ್ನು ಯಾವುದೇ ಸಾಮಗ್ರಿಗಳಿಂದ ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ನಿರ್ಮಿಸಲಾಗಿದೆಯೆಂದು ಹಾಗೂ ಕಟ್ಟಡವು ಸಾರ್ವಜನಿಕರಿಗೆ ಅಪಾಯದ ಮೂಲವಾಗಿ ಹಾಗೆ ದಹ್ಯವಾಗುವುದೆಂದು ಅಥವಾ ಅನ್ಯಥಾ ಯಾವುದೇ ಇತರ ಹತ್ತಿರದಲ್ಲಿನ ಕಟ್ಟಡಕ್ಕೆ ಅಪಾಯಕಾರಿಯಾಗಿದೆ ಎಂದು ಅಭಿಪ್ರಾಯಪಟ್ಟಿರುವಲ್ಲಿ ಲೈಸೆನ್ಸನ್ನು ಮಂಜೂರು ಮಾಡತಕ್ಕದ್ದಲ್ಲ.

**97. ಸಭಾಂಗಣದಲ್ಲಿ ಸ್ಥಳಾವಕಾಶ.-** (1) ಸಿನಿಮಾಕ್ಕಾಗಿ, ಈ ನಿಯಮಗಳು ಪ್ರಾರಂಭವಾಗುವ ದಿನಾಂಕಕ್ಕೆ ಮುಂಚಿತವಾಗಿ ಸಂಚಾರಿ ಸಿನಿಮಾ ಇರುವಲ್ಲಿ, ಸಭಾಂಗಣದಲ್ಲಿ ಪ್ರತಿ ಹತ್ತು ಚದರ ಮೀಟರುಗಳಿಗೆ ಇಪ್ಪತ್ತು ವ್ಯಕ್ತಿಗಳಿಗಿಂತ ಹೆಚ್ಚು ವ್ಯಕ್ತಿಗಳಿಗೆ ಸ್ಥಳಾವಕಾಶ ಮಾಡಿಕೊಡಲು ಸಂಚಾರಿ ಸಿನಿಮಾ ಥಿಯೇಟರಿಗೆ, ಲೈಸೆನ್ಸು ನೀಡತಕ್ಕದ್ದಲ್ಲ:

ಪರಂತು, ಪ್ರವೇಶ ದ್ವಾರಗಳು, ನಡೆವೆಗಳು, ಅಂತಸ್ತುಗಳು ಮೊದಲಾದವುಗಳಿಂದ ಆಕ್ರಮಿತ ಪ್ರದೇಶಗಳಂಥವುಗಳನ್ನು ಹೊರತುಪಡಿಸಿ ಮಾಡಿದ ತರುವಾಯದ ಆಸನಕ್ಕಾಗಿ ಪ್ರತಿಯೊಬ್ಬ ವ್ಯಕ್ತಿಗೆ 0.5 ಚದರ ಮೀಟರುಗಳ ಸ್ಥಳಾವಕಾಶವನ್ನು ಒದಗಿಸಲಾಗಿರುವಲ್ಲಿ, ತದನುಸಾರವಾಗಿ, ಲೈಸೆನ್ಸು ನೀಡುವ ಪ್ರಾಧಿಕಾರಿಯು ಸಭಾಂಗಣದಲ್ಲಿ ಪ್ರವೇಶಿಸಬೇಕಾದ ವ್ಯಕ್ತಿಗಳ ಸಂಖ್ಯೆಯನ್ನು ನಿರ್ದಿಷ್ಟಪಡಿಸತಕ್ಕದ್ದು.

(2) ಈ ನಿಯಮಗಳ ಪ್ರಾರಂಭದ ದಿನಾಂಕದಂದು ಮತ್ತು ನಂತರ ಉದ್ದೇಶಿತ ಸಂಚಾರಿ ಸಿನಿಮಾಕ್ಕಾಗಿ ಸಭಾಂಗಣದಲ್ಲಿ ಪ್ರತಿ ಹನ್ನೆರಡು ಚದರ ಮೀಟರ್ಗಳಿಗೆ ಇಪ್ಪತ್ತು ವ್ಯಕ್ತಿಗಳಿಗಿಂತ ಹೆಚ್ಚು ವ್ಯಕ್ತಿಗಳಿಗೆ ಸ್ಥಳಾವಾಕಾಶ ಮಾಡಿಕೊಡಲು ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್‌ಗೆ ಲೈಸೆನ್ಸನ್ನು ನೀಡತಕ್ಕದ್ದಲ್ಲ:

ಪರಂತು, ಪ್ರವೇಶ ದ್ವಾರಗಳು, ನಡೆವೆಗಳು, ಅಂತಸ್ತುಗಳು ಮೊದಲಾದವುಗಳಿಂದ ಆಕ್ರಮಿತ ಪ್ರದೇಶಗಳಂಥವುಗಳನ್ನು ಹೊರತುಪಡಿಸಿ ಮಾಡಿದ ತರುವಾಯದ ಆಸನಕ್ಕಾಗಿ ಪ್ರತಿಯೊಬ್ಬ ವ್ಯಕ್ತಿಗೆ 0.6 ಚದರ ಮೀಟರುಗಳ ಸ್ಥಳಾವಕಾಶವನ್ನು ಒದಗಿಸಲಾಗಿರುವಲ್ಲಿ, ತದನುಸಾರವಾಗಿ, ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಸಭಾಂಗಣದಲ್ಲಿ ಪ್ರವೇಶಿಸಬೇಕಾದ ವ್ಯಕ್ತಿಗಳ ಸಂಖ್ಯೆಯನ್ನು ನಿರ್ದಿಷ್ಟಪಡಿಸತಕ್ಕದ್ದು.

**98. ಪರ್ಯಾಯ ದೀಪಗಳನ್ನಿಡಲು ವ್ಯವಸ್ಥೆಗಳು.-** ತುರ್ತು ಪರಿಸ್ಥಿತಿಯಲ್ಲಿ ಅಥವಾ ವಿದ್ಯುಚ್ಛಕ್ತಿ ವಿಫಲವಾದಾಗ ಸಭಾಂಗಣವನ್ನು ಬೆಳಗಿಸಲು ಉಪಯೋಗಿಸುವುದಕ್ಕಾಗಿ ಸೂಕ್ತ ಸಾಮರ್ಥ್ಯವನ್ನು ಹೊಂದಿರುವ ಯುಪಿಎಸ್, ಜನರೇಟರ್, ಸೂಕ್ತ ಸಾಮರ್ಥ್ಯದ ಕೈ ಟಾರ್ಚ್ ಮತ್ತು ಪರ್ಯಾಯ ದೀಪಗಳನ್ನು ಬಳಸುವುದಕ್ಕಾಗಿ ಲೈಸೆನ್ಸ್‌ದಾರನು ಯಾವಾಗಲೂ ಸಿದ್ಧವಾಗಿರತಕ್ಕದ್ದು.

**99. ಅಗ್ನಿ ಶಾಮಕಗಳು.-** (1) ಸಂಭವಿಸಬಹುದಾದಂಥ ಮತ್ತು ಲೈಸೆನ್ಸು ನೀಡುವ ಪ್ರಾಧಿಕಾರಿಯು ನಿರ್ದಿಷ್ಟಪಡಿಸಬಹುದಾದಂಥ ಅಗ್ನಿಯನ್ನು ತಡೆಗಟ್ಟುವುದಕ್ಕಾಗಿ ಮತ್ತು ನಂದಿಸುವುದಕ್ಕಾಗಿ ಸಾಕಷ್ಟು ವ್ಯವಸ್ಥೆಯನ್ನು ಮಾಡತಕ್ಕದ್ದು. ಆ ಪ್ರದೇಶದ ಪ್ರತಿ ಹತ್ತು ಚದರ ಮೀಟರುಗಳಿಗೆ ಐವತ್ತು ಲೀಟರುಗಳಿಗಿಂತ ಕಡಿಮೆಯಿಲ್ಲದಂತೆ ನೀರನ್ನು ಪೂರೈಸಲು, 74ನೇ ನಿಯಮದ (1)ನೇ ಉಪ ನಿಯಮದಲ್ಲಿ ವಿವರಿಸಿದಂಥಹುದೇ ಆದ ಬಕೆಟುಗಳಲ್ಲಿ ಸಿದ್ಧಪಡಿಸಿ ಅರ್ಧವನ್ನು ಆ ಕಟ್ಟಡದೊಳಗಡೆ ಮತ್ತು ಇನ್ನೊಂದು ಅರ್ಧವನ್ನು ಅದರ ಹೊರಗಡೆ ದಾಸ್ತಾನು ಮಾಡಿಟ್ಟಿರತಕ್ಕದ್ದು.

(2) ಅಗ್ನಿ ಪ್ರತಿಬಂಧ, ಅಗ್ನಿಶಾಮಕ ಮತ್ತು ಅಗ್ನಿ ನಂದಿಸುವ ಕ್ರಮಗಳನ್ನು, ಅರ್ಧವನ್ನು ಕಟ್ಟಡದೊಳಗಡೆ ಮತ್ತು ಇನ್ನೊಂದು ಅರ್ಧವನ್ನು ಅದರ ಹೊರಗಡೆ, 75ನೇ ನಿಯಮದ (1)ನೇ ಉಪ-ನಿಯಮದಲ್ಲಿ ಸೂಚಿಸಲಾದಂತೆ ಅಳವಡಿಸತಕ್ಕದ್ದು.

**100. ಸಂಚಾರಿ ಸಿನಿಮಾದ ಬಗ್ಗೆ ಲೈಸೆನ್ಸ್‌ಗಳ ಮಂಜೂರಾತಿ ಮೇಲೆ ಪರಿಬಂಧಗಳು.-** (1) ಸಂಚಾರಿ ಸಿನಿಮಾಗಾಗಿ ಯಾವುದೇ ಲೈಸೆನ್ಸನ್ನು, ಖಾಯಂ ಸಿನಿಮಾ ಅಥವಾ ಮಲ್ಟಿಪ್ಲೇಕ್ಸ್‌ನಿಂದ 1.6 ಕಿಲೋ ಮೀಟರುಗಳ ದೂರದೊಳಗೆ ಅಥವಾ ಇನ್ನೊಂದು ಸಂಚಾರಿ ಸಿನಿಮಾದಿಂದ 800 ಮೀಟರುಗಳ ದೂರದೊಳಗೆ ಇರುವ ನಿವೇಶನಕ್ಕೆ ಸಂಬಂಧಿಸಿದಂತೆ ಮಂಜೂರು ಮಾಡತಕ್ಕದ್ದಲ್ಲ:

**ವಿವರಣೆ.-** ಈ ನಿಯಮದ ಉದ್ದೇಶಗಳಿಗಾಗಿ ಎರಡು ಸಿನಿಮಾಗಳನ್ನು ಸಂಪರ್ಕಿಸುವ ಮತ್ತು ಸಾರ್ವಜನಿಕ ಸದಸ್ಯರುಗಳಿಂದ ಸಾಮಾನ್ಯವಾಗಿ ಉಪಯೋಗಿಸುವ ಅತಿ ಸಮೀಪದ ದಾರಿ, ಓಣಿ, ಬೀದಿ ಅಥವಾ ರಸ್ತೆಗುಂಟ “ದೂರ” ವನ್ನು ಪರಿಗಣಿಸತಕ್ಕದ್ದು.

**101. ಆಸನಗಳು.-** (1) ಈ ನಿಯಮಗಳು ಪ್ರಾರಂಭವಾಗುವ ದಿನಾಂಕಕ್ಕೂ ಮುಂಚೆ ಅಸ್ತಿತ್ವದಲ್ಲಿರುವ ಸಂಚಾರಿ ಸಿನಿಮಾಗಳಿಗಾಗಿ, ಸಭಾಂಗಣದಲ್ಲಿ ಪ್ರತಿ ಹತ್ತು ಚದರ ಮೀಟರುಗಳಿಗೆ ಇಪ್ಪತ್ತು ವ್ಯಕ್ತಿಗಳಿಗಿಂತ ಹೆಚ್ಚು ವ್ಯಕ್ತಿಗಳಿಗೆ ಸ್ಥಳಾವಕಾಶ ಮಾಡಿಕೊಡಲು ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್‌ಗೆ ಲೈಸೆನ್ಸನ್ನು ನೀಡತಕ್ಕದ್ದಲ್ಲ:

ಪರಂತು, ಪ್ರವೇಶ ದ್ವಾರಗಳು, ನಡೆವೆಗಳು, ಅಂತಸ್ತುಗಳು ಮೊದಲಾದವುಗಳಿಂದ ಆಕ್ರಮಿತ ಪ್ರದೇಶಗಳಂಥವುಗಳನ್ನು ಹೊರತುಪಡಿಸಿ ಮಾಡಿದ ತರುವಾಯದ ಆಸನಕ್ಕಾಗಿ ಪ್ರತಿಯೊಬ್ಬ ವ್ಯಕ್ತಿಗೆ 0.5 ಚದರ ಮೀಟರುಗಳ ಸ್ಥಳಾವಕಾಶವನ್ನು ಒದಗಿಸಲಾಗಿರುವಲ್ಲಿ, ತದನುಸಾರವಾಗಿ, ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಸಭಾಂಗಣದಲ್ಲಿ ಪ್ರವೇಶಿಸಬೇಕಾದ ವ್ಯಕ್ತಿಗಳ ಸಂಖ್ಯೆಯನ್ನು ನಿರ್ದಿಷ್ಟಪಡಿಸತಕ್ಕದ್ದು.

(2) ಈ ನಿಯಮಗಳನ್ನು ಪ್ರಾರಂಭಿಸಲಾದ ದಿನಾಂಕದಂದು ಮತ್ತು ನಂತರ ಉದ್ದೇಶಿತ ಸಂಚಾರಿ ಸಿನಿಮಾಕ್ಕಾಗಿ, ಸಭಾಂಗಣದಲ್ಲಿ ಪ್ರತಿ ಹನ್ನೆರಡು ಚದರ ಮೀಟರ್ಗಳಿಗೆ ಇಪ್ಪತ್ತು ವ್ಯಕ್ತಿಗಳಿಗಿಂತ ಹೆಚ್ಚು ವ್ಯಕ್ತಿಗಳ ಸ್ಥಳಾವಾಕಾಶಕ್ಕೆ ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್‌ಗೆ ಲೈಸೆನ್ಸನ್ನು ನೀಡತಕ್ಕದ್ದಲ್ಲ:

ಪರಂತು, ಪ್ರವೇಶ ದ್ವಾರಗಳು, ನಡವೆಗಳು, ಅಂತಸ್ತುಗಳು ಮೊದಲಾದವುಗಳಿಂದ ಆಕ್ರಮಿತ ಪ್ರದೇಶಗಳಂಥವುಗಳನ್ನು ಹೊರತುಪಡಿಸಿ ಮಾಡಿದ ತರುವಾಯದ ಆಸನಕ್ಕಾಗಿ ಪ್ರತಿಯೊಬ್ಬ ವ್ಯಕ್ತಿಗೆ 0.6 ಚದರ ಮೀಟರುಗಳ ಸ್ಥಳಾವಕಾಶವನ್ನು ಒದಗಿಸಲಾಗಿರುವಲ್ಲಿ, ತದನುಸಾರವಾಗಿ, ಲೈಸೆನ್ಸು ನೀಡುವ ಪ್ರಾಧಿಕಾರಿಯ ಸಭಾಂಗಣಕ್ಕೆ ಪ್ರವೇಶಿಸಬೇಕಾದ ವ್ಯಕ್ತಿಗಳ ಸಂಖ್ಯೆಯನ್ನು ನಿರ್ದಿಷ್ಟಪಡಿಸತಕ್ಕದ್ದು.

**102. ಸೂರುಗಳು, ದ್ವಾರಗಳು, ಇತ್ಯಾದಿ.-** (1) ಕಟ್ಟಡದ ಸೂರುಗಳು, ಕನಿಷ್ಠ ಪಕ್ಷ ಎರಡೂವರೆ ಮೀಟರುಗಳಷ್ಟು ಎತ್ತರವಾಗಿರತಕ್ಕದ್ದು.

(2) ದ್ವಾರಗಳ ಗಾತ್ರವು, ಅಗಲದಲ್ಲಿ ಎರಡು ಮೀಟರುಗಳು ಮತ್ತು ಎತ್ತರದಲ್ಲಿ ಎರಡೂವರೆ ಮೀಟರುಗಳಿಗಿಂತ ಕಡಿಮೆಯಿರತಕ್ಕದ್ದಲ್ಲ.

(3) ಸಾಮಾನ್ಯವಾಗಿ ಉಪಯೋಗದಲ್ಲಿಲ್ಲದ ದ್ವಾರ ಅಥವಾ ಕಿಟಕಿಗಳನ್ನು ಕಟ್ಟಡದ ಒಳಗಡೆಯಿಂದ ಕೊಂಚ ಒತ್ತುವುದರ ಮೂಲಕ ಸುಲಭವಾಗಿ ತೆಗೆಯಬಹುದಾದಂಥ ಚಾಪೆ, ಪರದೆಗಳು ಅಥವಾ ಅಂತಹವೇ ಸಾಮಗ್ರಿಗಳಿಂದ ಮಾಡಬಹುದು.

(4) ಯಾವುದೇ ವಿವರಣೆಯ ಯಾವುದೇ ಅಡ್ಡ ಕಂಬಿಯನ್ನು ಯಾವುದೇ ಬಾಗಿಲಿನ ಒಳಗೆ ಅಥವಾ ಹೊರಗೆ ಹಾಕತಕ್ಕದ್ದಲ್ಲ.

(5) ಯಾವುದೇ ಹೊಸ್ತಿಲು ಮೆಟ್ಟಿಲು ಕಟ್ಟಡದ ನೆಲದ ಮಟ್ಟಕ್ಕಿಂತ ಮೇಲೆ ಇರತಕ್ಕದ್ದಲ್ಲ.

(6) ಕಟ್ಟಡದ ಒಳಗಡೆ ಸುತ್ತ ಅಗಲ ಒಂದು ಕಾಲು ಮೀಟರುಗಳಿಗಿಂತ ಕಡಿಮೆ ಇಲ್ಲದ ನಡುದಾರಿಗಳು ಅಥವಾ ದಾರಿಗಳು ಇರತಕ್ಕದ್ದು ಮತ್ತು ಅಂತಹ ನಡುದಾರಿಗಳನ್ನು ಖಾಲಿ ಇಟ್ಟಿರತಕ್ಕದ್ದು.

(7) ಕಟ್ಟಡದ ನಾಲ್ಕು ಮೀಟರುಗಳ ಒಳಗೇ ಯಾವುದೇ ಹೊರ ಬೇಲಿಗೆ ಅವಕಾಶವಿರತಕ್ಕದ್ದಲ್ಲ.

**103. ಪ್ರೊಜೆಕ್ಷನ್ ಕೊಠಡಿ.-** (1) ಪ್ರೊಜೆಕ್ಷನ್ ಕೊಠಡಿಯನ್ನು ಅಗ್ನಿ ನಿರೋಧಕ ಸಾಮಗ್ರಿಯಿಂದ ನಿರ್ಮಿಸತಕ್ಕದ್ದು ಮತ್ತು ಅದು ಪ್ರೇಕ್ಷಣಾ ಮತ್ತು ವೀಕ್ಷಣಾ ಕಿಂಡಿಗಳ ಮೂಲಕವಲ್ಲದೆ ಸಭಾಂಗಣದೊಂದಿಗೆ ಯಾವುದೇ ರೀತಿಯ ಸಂಪರ್ಕವನ್ನು ಹೊಂದಿರತಕ್ಕದ್ದಲ್ಲ.

(2) ಪ್ರೊಜೆಕ್ಷನ್ ಕೊಠಡಿಯು, ಅತಿ ಸಣ್ಣ ಗಾತ್ರದ ಎರಡು ಮೀಟರುಗಳು ಮತ್ತು ಎರಡು ಮೀಟರುಗಳಿಗಿಂತ ಕಡಿಮೆಯಿಲ್ಲದಷ್ಟು ಪೂರ್ಣ ಎತ್ತರದ ಕನಿಷ್ಠ ಪಕ್ಷ ಆರು ಚದರ ಮೀಟರುಗಳಷ್ಟು ನೆಲ ಪ್ರದೇಶವನ್ನು ಹೊಂದಿರತಕ್ಕದ್ದು.

(3) ಪ್ರೊಜೆಕ್ಷನ್ ಕೊಠಡಿಯು, ಸಭಾಂಗಣದಿಂದ ಆಚೆ ಇರುವಂಥ ನಿವೇಶನದಲ್ಲಿನ ಖಾಲಿ ಜಾಗಕ್ಕೆ ನೇರ ಮತ್ತು ಸ್ವತಂತ್ರವಾಗಿ ಹೊರಕ್ಕೆ ಹೋಗುವ ದಾರಿಯನ್ನು ಹೊಂದಿರತಕ್ಕದ್ದು.

(4) ಸಭಾಂಗಣದ ಭಾಗವಾಗುವ ಪ್ರೊಜೆಕ್ಷನ್ ಕೊಠಡಿಯ ಗೋಡೆಗಳ ಹೊರ ಮೇಲ್ಮೈ ಮತ್ತು ಛಾವಣಿ ಮತ್ತು ಡೇರೆ ಅಥವಾ ಬೂತು ಜೋಪಡಿಯ ಯಾವುದೇ ಭಾಗದ ನಡುವೆ ಎರಡು ಮೀಟರುಗಳಿಗಿಂತ ಕಡಿಮೆಯಿಲ್ಲದ ಅಂತರವಿರತಕ್ಕದ್ದು.

(5) 48ನೇ ನಿಯಮದ (2)ನೇ ಉಪ-ನಿಯಮದ ಉಪಬಂಧಗಳು, ಯಥೋಚಿತ ವ್ಯತ್ಯಾಸಗಳೊಂದಿಗೆ ಸಂಚಾರಿ ಸಿನಿಮಾದ ಪ್ರೊಜೆಕ್ಷನ್ ಕೊಠಡಿಗೆ ಅನ್ವಯವಾಗತಕ್ಕದ್ದು:

ಪರಂತು, ಡಿಜಿಟಲ್ ಪ್ರೊಜೆಕ್ಟರ್ಗಳು, ಡಿಜಿಟಲ್ ಧ್ವನಿ ವ್ಯವಸ್ಥೆಯಂಥ ಮುಂದುವರೆದ ತಂತ್ರಜ್ಞಾನದೊಂದಿಗೆ ಇರುವ ಪ್ರಸ್ತುತ ಮತ್ತು ಪ್ರಸ್ತಾವಿತ ಸಂಚಾರಿ ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್‌ಗಳ ಸಂದರ್ಭದಲ್ಲಿ ಪ್ರತ್ಯೇಕ ಪ್ರೊಜೆಕ್ಷನ್ ಕೊಠಡಿಯು ಕಡ್ಡಾಯವಾಗತಕ್ಕದ್ದಲ್ಲ.

(6) ವಿದ್ಯುಚ್ಛಕ್ತಿ ಪರಿವೀಕ್ಷಣಾಲಯ ಇಲಾಖೆಯಿಂದ ಸಾಂಪ್ರದಾಯಿಕ ಪ್ರೊಜೆಕ್ಟರುಗಳೊಂದಿಗೆ ಸಂಚಾರಿ ಸಿನಿಮಾದ ಹೆಸರಿನಲ್ಲಿ ಇಬ್ಬರು ಅಪರೇಟರುಗಳಿಗಾಗಿ ಸಮ್ಮತಿಯನ್ನು ಪಡೆಯತಕ್ಕದ್ದು.

**104. ಫಿಲ್ಮುಗಳಿಗಾಗಿ ಉಗ್ರಾಣ.-** ಅಗ್ನಿ ನಿರೋಧಕ ಸಾಮಗ್ರಿಗಳಿಂದ ರಚಿಸಿದ ಫಿಲ್ಮು ಸಾಮಗ್ರಿಗಳಿಗಾಗಿ ಪ್ರೊಜೆಕ್ಷನ್ ಕೊಠಡಿ ಮತ್ತು ಸಭಾಂಗಣದಿಂದ ಎಂಟು ಮೀಟರುಗಳಿಗಿಂತ ಕಡಿಮೆಯಿಲ್ಲದ ದೂರದಲ್ಲಿ ಸ್ವತಂತ್ರವಾದ ಉಗ್ರಾಣವಿರತಕ್ಕದ್ದು:

ಪರಂತು, ಡಿಜಿಟಲ್ ಪ್ರೊಜೆಕ್ಟರ್, ಡಿಜಿಟಲ್ ಸೌಂಡ್ ಸಿಸ್ಟಮ್‌ಗಳಂಥ ಮುಂದುವರೆದ ತಂತ್ರಜ್ಞಾನದೊಂದಿಗೆ ಇರುವ ಮತ್ತು ಪ್ರಸ್ತಾವಿತ ಸಂಚಾರಿ ಸಿನಿಮಾಗಳ ಸಂದರ್ಭದಲ್ಲಿ, ಉಗ್ರಾಣವು ಅನಾವಶ್ಯಕವಾಗಿರುವಲ್ಲಿ, ಈ ನಿಯಮಗಳು ಅನ್ವಯವಾಗತಕ್ಕದ್ದಲ್ಲ.

## ಅಧ್ಯಾಯ – XIII

## ತಾತ್ಕಾಲಿಕ ಸಿನಿಮಾಗಳು

**105. ತಾತ್ಕಾಲಿಕ ಸಿನಿಮಾ.-** ತಾತ್ಕಾಲಿಕ ಸಿನಿಮಾ ಎಂದರೆ, ಸಂಚಾರಿ ಸಿನಿಮಾ, ಅರೆಖಾಯಂ ಸಿನಿಮಾ, ಡ್ರೈವ್-ಇನ್ ಸಿನಿಮಾ ಮತ್ತು ಖಾಯಂ ಸಿನಿಮಾಗಳನ್ನು ಹೊರತುಪಡಿಸಿದ ಸಿನಿಮಾ.

**106. ನಿಯಮಗಳ ಅನ್ವಯತೆ**,- (1)

(ಎ) (20)ನೇ, (21)ನೇ ಮತ್ತು (29) ಉಪನಿಯಮವನ್ನು ಹೊರತುಪಡಿಸಿದ 2ನೇ ನಿಯಮದ;

(ಬಿ) 3ನೇ, 4ನೇ, 5ನೇ, 6ನೇ, 7ನೇ ನಿಯಮದಿಂದ 23ನೇ, 24ನೇ, 25ನೇ ನಿಯಮದವರೆಗಿನ;

(ಸಿ) 26ನೇ ನಿಯಮದ, (1)(ಎ)(i)(ii)(iii)(v)(vii), (ಬಿ), (ಸಿ), (ಡಿ), (ಇ), (ಎಫ್), (ಜಿ),(ಹೆಚ್), (ಜೆ), (ಕೆ), (2) (ಎ)(ಬಿ), (3), (4) (119ಬಿ) (i), (ii) ಉಪ-ನಿಯಮಗಳ;

(ಡಿ) 27ನೇ, 28ನೇ, 30ನೇ, 31ನೇ, 32ನೇ ಮತ್ತು 33ನೇ ನಿಯಮಗಳ;

(ಇ) 34ನೇ (1) (i), (ii)ನೇ ನಿಯಮ, (2)ನೇ ನಿಯಮಗಳ 44ನೇ, 45ನೇ, 47ನೇ 56ನೇ ನಿಯಮಗಳನ್ನು ಹೊರತುಪಡಿಸಿದ 43 ರಿಂದ 56ರವರೆಗಿನ ನಿಯಮಗಳು, 3ನೇ ನಿಯಮಗಳ 48ನೇ, 51(9)ನೇ, 57 ರಿಂದ 73ನೇ, 77(5)ನೇ, 82ನೇ ನಿಯಮಗಳ;

(ಎಫ್) 35ನೇ ನಿಯಮದ;

(ಜಿ) 36ನೇ, 37ನೇ, 112(18)ನೇ, 40ನೇ, 41ನೇ ನಿಯಮದ;

(ಹೆಚ್) 42ನೇ ನಿಯಮಗಳ (1)ನೇ, (2)ನೇ, (5)ನೇ, (7)ನೇ, (8)ನೇ, (10) ರಿಂದ (16)ನೇ ಉಪ-ನಿಯಮಗಳ;

(ಐ) 43ನೇ, 46ನೇ, 48ನೇ, 49ನೇ ನಿಯಮದಿಂದ 52ನೇ, 53ನೇ, 54ನೇ, 55ನೇ, 108ನೇ, 142ನೇ ನಿಯಮಗಳ;

(ಜೆ) 57ನೇ ನಿಯಮದಿಂದ 73ನೇ, 74 ರಿಂದ 76ನೇ, 77 ರಿಂದ 84ನೇ ಮತ್ತು 85 ರಿಂದ 87ನೇ ನಿಯಮಗಳ;

- ಉಪಬಂಧಗಳು ತಾತ್ಕಾಲಿಕ ಸಿನಿಮಾಗೆ ಅನ್ವಯವಾಗತಕ್ಕದ್ದು.

(2) ಈ ನಿಯಮಗಳ 126ನೇ, 128ನೇ, 133ನೇ ನಿಯಮದ ಉಪಬಂಧಗಳು ಮತ್ತು ಈ ನಿಯಮಗಳಲ್ಲಿ ಅರೆಖಾಯಂ ಸಿನಿಮಾಗೆ ಅನ್ವಯವಾಗಬಹುದಾದ ಇತರ ಎಲ್ಲ ನಿಯಮಗಳು ತಾತ್ಕಾಲಿಕ ಸಿನಿಮಾಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

**107. ಲೈಸೆನ್ಸ್ ಮಂಜೂರಾತಿ,-** (1) ಲೈಸೆನ್ಸ್‌ಗಾಗಿ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಕೂಡಲೇ ಸಂಬಂಧಪಟ್ಟ ಇಲಾಖೆಗಳಿಗೆ ಅದನ್ನು ಕಳುಹಿಸತಕ್ಕದ್ದು. ಸಂಬಂಧಪಟ್ಟ ಇಲಾಖೆಯವರು ತಮ್ಮ ಅಭಿಪ್ರಾಯ ಅಥವಾ ಸ್ಪಷ್ಟೀಕರಣವನ್ನು ಹದಿನೈದು ದಿನಗಳನ್ನು ಮೀರದ ಅವಧಿಯೊಳಗಾಗಿ ಸಾಧ್ಯವಾಗಬಹುದಾದಷ್ಟು ಬೇಗನೆ ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ನೀಡತಕ್ಕದ್ದು. ಲೈಸೆನ್ಸು ನೀಡುವ ಪ್ರಾಧಿಕಾರಿಯು, ಸದರಿ ಇಲಾಖೆಗಳೊಂದಿಗೆ ಸಮಾಲೋಚಿಸಿ ಅದನ್ನು ಆದೇಶಿಕೆ ಮಾಡತಕ್ಕದ್ದು ಮತ್ತು ಅರ್ಜಿಯ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ನಿರಾಕ್ಷೇಪಣ ಪ್ರಮಾಣಪತ್ರವನ್ನು ಮಂಜೂರು ಮಾಡಲು ಅರ್ಜಿಯನ್ನು ಪರಿಗಣಿಸತಕ್ಕದ್ದು ಅಥವಾ ಮೂವತ್ತು ದಿನಗಳ ಗೊತ್ತುಪಡಿಸಲಾದ ಕಾಲದೊಳಗೆ ಲಿಖಿತದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಅಂತಹ ಲೈಸೆನ್ಸನ್ನು ನೀಡಲು ನಿರಾಕರಿಸತಕ್ಕದ್ದು.

**(2) ತಾತ್ಕಾಲಿಕ ಸಿನಿಮಾಗಾಗಿ ಲೈಸೆನ್ಸಿನ ಕಾಲಾವಧಿ.-** (1) ತಾತ್ಕಾಲಿಕ ಸಿನಿಮಾ ಲೈಸೆನ್ಸನ್ನು ಆ ಕಾಲದಿಂದ ಎರಡು ವರ್ಷಗಳ ಅವಧಿಯವರೆಗೆ ಮಂಜೂರು ಮಾಡಬಹುದು. ಪರಂತು, ತಾತ್ಕಾಲಿಕ ಸಿನಿಮಾ ಲೈಸೆನ್ಸನ್ನು 31.12.2020ರ ತರುವಾಯ ಮಂಜೂರು ಮಾಡತಕ್ಕದ್ದಲ್ಲ.

ಪರಂತು, ಕರ್ನಾಟಕ ಸಿನಿಮಾಗಳ (ನಿಯಂತ್ರಣ) ನಿಯಮಗಳು, 2014ರ ಪ್ರಾರಂಭದ ಮುಂಚಿತವಾಗಿ ಮಂಜೂರು ಮಾಡಲಾದ ತಾತ್ಕಾಲಿಕ ಸಿನಿಮಾ ಲೈಸೆನ್ಸನ್ನು ಕಟ್ಟಡದ ಉನ್ನತೀಕರಣ ಅಥವಾ ಹೊಸ ಕಟ್ಟಡದ ನಿರ್ಮಾಣವನ್ನು ಒಳಗೊಂಡು ಅರೆಖಾಯಂ ಸಿನಿಮಾಗೆ ಪರಿವರ್ತಿಸತಕ್ಕದ್ದು. ಪರಿವರ್ತನೆಯನ್ನು 31.12.2020ರ ಮುಂಚಿತವಾಗಿ ಪೂರ್ಣಗೊಳಿಸತಕ್ಕದ್ದು.

(2) ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಎಲ್ಲ ಅಂತಹ ತಾತ್ಕಾಲಿಕ ಸಿನಿಮಾ ಥಿಯೇಟರುಗಳನ್ನು ಪ್ರತಿ ಆರು ತಿಂಗಳಲ್ಲಿ ಪ್ರಗತಿಯನ್ನು ಪರಿಶೀಲಿಸತಕ್ಕದ್ದು ಮತ್ತು ಪರೀಕ್ಷಿಸತಕ್ಕದ್ದು ಮತ್ತು ಈ ಸಂಬಂಧದಲ್ಲಿ ಲೈಸೆನ್ಸುದಾರನು ಪ್ರಗತಿ ಮಾಡಿದನ್ನು ಅಥವಾ ಮಾಡದ್ದನ್ನು ಪರಿಶೀಲಿಸಲು ಲೈಸೆನ್ಸುದಾರನಿಗೆ ನೋಟೀಸು ನೀಡತಕ್ಕದ್ದು.

(3) ಈ ನಿಯಮದ ಉಪಬಂಧಗಳನ್ನು ಪೂರೈಸಿಲ್ಲದಿರತಕ್ಕ ಯಾವುದೇ ತಾತ್ಕಾಲಿಕ ಸಿನಿಮಾ ಥಿಯೇಟರಿನ ಲೈಸೆನ್ಸನ್ನು 01.01.2021 ರಂದು ಇದ್ದಂತೆ ರದ್ದುಗೊಳಿಸಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಲೈಸೆನ್ಸ್ ನೀಡುವ ಪ್ರಾಧಿಕಾರಿಯು ತದನುಸಾರವಾಗಿ ಕ್ರಮ ತೆಗೆದುಕೊಳ್ಳತಕ್ಕದ್ದು.

**108. ತಾತ್ಕಾಲಿಕ ಸಿನಿಮಾ ಕಟ್ಟಡ,-** (1) ತಾತ್ಕಾಲಿಕ ಸಿನಿಮಾ ಕಟ್ಟಡವನ್ನು, ಇಟ್ಟಿಗೆಗಳು, ಸಿಮೆಂಟು, ಅರಣ್ಯ ಕಟ್ಟಿಗೆ, ಹಗುರ ಮೇಲ್ಛಾವಣಿ ಶೀಟುಗಳು (ಗಟ್ಟಿ ಡಾಂಬರಿನ ಶೀಟುಗಳು) ಮೊದಲಾದವುಗಳಿಂದ ನಿರ್ಮಿಸತಕ್ಕದ್ದು ಮತ್ತು ಎಲ್ಲ ನಾಲ್ಕು ಕಡೆಗಳಲ್ಲಿನ ಗೋಡೆಗಳ ಎತ್ತರವು, ಸಭಾಂಗಣದ ಗೋಡೆಗಳ ಮತ್ತು ಎಲ್ಲ ಕಡೆಗಳಲ್ಲಿ ಕನಿಷ್ಠ 5 ಮೀಟರುಗಳು ಇರುವ ಕಾಂಪೌಂಡಿನ ಗೋಡೆಗಳ ನಡುವಿನ ಅಂತರದಲ್ಲಿ ಕನಿಷ್ಠ 2.5 ಮೀಟರುಗಳನ್ನು ಹೊಂದಿರತಕ್ಕದ್ದು.

(2) ಪ್ರಸ್ತುತ ಸಿನಿಮಾ ನಿವೇಶನದಿಂದ ಹತ್ತು ಕಿಲೋಮೀಟರುಗಳ ವ್ಯಾಸಾರ್ಧದಲ್ಲಿ ಅದೇ ಗ್ರಾಮ/ಪಟ್ಟಣದಲ್ಲಿ ಯಾವುದೇ ಇತರ ಹತ್ತಿರದ ನಿವೇಶನಕ್ಕೆ ಪ್ರಸ್ತುತ ಸಿನಿಮಾ ನಿವೇಶನದ ಸ್ಥಳವನ್ನು ಬದಲಾವಣೆ ಮಾಡಲು ಹೊಸ ನಿರಾಕ್ಷೇಪಣಾ ಪ್ರಮಾಣಪತ್ರವು ಅಗತ್ಯವಾಗಿರತಕ್ಕದ್ದಲ್ಲ. ಆದಾಗ್ಯೂ, ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಅಂತಹ ಬದಲಾವಣೆಯು, ಸಾರ್ವಜನಿಕರಿಗೆ ಅನಾನುಕೂಲವಾಗುವುದೆಂದು ಅಥವಾ ಅನಾನುಕೂಲವಾಗುವ ಸಂಭವವಿರುವುದೆಂದು ಆತನು ಅಭಿಪ್ರಾಯಪಟ್ಟಿರುವಲ್ಲಿ, ಅಂತಹ ಸಿನಿಮಾ ನಿವೇಶನದ ಸ್ಥಳವನ್ನು ಬದಲಾವಣೆ ಮಾಡಲು ಅನುಮತಿ ನೀಡತಕ್ಕದ್ದಲ್ಲ.

**109. ಅರೆಖಾಯಂ ಸಿನಿಮಾಗೆ ತಾತ್ಕಾಲಿಕ ಸಿನಿಮಾದ ಪರಿವರ್ತನೆ,-** 107ನೇ ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಅವಧಿಯ ಲೈಸೆನ್ಸಿನ ಮುಕ್ತಾಯದ ಮುಂಚಿತವಾಗಿ ಅಂತಹ ಸಿನಿಮಾ ನಿರ್ಮಾಣಕ್ಕೆ ಸಂಬಂಧಪಟ್ಟ ಉಪಬಂಧಗಳಿಗನುಸಾರವಾಗಿ ಅರೆಖಾಯಂ ಸಿನಿಮಾಗೆ ಅಂತಹ ವ್ಯಕ್ತಿಯು ತಾತ್ಕಾಲಿಕ ಸಿನಿಮಾವನ್ನು ಪರಿವರ್ತಿಸಿರುವಲ್ಲಿ, 140ನೇ ನಿಯಮದ ಮೇರೆಗೆ ತಾತ್ಕಾಲಿಕ ಸಿನಿಮಾ ಲೈಸೆನ್ಸಿಗೆ ಅರೆಖಾಯಂ ಸಿನಿಮಾ ಲೈಸೆನ್ಸನ್ನು, ಲೈಸೆನ್ಸು ನೀಡುವ ಪ್ರಾಧಿಕಾರಿಯು ಮಂಜೂರು ಮಾಡಬಹುದು.

## ಅಧ್ಯಾಯ – XIV

## ಡ್ರೈವ್ ಇನ್ ಸಿನಿಮಾಗಳು

**110. ಪರಿಭಾಷೆಗಳು.-** ಈ ಅಧ್ಯಾಯದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(1) 'ಡ್ರೈವ್ ಇನ್ ಸಿನಿಮಾ' ಎಂದರೆ ಮೋಟಾರು ಕಾರುಗಳಲ್ಲಿ ಕುಳಿತುಕೊಂಡು ಸಿನಿಮಾವನ್ನು ನೋಡಲು ಇಚ್ಛಿಸುವ ವ್ಯಕ್ತಿಗಳಿಗೆ ಸಾಮಾನ್ಯವಾಗಿ ಪ್ರವೇಶವನ್ನು ನೀಡಬಹುದಾದಂಥ ಬಯಲು ಥಿಯೇಟರ್ ಆವರಣದೊಂದಿಗಿನ ಸಿನಿಮಾ. ಆದಾಗ್ಯೂ, 'ಡ್ರೈವ್ ಇನ್ ಸಿನಿಮಾ' ಆವರಣದಲ್ಲಿ ಸಭಾಂಗಣವನ್ನು ಸಹ ಒದಗಿಸಿರುವಲ್ಲಿ ಮೋಟಾರು ಕಾರುಗಳಲ್ಲಿ ಕುಳಿತುಕೊಂಡು ಸಿನಿಮಾವನ್ನು ನೋಡಲು ಇಚ್ಛಿಸುವ ವ್ಯಕ್ತಿಗಳನ್ನು ಹೊರತುಪಡಿಸಿ ಇತರರು ಸಹ ಅಲ್ಲಿಗೆ ಪ್ರವೇಶ ಪಡೆಯಬಹುದು. ಅಂತಹ ಡ್ರೈವ್ ಇನ್ ಸಿನಿಮಾಗಳು ಒಂದು ಸಾವಿರವನ್ನು ಮೀರದಷ್ಟು ಸಂಖ್ಯೆಯ ಕಾರುಗಳಿಗೆ ಸ್ಥಳಾವಕಾಶ ಸಾಮರ್ಥ್ಯವನ್ನು ಹೊಂದಿರಬಹುದು.

(2) 'ಮೋಟಾರು ಕಾರು' ಎಂದರೆ, ಮೋಟಾರು ವಾಹನಗಳ ಅಧಿನಿಯಮ, 1988ರ (1939ರ IVನೇ ಕೇಂದ್ರ ಅಧಿನಿಯಮದ) 2ನೇ ಪ್ರಕರಣದ 16ನೇ ಖಂಡದಲ್ಲಿ ಪರಿಭಾಷಿಸಲಾದಂತೆ ಮೋಟಾರು ಕಾರು.

**111. ಇತರ ನಿಯಮಗಳ ಅನ್ವಯ.-** (1) 112 ನಿಯಮ ಮತ್ತು (2)ನೇ ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಿದ ಮಾರ್ಪಾಟುಗಳಿಗೆ ಒಳಪಟ್ಟು ಖಾಯಂ ಸಿನಿಮಾಗಳಿಗೆ ಅನ್ವಯವಾಗಬಹುದಾದ ಈ ನಿಯಮಗಳ ಎಲ್ಲ ಇತರ ಉಪಬಂಧಗಳು ಡ್ರೈವ್ ಇನ್ ಸಿನಿಮಾಗಳಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

(2) ಡ್ರೈವ್ ಇನ್ ಸಿನಿಮಾಗಳಿಗೆ ಅವುಗಳ ಅನ್ವಯದ ಬಗ್ಗೆ 24ನೇ, 27ನೇ ಮತ್ತು 38ನೇ ನಿಯಮಗಳು ಈ ಕೆಳಕಂಡ ಮಾರ್ಪಾಟುಗಳಿಗೆ ಒಳಪಟ್ಟು ಅನ್ವಯವಾಗತಕ್ಕದ್ದು ಎಂದರೆ,-

(ಎ) 24ನೇ ನಿಯಮದಲ್ಲಿ,-

(i) 2ನೇ ಉಪ-ನಿಯಮದ (ಎ) ಖಂಡದಲ್ಲಿ 'ಐದು ನೂರು ಮೀಟರುಗಳು' ಎಂಬ ಪದಗಳಿಗೆ ಬದಲಾಗಿ 'ಒಂದು ಕಿಲೋಮೀಟರು' ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು; ಮತ್ತು

(ii) ಸರ್ಕಾರವು ನಿರ್ದಿಷ್ಟಪಡಿಸಿದ ಫೀಜುಗಳಿಗನುಸಾರ ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಬಿ) 28ನೇ ನಿಯಮದಲ್ಲಿ, 'ಒಂಭತ್ತು ತಿಂಗಳು' ಎಂಬ ಪದಗಳು ಬರುವ ಎರಡೂ ಕಡೆಗಳಲ್ಲಿ ಅವುಗಳಿಗೆ ಬದಲಾಗಿ 'ಒಂದು ವರ್ಷ' ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

**112. ಡ್ರೈವ್-ಇನ್ ಸಿನಿಮಾದ ರಚನೆಗೆ ಸಂಬಂಧಪಟ್ಟಂತೆ ವಿಶೇಷ ಉಪಬಂಧಗಳು.-** (1) ಡ್ರೈವ್ ಇನ್ ಸಿನಿಮಾವು, ಅಂತಹ ಸಿನಿಮಾ ಹೊಂದಿಕೊಂಡಿರುವ ನಿವೇಶನದ ಮೇಲೆ ಸಾರ್ವಜನಿಕ ಮುಖ್ಯ ರಸ್ತೆಗೆ ಅದು ಅಭಿಮುಖವಾಗಿರತಕ್ಕದ್ದು ಮತ್ತು ಅಂತಹ ಮುಂಭಾಗದಲ್ಲಿ, ಮೋಟಾರು ಕಾರುಗಳಿಗಾಗಿ ಪ್ರವೇಶ ಮತ್ತು ನಿರ್ಗಮನಕ್ಕಾಗಿ ಸೂಕ್ತ ವ್ಯವಸ್ಥೆ ಇರತಕ್ಕದ್ದು. ಪ್ರವೇಶ ದ್ವಾರದಲ್ಲಿ ಆ ಆವರಣವನ್ನು ಪ್ರವೇಶಿಸಲು ಕಾಯುತ್ತಿರುವ ಮೋಟಾರು ಕಾರುಗಳಿಗೆ ಸಾಕಷ್ಟು ಜಾಗವನ್ನು ಒದಗಿಸತಕ್ಕದ್ದು. ಡ್ರೈವ್-ಇನ್ ಸಿನಿಮಾಗಳಲ್ಲಿ ಮೋಟಾರು ಕಾರುಗಳ ಒಟ್ಟು ಸಂಖ್ಯೆಯ ಕನಿಷ್ಠ ಪಕ್ಷ 1/5ರಷ್ಟು ಹಿಡಿಯಲು ಸಾಕಷ್ಟು ಸ್ಥಳ ಇರತಕ್ಕದ್ದು ಮತ್ತು ಆ ಪ್ರದೇಶದೊಳಕ್ಕೆ ಅಂತಹ ಕಾರುಗಳ ಪ್ರವೇಶಕ್ಕಾಗಿ ಟಿಕೇಟು ಬೂತ್‌ಗಳೊಂದಿಗೆ ಕನಿಷ್ಠ ಪಕ್ಷ ಎರಡು ಪ್ರತ್ಯೇಕವಾದ ಹೋಗುವ ದಾರಿಗಳನ್ನು ಒದಗಿಸತಕ್ಕದ್ದು. 600ಕ್ಕಿಂತ ಹೆಚ್ಚಿನ ಮೋಟಾರು ಕಾರುಗಳಿಗೆ ಸ್ಥಳಾವಕಾಶ ಮಾಡಿಕೊಡಲು ಸಿನಿಮಾವನ್ನು ನಿರ್ಮಿಸಿರುವಲ್ಲಿ ಮೋಟಾರು ಕಾರುಗಳ ನಿರ್ಗಮನಕ್ಕಾಗಿ ಕನಿಷ್ಠ ಎರಡು ಗೇಟುಗಳನ್ನು ಒದಗಿಸತಕ್ಕದ್ದು. ಪ್ರವೇಶ ಮತ್ತು ನಿರ್ಗಮನದ ಪ್ರತಿಯೊಂದು ಗೇಟಿನ ಅಗಲವು ನಾಲ್ಕು ಮೀಟರುಗಳಿಗಿಂತ ಕಡಿಮೆ ಇರತಕ್ಕದ್ದಲ್ಲ.

(2) ಡ್ರೈವ್-ಇನ್ ಸಿನಿಮಾದ ಸರಹದ್ದುಗಳಲ್ಲಿ ಕಾಂಪೌಂಡಿನೊಳಗೆ ಗೋಡೆಗೆ ಲಗತ್ತಾಗಿ ಭೂಮಿಯ ಮಟ್ಟದ ಮೇಲೆ ಎರಡು ಮೀಟರುಗಳಿಗಿಂತ ಕಡಿಮೆ ಇಲ್ಲದ ಎತ್ತರವನ್ನು ಹೊಂದಿದ ಅಗ್ನಿ ಪ್ರತಿರೋಧಕ ಸಾಮಗ್ರಿಯ ಕಾಂಪೌಂಡ್ ಗೋಡೆಯನ್ನು ರಚಿಸತಕ್ಕದ್ದು ಅಥವಾ ಇಡೀ ಕಾಂಪೌಂಡಿನ ಸುತ್ತ ಮುಳ್ಳು ತಂತಿ ಬೇಲಿ ಮತ್ತು ಕಂಬಿಯ ಬೇಲಿಯು ಇರತಕ್ಕದ್ದು.

(3) ಪ್ರವೇಶ ಹಾಗೂ ನಿರ್ಗಮನದ ಪ್ರದೇಶಗಳನ್ನು ಸಾಕಷ್ಟು ಪ್ರಕಾಶಮಾನವಾದ ದೀಪಗಳ ಮೂಲಕ ಬೆಳಗಿಸತಕ್ಕದ್ದು.

(4) ಪರದೆಯ ಇಡೀ ಗೆರೆಗೆ ಸಂಬಂಧಿಸಿದಂತೆ ವೀಕ್ಷಕರ ಪ್ರದೇಶದ ಪಾರ್ಶ್ವದಲ್ಲಿಯ ಪರಿಮಿತಿಯು 350ರ ಕೋನಕ್ಕೆ ಸೀಮಿತವಾಗಿರತಕ್ಕದ್ದು.

(5) ಪರದೆಗೆ ಅಭಿಮುಖವಾಗಿರುವ ಮೋಟಾರು ಕಾರುಗಳ ಸಾಲುಗಳನ್ನು ಕೇಂದ್ರ ರೇಖೆಯ ಮೇಲೆ ಪರದೆಯ ಹಿಂಭಾಗದಲ್ಲಿ 0.6ಫಿ ಪರದೆಯ ಅಗಲದ ದೂರದಲ್ಲಿ ಅದರ ಕೇಂದ್ರವನ್ನು ಹೊಂದಿರುವ ವೃತ್ತ ಪರಿಧಿಯ ರೂಪದಲ್ಲಿ ವ್ಯವಸ್ಥೆ ಮಾಡತಕ್ಕದ್ದು.

(6) ಪರದೆಗೆ ಅಭಿಮುಖವಾಗಿರುವ ಸಾಲಿನಲ್ಲಿ ಮೋಟಾರು ವಾಹನಗಳಿಗೆ ಸ್ಥಳಾವಕಾಶವನ್ನು ಒದಗಿಸಿರುವ ಬಂದು ಹೋಗುವ ದಾರಿಯ ಆಗಲವು 10 ಮೀಟರ್ಗಳಿಗಿಂತ ಕಡಿಮೆ ಇರತಕ್ಕದ್ದಲ್ಲ.

(7) ಪರದೆ ಹಾಗೂ ವಾಹನಗಳ ಮುಂದಿನ ಸಾಲಿನ ನಡುವಣ ಅಂತರವು ಪರದೆಯ ಮೇಲಿನ ಚಿತ್ರದ ಅಗಲದ 1.5ರಷ್ಟಕ್ಕಿಂತ ಕಡಿಮೆ ಇರತಕ್ಕದ್ದಲ್ಲ.

(8) ವೀಕ್ಷಕರ ಪ್ರದೇಶದ ಎರಡೂ ಬದಿಯಲ್ಲಿ 10 ಮೀಟರುಗಳಿಗಿಂತ ಕಡಿಮೆ ಇಲ್ಲದ ಅಗಲದ ತಡೆ ಇಲ್ಲದ ದಾರಿಯನ್ನು ಒದಗಿಸತಕ್ಕದ್ದು.

(9) ಮೋಟಾರು ಕಾರುಗಳ ಎಲ್ಲಾ ಸಾಲುಗಳಲ್ಲಿ, ಮೋಟಾರು ಕಾರುಗಳ ಮುಂಭಾಗವು ಹಿಂದುಗಡೆಯಿಂದ ಪರದೆಯ ಪೂರ್ಣ ನೋಟವು ಕಾಣುವುದನ್ನು ಸುನಿಶ್ಚಿತಗೊಳಿಸಲು ಹಿಂಭಾಗಕ್ಕಿಂತ ಹೆಚ್ಚು ಎತ್ತರದಲ್ಲಿ ಇರತಕ್ಕದ್ದು.

(10) ಪರದೆಯ ಮೇಲೆ ಬಿಟ್ಟ ಚಿತ್ರದ ಗಾತ್ರವು ಈ ಕೆಳಗೆ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು, ಎಂದರೆ:-

1. 200ರಿಂದ 400 ಮೋಟಾರು ಕಾರುಗಳಿಗಾಗಿ ಎತ್ತರ 11 ಮೀಟರುಗಳು ಅಗಲ 25 ಮೀಟರುಗಳು ಭೂಮಿಯ ಮೇಲೆ ತಳ 6 ಮೀಟರುಗಳು

2. 401ರಿಂದ 600 ಮೋಟಾರು ಕಾರುಗಳಿಗಾಗಿ ಎತ್ತರ 13 ಮೀಟರುಗಳು ಅಗಲ 30 ಮೀಟರುಗಳು ಭೂಮಿಯ ಮೇಲೆ ತಳ 7 ಮೀಟರುಗಳು

3. 601ರಿಂದ 1000 ಮೋಟಾರು ಕಾರುಗಳಿಗಾಗಿ ಎತ್ತರ 19 ಮೀಟರುಗಳು ಅಗಲ 43 ಮೀಟರುಗಳು ಭೂಮಿಯ ಮೇಲೆ ತಳ 8 ಮೀಟರುಗಳು

(11) ಪರದೆಯು, ಸೂರ್ಯನು ಮುಳುಗುವುದರಿಂದ ಅಥವಾ ಮುಸ್ಸಂಜೆಯ ಇಳಕು ಅದರ ಮೇಲೆ ಬೀಳದ ಹಾಗೆ ಇರತಕ್ಕದ್ದು. ಅದನ್ನು ಕಾಂಕ್ರೀಟು ಸಾಮಗ್ರಿ ಅಥವಾ ಉಕ್ಕಿನ ಚೌಕಟ್ಟಿನಿಂದ ನಿರ್ಮಿಸಿರತಕ್ಕದ್ದು.

(12) ಗಂಟೆಗೆ 160 ಕಿಲೋ ಮೀಟರುಗಳಷ್ಟು ವೇಗದ ಗಾಳಿಯನ್ನು ಅಥವಾ ಪ್ರತಿ ಚದರ ಮೀಟರಿಗೆ 120 ಕಿಲೋ ಗ್ರಾಂಗಳ ಒತ್ತಡವನ್ನು ತಡೆದುಕೊಳ್ಳುವ ಹಾಗೆ ಪರದೆಯನ್ನು ನಿರ್ಮಿಸಬೇಕು. ಪರದೆಯು ಸ್ವಲ್ಪ ಮುಂದಕ್ಕೆ ಬಾಗಿರತಕ್ಕದ್ದು. ಗರಿಷ್ಠ ಬಾಗುವಿಕೆಯು ಲಂಬ ಅಕ್ಷದೊಂದಿಗೆ 8 ಡಿಗ್ರಿಗಳಷ್ಟಿರತಕ್ಕದ್ದು.

(13) ಪರದೆ ಅಥವಾ ಅದರ ಭಾಗವು ರಸ್ತೆಯ ಬದಿಯಿಂದ ಕಾಣಿಸತಕ್ಕದ್ದಲ್ಲ.

(14) ಪರದೆಯ ತುತ್ತ ತುದಿಯಲ್ಲಿ ಕೆಂಪು ಎಚ್ಚರಿಕೆ ಮಿತಿಗಳನ್ನು ಏರಿಸಿರತಕ್ಕದ್ದು ಮತ್ತು ಅದರ ಮೇಲೆ ವೀಕ್ಷಕರ ಪ್ರದೇಶಕ್ಕೆ ಬೆಳಕು ನೀಡಲು ಪ್ರವಾಹ ದೀಪಗಳನ್ನು ಏರಿಸತಕ್ಕದ್ದು.

(15) ಮೋಟಾರು ಕಾರುಗಳ ಹೋಗುವ ದಾರಿಗಳು ಪರ್ಯಾಯವಾಗಿ 10 ಮೀಟರುಗಳ ಅಗಲ ಅಥವಾ 10 ಮೀಟರುಗಳು ಮತ್ತು 8 ಮೀಟರುಗಳು ಅಗಲವಾಗಿ ಏಕ ಪ್ರಕಾರವಾಗಿ ಇರತಕ್ಕದ್ದು. ಪರಂತು, ಮೊದಲಿನ 4 ಸಾಲುಗಳು 10 ಮೀಟರುಗಳ ಅಗಲದ ಹೋಗುವ ದಾರಿಗಳನ್ನು ಹೊಂದಿರತಕ್ಕದ್ದು.

(16) ಧ್ವನಿವರ್ಧಕ ಕಂಬಗಳನ್ನು ಒಂದು ಮೋಟಾರು ಕಾರಿನ ಎರಡೂ ಕಡೆಯಲ್ಲಿ ಇರುವ ಹಾಗೆ ಒದಗಿಸತಕ್ಕದ್ದು. ಒಂದು ಸಾಲಿನಲ್ಲಿ ಎರಡು ಕಂಬಗಳ ನಡುವಿನ ಅಂತರವು 6 ಮೀಟರುಗಳಿಗಿಂತ ಕಡಿಮೆ ಇರತಕ್ಕದ್ದಲ್ಲ. ಧ್ವನಿವರ್ಧಕಗಳಿಗಾಗಿನ ಕಂಬಗಳನ್ನು ಕಾಂಕ್ರೀಟಿನ ತಳದಲ್ಲಿ ಹೂಳತಕ್ಕದ್ದಲ್ಲ ಮತ್ತು ಅವುಗಳ ಸ್ಥಾನವನ್ನು ಸೂಚಿಸುವ ಹಾಗೆ ಅವುಗಳ ಮೇಲೆ ದೀಪವು ಇರತಕ್ಕದ್ದು. ದೀಪಗಳು ಕಂಬಗಳ ಪಕ್ಕದಲ್ಲಿ ಪರದೆಗೆ ವಿಮುಖವಾಗಿ ಇರತಕ್ಕದ್ದು. ಅದು ಆ ಸಾಲು ಮತ್ತು ಸ್ಥಳದ ಸಂಖ್ಯೆಯನ್ನು ಸಹ ಬೆಳಗಿಸತಕ್ಕದ್ದು:

ಪರಂತು, ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ಮನದಟ್ಟಾಗುವಂತೆ ಆ ಧ್ವನಿಯ ಸಂವಹನಕ್ಕಾಗಿ ಪರ್ಯಾಯ ವ್ಯವಸ್ಥೆಯನ್ನು ಮಾಡಿದ್ದರೆ ಪ್ರತಿಯೊಂದು ಮೋಟಾರು ಕಾರಿಗಾಗಿ ಧ್ವನಿವರ್ಧಕ ಸಹಿತ ಕಂಬವನ್ನು ಒದಗಿಸುವುದು ಅವಶ್ಯವಿರತಕ್ಕದ್ದಲ್ಲ:

ಮತ್ತು ಪರಂತು, ಯಾವುದೇ ಸಂದರ್ಭದಲ್ಲಿ ಒಂದೇ ಸಾಲಿನಲ್ಲಿ ಪಕ್ಕಪಕ್ಕದಲ್ಲಿ ನಿಂತಿರುವ ಯಾವುವೇ ಎರಡು ಮೋಟಾರು ಕಾರುಗಳ ನಡುವಣ ಅಂತರವು ಎರಡು ಮೀಟರುಗಳಿಗಿಂತ ಕಡಿಮೆ ಇರತಕ್ಕದ್ದಲ್ಲ.

(17) (i) ಪ್ರೊಜೆಕ್ಷನ್ ಕೊಠಡಿಯು, ಆವರಣದ ಕೇಂದ್ರದಲ್ಲಿ ಆವೃತ ಕಟ್ಟಡದಲ್ಲಿ ಇರತಕ್ಕದ್ದು ಅಂತಹ ಪ್ರೊಜೆಕ್ಷನ್ ಕೊಠಡಿಯು ಸಾರ್ವಜನಿಕ ಶೌಚಗೃಹ, ಕ್ಯಾಂಟೀನ್, ಅಡುಗೆ ಮನೆ, ಅಂಗಡಿಗಳ ಒಂದು ಭಾಗ ಮತ್ತು ಅಂತಹವೇ ಸೌಕರ್ಯಗಳಿಗೆ ಸ್ಥಳಾವಕಾಶವನ್ನು ಒದಗಿಸುವ ರಚನೆಯ ಭಾಗವಾಗಿರಬಹುದು. ಈ ರಚನೆಗಳಿಂದ ಬೆಳಕು ಚಿತ್ರವನ್ನು ಬಿಡುವುದರ ಮೇಲೆ ಬೀಳದಂತೆ ಅಥವಾ ಅದನ್ನು ಸರಿಯಾಗಿ ನೋಡುವುದನ್ನು ಅಡ್ಡಿಪಡಿಸದಂತೆ ಸಾಕಷ್ಟು ಎಚ್ಚರಿಕೆಯನ್ನು ವಹಿಸತಕ್ಕದ್ದು. ಪ್ರೊಜೆಕ್ಷನ್ ಕೊಠಡಿಯ ಹಿಂಭಾಗದಲ್ಲಿ ಸಹ ಕಾರು ಹೋಗುವ ದಾರಿಗಳನ್ನು ಒದಗಿಸಿರುವಲ್ಲಿ ಆ ಪ್ರದೇಶವನ್ನು ಪರದೆಯ ಸರಿಯಾದ ದೃಶ್ಯವನ್ನು ಪಡೆಯುವ ಹಾಗೆ ಎತ್ತರಿಸಿರತಕ್ಕದ್ದು.

(ii) ಇಬ್ಬರು ಆಪರೇಟರುಗಳು, ಸಾಂಪ್ರದಾಯಿಕ ಪ್ರೊಜೆಕ್ಟರುಗಳೊಂದಿಗೆ ಡ್ರೈವ್-ಇನ್ ಸಿನಿಮಾದ ಹೆಸರಿನಲ್ಲಿ ಸಮ್ಮತಿಯನ್ನು ಪಡೆಯತಕ್ಕದ್ದು ಮತ್ತು ಪ್ರತಿ ಪರದೆಗಾಗಿ ಒಬ್ಬ ಆಪರೇಟರನು, ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯಿಂದ ಡಿಜಿಟಲ್ ಪ್ರೊಜೆಕ್ಷನ್ ವ್ಯವಸ್ಥೆಯಂಥ ಮುಂದುವರೆದ ತಂತ್ರಜ್ಞಾನದೊಂದಿಗೆ ಡ್ರೈವ್-ಇನ್ ಸಿನಿಮಾಗಳ ಹೆಸರಿನಲ್ಲಿ ಸಮ್ಮತಿಯನ್ನು ಪಡೆಯತಕ್ಕದ್ದು.

(18) ಡ್ರೈವ್-ಇನ್ ಸಿನಿಮಾ ಲೈಸೆನ್ಸಿಗಾಗಿ ಫೀಜುಗಳು, ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದಂತಿರತಕ್ಕದ್ದು.

## ಅಧ್ಯಾಯ – XV

## ಅರೆ ಖಾಯಂ ಸಿನಿಮಾ ಕಟ್ಟಡಗಳು

**113. ಅರೆಖಾಯಂ ಸಿನಿಮಾ ಕಟ್ಟಡ.-** ಈ ಅಧ್ಯಾಯದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, "ಅರೆಖಾಯಂ ಸಿನಿಮಾ ಕಟ್ಟಡ" ಎಂದರೆ, ಸಂಚಾರಿ ಸಿನಿಮಾ ಕಟ್ಟಡ, ತಾತ್ಕಾಲಿಕ ಸಿನಿಮಾ ಕಟ್ಟಡ, ಡ್ರೈವ್ ಇನ್ ಸಿನಿಮಾ ಕಟ್ಟಡ, ಖಾಯಂ ಸಿನಿಮಾ ಕಟ್ಟಡ ಅಥವಾ ಮಲ್ಟಿಪ್ಲೆಕ್ಸ್ ಸಿನಿಮಾ ಕಟ್ಟಡಗಳಿಗಾಗಿ ಲೈಸನ್ಸ್ ಹೊಂದಿರುವ ಕಟ್ಟಡವನ್ನು ಹೊರತುಪಡಿಸಿದ ಇತರ ಕಟ್ಟಡಗಳು.

(2). ನಿಯಮಗಳ ಅನ್ವಯ.- ಈ ಅಧ್ಯಾಯದಲ್ಲಿ ನಿಯಮಗಳು ಮತ್ತು ಈ ಕೆಳಗೆ ನಿರ್ದಿಷ್ಟಪಡಿಸಿದ ನಿಯಮಗಳು ಮತ್ತು ಉಪನಿಯಮಗಳು ಅರೆಖಾಯಂ ಸಿನಿಮಾ ಕಟ್ಟಡಗಳಿಗೆ ಯಥೋಚಿತ ಬದಲಾವಣೆಗಳೊಂದಿಗೆ ಅನ್ವಯವಾಗತಕ್ಕದ್ದು, ಎಂದರೆ.-

(ಎ) 2ನೇ ನಿಯಮದಲ್ಲಿ (21), (23) ಮತ್ತು (28)ನೇ ಉಪನಿಯಮಗಳನ್ನು ಹೊರತುಪಡಿಸಿ.

(ಬಿ) 3, 4, 5, 6, 7 ರಿಂದ 23 ರವರೆಗಿನ ನಿಯಮ

(ಸಿ) 24 ಮತ್ತು 25ನೇ ನಿಯಮ

(ಡಿ) 26ನೇ ನಿಯಮದ, (1)(ಎ)(i)(ii)(iii)(v)(vii), (ಬಿ), (ಸಿ), (ಡಿ), (ಇ), (ಎಫ್), (ಜಿ), (ಹೆಚ್), (ಐ), (ಜೆ), (ಕೆ), (2)(i), (ii) (3) ಮತ್ತು (4)ನೇ ಉಪನಿಯಮಗಳು

(ಇ) ನಿಯಮ 27, 28, 30, 31, 32 ಮತ್ತು 33ನೇ ನಿಯಮ

(ಎಫ್) 34ನೇ ನಿಯಮ (1) (ಎ) (ಬಿ), (2) ನಿಯಮಗಳಲ್ಲಿ 43 ರಿಂದ 56ರ ವರೆಗಿನ ನಿಯಮಗಳನ್ನು ಹೊರತುಪಡಿಸಿ, 44, 45, 47 ಮತ್ತು 56(2) ನಿಯಮಗಳಲ್ಲಿ 3, 48, 51(9), 57 ರಿಂದ 73, 77(5) ಮತ್ತು 82ನೇ ನಿಯಮಗಳು.

(ಜಿ) 35ನೇ ನಿಯಮ

(ಹೆಚ್) 36, 37, 40 ಮತ್ತು 41ನೇ ನಿಯಮ

(ಐ) 42ನೇ ನಿಯಮದ (1), (2), (5), (7), (8), (9), (10) ಮತ್ತು (12) ರಿಂದ (18) ಉಪ-ನಿಯಮಗಳು.

(ಜೆ) 43, 46, 48, 49 ರಿಂದ 52, 53, 54 ಮತ್ತು 55ನೇ ನಿಯಮಗಳು.

(ಕೆ) 57 ರಿಂದ 73, 74 ರಿಂದ 76, 77 ರಿಂದ 84 ಮತ್ತು 85-87 ನಿಯಮಗಳು.

**114. ಅರೆಖಾಯಂ ಸಿನಿಮಾ ಸ್ಥಳಕ್ಕಾಗಿ ನಿರಾಕ್ಷೇಪಣಾ ಪ್ರಮಾಣಪತ್ರದ ಮಂಜೂರಾತಿಯ ಮೇಲೆ ನಿರ್ಬಂಧಗಳು.-** ಅರೆಖಾಯಂ ಸಿನಿಮಾದ ಸ್ಥಳಕ್ಕಾಗಿ,-

(ಎ) ಯಾವ ಪಟ್ಟಣಗಳು ಮತ್ತು ನಗರಗಳಲ್ಲಿನ ಜನಸಂಖ್ಯೆಯು 50,000 ಅಥವಾ ಅದಕ್ಕಿಂತ ಹೆಚ್ಚು ಇರುವುದೋ ಆ ಪಟ್ಟಣಗಳು ಮತ್ತು ನಗರಗಳು;

(ಬಿ) ಯಾವ ಸ್ಥಳದಲ್ಲಿ ಅಸ್ತಿತ್ವದಲ್ಲಿರುವ ಖಾಯಂ ಸಿನಿಮಾಗಳ ಮತ್ತು ಅರೆಖಾಯಂ ಸಿನಿಮಾ ಕಟ್ಟಡಗಳ ಒಟ್ಟು ಸಂಖ್ಯೆಯು 26ನೇ ನಿಯಮದ 2ನೇ ಉಪನಿಯಮಕ್ಕನುಸಾರವಾಗಿ ಅಂತಹ ಸ್ಥಳದಲ್ಲಿ ಲೈಸನ್ಸ್ ಹೊಂದಿರುವ ಖಾಯಂ ಸಿನಿಮಾ ಕಟ್ಟಡಗಳ ಸಂಖ್ಯೆಯನ್ನು ಮೀರಿದಲ್ಲಿ

- ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಮಂಜೂರು ಮಾಡತಕ್ಕದಲ್ಲ.

**115. ಕೆಲವು ಅಧಿಕಾರಿಗಳ ಮೂಲಕ ಪರಿಶೀಲಿಸಲು ಅಧಿಕಾರ.-** (1) ಲೈಸೆನ್ಸ್ ನೀಡುವ ಪ್ರಾಧಿಕಾರಿ ಅಥವಾ ಆತನಿಂದ ಅಧಿಕೃತಗೊಂಡ ಅಧಿಕಾರಿ ಅಥವಾ ಪೊಲೀಸ್ ಠಾಣಾಧಿಕಾರಿಯ ದರ್ಜೆಗಿಂತ ಕಡಿಮೆಯಿಲ್ಲದ ಯಾರೇ ಪೊಲೀಸ್ ಅಧಿಕಾರಿ; ಅಥವಾ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಗ್ನಿಶಾಮಕ ಠಾಣಾಧಿಕಾರಿಯ ದರ್ಜೆಗಿಂತ ಕಡಿಮೆಯಿಲ್ಲದ ಯಾರೇ ಅಗ್ನಿಶಾಮಕ ಅಧಿಕಾರಿ; ಅಥವಾ ತಾಲ್ಲೂಕು ಆರೋಗ್ಯಾಧಿಕಾರಿ ದರ್ಜೆಗಿಂತ ಕಡಿಮೆಯಿಲ್ಲದ ಯಾರೇ ಆರೋಗ್ಯಾಧಿಕಾರಿ; ಅಥವಾ ವಿದ್ಯುಚ್ಛಕ್ತಿ ಪರಿಶೀಲಕನ ದರ್ಜೆಗಿಂತ ಕಡಿಮೆಯಿಲ್ಲದ ಯಾರೇ ಅಧಿಕಾರಿ; ಅಥವಾ ಪ್ರದೇಶದ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಯಾರೇ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್; ಅಥವಾ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು, ಅಥವಾ ಆತನಿಂದ ಅಧಿಕೃತಗೊಂಡ ಯಾರೇ ವ್ಯಕ್ತಿಯು, ಲೈಸೆನ್ಸ್‌ದಾರನು ಈ ಅಧಿನಿಯಮ ಮತ್ತು ನಿಯಮಗಳ ಮೇರೆಗೆ ರಚಿಸಿದ ಉಪಬಂಧಗಳನ್ನು ಪಾಲನೆ ಮಾಡಿರುವುದನ್ನು ಸ್ವತಃ ತಾನೇ ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ಈ ಅಧಿನಿಯಮದ ಮತ್ತು ನಿಯಮಗಳ ಮೇರೆಗೆ ಲೈಸೆನ್ಸ್ ಪಡೆದ ಅಥವಾ ಲೈಸೆನ್ಸ್ ನೀಡಲು ಉದ್ದೇಶಿಸಿದ ಸ್ಥಳವನ್ನು ಯಾವುದೇ ಸಮಯದಲ್ಲಿ ಪ್ರವೇಶಿಸಬಹುದು.

(2) ಲೈಸೆನ್ಸ್‌ದಾರನು (1)ನೇ ಉಪ-ನಿಯಮದಲ್ಲಿ ಉಲ್ಲೇಖಿಸಲಾದ ಯಾರೇ ಅಧಿಕಾರಿಗಳು ಕೋರಿಕೆಯ ಮೇಲೆ ಪಡೆದಿರುವ ಲೈಸೆನ್ಸ್‌ನ್ನು ಯೋಜನೆ ಮತ್ತು ಅದರ ವಿವರಣೆಗಳನ್ನು ಲಗತ್ತಿಸಿ ಹಾಜರುಪಡಿಸತಕ್ಕದ್ದು. ಮತ್ತು ಸದರಿ ಅಧಿಕಾರಿಗಳು ಲೈಸನ್ಸ್ ಪ್ರಾಧಿಕಾರದ ಮುಖಾಂತರ ಲೈಸೆನ್ಸ್‌ದಾರನಿಗೆ, ಸಾರ್ವಜನಿಕ ಸುರಕ್ಷತೆಗೆ ಅಥವಾ ಅನುಕೂಲತೆಗೆ ಸಂಬಂಧಿಸಿದಂತೆ ಅಥವಾ ಕಾನೂನು ಸುವ್ಯವಸ್ಥೆ, ಶಾಂತಿ ಮತ್ತು ಸಾರ್ವಜನಿಕ ಸಭ್ಯತೆಗಳನ್ನು ಸಂರಕ್ಷಿಸುವುದಕ್ಕಾಗಿ ಮತ್ತು ನಿರ್ವಹಿಸುವುದಕ್ಕಾಗಿ ಕಾಲಕಾಲಕ್ಕೆ ಅಥವಾ ಸಂದರ್ಭವು ಒದಗಿ ಬಂದಂತೆ ತನ್ನ ಆದೇಶಗಳನ್ನು ಅವನಿಗೆ ತಿಳಿಸತಕ್ಕದ್ದು. ಸಂದರ್ಭಗಳು ಹಾಗೆ ಅಗತ್ಯಪಡಿಸಿದರೆ, ಲೈಸೆನ್ಸು ಪ್ರಾಧಿಕಾರವು ಲೈಸೆನ್ಸುದಾರನಿಗೆ ನೋಟೀಸನ್ನು ಕೊಟ್ಟ ತರುವಾಯ, ಹೆಚ್ಚುವರಿ ಸಂರಕ್ಷಣೆಗಳನ್ನು ಒದಗಿಸಿ ಆತನಿಗೆ ನಿರ್ದೇಶಿಸಬಹುದು ಮತ್ತು ಲೈಸೆನ್ಸ್‌ದಾರನು ಅಂತಹ ನಿರ್ದೇಶನಗಳನ್ನು ಪಾಲಿಸತಕ್ಕದ್ದು ಮತ್ತು ಅವನು ಅಂತಹ ನಿರ್ದೇಶನಗಳನ್ನು ಪಾಲಿಸಲು ವಿಫಲನಾದಲ್ಲಿ ಆ ಯಾವುದೇ ಲೈಸೆನ್ಸ್ ರದ್ದಿಯಾತಿಗೆ ಅಥವಾ ಅಮಾನತ್ತಿಗೆ ಗುರಿಯಾಗತಕ್ಕದ್ದು.

(3) ಸಾರ್ವಜನಿಕರು ಸಾಂಕ್ರಾಮಿಕ ರೋಗಗಳ ಅವಧಿಯಲ್ಲಿ ಮತ್ತು ಅದೇ ರೀತಿಯ ಆರೋಗ್ಯಕ್ಕೆ ಸಂಬಂಧಿಸಿದ ಅಪಾಯಗಳ ಕಾಲಾವಧಿಯಲ್ಲಿ ಅಥವಾ ಪ್ರಕೃತಿ ವಿಕೋಪಗಳ ಸಂದರ್ಭದಲ್ಲಿ ಸಾಮಾನ್ಯವಾಗಿ, ಲೈಸೆನ್ಸ್ ಪ್ರಾಧಿಕಾರವು ಜಿಲ್ಲಾ ಆರೋಗ್ಯ ಅಧಿಕಾರಿ, ತಾಲ್ಲೂಕು ಆರೋಗ್ಯ ಅಧಿಕಾರಿ ಅಥವಾ ಪುರಸಭೆ ಯಾವುದಾದರೂ ಇದ್ದರೆ ಅದರ ಆರೋಗ್ಯ ಅಧಿಕಾರಿಗಳೊಂದಿಗೆ ಸಮಾಲೋಚಿಸಬಹುದು, ಅವರು ಹಾಗೇ ನೀಡಿದ ಸಲಹೆಗಳೇನಾದ್ದರು ಇದ್ದರೆ, ಅದನ್ನು ವಿಶೇಷ ನೋಟೀಸಿನ ಮೂಲಕ ನಿರ್ದೇಶಿಸಬಹುದು,-

(ಎ) ಅಗತ್ಯತೆ ಉಂಟಾದ ಪಕ್ಷದಲ್ಲಿ, ಸಂಪೂರ್ಣವಾಗಿ ಮುಕ್ತಾಯಗೊಳಿಸುವುದು;

(ಬಿ) 49ನೇ ನಿಯಮದಲ್ಲಿ ನಿಯಮಿಸಲಾದ ಸ್ಥಳವಕಾಶದ ಪ್ರಮಾಣವನ್ನು ಕಡಿಮೆ ಮಾಡುವುದು;

(ಸಿ) ಆ ಯಾವುದೇ ಆವರಣಗಳು, ನಿಯತಕಾಲಿಕವಾಗಿ ಸೋಂಕು ನಿವಾರಣೆಗಾಗಿ ಸೋಂಕು ನಿವಾರಕಗಳನ್ನು ಸಿಂಪಡಿಸಲು; ಮತ್ತು ರೋಗಕಾರಕ ಕ್ರಿಮಿಗಳನ್ನು ನಾಶಗೊಳಿಸಲು ಒಳಗೊಳ್ಳಬಹುದು; ಮತ್ತು

(ಡಿ) ನೋಟಿಸಿನಲ್ಲಿ ನಿರ್ದಿಷ್ಟಪಡಿಸಿದಂತೆ ಉತ್ತಮ ಗಾಳಿ ಬೆಳಕಿಗೆ ಅಂತಹ ಇತರ ಮಾನ ದಂಡಗಳನ್ನು ಅಳವಡಿಸಿಕೊಳ್ಳಬಹುದು.

- ಮತ್ತು ಲೈಸೆನ್ಸ್‌ದಾರನು ಮೇಲೆ ಹೇಳಿದ ಯಾವುದೇ ಅಂತಹ ನಿರ್ದೇಶನಗಳನ್ನು ಪಾಲಿಸತಕ್ಕದ್ದು ಮತ್ತು ಅವನು ಅಂತಹ ನಿರ್ದೇಶನಗಳನ್ನು ಹಾಗೆ ಪಾಲಿಸಲು ವಿಫಲನಾದ ಸಂದರ್ಭದಲ್ಲಿ, ಅವನ ಆ ಯಾವುದೇ ಲೈಸೆನ್ಸ್ ರದ್ದಿಯಾತಿಗೆ ಅಥವಾ ಅಮಾನತಿಗೆ ಗುರಿಯಾಗತಕ್ಕದ್ದು.

**116. ಅರೆಖಾಯಂ ಸಿನಿಮಾ ಕಟ್ಟಡದ ನಿರ್ಮಾಣಕ್ಕಾಗಿ ಅರ್ಜಿ.-** ಅರೆಖಾಯಂ ಸಿನಿಮಾ ಕಟ್ಟಡವನ್ನು ನಿರ್ಮಿಸುವುದಕ್ಕೆ ಅಪೇಕ್ಷಿಸುವ ಯಾರೇ ವ್ಯಕ್ತಿಯು 'ಎ' ನಮೂನೆಯಲ್ಲಿ ಅರ್ಜಿಯನ್ನು ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ಸಲ್ಲಿಸತಕ್ಕದ್ದು. ಅವನು ಈ ಸಂಬಂಧದಲ್ಲಿ 'ಬಿ' ನಮೂನೆಯಲ್ಲಿ ನೋಟೀಸನ್ನು ಉದ್ದೇಶಿತ ನಿವೇಶನದ ಮೇಲಿನ ಫಲಕದ ಮೇಲೆ ಅಥವಾ ಸಂದರ್ಭಾನುಸಾರ ಸಾರ್ವಜನಿಕ ಮುಖ್ಯ ರಸ್ತೆಯಿಂದ ಅದು ಸ್ಪಷ್ಟವಾಗಿ ನೋಡಬಹುದಾದಂಥ ಸ್ಥಳದಲ್ಲಿ ಫಲಕದ ಮೇಲೆ ಸಹ ನೋಟೀಸನ್ನು ಹಾಕತಕ್ಕದ್ದು. ಅಂತಹ ನೋಟೀಸು ಪ್ರಾದೇಶಿಕ ಭಾಷೆಯಲ್ಲಿ ಇರತಕ್ಕದ್ದು ಮತ್ತು ಇಂಗ್ಲೀಷಿನಲ್ಲೂ ಇರತಕ್ಕದ್ದು. ನೋಟೀಸನ್ನು ಲೈಸನ್ಸ್ ನೀಡುವ ಪ್ರಾಧಿಕಾರಿಯು ಲೈಸೆನ್ಸ್‌ಗಾಗಿ ಅರ್ಜಿಯನ್ನು ತೀರ್ಮಾನಿಸುವವರೆಗೂ ಅದನ್ನು ಫಲಕದ ಮೇಲೆ ಪ್ರದರ್ಶಿಸತಕ್ಕದ್ದು. ಆ ಫಲಕವು ಕನಿಷ್ಠ 1.25 ಮಿ ಘಿ 1.00 ಮೀಟರು ಅಳತೆಯದ್ದಾಗಿರತಕ್ಕದ್ದು ಮತ್ತು ಆ ನೋಟೀಸು ದಪ್ಪವಾದ ಹಾಗೂ ಸ್ಪಷ್ಟವಾಗಿ ಓದಬಹುದಾದ ಅಕ್ಷರಗಳಲ್ಲಿ ಇರತಕ್ಕದ್ದು.

(2) ಅರ್ಜಿಯೊಂದಿಗೆ ಇವುಗಳನ್ನು,-

(i) ಉದ್ದೇಶಿತ ಸ್ಥಳದಿಂದ 500 ಮೀಟರ್‌ಗಳ ದೂರದವರೆಗೆ ಇರುವ ಸುತ್ತಮುತ್ತಲ ರಸ್ತೆಗಳು ಮತ್ತು ಕಟ್ಟಡಗಳನ್ನು, ಸದರಿ ಸ್ಥಳದಿಂದ ಎಲ್ಲ ಶೈಕ್ಷಣಿಕ ಸಂಸ್ಥೆಗಳು, ಆಸ್ಪತ್ರೆಗಳು, ದೇವಾಲಯಗಳು ಅಥವಾ ಇತರ ಪ್ರಮುಖ ಸಾರ್ವಜನಿಕರ ಸ್ಥಳಗಳ ದೂರಗಳನ್ನು ಸ್ಪಷ್ಟವಾಗಿ ಸೂಚಿಸುವ ಒತ್ತು ರೇಖಾ ಚಿತ್ರ ಮತ್ತು ಡಿಜಿಟಲ್‌ನ ನಮೂನೆಯಲ್ಲಿರುವುದನ್ನು ಸಹ ಒಂದು ಮುದ್ರಿತ ನಕ್ಷೆಯೊಂದಿಗೆ ಅದರ ಆರು ಉದ್ಧೃತ ಪ್ರತಿಗಳನ್ನು, ಅವುಗಳನ್ನು ಪಟ್ಟಣ ನಕ್ಷೆಯಲ್ಲಿ ಸರಿಯಾಗಿ ಪ್ರಮಾಣೀಕರಿಸಿರುವುದನ್ನು ಮತ್ತು ಅದೇ ನಕ್ಷೆಯ ಆರು ಮುದ್ರಿತಗಳನ್ನು ಅಥವಾ ಪ್ರತಿಗಳನ್ನು ಒದಗಿಸತಕ್ಕದ್ದು.

(ii) ಅರೆಖಾಯಂ ಸಿನಿಮಾ ಕಟ್ಟಡ ಮತ್ತು ಅದರ ಆವರಣಗಳ ಸಂಬಂಧದಲ್ಲಿ ಅದಕ್ಕೆ ಒಂದಕ್ಕೊಂದು ಸೇರಿಕೊಂಡ ಕಟ್ಟಡಗಳು, ಉಪಗೃಹಗಳು ಮತ್ತು ಇತರ ರಚನೆಗಳು, ಒಳದಾರಿಗಳು, ರಸ್ತೆಗಳು, ಮೊಗಸಾಲೆಗಳು, ಬಾವಿಗಳು, ಹಳ್ಳಗಳು, ನೀರೆತ್ತುವ ಕೊಳಾಯಿಗಳು, ಯಾವುದಾದರೂ ಇದ್ದರೆ, ಅವುಗಳನ್ನು ಆ ಯಾವುದೇ ಸ್ಥಳದಲ್ಲಿ ಮಳೆಗಾಲದಲ್ಲಿ ಚರಂಡಿಗಳು, ನೀರಿನ ಚರಂಡಿ ಮತ್ತು ಅನಿಲ ಕೊಳವೆಗಳು, ಭೂಮಿಯೊಳಗಿರುವ ಕೇಬಲ್ಲುಗಳು, ಅತೀ ಹೆಚ್ಚು ಮತ್ತು ಅತ್ಯಧಿಕವಾಗಿರುವ ವೋಲ್ಟೇಜ್ ಲೈನ್‌ಗಳು, ಟೆಲಿಗ್ರಾಫ್ ಮತ್ತು ದೂರವಾಣಿ ಲೈನ್‌ಗಳು, ನದಿಗಳು ಅಥವಾ ನಾಲೆಗಳ ಸಮೀಪವಿರುವ ಅತೀ ಪ್ರವಾಹದ ಗುರುತುಗಳು, ಸ್ಥಳಕ್ಕೆ ಹೊಂದಿಕೊಂಡಿರುವ ಸರೋವರ, ಕೆರೆಗಳು ಇದ್ದರೆ ಅವುಗಳ ಗರಿಷ್ಠ ನೀರಿನ ಮಟ್ಟ, ಸ್ಥಳಕ್ಕೆ ಒಂದಕ್ಕೊಂದು ಸೇರಿಕೊಂಡ ಬಾವಿಗಳು ಇದ್ದರೆ ನಿವೇಶನದೊಳಗೆ ಮಳೆಗಾಲದಲ್ಲಿ ಮಳೆ ಉಂಟಾದರೆ ಮತ್ತು ಆ ಸ್ಥಳದೊಳಗೆ ಸ್ಥಳಾವಕಾಸ ಕಲ್ಪಿಸಬೇಕಾದ ಆಸನಗಳ ಸಂಖ್ಯೆಯೊಂದಿಗೆ ಉದ್ದೇಶಿತ ಕಟ್ಟಡದ ಸ್ಥಳವನ್ನು ಮತ್ತು ಮುಕ್ತ ಪ್ರದೇಶವನ್ನು ಚದರ ಮೀಟರುಗಳಲ್ಲಿ ನೀಡಿದ ಅಳತೆಯನ್ನು ಒತ್ತು ರೇಖಾ ಚಿತ್ರದ ಮೂಲ ಮುದ್ರಿತದಲ್ಲಿ ಸ್ಥಳದ ಯೋಜನೆ ಮತ್ತು ವಿಭಾಗ ಮಟ್ಟದಲ್ಲಿ ತೋರಿಸಿದ ಸ್ಥಾನಗಳ ಸೂಚನೆಗಳನ್ನು 1:500 ಕ್ಕಿಂತ ಕಡಿಮೆಯಿಲ್ಲದ ಅಳತೆಯಲ್ಲಿ ಸರಿಯಾಗಿ ಚಿತ್ರಿಸಿದ ಆರು ಮುದ್ರಿತಗಳೊಂದಿಗೆ ಡಿಜಿಟಲ್ ನಮೂನೆಗಳನ್ನು ಸಹ ಒದಗಿಸತಕ್ಕದ್ದು; ಮತ್ತು

(iii) ನಿರಾಕ್ಷೇಪಣಾ ಪ್ರಮಾಣಪತ್ರದ ಮಂಜೂರಾತಿಗಾಗಿ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಿದಂಥ ಫೀಜುಗಳನ್ನು ಜಮೆ ಮಾಡಿರುವುದಕ್ಕೆ ಖಜಾನೆ ಚಲನು.

**117. ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಆಕ್ಷೇಪಣೆಗಳನ್ನು ಆಹ್ವಾನಿಸುವುದು.-** (1) ಲೈಸೆನ್ಸು ನೀಡುವ ಪ್ರಾಧಿಕಾರಿಯು, 116 ನಿಯಮದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಆಕ್ಷೇಪಣೆಗಳನ್ನು ಆಹ್ವಾನಿಸಲು ಅರ್ಜಿದಾರನ ಖರ್ಚಿನಲ್ಲಿ, ಆ ಪ್ರದೇಶದಲ್ಲಿ ವ್ಯಾಪಕ ಪ್ರಸಾರವುಳ್ಳ ಎರಡು ಸ್ಥಳೀಯ ವೃತ್ತಪತ್ರಿಕೆಗಳಲ್ಲಿ (ಒಂದು ಕನ್ನಡದಲ್ಲಿ ಮತ್ತು ಒಂದು ಇಂಗ್ಲಿಷ್‌ನಲ್ಲಿ) ಪ್ರಕಟಿಸುವ ಮೂಲಕ ಅಂತಹ ಉದ್ದೇಶವನ್ನು ಹೊಂದಿರುವ ಸಾರ್ವಜನಿಕರಿಗೆ ಅಧಿಸೂಚಿಸತಕ್ಕದ್ದು, ಅಂತಹ ನೋಟೀಸು 'ಸಿ' ನಮೂನೆಯಲ್ಲಿರತಕ್ಕದ್ದು ಮತ್ತು ಲೈಸೆನ್ಸ್ ನೀಡುವ ಪ್ರಾಧಿಕಾರಕ್ಕೆ ಆ ಯಾವುದೇ ಆಕ್ಷೇಪಣೆಗಳನ್ನು ಅವಧಿಯೊಳಗಾಗಿ ಕಳುಹಿಸತಕ್ಕದ್ದು, ಅಂತಹ ಅವಧಿಯೂ ಪ್ರಕಟಣೆಯ ದಿನಾಂಕದಿಂದ ಹದಿನೈದು ದಿನಗಳಾಗಿರತಕ್ಕದದು. ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಅರ್ಜಿದಾರನು ಒದಗಿಸಿದ ಲಗತ್ತುಗಳೊಂದಿಗೆ ಅದರ ಅರ್ಜಿಯ ಪ್ರತಿಗಳನ್ನು ಏಕಕಾಲಿಕವಾಗಿ, ಅರೆಖಾಯಂ ಸಿನಿಮಾ ಕಟ್ಟಡದ ಸ್ಥಳಕ್ಕಾಗಿ ಉದ್ದೇಶಿತವಾದ ನಿವೇಶನದ ಸೂಕ್ತತೆ ಅಥವಾ ಅನ್ಯಥಾ ಸಂಬಂಧದಲ್ಲಿ ಮಹಾನಗರ ಪಾಲಿಕೆಯ/ ನಗರಾಭಿವೃದ್ಧಿ ಪ್ರಾಧಿಕಾರ/ ಯೋಜನಾ ಪ್ರಾಧಿಕಾರದ ಪಟ್ಟಣ ಯೋಜನಾ ಅಧಿಕಾರಿಗೆ ಸಂದರ್ಭಾನುಸಾರ ಜಿಲ್ಲೆಯ ಪಟ್ಟಣ ಮತ್ತು ಗ್ರಾಮಾಂತರ ಯೋಜನೆಯ ಸಹಾಯಕ ನಿರ್ದೇಶಕರಿಗೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗೆ, ಕಾರ್ಯನಿರ್ವಾಹಕ ಅಭಿಯಂತರನಿಗೆ, ಲೋಕೋಪಯೋಗಿ ಇಲಾಖೆ, ಜಿಲ್ಲೆಯ ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಮತ್ತು ಜಿಲ್ಲೆಯ ಪೋಲಿಸ್ ಸೂಪರಿಂಟೆಂಡೆಂಟ್/ ನಗರದ ಪೊಲೀಸ್ ಕಮೀಷನರ್/ ಜಿಲ್ಲೆಯ ಅಗ್ನಿಶಾಮಕ ಮತ್ತು ತುರ್ತುಸೇವೆಗಳು, ಜಿಲ್ಲಾ ಅಗ್ನಿಶಾಮಕ ಅಧಿಕಾರಿಗೆ/ ಜಿಲ್ಲೆಯ ಅಥವಾ ಆ ಪ್ರದೇಶದ ವಿದ್ಯುಚ್ಛಕ್ತಿ ಪರಿಶೀಲಕನಿಗೆ ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ ಕಳುಹಿಸತಕ್ಕದ್ದು.

(2) ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಆದಷ್ಟು ಬೇಗನೆ ಮತ್ತು ಯಾವುದೇ ಸಂದರ್ಭದಲ್ಲಿ, (1)ನೇ ಉಪನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಅವಧಿಯು ಮುಕ್ತಾಯಗೊಂಡ ತರುವಾಯ ಮೂವತ್ತು ದಿವಸಗಳನ್ನು ಮೀರದ ಅವಧಿಯೊಳಗಾಗಿ ಯಾವುದೇ ಪ್ರಕರಣದಲ್ಲಿ ಅರೆಖಾಯಂ ಸಿನಿಮಾ ಸ್ಥಾಪನೆಗಾಗಿನ ಉದ್ದೇಶಿತ ಸ್ಥಳದ ಸೂಕ್ತತೆಯ ಅಥವಾ ಅನ್ಯಥಾ ಆ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳತಕ್ಕದ್ದು. (1)ನೇ ಉಪ-ನಿಯಮದಲ್ಲಿ ಹೇಳಲಾದ ವಿವಿಧ ಪ್ರಾಧಿಕಾರಿಗಳು ಅದಷ್ಟು ಬೇಗನೆ ಮತ್ತು (1)ನೇ ನಿಯಮದಲ್ಲಿ ಹೇಳಲಾದ ಅವಧಿಯು ಮುಕ್ತಾಯಗೊಂಡ ತರುವಾಯ ಮೂವತ್ತು ದಿನಗಳ ಅವಧಿಯೊಳಗಾಗಿ ಅವರು ತಮ್ಮ ಅಭಿಪ್ರಾಯಗಳನ್ನು ಲೈಸೆನ್ಸ್ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು, ನಿರ್ದಿಷ್ಟಪಡಿಸಿದ ಅವಧಿಯೊಳಗೆ, ಪ್ರಾಧಿಕಾರಿಗಳು ಅಭಿಪ್ರಾಯಗಳನ್ನು ತಿಳಿಸದಿದ್ದರೆ ಲೈಸೆನ್ಸ್ ಪ್ರಾಧಿಕಾರವು ನಿರಾಕ್ಷೇಪಣಾ ಪ್ರಮಾಣಪತ್ರ ಮಂಜೂರು ಮಾಡುವುದಕ್ಕೆ ಯಾವುದೇ ಆಕ್ಷೇಪಣೆಗಳು ಇಲ್ಲವೆಂದು ಭಾವಿಸತಕ್ಕದ್ದು.

(3) ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಅರೆ ಖಾಯಂ ಸಿನಿಮಾ ಸ್ಥಾಪನೆಗಾಗಿ ನಿವೇಶನದ ಸೂಕ್ತತೆಯ ಬಗ್ಗೆ ಅಥವಾ ಅನ್ಯಥಾ ಇದಕ್ಕೆ ಸಂಬಂಧಿಸಿದ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ (1)ನೇ ಉಪನಿಯಮದ ಮೇರೆಗಿನ ಪ್ರಕಟಣೆಗೆ ಉತ್ತರ ರೂಪವಾಗಿ ಸ್ವೀಕರಿಸಲಾದ ಆಕ್ಷೇಪಣೆಗಳು ಯಾವುವಾದರೂ ಇದ್ದರೆ, ಅವನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

**118. ನಿರಾಕ್ಷೇಪಣಾ ಪ್ರಮಾಣಪತ್ರದ ಮಂಜೂರಾತಿ.-** (1) ಲೈಸೆನ್ಸ್ ನೀಡುವ ಪ್ರಾಧಿಕಾರಿಯು, 5ನೇ ಪ್ರಕರಣಕ್ಕೆ ಒಳಪಟ್ಟು 6ನೇ ಪ್ರಕರಣದ ಮೇರೆಗೆ ಅವನು ಮಾಡಿದ ಆದೇಶಗಳು ಯಾವುದಾದರೂ ಇದ್ದರೆ, ಅವುಗಳಿಗೆ ಒಳಪಟ್ಟು, 26ನೇ ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಎಲ್ಲಾ ಷರತ್ತುಗಳನ್ನು ಸ್ಥಳವು ನೆರವೇರಿಸುತ್ತದೆ ಎಂದು ಅದಕ್ಕೆ ಮನದಟ್ಟಾದರೆ, ಅದು ಅರ್ಜಿದಾರನಿಗೆ ಅರೆಖಾಯಂ ಸಿನಿಮಾ ಕಟ್ಟಡ ಅಥವಾ ಸಿನಿಮಾ ಕಟ್ಟಡವನ್ನು ನಿರ್ಮಾಣ ಮಾಡುವುದಕ್ಕಾಗಿ 'ಡಿ' ನಮೂನೆಯಲ್ಲಿ ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಮಂಜೂರು ಮಾಡತಕ್ಕದ್ದು, ಆ ಪ್ರಮಾಣ ಪತ್ರವು ಕಟ್ಟಡ ನಿರ್ಮಾಣದ ಪ್ರಾರಂಭದ

ದಿನಾಂಕದಿಂದ ಎರಡು ವರ್ಷಗಳ ಅವಧಿಗಾಗಿ ಸಿಂಧುವಾಗಿರತಕ್ಕದ್ದು. ಈ ಪರವಾಗಿ ಮಾಡಲಾದ ಅರ್ಜಿಯ ಮೇಲೆ, ಅರ್ಜಿದಾರನು ಸದರಿ ಎರಡು ವರ್ಷಗಳ ಅವಧಿಯೊಳಗಾಗಿ ಕಟ್ಟಡ ನಿರ್ಮಾಣವನ್ನು ಲೈಸೆನ್ಸ್ ಪ್ರಾಧಿಕಾರಕ್ಕೆ ಸಿಂಧುವಾದ ಕಾರಣಗಳಿಗಾಗಿ ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲವೆಂದು ಮನವರಿಕೆ ಮಾಡಿಕೊಟ್ಟು ಈ ಬಗ್ಗೆ ಅವನು ಮಾಡಿದ ಮನವಿಯ ಮೇಲೆ ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಹಾಗೆ ಒಂದು ಬಾರಿ ಮಾತ್ರ ಒಂದು ವರ್ಷ ಮೀರದ ಅವಧಿಗೆ ಅಂತಹ ಪ್ರಮಾಣಪತ್ರದ ಸಿಂಧುತ್ವವನ್ನು ವಿಸ್ತರಿಸಬಹುದು, ಆದಾಗ್ಯೂ ಒಟ್ಟು ಅವಧಿಯು ಮೂರು ವರ್ಷ ಮೀರತಕ್ಕದ್ದಲ್ಲ.

(2) ಅರ್ಜಿದಾರನು ಪ್ರಮಾಣಪತ್ರವನ್ನು ಪಡೆದ ದಿನಾಂಕದಿಂದ ಹನ್ನೆರಡು ತಿಂಗಳೊಳಗೆ ಕಟ್ಟಡ ನಿರ್ಮಾಣವನ್ನು ಪ್ರಾರಂಭಿಸತಕ್ಕದ್ದು, ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಅರ್ಜಿದಾರನು ಸದರಿ ಅವಧಿಯೊಳಗಾಗಿ ಕಟ್ಟಡ ನಿರ್ಮಾಣವನ್ನು ಸಿಂಧುವಾದ ಕಾರಣಗಳಿಗಾಗಿ ಪ್ರಾರಂಭಿಸಲು ಸಾಧ್ಯವಾಗಲಿಲ್ಲವೆಂದು ಮನವರಿಕೆ ಮಾಡಿಕೊಟ್ಟು ಈ ಬಗ್ಗೆ ಅವನು ಮಾಡಿದ ಮನವಿಯ ಮೇಲೆ, ಆ ಅವಧಿಯನ್ನು ಒಂದು ವರ್ಷ ಮೀರದ ಅವಧಿಗೆ ವಿಸ್ತರಿಸಬಹುದು, ಸದರಿ ಒಂದು ವರ್ಷದ ಅವಧಿಯೊಳಗಾಗಿ ಅಥವಾ ವಿಸ್ತರಿಸಿದ ಅವಧಿ ಯಾವುದಾದರೂ ಇದ್ದರೆ ಆ ಅವಧಿಯೊಳಗಾಗಿ ಕಟ್ಟಡ ನಿರ್ಮಾಣವನ್ನು ಪ್ರಾರಂಭಿಸದಿದ್ದರೆ, ಪ್ರಮಾಣಪತ್ರವು ಸದರಿ ಅವಧಿ ಮುಕ್ತಾಯವಾದ ಮೇಲೆ ರದ್ದುಮಾಡತಕ್ಕದ್ದು.

(3) ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಅರ್ಜಿಯ ದಿನಾಂಕದಿಂದ ನಲವತ್ತೈದು ದಿನಗಳನ್ನು ನಿರಾಕ್ಷೇಪಣಾ ಪ್ರಮಾಣಪತ್ರದ ಮಂಜೂರಾತಿಗಾಗಿ ಪರಿಗಣಿಸತಕ್ಕದ್ದು, ಆ ಅವಧಿಯೊಳಗೆ ನಿರಾಕ್ಷೇಪಣಾ ಪ್ರಮಾಣಪತ್ರವನ್ನು ನೀಡಲಾಗದಿದ್ದರೆ ನೀಡಲಾಗಿದೆ ಎಂದು ಭಾವಿಸತಕ್ಕದ್ದು.

**(4) ತರುವಾಯದ ಸೇರ್ಪಡೆಗಳು ಮತ್ತು ಮಾರ್ಪಾಟುಗಳ ಅನುಮೋದನೆಗಾಗಿ ಪ್ರಕ್ರಿಯೆ,-** (1) ಲೈಸನ್ಸ್‌ದಾರನು, ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ಲಿಖಿತದಲ್ಲಿ ಲೈಸೆನ್ಸ್ ಪಡೆದ ಸ್ಥಳ ಅಥವಾ ಅದರ ಯಾವುದೇ ಭಾಗಕ್ಕೆ ಸೇರ್ಪಡೆಯನ್ನು ಅಥವಾ ಮಾರ್ಪಾಟುಗಳನ್ನು ಮಾಡುವ ಅವನ ಉದ್ದೇಶದ ಬಗ್ಗೆ ಅದರ ಗಮನಕ್ಕೆ ತರತಕ್ಕದ್ದು, ಅಂತಹ ನೋಟೀಸಿನಲ್ಲಿ ಉದ್ದೇಶಿತ ಸೇರ್ಪಡೆಗಳು ಅಥವಾ ಮಾರ್ಪಾಟುಗಳನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು ಮತ್ತು ಅದರ ಜೊತೆಗೆ ಮೂಲ ಪ್ರಮಾಣಪತ್ರಗಳ ಜೊತೆಗೆ 31ನೇ ನಿಯಮದ ಮೂಲಕ ಅಗತ್ಯಪಡಿಸಿದ ರೀತಿಯಲ್ಲಿ ನಾಲ್ಕು ಪ್ರತಿಗಳಲ್ಲಿ ಸಂಪೂರ್ಣವಾದ ಯೋಜನೆ, ಎಲಿವೇಷನ್‌ಗಳು ಮತ್ತು ವಿಭಾಗಗಳು ಮತ್ತು ಬ್ಲಾಕ್ ಯೋಜನೆಗಳ ಮತ್ತು ಕಾರ್ಯಗತಗೊಳಿಸಬೇಕಾದ ನಿರ್ದಿಷ್ಟಪಡಿಸಲಾದ ಕೆಲಸವು ಅದರಲ್ಲಿ ಇರತಕ್ಕದ್ದು. ಈ ಉದ್ದೇಶಕ್ಕಾಗಿ ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಪಡೆಯುವುದು ಅವಶ್ಯಕವಿರತಕ್ಕದ್ದಲ್ಲ, ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಉದ್ದೇಶಿತ ಸೇರ್ಪಡೆಗಳು ಮತ್ತು ಮಾರ್ಪಾಟುಗಳಿಗೆ ಮಂಜೂರಾತಿಯನ್ನು ನೀಡುವುದಕ್ಕೆ ಮುಂಚೆ 32ನೇ ನಿಯಮದ (1) ಮತ್ತು 2ನೇ ಉಪನಿಯಮಗಳಲ್ಲಿ ಹೇಳಲಾದ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು, ಲೈಸೆನ್ಸ್ ನೀಡುವ ಪ್ರಾಧಿಕಾರಿಯು 32ನೇ ನಿಯಮದ ಮೇರೆಗೆ ಅಭಿಪ್ರಾಯವನ್ನು ಸ್ವೀಕರಿಸಿದ ತರುವಾಯ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿನಗಳ ಒಳಗೆ ಅಂತಹ ಸೇರ್ಪಡೆಗಳು ಅಥವಾ ಮಾರ್ಪಾಟುಗಳ ಪ್ರಸ್ತಾವನೆಯನ್ನು ಅನುಮೋದಿಸತಕ್ಕದ್ದು.

(ii) ಸಿನಿಮಾ ಮಂದಿರದ ಸೇರ್ಪಡೆಗಳು ಮತ್ತು ಮಾರ್ಪಾಟುಗಳಲ್ಲಿ ಪ್ರದೇಶವನ್ನು ಹೆಚ್ಚಿಸದೆ ಲೈಸೆನ್ಸ್ ಹೊಂದಿರುವ ಆವರಣಗಳಲ್ಲಿ ಒಂದರಿಂದ ಎರಡು ಅಥವಾ ಮೂರು ಪರದೆಗಳ ಸಂಖ್ಯೆಯನ್ನು ಅಥವಾ ಏಕ ಪರದೆ ಪ್ರದರ್ಶನಕ್ಕಾಗಿ ಅನುಮೋದಿತ ಆಸನಗಳ ಒಟ್ಟು ಸಂಖ್ಯೆಯನ್ನು ಹೆಚ್ಚಿಸುವುದನ್ನು ಒಳಗೊಳ್ಳತಕ್ಕದ್ದು ಮತ್ತು ಈ ನಿಯಮಗಳಲ್ಲಿ ಖಾಯಂ ಸಿನಿಮಾ ಮಂದಿರಕ್ಕೆ ಸಂಬಂಧಪಟ್ಟ ಎಲ್ಲ ಇತರ ಉಪಬಂಧಗಳು ಸಿನಿಮಾ ಮಂದಿರ ಅಥವಾ ಬಹುಪರದೆ ಸಿನಿಮಾ ಮಂದಿರಗಳಂಥ ಸೇರ್ಪಡೆಗಳಿಗೆ ಮತ್ತು ಮಾರ್ಪಾಡುಗಳಿಗೆ ಅನ್ವಯವಾಗತಕ್ಕದ್ದು.

**(5) ವಿದ್ಯುಚ್ಛಕ್ತಿ ಸ್ಥಾಪನೆಗಳಿಗೆ ತರುವಾಯದ ಸೇರ್ಪಡೆಗಳು ಮತ್ತು ಮಾರ್ಪಾಟುಗಳ ಮಂಜೂರಾತಿಗಾಗಿ ಪ್ರಕ್ರಿಯೆ:-** (1) ಲೈಸೆನ್ಸ್‌ದಾರನು, ವಿದ್ಯುಚ್ಛಕ್ತಿ ಸ್ಥಾಪನೆಗಳು ಅಥವಾ ಸಲಕರಣೆಗಳಿಗೆ ಸೇರ್ಪಡೆಗಳು ಅಥವಾ ಬದಲಾವಣೆಗಳನ್ನು ಮಾಡುವ ಆತನ ಉದ್ದೇಶದ ಬಗ್ಗೆ ಲಿಖಿತದಲ್ಲಿ ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ತಿಳಿಸತಕ್ಕದ್ದು, ಲೈಸೆನ್ಸ್ ನೀಡುವ ಪ್ರಾಧಿಕಾರಿಯು

ಅಂತಹ ನೋಟೀಸನ್ನು ವಿದ್ಯುಚ್ಛಕ್ತಿ ಪರಿಶೀಲಕನಿಗೆ ಕಳುಹಿಸತಕ್ಕದ್ದು. ವಿದ್ಯುಚ್ಛಕ್ತಿ ಪರಿಶೀಲಕ ವರದಿಗಳನ್ನು ಪರಿಶೀಲಿಸಿದ ತರುವಾಯ ಈ ನಿಯಮಗಳ ಉಪಬಂಧಗಳಿಗನುಸಾರ ಉದ್ದೇಶಿತ ಮಾರ್ಪಾಟುಗಳು ಅಥವಾ ಹೆಚ್ಚುವರಿ ಸೇರಿಕೆಗಳು ಮಾಡಬೇಕಾಗಿರುವಲ್ಲಿ ಲೈಸೆನ್ಸ್ ನೀಡುವ ಪ್ರಾಧಿಕಾರವು 2ನೇ ನಿಯಮದ (3) ಉಪ-ನಿಯಮದಲ್ಲಿ ವಿಧಿಸಿದ ಪ್ರಕ್ರಿಯೆಯನ್ನು ಶೀಘ್ರವಾಗಿ ಅನುಸರಿಸಿ ಆ ಪ್ರಸ್ತಾವನೆಯನ್ನು ಅನುಮೋದಿಸತಕ್ಕದ್ದು.

(ii) ಮತ್ತಷ್ಟು ಪರಿಶೀಲನೆಯು ಅವಶ್ಯಕವಿದೆ ಎಂದು ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಅಭಿಪ್ರಾಯಪಟ್ಟರೆ, ಅವನು ಅದಕ್ಕಾಗಿ ನಿರ್ದೇಶಿಸಬಹುದು ಮತ್ತು ಈ ಸಂಬಂಧದಲ್ಲಿ ಸರ್ಕಾರವು ಈ ಪರವಾಗಿ ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದ ಫೀಜುಗಳನ್ನು ಮುಂಗಡವಾಗಿ ಸಂದಾಯ ಮಾಡಲು ಲೈಸೆನ್ಸುದಾರನನ್ನು ಅಗತ್ಯಪಡಿಸಬಹುದು.

(iii) ಎರಡು ನಿಯತಕಾಲಿಕ ಪರಿಶೀಲನೆಗಳ ನಡುವಣ ಮಧ್ಯಂತರ ಅವಧಿಯಾಗಿದ್ದರೆ 4ನೇ ನಿಯಮದ 2ನೇ ಉಪನಿಯಮದ ಮೇರೆಗೆ ಹೊರಡಿಸಿದ ಅಂತಹ ಅಧಿಕಾರಿಯ ಯಾವುದೇ ಲಿಖಿತ ಆದೇಶಗಳನ್ನು ನಿರ್ವಹಿಸಲು ಪ್ರಭಾರದಲ್ಲಿರುವ ವ್ಯಕ್ತಿಯು ಅವನು ನಿರ್ದಿಷ್ಟಪಡಿಸಿದ ಅವಧಿಯೊಳಗೆ ನಿರ್ವಹಿಸಲು ನಿರ್ಲಕ್ಷ್ಯ ಅಥವಾ ವಿಫಲತೆಯ ಕಾರಣದಿಂದಾಗಿ ಅಗತ್ಯವೆಂದು ವಿದ್ಯುಚ್ಛಕ್ತಿ ಪರಿಶೀಲಕನು ಅಭಿಪ್ರಾಯಪಟ್ಟರೆ ಯಾವುದೇ ಹೆಚ್ಚಿನ ಪರಿಶೀಲನೆಯನ್ನು ಮಾಡತಕ್ಕದ್ದು ಅಥವಾ ಯಾವುದೇ ಪರಿಶೀಲನೆಯ ಅವಧಿಯಲ್ಲಿ ಅಳವಡಿಕೆಯು ದೋಷಪೂರ್ಣವೆಂದು ಕಂಡುಬಂದರೆ, ಈ ಸಂಬಂಧದಲ್ಲಿ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದ ಫೀಜುಗಳನ್ನು ಅಂತಹ ಮತ್ತಷ್ಟು ಪರಿಶೀಲನೆಗಾಗಿ ವಿಧಿಸತಕ್ಕದ್ದು ಮತ್ತು ಅಂತಹ ಫೀಜನ್ನು ಲೈಸೆನ್ಸ್‌ದಾರನು ಸಂದಾಯ ಮಾಡತಕ್ಕದ್ದು.

**119. ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಮಂಜೂರು ಮಾಡುವುದಕ್ಕಾಗಿ ಸಂಬಂಧಿಸಿದ ಷರತ್ತುಗಳು,-** (1) ಯಾವುದೇ ಸಿನಿಮಾದ ಸಂಬಂಧದಲ್ಲಿ ಈ ಮುಂದಿನವುಗಳ ಹೊರತು ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಮಂಜೂರು ಮಾಡತಕ್ಕದಲ್ಲ.

(ಎ) ಸಿನಿಮಾ ನಿವೇಶನವು ಕನಿಷ್ಠ ಪ್ರದೇಶವಾಗಿರುವ ಹೊರತು,-

(i) ಉದ್ದೇಶಿತ ಸಿನಿಮಾ ಕಟ್ಟಡದಲ್ಲಿ ಉದ್ದೇಶಿಸಿದ ಆಸನಗಳ ಒಟ್ಟು ಸಂಖ್ಯೆಯು ನಾಲ್ಕು ನೂರು ಅಥವಾ ಅದಕ್ಕಿಂತ ಕಡಿಮೆ ಇದ್ದರೆ, ರಸ್ತೆಗೆ ಹೊಂದಿಕೊಂಡಿರುವ ಒಂದು ಪಕ್ಕವು 18 ಮೀಟರುಗಳಿಗಿಂತ ಕಡಿಮೆಯಿಲ್ಲದಂತೆ ಒಂಭತ್ತು ನೂರು ಚದರ ಮೀಟರಗಳಷ್ಟು ಇದ್ದರೆ ;

(ii) ಉದ್ದೇಶಿತ ಸಿನಿಮಾ ಕಟ್ಟಡದಲ್ಲಿ ಆಸನಗಳ ಒಟ್ಟು ಸಂಖ್ಯೆ ಆರುನೂರು ಅಥವಾ ಅದಕ್ಕಿಂತ ಕಡಿಮೆ ಇದ್ದರೆ, ರಸ್ತೆಗೆ ಹೊಂದಿಕೊಂಡಿದ್ದ ಒಂದು ಪಕ್ಕವು 18 ಮೀಟರುಗಳಿಗಿಂತ ಕಡಿಮೆ ಇಲ್ಲದ ಒಂದು ಸಾವಿರದ ಮೂನ್ನೂರ ಐವತ್ತು ಚದರ ಮೀಟರುಗಳಿದ್ದರೆ;

(iii) ಉದ್ದೇಶಿತ ಸಿನಿಮಾ ಕಟ್ಟಡಗಳಲ್ಲಿ ಆಸನಗಳ ಒಟ್ಟು ಸಂಖ್ಯೆಯು ಎಂಟುನೂರು ಅಥವಾ ಅದಕ್ಕಿಂತ ಕಡಿಮೆ ಇದ್ದು ಥಿಯೇಟರುಗಳ ಬಾಲ್ಕನಿ ವ್ಯವಸ್ಥೆ ಇಲ್ಲದಿರುವ ಸಂದರ್ಭದಲ್ಲಿ ರಸ್ತೆಗೆ ಹೊಂದಿಕೊಂಡಿರುವ ಒಂದು ಪಕ್ಕವು ಮೂವತ್ತು ಮೀಟರುಗಳಿಗಿಂತ ಕಡಿಮೆಯಿಲ್ಲದಿದ್ದು ಒಂದು ಸಾವಿರದ ಎಂಟು ನೂರು ಚದರ ಮೀಟರುಗಳು ಇದ್ದರೆ;

(iv) ಉದ್ದೇಶಿತ ಸಿನಿಮಾ ಕಟ್ಟಡದಲ್ಲಿ ಆಸನಗಳ ಒಟ್ಟು ಸಂಖ್ಯೆಯು ಒಂದು ಸಾವಿರ ಅಥವಾ ಅದಕ್ಕೂ ಕಡಿಮೆ ಇದ್ದು, ಬಾಲ್ಕನಿ ಆಸನಗಳ ವ್ಯವಸ್ಥೆ ಇಲ್ಲದಿದ್ದ ಥಿಯೇಟರ್ನ ಸಂದರ್ಭಗಳಲ್ಲಿ, ರಸ್ತೆಗೆ ಹೊಂದಿಕೊಂಡಿರುವ ಒಂದು ಪಕ್ಕವು ಎರಡು ಸಾವಿರದ ಎರಡು ನೂರು ಚದರ ಮೀಟರ್ಗಳು ಐವತ್ತು ಚದರ ಮೀಟರುಗಳಿಗಿಂತ ಕಡಿಮೆಯಿಲ್ಲದ ಸಂದರ್ಭದಲ್ಲಿ;

(v) ಉದ್ದೇಶಿತ ಸಿನಿಮಾ ಕಟ್ಟಡದಲ್ಲಿ ಆಸನಗಳ ಒಟ್ಟು ಸಂಖ್ಯೆಯು ಒಂದು ಸಾವಿರ ಅಥವಾ ಅದಕ್ಕೂ ಕಡಿಮೆ ಇದ್ದು, ಬಾಲ್ಕನಿ ಆಸನಗಳ ವ್ಯವಸ್ಥೆ ಇಲ್ಲದಿದ್ದ ಥಿಯೇಟರ್‌ನ ಸಂದರ್ಭದಲ್ಲಿ ರಸ್ತೆಗೆ ಹೊಂದಿಕೊಂಡಿರುವ ಒಂದು ಪಕ್ಕವು ಇಪ್ಪತ್ತು ಮೀಟರ್‌ಗಳಿಗಿಂತ ಕಡಿಮೆಯಿಲ್ಲದಿದ್ದು, ಒಂದು ಸಾವಿರದ ಐದುನೂರು ಚದರ ಮೀಟರುಗಳಿದ್ದರೆ;

(ಬಿ) (i) ಸಿನಿಮಾ ನಿವೇಶನವು, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮದ ಮೇರೆಗೆ ಸಕ್ಷಮ ಪ್ರಾಧಿಕಾರದಿಂದ ಆ ಪ್ರದೇಶಕ್ಕೆ ಸಿದ್ಧಪಡಿಸಿದ ಪ್ರಮುಖ ಯೋಜನೆಯಲ್ಲಿ ಉದ್ದೇಶಿತ ಅನುಮತಿಸಬಹುದಾದ ಭೂಮಿಯ ಬಳಕೆಯ ಸಂದರ್ಭದಲ್ಲಿ;

ಪರಂತು, ಪ್ರಮುಖ ಯೋಜನೆಗಳನ್ನು ಅಸ್ತಿತ್ವದಲ್ಲಿರುವ ಪ್ರಧಾನ ವಾಣಿಜ್ಯ ಪ್ರದೇಶಗಳನ್ನು ಸಿದ್ಧಪಡಿಸದೆ ಇರುವಲ್ಲಿ ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

(ii) ಮಹಾಯೋಜನೆಗಳಲ್ಲಿ ಸಿನಿಮಾ ಥಿಯೇಟರ್‌ಗೆ ಗ್ರಾಮೀಣ ಪ್ರದೇಶದ ಬೇರೆ ಸ್ಥಳದಲ್ಲಿ ಅನುಮೋದಿತವಾದರೆ ಅಥವಾ ಲೈಸನ್ಸ್ ಪ್ರಾಧಿಕಾರದಿಂದ ಮಲ್ಟಿಪ್ಲೆಕ್ಸ್‌ಗೆ ಅನುಮತಿ ನೀಡಬಹುದು. ರಸ್ತೆಯ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ಪೂರೈಸಿದ ಷರತ್ತುಗಳಿದ್ದರೆ ಮತ್ತು ಚಲನಚಿತ್ರ ನಿಯಮಗಳ ಅಡಿಯಲ್ಲಿ ಷರತ್ತು ಹಾಕಲಾದ ಮತ್ತು ಕಾನೂನುಗಳಲ್ಲಿ ಅಗತ್ಯಪಡಿಸಲಾದಂತೆ ಸಕ್ಷಮ ಪ್ರಾಧಿಕಾರದಿಂದ ಭೂಮಿಯ ಬಳಕೆ ಮಾರ್ಪಾಟಾಗುವುದು / ಪರಿವರ್ತನೆಯಾಗುವುದು.

(ಸಿ) (i) ಅರೆಖಾಯಂ ಸಿನಿಮಾ ನಿವೇಶನ, ಸಾರ್ವಜನಿಕ ಮುಖ್ಯರಸ್ತೆಯ ಪಕ್ಕದಲ್ಲಿರುವ ಕನಿಷ್ಠ ರಸ್ತೆಯ ವಿಸ್ತಾರವನ್ನು ಒಳಗೊಂಡಂತೆ ನಗರ ಪ್ರದೇಶಗಳಲ್ಲಿ ಕಾಲುದಾರಿಯು ಹನ್ನೆರಡು ಮೀಟರ್‌ಗಳುಷ್ಟಿರತಕ್ಕದ್ದು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕಾಲುದಾರಿಯನ್ನು ಒಳಗೊಂಡಂತೆ ಒಂಭತ್ತು ಮೀಟರ್‌ಗಳಷ್ಟು;

ಪರಂತು, ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಅನುಮತಿಯ ಷರತ್ತುಗಳು ಮತ್ತು ಪರಿಮಿತಿಗಳಿರಬಹುದು ಅಂತಹವಕ್ಕೆ ಸಂಬಂಧಿಸಿದಂತೆ ಆದೇಶವನ್ನು ಲಿಖಿತದಲ್ಲಿ ನೀಡುವುದು, ಸಿನಿಮಾವಿದ್ದರೆ ಅಥವಾ ಮಲ್ಟಿಪ್ಲೆಕ್ಸ್ ನಿವೇಶನವಿರುವ ಸಾರ್ವಜನಿಕ ಮುಖ್ಯರಸ್ತೆಯ ಪಕ್ಕದಿಂದ ಇತರೆ ರಾಷ್ಟ್ರೀಯ ಹೆದ್ದಾರಿ /ರಾಜ್ಯ ಹೆದ್ದಾರಿ /ಮುಖ್ಯ ಜಿಲ್ಲೆ ರಸ್ತೆಗಳ ಕನಿಷ್ಠ ವಿಸ್ತಾರದ ಕಾಲುದಾರಿಯನ್ನು ಒಳಗೊಂಡಂತೆ ರಸ್ತೆ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಒಂಭತ್ತು ಮೀಟರ್‌ಗಳಿರತಕ್ಕದ್ದು.

(ಡಿ) ಕರ್ನಾಟಕ ಹೆದ್ದಾರಿ ನಿಯಮಗಳು, 1966 ರಲ್ಲಿ ಅಗತ್ಯಪಡಿಸಲಾದಂತೆ ಅರೆಖಾಯಂ ಸಿನಿಮಾ ಕಟ್ಟಡ ಮುಂಭಾಗ/ಮುಂದಿನ ಸಮುಚ್ಛಯ ಎಂಟು ಮೀಟರ್‌ಗಳಾಗಿರತಕ್ಕದ್ದು, ಅಂದರೆ ಯಾವುದು ಹೆಚ್ಚಿನದೋ ಅದು.

(ಇ) ಸಿನಿಮಾ ಸ್ಥಳದ ಪ್ರವೇಶ ಮತ್ತು ನಿರ್ಗಮನದ ರಸ್ತೆಗಳು ಸಾರ್ವಜನಿಕರ ಪ್ರವೇಶ ಮತ್ತು ನಿರ್ಗಮನದ ಕನಿಷ್ಠ ವಿಸ್ತಾರದ ಪ್ರತಿ ಆರು ಮೀಟರ್‌ಗಳಿಷ್ಠಿರತಕ್ಕದ್ದು.

(ಎಫ್) ಈ ನಿಯಮಗಳನ್ನು ಪ್ರಾರಂಭಿಸಿದ ದಿನಾಂಕದಿಂದ ಥಿಯೇಟರ್‌ಗಳು ಅಸ್ತಿತ್ವದಲ್ಲಿರುವುದು, ಸಿನಿಮಾದ ಸ್ಥಳದಲ್ಲಿ ಸೂಕ್ತವಾದ ನಿಲುಗಡೆ ಜಾಗವಿರುವುದು;

(i) ಹತ್ತು ಲಕ್ಷ ಮತ್ತು ಅದಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಸ್ಥಳಗಳಲ್ಲಿ ಕನಿಷ್ಟ ಇಪ್ಪತ್ತು ಕಾರುಗಳ ಜಾಗವನ್ನು ಒಳಗೊಂಡಿರುವಂತೆ, ಪ್ರತಿ ಐವತ್ತು ಆಸನಗಳಿರುವ ಜಾಗದಲ್ಲಿ ಒಂದು ಕಾರು ನಿಲುಗಡೆ ಜಾಗವಿರುವುದು;

(ii) ಒಂದು ಲಕ್ಷದಿಂದ ಹತ್ತು ಲಕ್ಷದ ನಡುವಿನ ಜನಸಂಖ್ಯೆ ಇರುವ ಸ್ಥಳಗಳಲ್ಲಿ ಕನಿಷ್ಠ ಹದಿನೈದು ಕಾರುಗಳ ಜಾಗವನ್ನು ಒಳಗೊಂಡಿರುವಂತೆ, ಪ್ರತಿ ಐವತ್ತು ಆಸನಗಳಿರುವ ಜಾಗದಲ್ಲಿ ಒಂದು ಕಾರು ನಿಲುಗಡೆ ಜಾಗವಿರುವುದು; ಮತ್ತು

(iii) ಐವತ್ತು ಸಾವಿರ ಮತ್ತು ಒಂದು ಲಕ್ಷಗಳ ನಡುವಿನ ಜನಸಂಖ್ಯೆ ಇರುವ ಸ್ಥಳಗಳಲ್ಲಿ ಕನಿಷ್ಟ ಹತ್ತು ಕಾರುಗಳ ಜಾಗವನ್ನು ಒಳಗೊಂಡಿರುವಂತೆ, ಪ್ರತಿ ಐವತ್ತು ಆಸನಗಳಿರುವ ಜಾಗದಲ್ಲಿ ಒಂದು ಕಾರು ನಿಲುಗಡೆ ಜಾಗವಿರುವುದು;

(iv) ಐವತ್ತು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಸ್ಥಳಗಳಲ್ಲಿ ಕನಿಷ್ಠ ಐದು ಕಾರುಗಳ ಜಾಗವನ್ನು ಒಳಗೊಂಡಿರುವಂತೆ, ಪ್ರತಿ ಐವತ್ತು ಆಸನಗಳಿರುವ ಜಾಗದಲ್ಲಿ ಒಂದು ಕಾರು ನಿಲುಗಡೆ ಜಾಗವಿರುವುದು.

(ಜಿ) ಈ ನಿಯಮಗಳನ್ನು ಪ್ರಾರಂಭಿಸಿದ ದಿನಾಂಕದಿಂದ ಮತ್ತು ಆ ದಿನಾಂಕದಂದು ಉದ್ದೇಶಿತ ಥಿಯೇಟರ್‌ಗಳಿಗಾಗಿ ಸಿನಿಮಾ,-

(i) ಹತ್ತು ಲಕ್ಷ ಮತ್ತು ಅದಕ್ಕಿಂತ ಮೇಲ್ಪಟ್ಟು ಜನಸಂಖ್ಯೆಯನ್ನು ಹೊಂದಿರುವ ಸ್ಥಳಗಳಲ್ಲಿ ಇಪ್ಪತ್ತು ಕಾರುಗಳಿಗಾಗಿ ಕನಿಷ್ಠ ಸ್ಥಳಾವಕಾಶಕ್ಕೆ ಒಳಪಟ್ಟು, ಮಲ್ಟಿಪ್ಲೆಕ್ಸ್‌ಗಳಲ್ಲಿ ಪ್ರತಿ ಇಪ್ಪತ್ತೈದು ಆಸನಗಳಿಗೆ ಒಂದು ಕಾರು ನಿಲ್ದಾಣದಂತೆ ಸ್ಥಳಾವಕಾಶ ಮತ್ತು ಸಿನಿಮಾ ಥಿಯೇಟರ್‌ನ ಪ್ರತಿ ಇಪ್ಪತ್ತೈದು ಆಸನಗಳಿಗೆ ಒಂದು ಕಾರು ನಿಲ್ದಾಣದಂತೆ;

(ii) ಒಂದರಿಂದ ಹತ್ತು ಲಕ್ಷ ಒಳಗಿನ ಜನಸಂಖ್ಯೆಯನ್ನು ಹೊಂದಿರುವ ಸ್ಥಳಗಳಲ್ಲಿ ಹದಿನೈದು ಕಾರುಗಳಿಗಾಗಿ ಕನಿಷ್ಠ ಸ್ಥಳಾವಕಾಶಕ್ಕೆ ಒಳಪಟ್ಟು ಮಲ್ಟಿಪ್ಲೆಕ್ಸ್‌ಗಳಲ್ಲಿ ಪ್ರತಿ ಇಪ್ಪತ್ತೈದು ಆಸನಗಳಿಗೆ ಒಂದು ಕಾರು ನಿಲ್ದಾಣದಂತೆ ಮತ್ತು ಸಿನಿಮಾ ಥಿಯೇಟರ್‌ಗಳಲ್ಲಿ ಪ್ರತಿ ಐವತ್ತು ಆಸನಗಳಿಗೆ ಒಂದು ಕಾರು ನಿಲ್ದಾಣದಂತೆ; ಮತ್ತು

(iii) ಐವತ್ತು ಸಾವಿರ ಮತ್ತು ಒಂದು ಲಕ್ಷ ಒಳಗಿನ ಜನಸಂಖ್ಯೆಯನ್ನು ಹೊಂದಿರುವ ಸ್ಥಳಗಳಲ್ಲಿ ಹತ್ತು ಕಾರುಗಳಿಗಾಗಿ ಕನಿಷ್ಠ ಸ್ಥಳಾವಕಾಶಕ್ಕೆ ಒಳಪಟ್ಟು, ಮಲ್ಟಿಪ್ಲೆಕ್ಸ್‌ಗಳಿಗಾಗಿ ಪ್ರತಿ ಇಪ್ಪತ್ತೈದು ಆಸನಗಳಿಗೆ ಒಂದು ಕಾರು ನಿಲ್ದಾಣದಂತೆ ಮತ್ತು ಸಿನಿಮಾ ಥಿಯೇಟರುಗಳಿಗಾಗಿ ಪ್ರತಿ ಐವತ್ತು ಆಸನಗಳಿಗೆ ಒಂದು ಕಾರು ನಿಲ್ದಾಣದಂತೆ;

(iv) ಐವತ್ತು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಜನಸಂಖ್ಯೆಯನ್ನು ಹೊಂದಿರುವ ಸ್ಥಳಗಳಲ್ಲಿ ಐದು ಕಾರುಗಳಿಗಾಗಿ ಕನಿಷ್ಠ ಸ್ಥಳಾವಕಾಶಕ್ಕೆ ಒಳಪಟ್ಟು, ಮಲ್ಟಿಪ್ಲೆಕ್ಸ್‌ಗಳಿಗಾಗಿ ಪ್ರತಿ ಇಪ್ಪತ್ತೈದು ಆಸನಗಳಿಗೆ ಒಂದು ಕಾರು ನಿಲ್ದಾಣದಂತೆ;

- ಸೂಕ್ತವಾದ ನಿಲುಗಡೆಯ ಜಾಗವನ್ನು ಹೊಂದಿರುವುದು.

(ಹೆಚ್) ಈ ನಿಯಮಗಳು ಪ್ರಾರಂಭವಾದ ದಿನಾಂಕದಂದು ಮತ್ತು ಆ ದಿನಾಂಕದಂದು ಉದ್ದೇಶಿತ ಅಸ್ತಿತ್ವದಲ್ಲಿರುವ ಅರೆಖಾಯಂ ಸಿನಿಮಾ ಸ್ಥಳದಲ್ಲಿ ಮತ್ತು ಈ ನಿಯಮಗಳು ಪ್ರಾರಂಭವಾದ ದಿನಾಂಕದಿಂದ ಮತ್ತು ಆ ದಿನಾಂಕದಂದು ಉದ್ದೇಶಿತ ಅರೆಖಾಯಂ ಸಿನಿಮಾ ಸ್ಥಳದಲ್ಲಿ;

(i) ಐವತ್ತು ಸೈಕಲ್ಲುಗಳ ಕನಿಷ್ಠ ಸ್ಥಳವಕಾಶಕ್ಕೆ ಒಳಪಟ್ಟು ಆ ಸೈಕಲ್‌ಗಳ ನಿಲುಗಡೆ ಒಳಗೊಂಡಂತೆ ಕಾರು ನಿಲುಗಡೆಯ ಸಂಖ್ಯೆಗೆ ಅಗತ್ಯಪಡಿಸಲಾದ ಶೇಕಡಾ ಇಪ್ಪತ್ತೈದರಷ್ಟು ನಿಲುಗಡೆಯನ್ನು ಎರಡು ಮತ್ತು ಮೂರು ಚಕ್ರಗಳ ವಾಹನಗಳಿಗೆ ನಿಲುಗಡೆಯನ್ನು ಹೆಚ್ಚುವರಿಯಾಗಿ.

(ii) ಅರೆಖಾಯಂ ವಾಹನ ನಿಲುಗಡೆ ಅಗತ್ಯತೆಯ ಸಂದರ್ಭಗಳಲ್ಲಿ ಮೇಲೆ ನಿರ್ದಿಷ್ಟಪಡಿಸಲಾದಂತೆ ಅಥವಾ ವಲಯಗಳಲ್ಲಿ ಅವರವರ ನಿಯಂತ್ರಣದಲ್ಲಿ ನಿರ್ದಿಷ್ಟಪಡಿಸಲಾದಂತೆ ನಿಗದಿಪಡಿಸತಕ್ಕದ್ದು. ಥಿಯೇಟರ್ ಭಾಗದ ವಾಹನ ನಿಲ್ದಾಣಕ್ಕಾಗಿ ಪೂರ್ಣ ಕಟ್ಟಡದ ಅಗತ್ಯತೆಯ ಒಟ್ಟು ನಿಲುಗಡೆಯನ್ನು ಪ್ರತ್ಯೇಕವಾಗಿ ಮೀಸಲಿರಿಸಲು

- ಸೂಕ್ತವಾದ ನಿಲುಗಡೆಯ ಸ್ಥಳವನ್ನು ಹೊಂದಿರತಕ್ಕದ್ದು.

ಪರಂತು, ವಿಕಲಚೇತನರಿಗೆ ಸೂಕ್ತ ನಿಲುಗಡೆಯ ಏರ್ಪಾಟುಗಳನ್ನು ಮೀಸಲಿರಿಸತಕ್ಕದ್ದು.

(ಐ) ಸಂಚಾರದ ತೊಂದರೆಗಳು ಅಥವಾ ಸಮಸ್ಯೆಗಳು ಉಂಟು ಮಾಡುವ ಸಂಭವಿಲ್ಲದಿರುವ ಸ್ಥಳದಲ್ಲಿ ಅರೆಖಾಯಂ ಸಿನಿಮಾ ಸ್ಥಳಗಳಿರಬೇಕು.

(ಜೆ) ಅರೆಖಾಯಂ ಸಿನಿಮಾ ಸ್ಥಳವು,-

(ಎ) ಐವತ್ತು ಮೀಟರ್‌ಗಳಿಂದ

(i) ಯಾವುದೇ ಅಸ್ತಿತ್ವದಲ್ಲಿರುವ ಪೆಟ್ರೋಲ್ ಬಂಕ್ ಅಥವಾ ಪೆಟ್ರೋಲ್ ಬಂಕ್‌ಗಾಗಿ ಲೈಸೆನ್ಸ್ ಪಡೆದಿರುವ ಸ್ಥಳ ಮತ್ತು ಅಗ್ನಿ ಸಂಭಾವ್ಯ ಇತರ ಸ್ಥಳಗಳಿಂದ; ಅಥವಾ

(ii) ಉಪಯೋಗದಲ್ಲಿರುವ ಯಾವುದೇ ಸಮುದಾಯ ಆರಾಧನೆಯ ಸ್ಥಳ, ಸ್ಮಶಾನ ಭೂಮಿ, ಸಮಾದಿ ಭೂಮಿ ಅಥವಾ ಗೋರಿ ಸ್ಥಳಗಳಿಂದ; ಅಥವಾ

(iii) ಯಾವುದೇ ಮಾನ್ಯತೆ ಪಡೆದ ಶೈಕ್ಷಣಿಕ ಸಂಸ್ಥೆ ಅಥವಾ ಅಂತಹ ಶೈಕ್ಷಣಿಕ ಸಂಸ್ಥೆಗಳಿಗೆ ಹೊಂದಿಕೊಂಡಿರುವ ಯಾವುದೇ ವಸತಿ ಸಂಸ್ಥೆಯಿಂದ; ಅಥವಾ

(iv) ಯಾವುದೇ ಸಾರ್ವಜನಿಕ ಆಸ್ಪತ್ರೆ ಅಥವಾ ಖಾಸಗಿ ನರ್ಸಿಂಗ್ ಹೋಂನಿಂದ; ಅಥವಾ

(v) ಯಾವುದೇ ಮಾನ್ಯತೆ ಪಡೆದ ಅನಾಥಾಲಯದಿಂದ; ಅಥವಾ

(vi) ಯಾವುದೇ ಜನನಿಬಿಡ ಪ್ರದೇಶ ಅಥವಾ ವ್ಯಾಪಾರ ಉದ್ದೇಶಗಳಿಂದ ವಿಶಿಷ್ಟವಾದ ವಸತಿ ಉದ್ದೇಶಗಳಿಗಾಗಿ ಸಾಮಾನ್ಯವಾಗಿ ಉಪಯೋಗಿಸಿದ ಪ್ರದೇಶದಿಂದ

\- ಐವತ್ತು ಮೀಟುರುಗಳಿಗಿಂತ ಕಡಿಮೆಯಿಲ್ಲದ ದೂರದಲ್ಲಿರತಕ್ಕದ್ದು:

ಪರಂತು, ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಪ್ರಸ್ತಾವನೆಯು ಧ್ವನಿನಿರೋಧಕ ಸಿನಿಮಾ ಕಟ್ಟಡವನ್ನು ನಿರ್ಮಿಸುವುದಕ್ಕೆ ಆಗಿದ್ದರೆ, ಅದರ ವಿವೇಚಾನುಸಾರ, ಸಾರ್ವಜನಿಕ ಹಿತಾಸಕ್ತಿ, ಉದ್ದೇಶಿತ ನಿವೇಶನವನ್ನು ಪರಿಶೀಲಿಸಿದ ತರುವಾಯ ಬರಹದಲ್ಲಿ ದಾಖಲ್ಮಾಡಬೇಕಾದ ಕಾರಣಗಳಿಗಾಗಿ, ಆ ಸ್ಥಳದ ಸೂಕ್ತತೆಯನ್ನು ಪರ್ಯಾಲೋಚಿಸಿ ಪ್ರತಿಯೊಂದು ಪ್ರಕರಣದಲ್ಲಿ ವಿಧಿಸಲು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಷರತ್ತುಗಳಿಗೊಳಪಟ್ಟು (i) ರಿಂದ (iv) ರವರೆಗಿನ ಬಾಬುಗಳಲ್ಲಿ ನಿರ್ದಿಷ್ಟಪಡಿಸಿದ ಎಲ್ಲಾ ಅಥವಾ ಯಾವುದೇ ಷರತ್ತುಗಳನ್ನು ಸಡಿಲಗೊಳಿಸಬಹುದು:

ಮತ್ತೂ ಪರಂತು, ಪ್ರತಿಯೊಂದು ಪ್ರಕರಣದ ಸಂಗತಿಗಳು ಮತ್ತು ಸಂದರ್ಭಗಳನ್ನು ಪರ್ಯಾಲೋಚಿಸಿ ಬೇರೆ-ಬೇರೆ ಷರತ್ತುಗಳನ್ನು ಬೇರೆ ಬೇರೆ ಪ್ರಕರಣಗಳಲ್ಲಿ ವಿಧಿಸಬಹುದು.

(ಬಿ) ಯಾವುದೇ ಸಂರಕ್ಷಿತ ಸ್ಮಾರಕ, ರಕ್ಷಣಾ ಸ್ಥಾವರಗಳು, ರಾಷ್ಟ್ರೀಯ ಉದ್ಯಾನವನಗಳು, ವಸ್ತು ಸಂಗ್ರಹಾಲಯಗಳು ಮತ್ತು ಪ್ರಧಾನ ಟೆಲಿಫೋನ್ ಅಥವಾ ಟೆಲಿಗ್ರಾಫ್ ಅಥವಾ ವೈರ್‌ಲೆಸ್ ಅಥವಾ ದೂರ ಸಂಪರ್ಕ ಸ್ಥಾವರಗಳು ಇರುವಂಥ ಕಟ್ಟಡಗಳಿಂದ ಒಂದು ನೂರು ಮೀಟರುಗಳಿಗಿಂತ ದೂರದಲ್ಲಿರಬೇಕು;

(2) (ಎ) ಹತ್ತು ಸಾವಿರ ಅಥವಾ ಅದಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ ಸ್ಥಳಗಳಲ್ಲಿ ಅನುಮತಿಸಬೇಕಾದ ಸಿನಿಮಾಗಳ ಸಂಖ್ಯೆಯನ್ನು.

(i) ಅದು ಮಹಾನಗರ ಪ್ರದೇಶವಾಗಿದ್ದರೆ, ಪ್ರತಿ ಇಪ್ಪತ್ತು ಸಾವಿರ ಜನಸಂಖ್ಯೆ ಅಥವಾ ಹತ್ತು ಸಾವಿರವನ್ನು ಮೀರುವ ಅದರ ಭಾಗಕ್ಕಾಗಿ ಒಂದು ಸಿನಿಮಾದ ಆಧಾರದ ಮೇಲೆ; ಮತ್ತು

(ii) ಇತರ ಸ್ಥಳಗಳಲ್ಲಿ, ಪ್ರತಿ ಹತ್ತು ಸಾವಿರ ಜನಸಂಖ್ಯೆ ಅಥವಾ ಐದು ಸಾವಿರವನ್ನು ಮೀರುವ ಅದರ ಭಾಗಕ್ಕೆ ಒಂದು ಸಿನಿಮಾದ ಆಧಾರದ ಮೇಲೆ

\- ನಿರ್ಧರಿಸತಕ್ಕದ್ದು.

(ಬಿ) ಐದು ಲಕ್ಷ ಮತ್ತು ಅದಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಪ್ರತಿಯೊಂದು ಪಟ್ಟಣಗಳು ಮತ್ತು ಇತರೆ ನಗರಗಳಿಂದ ನಾಲ್ಕು ನೂರು ಮೀಟರುಗಳ ದೂರದೊಳಗೆ ಸಿನಿಮಾವನ್ನು ಸ್ಥಾಪಿಸಲು ಅನುಮತಿ ನೀಡತಕ್ಕದಲ್ಲ.

(3) (2) ಉಪನಿಯಮದಲ್ಲಿರುವುದಾವುದು, ಸಿನಿಮಾ ಸ್ಥಳವು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಒಡೆತನದಲ್ಲಿದ್ದರೆ, ಮಹಾನಗರ ಪ್ರದೇಶದಲ್ಲಿ ಸಿನಿಮಾಗಳ ಸ್ಥಾಪನೆಗಾಗಿ ಅನ್ವಯವಾಗತಕ್ಕದಲ್ಲ.

(4) (ಎ) ಮಹಾನಗರ ಪ್ರದೇಶದಲ್ಲಿನ ಪ್ರತಿಯೊಂದು ವಾರ್ಡ್ 6ನೇ ಪ್ರಕರಣದ ಉದ್ದೇಶಕ್ಕಾಗಿ ಒಂದು ಪ್ರದೇಶವಾಗಿರತಕ್ಕದ್ದು. ಲೈಸೆನ್ಸ್ ನೀಡುವ ಪ್ರಾಧಿಕಾರಿಯು 5ನೇ ಪ್ರಕರಣದ ಉಪಬಂಧಗಳು ಮತ್ತು (2)ನೇ ಉಪನಿಯಮದ ಉಪಬಂಧಗಳನ್ನು ಗಮನದಲ್ಲಿರಿಸಿ, ಸದರಿ (2)ನೇ ಉಪ-ನಿಯಮದ ಉದ್ದೇಶಕ್ಕಾಗಿ ಅಂತಹ ಪ್ರತಿಯೊಂದು ವಾರ್ಡ್ ಸ್ಥಳವಾಗಿದಿದ್ದರೆ, ಹೇಗೋ ಹಾಗೆ, ಅಂತಹ ಪ್ರತಿಯೊಂದು ವಾರ್ಡಿನಲ್ಲಿ ಅಧನಿಯಮದ ಮೇರೆಗೆ ಲೈಸೆನ್ಸ್ ನೀಡಬಹುದಾದ ಸ್ಥಳಗಳ ಸಂಖ್ಯೆಯನ್ನು ಪರಿಮಿತಿಗೊಳಿಸಬಹುದು:

ಪರಂತು, ಅಂತಹ ಎಲ್ಲಾ ವಾರ್ಡುಗಳಿಗೆ ಸಂಬಂಧಿಸಿದಂತೆ ಹಾಗೆ ನಿರ್ಧರಿಸಿದ ಸ್ಥಳಗಳ ಒಟ್ಟು ಸಂಖ್ಯೆಯು ಮಹಾನಗರ ಪ್ರದೇಶವನ್ನು ಒಟ್ಟಾರೆ ತೆಗೆದುಕೊಂಡು ಅದಕ್ಕೆ ಸಂಬಂಧಿಸಿದಂತೆ (2)ನೇ ಉಪ ನಿಯಮದ ಮೇರೆಗೆ ಅನುಮತಿಸಬಹುದಾದ ಸಂಖ್ಯೆಯನ್ನು ಮೀರತಕ್ಕದ್ದಲ್ಲ.

(ಬಿ) 6ನೇ ಪ್ರಕರಣದ ಮೇರೆಗೆ ಆದೇಶವನ್ನು ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದ ಹೊರತು ಮಾಡತಕ್ಕದ್ದಲ್ಲ.

**ವಿವರಣೆ,- (**1), (2)ನೇ, (3)ನೇ ಮತ್ತು (4)ನೇ ಉಪ-ನಿಯಮಗಳ ಉದ್ದೇಶಕ್ಕಾಗಿ.-

(1) 'ದೂರ' ವನ್ನು ಎರಡು ಸಿನಿಮಾ ಕಟ್ಟಡಗಳನ್ನು ಸಂಪರ್ಕಿಸುವ ಮತ್ತು ಸಾರ್ವಜನಿಕರು ಸಾಮಾನ್ಯವಾಗಿ ಉಪಯೋಗಿಸುವ ಅತಿ ಸಮೀಪದ ದಾರಿ, ಗಲ್ಲಿ, ಬೀದಿ ಅಥವಾ ರಸ್ತೆಗಳನ್ನು ಪರಿಶೀಲಿಸತಕ್ಕದ್ದು.

(2) 'ಮಹಾನಗರ ಪ್ರದೇಶ' ಎಂದರೆ, ದಂಡ ಪ್ರಕ್ರಿಯಾ ಸಂಹಿತೆ, 1973ರ 8ನೇ ಪ್ರಕರಣದ ಮೇರೆಗೆ ಮಹಾನಗರ ಪ್ರದೇಶವೆಂದು ಘೋಷಿಸಲಾದ ನಗರ ಅಥವಾ ಪಟ್ಟಣ.

(3) 'ಸ್ಥಳ' ಎಂದರೆ, ಹತ್ತು ಸಾವಿರ ಮತ್ತು ಅದಕ್ಕಿಂತಲೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಪಟ್ಟಣಗಳ ಮತ್ತು ನಗರಗಳ ಸಂದರ್ಭದಲ್ಲಿ, ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗೆ ಬರುವ ಪ್ರದೇಶ ಮತ್ತು ಇತರ ಸಂದರ್ಭಗಳಲ್ಲಿ, ಸಿನಿಮಾವನ್ನು ಸ್ಥಾಪಿಸಲು ಉದ್ದೇಶಿಸಿದಂಥ ಸ್ಥಳೀಯ ಪ್ರಾಧಿಕಾರದ ಕೇಂದ್ರದಿಂದ ಐದು ಕಿಲೋ ಮೀಟರುಗಳ ವ್ಯಾಪ್ತಿಯೊಳಗಿನ ಪ್ರದೇಶ.

(2) (i) ಸಿನಿಮಾ ಕಟ್ಟಡ ಮತ್ತು ಕಾಂಪೌಂಡ್ ಗೋಡೆಯ ಒಳಗಿನ ಎಲ್ಲೆಗಳ ನಡುವಿನ ಸ್ಪಷ್ಟ ಅಂತರವು ಪ್ರವೇಶ ಕಡೆ 10 ಮೀಟರುಗಳಿಗಿಂತ ಮತ್ತು ಬೇರೆ ಕಡೆಗಳಲ್ಲಿ 5 ಮೀಟರ್ಗಳಿಗಿಂತ ಕಡಿಮೆಯಿಲ್ಲದಂತೆ ಇರಬೇಕು.

**120. ಕಟ್ಟಡದ ನಕ್ಷೆಯ ಅನುಮೋದನೆಗಾಗಿ ಅನುಸರಿಸಬೇಕಾದ ಪ್ರಕ್ರಿಯೆ.-** (1) ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಸ್ವೀಕರಿಸಿದ ತರುವಾಯ, ಅರ್ಜಿದಾರನು ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ಅನುಮೋದಿತ ಸ್ಥಳದಲ್ಲಿ ನಿರ್ಮಿಸಬೇಕಾದ ಕಟ್ಟಡದ ನಕ್ಷೆಯನ್ನು ಅನುಮೋದನೆಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು, ಅಂತಹ ಅರ್ಜಿಯೊಂದಿಗೆ,-

(i) 118ನೇ ನಿಯಮದ ಮೇರೆಗೆ ಪಡೆದ ನಿರಾಕ್ಷೇಪಣಾ ಪ್ರಮಾಣಪತ್ರದ ಒಂದು ಪ್ರತಿ;

(ii) ಅನುಮೋದಿತ ಸ್ಥಳದ (ನಿವೇಶನದ) ನಕ್ಷೆಯ ಪ್ರತಿ;

(iii) ಟ್ರೇಸಿಂಗ್ ಹಾಳೆಯ ಮೇಲೆ ಮುದ್ರಿಸಿದ ಮೂಲ ಆವರಣದ ಸಂಪೂರ್ಣ ನಕ್ಷೆ, ಉನ್ನತಿ ನಕ್ಷೆ ಮತ್ತು ವಿಭಾಗಗಳ ನಾಲ್ಕು ಪ್ರತಿಗಳು ಮತ್ತು ಅದರ ನಾಲ್ಕು ಮುದ್ರಿತ ಡಿಜಿಟಲ್ ವಿಧಾನಗಳಲ್ಲಿ ಸಹ ಮತ್ತು ಯಾವುದೇ ಮಾನಕ ಗಾತ್ರ ರೇಖೆಗಳಿಂದ ತೆಗೆದುಕೊಂಡ ಪ್ರಿಂಟುಗಳ ಮೇಲೆ 1:100 ಕ್ಕಿಂತ ಕಡಿಮೆಯಿಲ್ಲದ ಪ್ರಮಾಣಕ್ಕೆ ಸರಿಯಾಗಿ ಎಳೆದು ಮತ್ತು ಅದರ ಮೇಲೆ ರೇಖಿಸಿದ ಎಲ್ಲಾ ರಚನೆ ಮತ್ತು ಕಟ್ಟಡಗಳು ಮತ್ತು ಸ್ಪಷ್ಟವಾಗಿ ತೋರಿಸುವ,-

(ಎ) ವಿಭಿನ್ನ ಬಣ್ಣಗಳಲ್ಲಿ ವಿವಿಧ ಸಾಮಗ್ರಿಗಳನ್ನು ಸೂಚಿಸುವ ಮತ್ತು ಗೋಡೆಗಳು, ತೊಲೆಗಳು, ಸ್ಕಾಟಲಿಂಗ್‌ಗಳು ಮತ್ತು ಟ್ರಸ್ಸುಗಳ ಉದ್ದಗಲಗಳು, ಅಗಲ ಮತ್ತು ಆಳವನ್ನು ಅಂಕಿಗಳಲ್ಲಿ ನೀಡುವ ಎಲ್ಲ ನಿರ್ಮಿತಿಗಳ ಎಲ್ಲ ಉದ್ದಗಲಗಳನ್ನು ಮಿಲಿಮೀಟರ್ಗಳಲ್ಲಿ;

(ಬಿ) ಎಲ್ಲಾ ಸ್ಟೇರ್‍ಕೇಸುಗಳ ಅಗಲ ಮತ್ತು ಮೇಲ್‌ತಳದೊಂದಿಗೆ ಪ್ರತಿಯೊಂದು ಸಾಲಿನಲ್ಲಿ ಮೆಟ್ಟಲುಗಳ ಸಂಖ್ಯೆ, ಮೊಗಸಾಲೆಗಳು, ದಾರಿಗಳ ತೆರಪುಗಳು, ಹಜಾರಗಳು ಮತ್ತು ನಡುದಾರಿಗಳ ಸ್ವಷ್ಟ ಅಗಲದ ಮೆಟ್ಟಿಲುಗಳ ಟ್ರೆಡ್ ಹಾಗೂ ಎಲ್ಲಾ ಗ್ಯಾಲರಿಗಳ, ಅಂತಸ್ತುಗಳ, ಬಾಲ್ಕನಿಗಳ ಮತ್ತು ವೇದಿಕೆಗಳ ಎತ್ತರ ಮತ್ತು ನಿರ್ಮಾಣಗಳು ಮತ್ತು ಸ್ಟೇರ್‍ಕೇಸುಗಳಲ್ಲಿ ಮತ್ತು ಅಗ್ನಿಪ್ರತಿರೋಧಕವನ್ನು ಒಂದು ಗಂಟೆಗಳಲ್ಲಿ ಅಳವಡಿಸತಕ್ಕದ್ದು. ಅದಕ್ಕೆ ಯಾವುದೇ ಗ್ಯಾಸ್ ಕೊಳವೆ ಮಾರ್ಗ ಅಥವಾ ವಿದ್ಯುಚ್ಛಕ್ತಿ ಲೈನುಗಳನ್ನು ಅಳವಡಿಸತಕ್ಕದ್ದಲ್ಲ. ಆ್ಯಂಟಿ ಸ್ಲೀಪರಿ ನಾಸಿಂಗ್‌ನ್ನು ಮೆಟ್ಟಿಲುಗಳಲ್ಲಿ ಸ್ಥಾಪಿಸತಕ್ಕದ್ದು. ಒಂದು ಮೀಟರುಗಳಷ್ಟು ಎತ್ತರದಲ್ಲಿ ಹಿಡಿಕಂಬಿಗಳನ್ನು ಒದಗಿಸತಕ್ಕದ್ದು.

(ಸಿ) ಎಲ್ಲಾ ಬಾಗಿಲುಗಳು, ಕಿಟಕಿಗಳು ಮತ್ತು ವಾಯು ಸಂಚಾರಕಗಳ ನಿರ್ಮಾಣ ಮತ್ತು ಅವು ತೆರೆಯುವಂಥ ರೀತಿ ಮತ್ತು ವಾಯುಸಂಚಾರಗಳ ಉದ್ದೇಶಿತ ವ್ಯವಸ್ಥೆಯನ್ನು ತೋರಿಸುವ ಅವುಗಳ ಗಾತ್ರಗಳು;

(ಡಿ) ಉದ್ದೇಶಿತ ಆಸನಗಳ ವ್ಯವಸ್ಥೆ;

(ಇ) ನೆಲ ಅಂತಸ್ತು ಮತ್ತು ಮೇಲಣ ಅಂತಸ್ತುಗಳು, ಗ್ಯಾಲರಿಗಳು ಅಥವಾ ಬಾಲ್ಕನಿಗಳಿಗೆ ಪ್ರತ್ಯೇಕ್ಷವಾಗಿ ಚದರ ಮೀಟರ್ಗಳಲ್ಲಿ ಪ್ರತಿಕಟ್ಟಡದ ಮೇಲ್ಛಾಯ ಪ್ರದೇಶ;

(ಎಫ್) ಸ್ಟೇರ್‍ಕೇಸ್‌ಗಳು;

(ಜಿ) ಶೌಚಾಲಯಗಳು ಮತ್ತು ಮೂತ್ರಿ ಮಾಡುವ ಸ್ಥಳಗಳು;

(ಹೆಚ್) ನಕ್ಷೆಗಳು ಮತ್ತು ವಿಭಾಗಗಳಲ್ಲಿ ಕಟ್ಟಡದ ವಿವಿಧ ಭಾಗಗಳಲ್ಲಿನ ಮಟ್ಟಗಳು; ಮತ್ತು

(ಐ) ಪ್ರೊಜೆಕ್ಟರ್ಗಳು, ಪರದೆ, ಸೌಂಡ್ ಬಾಕ್ಸ್ ಮತ್ತು ಇತರ ಯಂತ್ರೋಪಕರಣಗಳು ಮತ್ತು ಸಾಧನ ಸಲಕರಣೆಗಳ ವಿವರಗಳು ಮತ್ತು ಸ್ಥಿತಿಗತಿಗಳು;

(iv) ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು ಲೈಸನ್ಸ್ ನೀಡುವ ಪ್ರಾಧಿಕಾರದಿಂದ, ವಿನ್ಯಾಸ ಮತ್ತು ತಪಶೀಲು ಪಟ್ಟಿಗಳ ಅಂಗಿಕಾರವಾದ ತರುವಾಯ, ವಿದ್ಯುಚ್ಛಕ್ತಿ ಪರಿಶೀಲಿಕನಿಗೆ ನಕ್ಷೆಗಳು ಮತ್ತು ವಿದ್ಯುತ್ ವಿನ್ಯಾಸಗಳ ನೀಲಿನಕ್ಷೆ ಅಥವಾ ಕಂಪ್ಯೂಟರ್ ನಕ್ಷೆಗಳನ್ನು ನಾಲ್ಕು ಪ್ರತಿಗಳಲ್ಲಿ ಮತ್ತು ವಿಭಿನ್ನ ಬಣ್ಣಗಳಲ್ಲಿ ವಿಭಿನ್ನ ವಿದ್ಯುತ್ ಪ್ರವಾಹ ಮಾರ್ಗಗಳನ್ನು ಮತ್ತು ಭೂಸಂಪರ್ಕದ ವಿವರಗಳನ್ನು ಸೂಚಿಸುವ, ಎಲ್ಲಾ ವೈರಿಂಗ್, ಲೈಟ್ಸ್ ಪಾಯಿಂಟ್ಸ್‌ಗಳು, ಸ್ವಿಚ್ಚುಗಳು, ಪ್ಲಗ್‌ಗಳು, ವಿತರಣಾ ಫಲಕಗಳನ್ನು ಸೂಚಿಸುವ ಸಂಪೂರ್ಣ ವಿದ್ಯುತ್ ಸ್ಥಾಪನೆಯ ವೈರಿಂಗ್ ವಿನ್ಯಾಸಗಳನ್ನು ಸೂಚಿಸುವ ಸಿನಿಮಾ ಸಲಕರಣೆಗಳ ಸ್ಥಾಪನೆ ತೋರಿಸುವ ಡಿಜಿಟಿಯಲ್ ವಿಧಾನಗಳನ್ನು ಸಹ ಅರ್ಜಿದಾರನಿಗೆ ಸಲ್ಲಿಸಲು ನಿರ್ದೇಶಿಸತಕ್ಕದ್ದು.

(v) ತದನಂತರ, ವಿದ್ಯುಚ್ಛಕ್ತಿ ಪರಿಶೀಲಕ, ಅರ್ಜಿದಾರನು ಸಲ್ಲಿಸಿದ ಚಲನಚಿತ್ರ ಯಂತ್ರೋಪಕರಣಗಳಿಗೆ ಸಂಬಂಧಿಸಿದ ವಿನ್ಯಾಸಗಳನ್ನು, ವಿದ್ಯುತ್ ವೈರಿಂಗ್ ರೇಖಾಚಿತ್ರದೊಂದಿಗಿರುವ ವಿದ್ಯುತ್ ಸ್ಥಾಪನೆಗಳನ್ನು ಮತ್ತು ವಿದ್ಯುತ್ ವ್ಯವಸ್ಥೆಯನ್ನು ತೋರಿಸುವ ನಕ್ಷೆಯ ವಿವರಗಳನ್ನು ಪರೀಕ್ಷಿಸತಕ್ಕದ್ದು ಮತ್ತು ಆತನು ಪರಿಶೀಲನೆಯ ನಂತರ ಮನದಟ್ಟಾದರೆ, ವಿದ್ಯುತ್ ಸ್ಥಾಪನೆಯ ಸುರಕ್ಷತೆಗೆ ಸಂಬಂಧಿಸಿದ ಈ ನಿಯಮಗಳ ಉಪಬಂಧಗಳನುಸಾರವಾಗಿ ಅವುಗಳನ್ನು ಆತನು ಹದಿನೈದು ದಿನಗಳೊಳಗಾಗಿ ಲೈಸೆನ್ಸ್ ನೀಡುವ ಪ್ರಾಧಿಕಾರಕ್ಕೆ ತನ್ನ ವರದಿಯನ್ನು ಕಳುಹಿಸತಕ್ಕದ್ದು.

(vi) ಕಾರ್ಯಗತಗೊಳಿಸಬೇಕಾದ, ಬಳಸಬೇಕಾದ ಸಲಕರಣೆಗಳನ್ನು ಸಾಕಷ್ಟು ವಿವರಿಸುವ ಮತ್ತು ಲೆಕ್ಕಚಾರಗಳೊಂದಿಗೆ ಅಳವಡಿಸಬೇಕಾದ ನಿರ್ಮಾಣದ ವಿಧಾನ ತ್ರಿಪ್ರತಿಗಳಲ್ಲಿ ಕಾಮಗಾರಿಗಳ ವಿವರಗಳಿರುವ ತಪಶೀಲು ಪಟ್ಟಿಗಳನ್ನು ತ್ರಿಪ್ರತಿಯಲ್ಲಿ ತೋರಿಸುವ, ಇಲ್ಲಾ ತಳಪಾಯಗಳು, ಕಂಬಗಳು, ಸ್ತಂಭಗಳು, ಊರುಗಂಬಗಳು, ಹಾಸುಮರಗಳು, ತೊಲೆಗಳು, ಹಾಸುಗಲ್ಲುಗಳು, ಜಂತೆಗಳು ಮತ್ತು ಟ್ರಸ್ಸುಗಳಲ್ಲಿ ಬರುವ ಭಾರಗಳನ್ನು ಮತ್ತು ಸಂಭವಿಸುವ ಒತ್ತಡಗಳನ್ನು

ತೋರಿಸುವ ತ್ರಿಪ್ರತಿಗಳನ್ನು, ಅಂತಹ ಲೆಕ್ಕಗಳನ್ನು ಯಾರೇ ಪದವೀಧರ ಎಂಜಿನಿಯರ್ ಅಥವಾ ವಿನ್ಯಾಸ ಎಂಜಿನಿಯರ್ ಅಥವಾ ವಿನ್ಯಾಸದ ವೃತ್ತಿಗೆ ಅಥವಾ ಅರ್ಹ ವಾಸ್ತು ಶಿಲ್ಪಿಯಿಂದ ಸರಿಯಾಗಿದೆಯೆಂದು ಪ್ರಮಾಣೀಕರಿಸತಕ್ಕದ್ದು.

**121. ನಿರ್ಮಿಸಿದ ಕಟ್ಟಡದ ಅನುಮೋದನೆ.-** (1) ಲೈಸನ್ಸ್‌ದಾರನು,-

(ಎ) ಜಿಲ್ಲೆಯ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯು ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಮತ್ತು ಸಹಾಯಕ ಕಟ್ಟಡಗಳ ನಿರ್ಮಾಣದ ಹದಿನೈದು ದಿನಗಳ ಮುಂಚೆ 3ನೇ ಉಪನಿಯಮದ ಮೇರೆಗೆ ದೃಢತೆಯ ಪ್ರಮಾಣಪತ್ರವನ್ನು ನೀಡುವುದಕ್ಕೆ ಆತನು ಸಾಧ್ಯಗೊಳಿಸಲು ಅಧಿಸೂಚಿಸತಕ್ಕದ್ದು; ಮತ್ತು

(ಬಿ) ಜಿಲ್ಲಾ ವಿದ್ಯುಚ್ಛಕ್ತಿ ಪರಿಶೀಲಕನು, ವಿದ್ಯುತ್ ಸ್ಥಾಪನೆಗಾಗಿ ವೈರಿಂಗ್ ಕೆಲಸವನ್ನು ಪ್ರಾರಂಭಿಸುವುದಕ್ಕೆ ಹದಿನೈದು ದಿನಗಳು ಮುಂಚೆ (4)ನೇ ಉಪ ನಿಯಮದ ಮೇರೆಗೆ ವಿದ್ಯುತ್ ಪ್ರಮಾಣಪತ್ರವನ್ನು ನೀಡುವುದಕ್ಕೆ ಆತನನ್ನು ಸಾಧ್ಯಗೊಳಿಸಲು ಅಧಿಸೂಚಿಸತಕ್ಕದ್ದು, ಅಂತಹ ನೋಟೀಸು (8)ನೇ ಉಪನಿಯಮದ ಮೇರೆಗೆ ನಿರ್ದಿಷ್ಟಪಡಿಸಿದ ಶುಲ್ಕಗಳನ್ನು ಸಂದಾಯ ಮಾಡಿರುವ ಬಗ್ಗೆ ಖಜಾನೆ ಚಲನ್‌ಗಳ ಜೊತೆ ಸೇರಿಸತಕ್ಕದ್ದು.

(2) ಅರ್ಜಿದಾರನು ಅನುಮತಿ ನೀಡಿದ ನಕ್ಷೆಗೆ ಅನುಸಾರವಾಗಿ ಕಟ್ಟಡ ಮತ್ತು ವಿದ್ಯುತ್ ಸ್ಥಾಪನೆಯನ್ನು ಪೂರ್ಣಗೊಳಿಸಿದ ತರುವಾಯ ಅರ್ಜಿಯನ್ನು ತತ್ಕಾಲಕ್ಕೆ ಮಾಡಿದ ತರುವಾಯ ಪಡೆದುಕೊಳ್ಳತಕ್ಕದ್ದು,-

(ಎ) 43 ರಿಂದ 56ನೇ ನಿಯಮಗಳ ಉಪಬಂಧಗಳಲ್ಲಿ ಒಳಗೊಂಡ ವಿಷಯಗಳ ಸಂಬಂಧದಲ್ಲಿ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ ಪ್ರಮಾಣ ಪತ್ರವನ್ನು;

(ಬಿ) 3ನೇ, 48ನೇ, 51(9)ನೇ, 57 ರಿಂದ 73ರ ರವರೆಗೆ, 77(5) ಮತ್ತು 82ನೇ ನಿಯಮಗಳ ಉಪಬಂಧಗಳಲ್ಲಿ ಒಳಗೊಂಡ ವಿಷಯಗಳ ಸಂಬಂಧದಲ್ಲಿ ವಿದ್ಯುಚ್ಛಕ್ತಿ ಪರಿಶೀಲಕನಿಂದ ನಮೂನೆ 'ಈ-I' ಯಲ್ಲಿನ ಪ್ರಮಾಣಪತ್ರವನ್ನು;

(ಸಿ) ಅಧ್ಯಾಯ-IX ರ ಮೇರೆಗೆ ಒಳಗೊಂಡ ವಿಷಯಗಳ ಸಂಬಂಧದಲ್ಲಿ ಜಿಲ್ಲಾ ಅಗ್ನಿಶಾಮಕ ಮತ್ತು ತುರ್ತುಸೇವೆಗಳು, ಅಗ್ನಿಶಾಮಕ ಅಧಿಕಾರಿಯವರಿಂದ ನಮೂನೆ 'ಇ-2' ಯಲ್ಲಿನ ಪ್ರಮಾಣಪತ್ರವನ್ನು;

(ಡಿ) ಆರೋಗ್ಯ ಮತ್ತು ಆವರಣಗಳ ಸ್ವಚ್ಛತೆಗೆ ಸಂಬಂಧಿಸಿದ ಉಪಬಂಧಗಳನ್ನು ಒಳಗೊಂಡಿರುವ ವಿಷಯಗಳ ಸಂಬಂಧದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯಿಂದ ನಮೂನೆ 'ಇ-3' ಯಲ್ಲಿನ ಪ್ರಮಾಣಪತ್ರವನ್ನು;

(ಇ) ಅರೆಖಾಯಂ ಸಿನಿಮಾ ಸಂದರ್ಭದಲ್ಲಿ, ಲೈಸೆನ್ಸ್‌ದಾರನು ಚಿತ್ರಮಂದಿರದ ಭಾಗವನ್ನು ಒಳಗೊಂಡ ಸಂಪೂರ್ಣ ಕಟ್ಟಡಗಳಿಗಾಗಿ ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಇಲಾಖೆಯಿಂದ ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಪ್ರತ್ಯೇಕವಾಗಿ

- ಪಡೆದುಕೊಳ್ಳತಕ್ಕದ್ದು.

(3) ಸಿನಿಮಾ ಅಥವಾ ಅರೆಖಾಯಂ ಸಿನಿಮಾ ಕಟ್ಟಡದ ವಿನ್ಯಾಸದ ದೃಢತೆಯ ಬಗ್ಗೆ ಲೋಕೋಪಯೋಗಿ ಕಾಮಗಾರಿಗಳು, ಬಂದರು ಮತ್ತು ಒಳನಾಡು ಜಲಸಾರಿಗೆಯ ಇಲಾಖೆ ಕಾರ್ಯನಿರ್ವಾಹಕ ಅಭಿಯಂತರರಿಗೆ ಮನದಟ್ಟಾದರೆ, ಆತನು (2)ನೇ ಉಪನಿಯಮದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ತರುವಾಯ ಹದಿನೈದು ದಿನಗಳೊಳಗೆ ಪ್ರಮಾಣಪತ್ರವನ್ನು ನೀಡತಕ್ಕದ್ದು ಮತ್ತು ಅಂತಹ ಪ್ರಮಾಣಪತ್ರವು ಐದು ವರ್ಷಗಳ ಅವಧಿಗಾಗಿ ಸಿಂಧುವಾಗಿರತಕ್ಕದ್ದು:

ಪರಂತು, ಯಾವುದೇ ಅರೆಖಾಯಂ ಸಿನಿಮಾದ ನಿಯಮದ ಅಗತ್ಯತೆಗಳನ್ನು ಪೂರೈಸದಿರುವಂತಹ ಸಂದರ್ಭದಲ್ಲಿ ಕಾರ್ಯನಿರ್ವಾಹಕ ಅಭಿಯಂತರರು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯವರು ಲಿಖಿತದಲ್ಲಿ

ದಾಖಲು ಮಾಡಬೇಕಾದ ಕಾರಣಗಳಿಗಾಗಿ, ಐದು ವರ್ಷಗಳಿಗಾಗಿ ಪ್ರಮಾಣಪತ್ರವನ್ನು ನೀಡುವುದಕ್ಕೆ ಅಥವಾ ಪ್ರಮಾಣಪತ್ರದ ಅವಧಿಯನ್ನು ಕಡಿಮೆ ಮಾಡುವುದಕ್ಕೆ ಮತ್ತು ಅರ್ಜಿದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ ಅರ್ಜಿಯನ್ನು ತಿರಸ್ಕರಿಸಬಹುದು ಮತ್ತು ಕಾರಣಗಳನ್ನು ಲೈಸೆನ್ಸ್ ನೀಡುವ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

(4) (2)ನೇ ಉಪನಿಯಮದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ತರುವಾಯ ಹದಿನೈದು ದಿನಗಳೊಳಗಾಗಿ, ಜಿಲ್ಲಾ ಅಥವಾ ಆ ಪ್ರದೇಶದ ವಿದ್ಯುಚ್ಛಕ್ತಿ ಪರಿಶೀಲಕನು ವಿದ್ಯುತ್ ಸ್ಥಾಪನೆಗಳ ಮತ್ತು ಸಲಕರಣೆಗಳ ಯುಕ್ತತೆಯ ಬಗ್ಗೆ ಮನದಟ್ಟಾದರೆ, ಆತನು ಜಾರಿಯಾದ ಪ್ರಮಾಣಪತ್ರವನ್ನು ನೀಡತಕ್ಕದ್ದು ಮತ್ತು ಅಂತಹ ಪ್ರಮಾಣಪತ್ರವು 'ಇ-1' ನಮೂನೆಯಲ್ಲಿರತಕ್ಕದ್ದು ಮತ್ತು ಅಂತಹ ಪ್ರಮಾಣ ಪತ್ರವು ನೀಡುವ ದಿನಾಂಕದಿಂದ ಐದು ವರ್ಷಗಳ ಅವಧಿಗಾಗಿ ಸಿಂಧುವಾಗಿರತಕ್ಕದ್ದು.

ಪರಂತು, ಯಾವುದೇ ಅರೆಖಾಯಂ ಸಿನಿಮಾ ನಿಯಮಗಳ ಅಗತ್ಯತೆಗಳನ್ನು ಪೂರೈಸಿದಿರುವಂತಹ ಸಂದರ್ಭದಲ್ಲಿ, ಉಪ ವಿದ್ಯುತ್ ಪರಿಶೀಲಕನು ಲಿಖಿತದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ, ಐದು ವರ್ಷಗಳ ಅವಧಿಗಾಗಿ ಪ್ರಮಾಣಪತ್ರವನ್ನು ನೀಡುವುದಕ್ಕಾಗಿ ಅಥವಾ ಪ್ರಮಾಣಪತ್ರದ ಅವಧಿಯನ್ನು ಕಡಿಮೆ ಮಾಡುವುದಕ್ಕೆ ಮತ್ತು ಅರ್ಜಿದಾರನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ ಅರ್ಜಿಯನ್ನು ತಿರಸ್ಕರಿಸಬಹುದು ಮತ್ತು ಕಾರಣಗಳನ್ನು ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ತಿಳಿಸತಕ್ಕದ್ದು.

(5) (ಎ) ಜಿಲ್ಲೆಯ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಗ್ನಿಶಾಮಕ ಅಧಿಕಾರಿಯು ಮನದಟ್ಟಾದರೆ ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡಗಳಿಗೆ IXನೇ ಅಧ್ಯಾಯದಲ್ಲಿ ನಿರ್ದಿಷ್ಟಪಡಿಸಲಾದ ಅಗ್ನಿಶಾಮಕ ಉಪಕರಣಗಳು ಮತ್ತು ಇತರೆ ಸಲಕರಣೆಗಳನ್ನು ಒದಗಿಸಿದ್ದರೆ, ಆತನು ಅರ್ಜಿಯನ್ನು ಸ್ವೀಕರಿಸಿದ ತರುವಾಯ ಹದಿನೈದು ದಿನಗಳೊಳಗಾಗಿ ಜಾರಿಯಾಗುವುದಕ್ಕೆ 'ಇ-2' ನಮೂನೆಯಲ್ಲಿ ಪ್ರಮಾಣಪತ್ರವನ್ನು ನೀಡತಕ್ಕದ್ದು, ಅದು ಐದು ವರ್ಷಗಳ ಅವಧಿಗಾಗಿ ಸಿಂಧುವಾಗಿರತಕ್ಕದ್ದು:

ಪರಂತು, ಯಾವುದೇ ಸಿನಿಮಾ ಥಿಯೇಟರ್ ಅಥವಾ ಮಲ್ಟಿಪ್ಲೆಕ್ಸ್‌ಗಳ ನಿಯಮಗಳ ಅಗತ್ಯತೆಗಳನ್ನು ಪೂರೈಸದೆ ಇರುವ ಸಂದರ್ಭದಲ್ಲಿ, ಅಗ್ನಿಶಾಮಕ ಅಧಿಕಾರಿಯು ಲಿಖಿತದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಐದು ವರ್ಷಗಳಿಗಾಗಿ ಪ್ರಮಾಣಪತ್ರವನ್ನು ನೀಡುವುದಕ್ಕೆ ಅಥವಾ ಪ್ರಮಾಣಪತ್ರದ ಅವಧಿಯನ್ನು ಕಡಿಮೆ ಮಾಡುವುದಕ್ಕೆ ಅರ್ಜಿಯನ್ನು ತಿರಸ್ಕರಿಸಬಹುದು ಮತ್ತು ಅರ್ಜಿದಾರನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ ಮತ್ತು ಕಾರಣಗಳನ್ನು ಲೈಸೆನ್ಸ್ ನೀಡುವ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

(ಬಿ) ಪ್ರತಿಯೊಂದು ಸಿನಿಮಾ ಮಂದಿರ ಅಥವಾ ಮಲ್ಟಿಪ್ಲೆಕ್ಸ್‌ಗಳಲ್ಲಿ ಅಗ್ನಿಶಾಮಕ ಉಪಕರಣಗಳ ದಕ್ಷತೆ/ ಯೋಗ್ಯತೆ/ ಕಾರ್ಯನಿರ್ವಹಿಸುವ ಪರಿಸ್ಥಿತಿಯನ್ನು ಜಿಲ್ಲಾ ಅಗ್ನಿಶಾಮಕ ಅಧಿಕಾರಿಯಿಂದ ವಾರ್ಷಿಕವಾಗಿ ಪರೀಕ್ಷಿಸತಕ್ಕದ್ದು.

(6) ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯು ಆವರಣದ ನೈರ್ಮಲ್ಯದ ಸೌಲಭ್ಯಗಳು, ಸಾರ್ವಜನಿಕ ಆರೋಗ್ಯ, ಆರೋಗ್ಯ ಮತ್ತು ಶುಚಿತ್ವ ನಿರ್ವಹಣೆಗಾಗಿ ಮಾಡಿದ ಉಪಬಂಧಗಳ ಬಗ್ಗೆ ಮನದಟ್ಟಾದರೆ, ಆತನು ಅರ್ಜಿಯನ್ನು ಸ್ವೀಕರಿಸಿದ ತರುವಾಯ ಹದಿನೈದು ದಿನಗಳೊಳಗಾಗಿ ಅದು ಜಾರಿಯಾಗಲು 'ಇ-3' ನಮೂನೆಯಲ್ಲಿ ಪ್ರಮಾಣಪತ್ರವನ್ನು ನೀಡತಕ್ಕದ್ದು. ಅದು ಐದು ವರ್ಷಗಳ ಅವಧಿಗೆ ಸಿಂಧುವಾಗಿರತಕ್ಕದ್ದು:

ಪರಂತು, ಯಾವುದೇ ಸಿನಿಮಾ ಮಂದಿರ ಅಥವಾ ಮಲ್ಟಿಪ್ಲೆಕ್ಸ್ ನಿಯಮಗಳ ಅಗತ್ಯತೆಗಳನ್ನು ಪೂರೈಸದೆಯಿದ್ದ ಸಂದರ್ಭದಲ್ಲಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯು ಲಿಖಿತದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಐದು ವರ್ಷಗಳಿಗಾಗಿ ಪ್ರಮಾಣಪತ್ರವನ್ನು ನೀಡುವುದಕ್ಕಾಗಿ ಅಥವಾ ಪ್ರಮಾಣಪತ್ರದ ಅವಧಿಯನ್ನು ಕಡಿಮೆ ಮಾಡುವುದಕ್ಕಾಗಿ ಅರ್ಜಿಯನ್ನು ತಿರಸ್ಕರಿಸಬಹುದು ಮತ್ತು ಅರ್ಜಿದಾರನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ ಮತ್ತು ಕಾರಣಗಳನ್ನು ಲೈಸೆನ್ಸ್ ನೀಡುವ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

(7) (3)ನೇ, (4)ನೇ, (5)ನೇ ಮತ್ತು (6)ನೇ ಉಪನಿಯಮಗಳ ಮೇರೆಗೆ ಪ್ರಮಾಣಪತ್ರವನ್ನು ನೀಡುವ ಉದ್ದೇಶಕ್ಕಾಗಿ, ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಸಾರಿಗೆ ಇಲಾಖೆ, ಜಿಲ್ಲೆಯ ಅಥವಾ ಆ ಪ್ರದೇಶದ ವಿದ್ಯುಚ್ಛಕ್ತಿ ಪರಿಶೀಲಕನು ಜಿಲ್ಲಾ ಅಗ್ನಿಶಾಮಕ ಅಧಿಕಾರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡ ಮತ್ತು ಆವರಣಗಳನ್ನು ಭೇಟಿ ಮಾಡತಕ್ಕದ್ದು ಮತ್ತು ಪರಿಶೀಲಿಸತಕ್ಕದ್ದು ಮತ್ತು ಅವುಗಳ ಪರಿಶೀಲನಾ ವರದಿಗಳನ್ನು ಲೈಸೆನ್ಸ್ ನೀಡುವ ಪ್ರಾಧಿಕಾರಕ್ಕೆ ವರದಿ ಭಾಗವನ್ನು ಸಲ್ಲಿಸತಕ್ಕದ್ದು.

(8) ಸಿನಿಮಾ ಮಂದಿರಗಳ ಮತ್ತು ಮಲ್ಟಿಪ್ಲೆಕ್ಸ್‌ಗಳ ಸಂಬಂಧದಲ್ಲಿ ಪರಿಶೀಲನೆಗಾಗಿ ಮತ್ತು ಪ್ರಮಾಣಪತ್ರಗಳನ್ನು ನೀಡುವುದಕ್ಕಾಗಿ ಶುಲ್ಕಗಳನ್ನು ಕಾಲಕಾಲಕ್ಕೆ ಸರ್ಕಾರದಿಂದ ನಿರ್ದಿಷ್ಟಪಡಿಸಿದಂತೆ ವಿಧಿಸತಕ್ಕದ್ದು ಮತ್ತು ನಿರ್ದಿಷ್ಟಪಡಿಸಿದ ಹಾಗೆ ಲೆಕ್ಕಶೀರ್ಷಿಕೆಗೆ ಜಮೆ ಮಾಡತಕ್ಕದ್ದು.

(9) ಮೇಲಿನ ಕಚೇರಿಗಳಿಂದ ನೀಡಲಾದ ಪ್ರಮಾಣಪತ್ರದ ಪ್ರತಿಯನ್ನು ಸರ್ಕಾರದಿಂದ ಅಧಿಸೂಚಿಸಲಾದ ಶುಲ್ಕಗಳನ್ನು ಸಂದಾಯ ಮಾಡಿದ ಮೇಲೆ ಅವುಗಳಿಂದ ಪಡೆಯತಕ್ಕದ್ದು.

**122. ವಿದ್ಯುಚ್ಛಕ್ತಿ ಸ್ಥಾಪನೆಗಳು,-** ಈ ಅಧ್ಯಾಯದ ಉದ್ದೇಶಗಳಿಗಾಗಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, “ಬುಷ್” ಎಂದರೆ ಸಂದುಗಳ ಮೂಲಕ ಕೊಳವೆಗಳು ಮತ್ತು ಕೇಬಲ್ಲುಗಳನ್ನು ಹಾಯಿಸಲಾಗಿದೆಯೋ ಆ ಸಂದುಗಳಲ್ಲಿ ಅಂತಹ ಸಂದುಗಳನ್ನು ಯುಕ್ತವಾಗಿ ಹೊಗೆ ನಿರೋಧಕಗೊಳಿಸುವ ದೃಷ್ಟಿಯಿಂದ ಸೇರಿಸಲಾದ ಪ್ಯಾಕಿಂಗ್.

(2) ವಿದ್ಯುಚ್ಛಕ್ತಿ ಅಧಿನಿಯಮ 2003 ಮತ್ತು ಕೇಂದ್ರಿಯ ವಿದ್ಯುಚ್ಛಕ್ತಿ ಪ್ರಾಧಿಕಾರ (ವಿದ್ಯುತ್ ಸರಬರಾಜಿಗೆ ಸಂಬಂಧಿಸಿದ ಸುರಕ್ಷತೆ ಮತ್ತು ಕಾನೂನುಕ್ರಮಗಳು) ನಿಯಂತ್ರಣಗಳು 2010 ಮತ್ತು ನಿಯಮಗಳು ಮತ್ತು ನಿಯಂತ್ರಣಗಳಿಗೆ ತದನಂತರ ಮಾಡಲಾದ ಈ ಅಧ್ಯಾಯದಲ್ಲಿ ನಿರ್ದಿಷ್ಟವಾಗಿ ಪರಿಭಾಷಿಸಲಾಗದಂಥ ಈ ನಿಯಮಗಳಿಗೆ ಯಾವುದೇ ಪದ ಅದೇ ಅರ್ಥ ಮತ್ತು ಪದಗಳನ್ನು ಪರಿಭಾಷಿಸತಕ್ಕದ್ದಲ್ಲ.

**123. ಮುಖ್ಯ ಸರ್ಕ್ಯೂಟುಗಳು**.- ಆವರಣಗಳ ವಿದ್ಯುತ್ ದೀಪ ವ್ಯವಸ್ಥೆಯು ಕನಿಷ್ಠ ಪಕ್ಷ ಮೂರು ಪ್ರತ್ಯೇಕ ಮತ್ತು ವಿಭಿನ್ನ ಮುಖ್ಯ ಸರ್ಕ್ಯೂಟ್‌ಗಳನ್ನು ಹೊಂದಿರತಕ್ಕದ್ದು ಮತ್ತು ಅವುಗಳು,-

(ಎ) ಪ್ರೊಜೆಕ್ಷನ್ ಕೊಠಡಿಗಾಗಿ ಮತ್ತು ಅಲ್ಲಿಂದ ಡಿಮ್ಮಿಂಗ್ ರೆಗ್ಯುಲೇಟರು ಯಾವುದಾದರೂ ಇದ್ದರೆ, ಅದರ ಮೂಲಕ ಸಭಾಂಗಣದ ಕೇಂದ್ರ ದೀಪ ವ್ಯವಸ್ಥೆಗಾಗಿ ‘ಎ’ ಸರ್ಕ್ಯೂಟ್;

(ಬಿ) ಸಭಾಂಗಣದ ಸರಿಸುಮಾರು ಅರ್ಧಭಾಗ ಸಾರ್ವಜನಿಕರಿಗೆ ತೆರೆದಿರುವ ದಾರಿಗಳು, ಮೆಟ್ಟಲು ದಾರಿಗಳು, ಹೊರಕ್ಕೆ ಹೋಗುವ ದಾರಿಗಳು ಮತ್ತು ಕಟ್ಟಡಗಳ ಭಾಗಗಳಿಗಾಗಿ ‘ಬಿ’ ಸರ್ಕ್ಯೂಟ್; ಮತ್ತು

(ಸಿ) ಸಭಾಂಗಣದ ಉಳಿದ ಅರ್ಧಭಾಗ ಸಾರ್ವಜನಿಕರಿಗೆ ತೆರೆದಿರುವ ದಾರಿಗಳು, ಮೆಟ್ಟಲು ದಾರಿಗಳು, ಹೊರಕ್ಕೆ ಹೋಗುವ ದಾರಿ ಮತ್ತು ಕಟ್ಟಡಗಳ ಭಾಗಗಳಿಗಾಗಿ ‘ಸಿ’, ಸರ್ಕ್ಯೂಟ್‌ಗಳು

- ಇರತಕ್ಕದ್ದು.

(2) ‘ಬಿ’ ಮತ್ತು ‘ಸಿ’ ಸರ್ಕ್ಯೂಟ್‌ಗಳಿಗೆ ಸಂಬಂಧಿಸಿದಂತೆ ಸರ್ಕ್ಯೂಟ್‌ಗಳ ನಿಯಂತ್ರಣವು ಒಂದರಿಂದ ಇನ್ನೊಂದಕ್ಕೆ ದೂರದಲ್ಲಿರತಕ್ಕದ್ದು.

**124. ಸರಬರಾಜು ವ್ಯವಸ್ಥೆ.-** (1) ಸರಬರಾಜು ಮೂರು ಹಂತಗಳ ಎಸಿ ವ್ಯವಸ್ಥೆಯಲ್ಲಿ ಲಭ್ಯವಿರುವಲ್ಲಿ, ‘ಎ’, ‘ಬಿ’ ಮತ್ತು ‘ಸಿ’ ಸರ್ಕ್ಯೂಟ್ ಲೋಡನ್ನು ಸರಿತೂಗಿಸಲು ಮೂರು ವಿವಿಧ ಸ್ಥಳಗಳಿಂದ ಸರಬರಾಜು ಮಾಡತಕ್ಕದ್ದು.

(2) ಎ, ಬಿ ಮತ್ತು ‘ಸಿ’ ಯ ಮುಖ್ಯ ಸರ್ಕ್ಯೂಟ್‌ಗಳನ್ನು ಅವಶ್ಯವೆಂದು ಪರ್ಯಾಲೋಚಿಸಬಹುದಾದಷ್ಟು ಉಪ-ಸರ್ಕ್ಯೂಟ್‌ಗಳಾಗಿ ಉಪ-ವಿಭಾಗಿಸಬಹುದು. ಪ್ರತಿಯೊಂದು ಉಪ-ಸರ್ಕ್ಯೂಟ್ ವಿತರಣಾ ಫಲಕದಿಂದ ಪ್ರಾರಂಭವಾಗತಕ್ಕದ್ದು, ಅರ್ಥ್ ಲಿಕೇಜುಗಳ ಸರ್ಕ್ಯೂಟ್ ಬ್ರೇಕರ್ಸ್‌ಗಳ (ಇಎಲ್‌ಸಿಬಿ) ಸೂಕ್ತವಾದ ಸಾಮರ್ಥ್ಯದಿಂದ ನೇರವಾಗಿ ಪ್ರಾರಂಭವಾಗತಕ್ಕದ್ದು.

(3) ಆವರಣದ ಒಳಗಡೆ ಮತ್ತು ಹೊರಗಡೆಯ ದೀಪಗಳು ಪ್ರತ್ಯೇಕ ಸರ್ಕ್ಯೂಟ್‌ಗಳಾಗಿರತಕ್ಕದ್ದು. ಫ್ಯಾನ್‌ಗಳ ಸರ್ಕ್ಯೂಟ್‌ಗಳು ವಿದ್ಯುತ್ ಮತ್ತು ತಂಪುಗೊಳಿಸುವ ಉದ್ದೇಶಗಳಿಗಾಗಿನ ಸರ್ಕ್ಯೂಟ್‌ಗಳನ್ನು ಈ ವ್ಯವಸ್ಥೆಯ ಪರಿಪಥಗಳಿಂದ ವಿಭಿನ್ನ ಮತ್ತು ಪ್ರತ್ಯೇಕವಾಗಿ ಇಡತಕ್ಕದ್ದು.

(4) ವಿದ್ಯುತ್ ಉಳಿತಾಯ ಮತ್ತು ಆಧುನಿಕ ತಂತ್ರಜ್ಞಾನದ ಮಿಂಚಿನ ವ್ಯವಸ್ಥೆಯ ಎಲ್.ಇ.ಡಿ. ಮೊದಲಾದವುಗಳನ್ನು ಅಂಗೀಕರಿಸತಕ್ಕದ್ದು.

**125. ಸ್ವಿಚ್ಚು ಮತ್ತು ಫ್ಯೂಸ್.-** ಒವರ್ ಲೋಡ್‌ನೊಂದಿಗೆ ಮುಖ್ಯ ಸ್ವಿಚ್ಚನ್ನು ಮತ್ತು ಅರ್ಥ್‌ಲಿಕೇಜ್ ಸಂರಕ್ಷಣೆಗೆ ಎಲ್ಲ ವಿದ್ಯುತ್ ಅಳವಡಿಕೆಯ ಮುಖ್ಯ ಸ್ವಿಚ್ಚು ಬೋರ್ಡ್‌ನಲ್ಲಿ ಮುಖ್ಯ ಸ್ವಿಚ್ಚನ್ನು ಒದಗಿಸತಕ್ಕದ್ದು. ಎಲ್ಲ ಸರ್ಕ್ಯೂಟುಗಳನ್ನು ಸಿಬ್ಬಂದಿ ವರ್ಗಕ್ಕೆ ಸುಲಭವಾಗಿ ದೊರೆಯಬಹುದಾದ ಸ್ಥಳಗಳಲ್ಲಿ ಮತ್ತು ಅವರಿಗೆ ಯಾವುದೇ ದಾರಿ ಅಥವಾ ನಿರ್ಗಮನಕ್ಕೆ ಅಡಚಣೆಯಾಗದಂತೆ ಇರುವ ಸ್ಥಳಗಳಲ್ಲಿ ಸೂಕ್ತ ಸಾಮರ್ಥ್ಯದ ಸರ್ಕ್ಯೂಟ್ ಬ್ರೇಕರ್ ಮೂಲಕ ಸಮರ್ಥವಾಗಿ ಸಂರಕ್ಷಿಸತಕ್ಕದ್ದು.

(2) ಸಾರ್ವಜನಿಕರಿಗೆ ಸ್ವಿಚ್ ಬೋರ್ಡ್‌ಗಳು ಸಿಗುವಂತಿದ್ದರೆ ಮತ್ತು ಟಿಕೆಟ್ ಬೂತ್‌ಗಳಲ್ಲಿ ಇದ್ದರೆ, ಗಾಜು ಅಥವಾ ಲೋಹದ ಮುಂಭಾಗಕ್ಕೆ ಸರಿಯಾದ ಬೀಗ ಹಾಕುವ ಪೆಟ್ಟಿಗೆಗಳನ್ನು ಒದಗಿಸತಕ್ಕದ್ದು (ಸಾಕಷ್ಟು ದಪ್ಪ ಇರುವ ಹೊರತು) ಮತ್ತು ತಂತಿ ರಕ್ಷಕ ಉಪಕರಣದೊಂದಿಗೆ ಅಥವಾ ಸೂಕ್ತವಾದ ಅಗ್ನಿ ನಿರೋಧಕ ಸಾಮಗ್ರಿಗಳನ್ನು ಉಪಯೋಗಿಸುವ ಮೂಲಕ ಮಾಡಿದ ವಸ್ತುಗಳ ಲಿಡ್‌ಗಳು ಮತ್ತು ಸೈಡ್‌ಗಳೊಂದಿಗೆ ಪರ್ಯಾಯ ಪೆಟ್ಟಿಗೆಗಳಿಂದ ಸಂರಕ್ಷಿಸತಕ್ಕದ್ದು.

(3) ಸೂಕ್ತ ಸಾಮರ್ಥ್ಯದ ಎಲ್ಲಾ ಸ್ವಿಚ್ಚುಗಳು ಮತ್ತು ಸರ್ಕ್ಯೂಟ್ ಬ್ರೇಕ್‌ಗಳನ್ನು ಯಾವ ದೀಪಗಳನ್ನು ಮತ್ತು ಸರ್ಕ್ಯೂಟ್‌ಗಳು ಮತ್ತು ಲ್ಯಾಂಪ್‌ಗಳು ಅವರ ನಿಯಂತ್ರಣದಲ್ಲಿರುವಂತೆ ಅವುಗಳನ್ನು ಸ್ಪಷ್ಟವಾಗಿ ತೋರಿಸುವ ಹಾಗೆ ಗುರುತು ಮಾಡತಕ್ಕದ್ದು.

**126. ಸಂಚಾಯಕ ಸಲಕರಣೆಗಳು.-** (1) ವಿದ್ಯುಚ್ಛಕ್ತಿ ಪರಿಶೀಲನಾಧಿಕಾರಿಯು ಅನುಮೋದಿಸಬಹುದಾದಂಥ ಸಂಖ್ಯೆಯ ಮತ್ತು ಬಗೆಯ ಸಂಚಾಯಕ ಸಲಕರಣೆಗಳು ಅಥವಾ ಸ್ವಯಂಚಾಲಿತ ಡಿಸಿ ದೀಪಗಳನ್ನು ತುರ್ತು ಸಂದರ್ಭದಲ್ಲಿ ಅಥವಾ ವಿದ್ಯುಚ್ಛಕ್ತಿ ಸ್ಥಗಿತಗೊಂಡ ಸಂದರ್ಭದಲ್ಲಿ ಸಭಾಂಗಣವನ್ನು ಪ್ರಕಾಶಗೊಳಿಸುವ ಹಾಗೆ ಸ್ಥಾಪನೆ ಮಾಡತಕ್ಕದ್ದು.

(2) ಸಂಚಾಯಕ ಸಲಕರಣೆಗಳನ್ನು ಹೊರಗಿನ ಗಾಳಿಗೆ ಸಾಕಷ್ಟು ವಾಯು ಸಂಚಾರವಿರುವ ಕೊಠಡಿಯಲ್ಲಿ ಇಡತಕ್ಕದ್ದು ಮತ್ತು ಈ ಕೊಠಡಿಯನ್ನು ಅಗ್ನಿನಿರೋಧಕ ಬಾಗಿಲುಗಳೊಂದಿಗೆ ಅಗ್ನಿ ಪ್ರತಿರೋಧಕ ಇರುವಂತೆ ರೂಪಿಸತಕ್ಕದ್ದು ಮತ್ತು ಅದನ್ನು ಯಾವುದೇ ಇತರ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ.

**127. ರೂಪಾಂತರಿಸುವ ಮತ್ತು ಪರಿವರ್ತಿಸುವ ಯಂತ್ರೋಪಕರಣಗಳು,-** ರೂಪಾಂತರಿಸುವ ಮತ್ತು ಪರಿವರ್ತಿಸುವ ಯಂತ್ರೋಪಕರಣಗಳನ್ನು ಹೊರಗಿನ ಗಾಳಿಗೆ ಸಾಕಷ್ಟು ವಾಯು ಸಂಚಾರವಿರುವ ಸ್ಥಳದಲ್ಲಿ ಸ್ವಿಚ್ಚುಗಳು ಮತ್ತು ಸರ್ಕ್ಯೂಟ್ ಬ್ರೆಕರ್ಸ್‌ಗಳ ನಿಯಂತ್ರಣದೊಂದಿಗೆ ಸೂಕ್ತ ರೀತಿಯಲ್ಲಿ ಬೆಳಕಿರುವ ಮತ್ತು ಆಡಳಿತ ಸಿಬ್ಬಂದಿಗೆ ಸಿಗುವ ಸ್ಥಳದಲ್ಲಿಡತಕ್ಕದ್ದು ಮತ್ತು ಅದನ್ನು ಇತರ ಯಾವುದೇ ಉದ್ದೇಶಕ್ಕೆ ಉಪಯೋಗಿಸತಕ್ಕದ್ದಲ್ಲ.

**128. ಮೋಟಾರುಗಳು, ಇತ್ಯಾದಿ.-** ಎಲ್ಲ ಮೋಟಾರುಗಳು ಮತ್ತು ವಿದ್ಯುಚ್ಛಕ್ತಿ ಸಾಧನ ಸಾಮಗ್ರಿಗಳು ವಿಶೇಷ ಷರತ್ತುಗಳಿಗೆ ಒಳಪಟ್ಟು ಅನುಮತಿಸಿದರೆ, ಆದರೆ ವಿದ್ಯುಚ್ಛಕ್ತಿ ಫ್ಯಾನ್‌ಗಳು ಮತ್ತು ಅದೇ ರೀತಿಯ ಮೋಟಾರುಗಳು ಉಪಯೋಗಿಸಬಹುದು, ಆದರೆ, ಮುನ್ನೂರು ವ್ಯಾಟ್‌ಗಳಿಗಿಂತ ಹೆಚ್ಚಾಗಿ ತೆಗೆದುಕೊಳ್ಳದೆ ಸೂಕ್ತ ಹಂಚಿಕೆ ಮಂಡಳಿ ಮೇಲೆ ಸರ್ಕ್ಯೂಟ್ ಬ್ರೇಕರ್ಗಳಿಂದ ಪ್ರತ್ಯೇಕವಾಗಿ ತಂತಿ ಅಳವಡಿಸಿದ್ದರೆ ಉಪಯೋಗಿಸಬಹುದು.

**129. ಪ್ರತಿರೋಧಗಳು.-** ನಿಯಂತ್ರಣ ಉದ್ದೇಶಕ್ಕಾಗಿ ಪ್ರತಿರೋಧವನ್ನು ಹೊರತುಪಡಿಸುವುದರೊಂದಿಗೆ ಎಲ್ಲ ಪ್ರತಿರೋಧಗಳನ್ನು ಪ್ರೊಜೆಕ್ಷನ್ ಕೊಠಡಿಯ ಹೊರಗೆ ಇಡತಕ್ಕದ್ದು ಮತ್ತು ಯುಕ್ತವಾಗಿ ಕಾರ್ಯ ಸಾಧ್ಯವಾಗಿದ್ದರೆ ಸಭಾಂಗಣದ

ಹೊರಗೆ ಇಡತಕ್ಕದ್ದು, ಸಭಾಂಗಣದ ಒಳಗಡೆ ಇಟ್ಟಿದ್ದರೆ, ಅಂತಹ ಪ್ರತಿರೋಧಕಗಳನ್ನು ಅರ್ಥ್‌ಡ್ ತಂತಿ ರಕ್ಷಣೆಯಿಂದ ಅಥವಾ ಅಪಘಾತಗಳು ನಡೆಯದಂತೆ ತಡೆಯುವುದಕ್ಕಾಗಿ ಇತರ ಸಾಮಾಗ್ರಿಗಳಿಂದ ರಕ್ಷಿಸತಕ್ಕದ್ದು.

**130. ಚಾಪ ದೀಪಗಳು.-** (1) ಯಾವುದೇ ಅರೆಛಾಯಂ ಸಿನಿಮಾದಲ್ಲಿ, ವಿದ್ಯುಚ್ಛಕ್ತಿ ಪರಿಶೀಲನಾಧಿಕಾರಿ ಅನುಮತಿಯಿಲ್ಲದೆ ಸಭಾಂಗಣದಲ್ಲಿ ಉಪಯೋಗಿಸತಕ್ಕದ್ದಲ್ಲ ಅಥವಾ ಸಾರ್ವಜನಿಕರಿಗಾಗಿ ಯಾವುದೇ ಭಾಗದಲ್ಲಿ ತೆರೆಯತಕ್ಕದ್ದಲ್ಲ. ಅಂತಹ ಸ್ಥಳಗಳ ಯಾವುದೇ ಭಾಗದಲ್ಲಿ ಅವುಗಳನ್ನು ಉಪಯೋಗಿಸಿದಾಗ ಬೀಳುವ ಗಾಜು ಮತ್ತು ಪ್ರಜ್ವಲಿಸುವ ಇಂಗಾಲದ ಕಣಗಳಿಂದ ಉಂಟಾಗುವ ಅಪಾಯದ ವಿರುದ್ಧ ರಕ್ಷಿಸಲು ವಿಶೇಷ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳತಕ್ಕದ್ದು, ದೀಪಗಳ ಎಲ್ಲ ಭಾಗಗಳು, ಲ್ಯಾಂಟನ್‌ಗಳು ಮತ್ತು ಅಳವಡಿಕೆಗಳು ನಿರ್ವಹಿಸಬಹುದಾಗಿರುವ ಜೋಡಣೆಗಳನ್ನು ಚೌಕಟ್ಟಿನಿಂದ (ಅವುಗಳನ್ನು ನಿರ್ವಹಿಸಲು ನಿಯೋಜಿತನಾದ ವ್ಯಕ್ತಿ ಹೊರತುಪಡಿಸಿ) ಪ್ರತ್ಯೇಕಿಸತಕ್ಕದ್ದು.

(2) ಸೀನರಿ ಅಥವಾ ಇತರ ಸುಲಭವಾಗಿ ಬೆಂಕಿ ಹತ್ತುವ ಸಾಮಗ್ರಿಗಳೊಂದಿಗೆ ಸಂಪರ್ಕದಿಂದ ಮೂಲಕ ಬೆಂಕಿ ಹೊತ್ತಿಕೊಳ್ಳಲು ಸಾಕಷ್ಟು ಉಷ್ಣಾಂಶ ಹೆಚ್ಚಾಗಬಹುದಾದ ಚಾಪ ದೀಪದ ಲೋಹದ ಕೆಲಸ ಯಾವುದೇ ತೆರೆದ ಭಾಗವನ್ನು ತಂತಿ ರಕ್ಷಕ ಮೂಲಕ ಪರಿರಕ್ಷಿಸತಕ್ಕದ್ದು. ಯಾವುದೇ ಸಂದರ್ಭದಲ್ಲಿ ಚಾಪ ದೀಪಗಳನ್ನು ಸಂವಾಹಕಗಳ ಮೂಲಕ ತೂಗುಬಿಡತಕ್ಕದ್ದಲ್ಲ.

(3) ಎಲ್ಲ ಚಾಪ ದೀಪಗಳನ್ನು ವಾತಾವರಣಕ್ಕೆ ಒಯ್ಯುವ ಗಾಳಿ ತೂರದ ನಾಳಗಳೊಂದಿಗೆ ಸಂಪರ್ಕಿಸತಕ್ಕದ್ದು.

(4) ಡಿಜಿಟಲ್ ಪ್ರೊಜೆಕ್ಟರ್, ಡಿಜಿಟಲ್ ಶಬ್ದ ವ್ಯವಸ್ಥೆಯಂಥ ಮುಂದುವರೆದ ತಂತ್ರಜ್ಞಾನದ ಪ್ರೊಜೆಕ್ಟರ್ ಮತ್ತು ಶಬ್ದ ವ್ಯವಸ್ಥೆ ಮತ್ತು ಮುಂದುವರೆದ ತಂತ್ರಜ್ಞಾನದ ಯಾವುದೇ ಇತರ ವಿಧಾನಗಳನ್ನು ಅಳವಡಿಸಿಕೊಳ್ಳಬಹುದು ಮತ್ತು ಜಿಲ್ಲಾ ಅಥವಾ ಆ ಪ್ರದೇಶದ ವಿದ್ಯುಚ್ಛಕ್ತಿ ಪರಿಶೀಲಕನಿಂದ ಅನುಮತಿಯನ್ನು ಪಡೆದ ತರುವಾಯ ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್‌ನ ಯಾವುದೇ ಭಾಗದಲ್ಲಿ ಬಳಸಬಹುದು.

**131. ಚಲನಚಿತ್ರ ದೀಪಗಳಿಗಾಗಿ ಕೇಬಲ್‌ಗಳು.-** ಚಲನಚಿತ್ರ ದೀಪಗಳು ಅಥವಾ ಡಿಜಿಟಲ್ ಪ್ರೊಜೆಕ್ಟರ್‌ಗಾಗಿ ಕೇಬಲ್‌ಗಳನ್ನು ಪ್ರೊಜೆಕ್ಟರ್ ಕೊಠಡಿಯಿಂದ ವಿದ್ಯುತ್ ಸರಬರಾಜು ಬೋರ್ಡಿನಿಂದ ಪ್ರತ್ಯೇಕ ಸರ್ಕ್ಯೂಟ್‌ಗಳಿಗಾಗಿ ತೆಗೆದುಕೊಳ್ಳತಕ್ಕದ್ದು. ಸೂಕ್ತವಾದ ಫ್ಯೂಜ್ ರಕ್ಷಣೆಯೊಂದಿಗೆ ಸ್ವಿಚ್ಚನ್ನು ಸಮರ್ಥ ಜೋಡಿ ಕಂಬದಿಂದ ಚಲನಚಿತ್ರ ದೀಪ ಪಥದಲ್ಲಿ ಪ್ರೊಜೆಕ್ಷನ್ ಕೊಠಡಿಯೊಳಗೆ ಜೋಡಿಸತಕ್ಕದ್ದು.

**132. ಕೇಬಲ್‌ಗಳಿಗಾಗಿ ವಿದ್ಯುತ್ ನಿರೋಧಕ ಸಾಮಗ್ರಿ.-** ಪ್ರೊಜೆಕ್ಷನ್ ಕೊಠಡಿಯೊಳಗೆ, ಅಗ್ನಿ ಪ್ರತಿರೋಧಕ ಕಡಿಮೆ ಹೊಗೆ ಬರುವ ರೀತಿಯ ಎಲ್ಲಾ ವಿದ್ಯುತ್ ಕೇಬಲ್‌ಗಳನ್ನು ಮತ್ತು ಎಲ್ಲಾ ಕೇಬಲ್‌ಗಳನ್ನು ನಳಿಕೆಗಳಿಂದ ಮುಚ್ಚತಕ್ಕದ್ದು. ಸ್ವಿಚ್ಚು ಬೋರ್ಡಿನಿಂದ ಪ್ರೊಜೆಕ್ಟರು ಮತ್ತು ಮೋಟಾರುಗಳಿಗೆ ಹೋಗುವ ಎಲ್ಲಾ ನಳಿಕೆಗಳನ್ನು ನೆಲದ ಹಾಸನ್ನು ಅಗೆಯದೆ ಪೂರ್ಣಗೊಳಿಸಿದ ನೆಲದಲ್ಲಿ ಹೂಳತಕ್ಕದ್ದು ಮತ್ತು ಯಾವುದೇ ಸಂದರ್ಭದಲ್ಲಿ ಕೇಬಲ್‌ಗಳ ಮೇಲಿನ ನಳಿಕೆಗಳಿಗೆ ನೆಲದ ಮೇಲ್ಮೈ ಮೇಲೆ ಅವಕಾಶ ಕೊಡತಕ್ಕದ್ದಲ್ಲ.

**133. ನಿರ್ಗಮನ ಚಿಹ್ನೆ, ದಾರಿಗಳು, ಇತ್ಯಾದಿಗಳಿಗಾಗಿ ಸಹಾಯಕ ಸರಬರಾಜು.-** (1) ಸಭಾಂಗಣದೊಳಗೆ ನಡುದಾರಿಗಳು ಮತ್ತು ದಾರಿಗಳಲ್ಲಿ ನೆಲದೀಪಗಳನ್ನು ಒದಗಿಸತಕ್ಕದ್ದು. ಅವುಗಳ ವೋಲ್ಟೇಜು ಇಪ್ಪತ್ನಾಲ್ಕು ವೋಲ್ಟುಗಳನ್ನು ಮೀರತಕ್ಕದ್ದಲ್ಲ.

(2) ಸಾರ್ವಜನಿಕರು ಸಿನಿಮಾ ಥಿಯೇಟರ್ನೊಳಗೆ ಇರುವ ಸಮಯದಲ್ಲಿ ಸ್ಟೇರ್‌ಕೇಸ್‌ಗಳಲ್ಲಿ, ಮೊಗಸಾಲೆಗಳಲ್ಲಿ, ದಾರಿಗಳಲ್ಲಿ ಮತ್ತು ಹೊರಕ್ಕೆ ಹೋಗುವ ದಾರಿಗಳಲ್ಲಿ ಎಲ್ಲಾ ದೀಪಗಳನ್ನು ಹೊತ್ತಿಸಿಟ್ಟಿರತಕ್ಕದ್ದು.

(3) ಸಾರ್ವಜನಿಕರು ಆವರಣದಲ್ಲಿರುವಾಗ ಸಂಪೂರ್ಣವಾಗಿ ಆವರಣದಲ್ಲಿ ಸುಸ್ಥಿತಿಯಲ್ಲಿರುವ ಕನಿಷ್ಠ ಪಕ್ಷ ಆರು ಟಾರ್ಚುಗಳನ್ನು ಇಟ್ಟಿರತಕ್ಕದ್ದು ಮತ್ತು ಅದು ದ್ವಾರಪಾಲಕರಿಗೆ (ಡೋರ್ಕೀಪರ್) ಸುಲಭವಾಗಿ ಸಿಗುವ ಹಾಗೆ ಇಡೀ ಕಟ್ಟಡದಲೆಲ್ಲಾ ಹಂಚಿರತಕ್ಕದ್ದು.

(4) ಎಲ್ಲ ಹೊರಗೆ ಹೋಗುವ ದಾರಿಗಳಲ್ಲಿ ತುರ್ತು ದೀಪಗಳನ್ನು ಸಹ ಒದಗಿಸತಕ್ಕದ್ದು.

(5) ತುರ್ತು ಚಿಹ್ನೆಯ ಫಲಕಗಳನ್ನು (ಅಗ್ನಿ ಹೊತ್ತಿಕೊಂಡಾಗ ಹೊರಗೆ ಹೋಗುವ ದಾರಿ/ ಸ್ಟೇರ್ಕೇಸ್, ಸುರಕ್ಷತೆಯ ಜಾಗ, ಅಗ್ನಿಶಾಮಕ, ತುರ್ತು ಅಲಾರಂ ಸ್ವಿಚ್ಚು ಇತ್ಯಾದಿ..) ಪ್ರಕಾಶಮಾನವಾಗಿ ಮತ್ತು ಸ್ಪಷ್ಟವಾಗಿ ಕಾಣುವಂತೆ ಇಟ್ಟಿರತಕ್ಕದ್ದು.

**134. ವೈರಿಂಗ್.-** (1) ಇಡೀ ಅರೆಖಾಯಂ ಸಿನಿಮಾ ಆವರಣಗಳ ವಿದ್ಯುತ್ ವೈರಿಂಗ್‌ನ್ನು ಲೋಹ ಅಥವಾ ಅನುಮೋದಿತ ಗಟ್ಟಿ ಪಾಲಿ ವಿನೈಲ್ ಕ್ಲೋರೈಡ್‌ನ ನಳಿಕೆ ಕೊಳವೆಗಳಲ್ಲಿ ಮಾಡತಕ್ಕದ್ದು.

(2) ಲೋಹದ ನಳಿಕೆ ಕೊಳವೆಗಳಿಗಾಗಿ ಬುಷ್‌ಗಳನ್ನು ಅವಶ್ಯವಿರುವಾಗಲೆಲ್ಲಾ ಉಪಯೋಗಿಸತಕ್ಕದ್ದು. ಎಲ್ಲಾ ಲೋಹದ ಕೊಳವೆಗಳನ್ನು ಸಮರ್ಥವಾಗಿ ಅರ್ತಿಂಗ್ ಕಲ್ಪಿಸತಕ್ಕದ್ದು ರಕ್ಷಾಸಂಪುಟಗಳು ಮತ್ತು ಇತರ ಜೋಡಣೆಗಳೊಂದಿಗೆ ಮುಂದುವರಿಸತಕ್ಕಂಥ ಉತ್ತಮ ಮತ್ತು ಖಾಯಂ ವಿದ್ಯುತ್ ಸಂಪರ್ಕ ಸುನಿಶ್ಚಿತಗೊಳಿಸುವ ಸ್ಕ್ರೂ ಜಾಯಿಂಟುಗಳು ಅಥವಾ ಇತರೆ ಸಾಧನಗಳನ್ನು ಒದಗಿಸತಕ್ಕದ್ದು.

**135. ಜೋಡಣೆಗಳು.-** (1) ಎಲ್ಲ ತೂಗು ಹಾಕಿದ ಜೋಡಣೆಗಳನ್ನು ಭದ್ರವಾಗಿ ಜೋಡಿಸತಕ್ಕದ್ದು.

(2) ಸಂಯೋಜಿತ ಅನಿಲ ಮತ್ತು ವಿದ್ಯುತ್ ಜೋಡಣೆಗಳನ್ನು ಉಪಯೋಗಿಸತಕ್ಕದ್ದಲ್ಲ.

(3) ಸಭಾಂಗಣದಲ್ಲಿ ಮತ್ತು ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡದ ಮುಂಭಾಗದಲ್ಲಿ ಯಾವುದೇ ವಿದ್ಯುತ್ ದೀಪದ ಲೋಲಕಗಳು ಅಥವಾ ಬ್ರ್ಯಾಕೆಟ್ಟುಗಳು ನೆಲದ ಮೇಲೆ ಜೋಡಣೆಗಳ ಅತಿ ಕೆಳಗಿನ ಮುಂಚಾಚಿರುವ ಭಾಗಕ್ಕೆ ಕನಿಷ್ಠ ಪಕ್ಷ ಎರಡೂವರೆ ಮೀಟರುಗಳಿರತಕ್ಕದ್ದು. ಯಾವುದೇ ವಿದ್ಯುತ್ ಜೋಡಣೆಗಳು ಅಥವಾ ಯಾವುದೇ ವಿವರಣೆಯ ಸಲಕರಣೆಗಳನ್ನು ಸುರಕ್ಷಾ ಪರದೆಯು ಸರಿಯಾಗಿ ಕೆಲಸ ಮಾಡುವುದಕ್ಕೆ ಯಾವುದೇ ಸಮಯದಲ್ಲಿ ಅಡ್ಡಿಯಾಗುವ ಹಾಗೆ ಜೋಡಿಸತಕ್ಕದ್ದಲ್ಲ ಅಥವಾ ಅಳವಡಿಸತಕ್ಕದ್ದಲ್ಲ.

(4) (i) ವಿದ್ಯುಚ್ಛಕ್ತಿ ಸ್ಥಾಪನೆಯನ್ನು, ಕರ್ನಾಟಕ ಸರ್ಕಾರದ ಲೈಸೆನ್ಸ್ ನೀಡುವ ಸಲಹಾ ಮತ್ತು ಪರೀಕ್ಷಾ ಮಂಡಳಿಯು ಕೊಟ್ಟ ವೈರ್ಮೆನ್ನರ ಅಥವಾ ಮೇಲ್ವಿಚಾರಕರ ಪರ್ಮಿಟ್ಟನ್ನು ಹೊಂದಿರುವ ಸರಿಯಾದ ಅರ್ಹತೆ ಪಡೆದ ವ್ಯಕ್ತಿಯ ಪ್ರಭಾರದಲ್ಲಿರತಕ್ಕದ್ದು ಅಥವಾ ಅದು ಲೈಸೆನ್ಸ್ ಪಡೆದ ವಿದ್ಯುಚ್ಛಕ್ತಿ ಕಾಂಟ್ರಾಕ್ಟರನ ಪ್ರಭಾರದಲ್ಲಿರತಕ್ಕದ್ದು, ಅವನ ಹೆಸರನ್ನು ಜಿಲ್ಲಾ ಅಥವಾ ಆ ಕ್ಷೇತ್ರದ ವಿದ್ಯುಚ್ಛಕ್ತಿ ಪರಿಶೀಲಿಕನಿಗೆ ತಿಳಿಸತಕ್ಕದ್ದು.

(ii) ಲೈಸೆನ್ಸು ಪಡೆದ ವಿದ್ಯುಚ್ಛಕ್ತಿ ಕಂಟ್ರಾಕ್ಟರನು, ಜಿಲ್ಲಾ ವಿದ್ಯುಚ್ಛಕ್ತಿ ಪರಿಶೀಲಿಕನಿಗೆ ವಾರ್ಷಿಕವಾಗಿ ಎಲ್ಲ ಸರ್ಕ್ಯೂಟುಗಳಿಗೆ ಮತ್ತು ವಿದ್ಯುತ್ ನಿರೋಧಕ ಅಳವಡಿಸಿದನ್ನು ಮತ್ತು ಎಲೆಕ್ಟ್ರಾನ್ ವ್ಯಾಲ್ಯೂಗಳನ್ನು ಒದಗಿಸತಕ್ಕದ್ದು.

(5) ವಿದ್ಯುತ್ ಶಾಕ್‌ನಿಂದ ನರಳುತ್ತಿರುವ ವ್ಯಕ್ತಿಗಳ ಚೇತರಿಕೆಗಾಗಿ ಇಂಗ್ಲಿಷ್, ಹಿಂದಿ ಮತ್ತು ಪ್ರಾದೇಶಿಕ ಭಾಷೆಗಳೆರಡರಲ್ಲೂ ಸೂಚನೆಗಳನ್ನು ಎದ್ದು ಕಾಣುವ ಸ್ಥಳದಲ್ಲಿ ಅಂಟಿಸತಕ್ಕದ್ದು ಮತ್ತು ವೈರ್ಮೆನ್ನರ ಉಪಯೋಗಕ್ಕಾಗಿ ಕನಿಷ್ಠ ಪಕ್ಷ ಸುಸ್ಥಿತಿಯಲ್ಲಿರುವ ಒಂದು ಜೊತೆ ರಬ್ಬರ್ ಕೈಚೀಲಗಳನ್ನು ಒದಗಿಸತಕ್ಕದ್ದು.

(6) ವಿದ್ಯುಚ್ಛಕ್ತಿ ಅಧಿನಿಯಮ, 2003 ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರ (ಸುರಕ್ಷತೆ ಮತ್ತು ವಿದ್ಯುತ್ ಪೂರೈಕೆಗೆ ಸಂಬಂಧಪಟ್ಟ ಕ್ರಮಗಳು) ವಿನಿಯಮಗಳು, 2010 ಮತ್ತು ಅದರ ತರುವಾಯ ಐಎಸ್‌ಎಸ್ 3043/1987ರ ನಿಯಮಗಳು ಮತ್ತು ವಿನಿಯಮಗಳ ಮೇರೆಗೆ ಭೂಸಂಪರ್ಕವನ್ನು ಸಮರ್ಥವಾಗಿ ಮತ್ತು ಪೂರ್ಣವಾಗಿ ಮಾಡತಕ್ಕದ್ದು ಮತ್ತು ಅದನ್ನು ಸರಿಯಾಗಿ ಇಟ್ಟುಕೊಂಡು ಬರತಕ್ಕದ್ದು. ಭೂ ವಿದ್ಯುತ್ ಧ್ರುವಗಳನ್ನು ತೆರೆದಿಡತಕ್ಕದ್ದು ಮತ್ತು ನಿಯತವಾಗಿ ನೀರು ಹಾಕುವುದು, ಪರಿಶೀಲನೆ ಮತ್ತು ಪರೀಕ್ಷೆಯನ್ನು ಅನುಗೊಳಿಸುವ ಹಾಗೆ ಐ.ಎಸ್. ಮಾನಕಗಳ ಪ್ರಕಾರ ಕಲ್ಲುಕಟ್ಟಡ ಆವೃತಗಳಲ್ಲಿ ಆವೃತಗೊಳಿಸತಕ್ಕದ್ದು.

**136. ಜನರೇಟರ್ ಸರಬರಾಜಿನ ಉತ್ಪಾದಕತೆ ಪರ್ಯಾಯ ಮೂಲ.-** ಪ್ರಸ್ತುತ ವಿದ್ಯುತ್ ಸರಬರಾಜನ್ನು ಆವರಣದಲ್ಲಿನ ವಿಶೇಷ ಸ್ಥಾವರದಿಂದ ಪಡೆದಿರುವಲ್ಲಿ, ಅಂತಹ ಸ್ಥಾವರವನ್ನು ಎಲ್ಲಾ ಸಂದರ್ಭಗಳಲ್ಲಿ ಜಿಲ್ಲಾ ಅಥವಾ ಆ ಕ್ಷೇತ್ರದ ವಿದ್ಯುಚ್ಛಕ್ತಿ ಪರಿಶೀಲಕನು ಅನುಮೋದಿಸಿರಬೇಕು.

**137. ವೈರಿಂಗ್ ಯೋಜನೆ.-** ವಿದ್ಯುಚ್ಛಕ್ತಿ ಸ್ಥಾಪನೆಯ ಎಲ್ಲಾ ಸರ್ಕ್ಯೂಟ್‌ಗಳು ಮತ್ತು ಉಪ ಸರ್ಕ್ಯೂಟ್‌ಗಳ ವ್ಯವಸ್ಥೆಯನ್ನು ವಿತರಣಾ ಫಲಕಗಳ ಸ್ಥಾನವನ್ನು ಮತ್ತು ಕೇಬಲ್‌ಗಳ ಗಾತ್ರವನ್ನು ಸ್ಪಷ್ಟವಾಗಿ ಸೂಚಿಸುವ ಏಕರೇಖೆಯಲ್ಲಿ ಚೌಕಟ್ಟು ಹಾಕಿರುವ ವೈರಿಂಗ್ ರೇಖಾಚಿತ್ರವನ್ನು ಆವರಣದಲ್ಲಿ ಪ್ರದರ್ಶಿಸತಕ್ಕದ್ದು ಮತ್ತು ಅದನ್ನು ತಹಲ್‌ವರೆಗೆ ಇಡತಕ್ಕದ್ದು, ಅಂತಹ ರೇಖಾಚಿತ್ರವನ್ನು ವಿದ್ಯುಚ್ಛಕ್ತಿ ಪರಿಶೀಲಕನು ಕ್ರಮಬದ್ಧವಾಗಿ ಅನುಮೋದಿಸಿ ಡಿಜಿಟಲ್ ನಮೂನೆಯಲ್ಲಿ ಸಹ ನಿರ್ವಹಿಸತಕ್ಕದ್ದು.

**138. ದೀಪ ವ್ಯವಸ್ಥೆಯ ಸಂವಾಹಕಗಳು.-** (1) ದೀಪ ವ್ಯವಸ್ಥೆಯ ಸಂವಾಹಕಗಳನ್ನು ಪ್ರತಿಯೊಂದು ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡದಲ್ಲಿ ಸಂಬಂಧಪಟ್ಟ ಐ.ಎಸ್. ಮಾನಕಗಳಿಗೆ ಅನುಗುಣವಾಗಿ ಒದಗಿಸತಕ್ಕದ್ದು.

(2) ನಿಯಾನ್ ಚಿಹ್ನೆಗಳನ್ನು ಸ್ಥಾಪಿಸಿದ್ದರೆ ಅವುಗಳನ್ನು ಪ್ರಾರಂಭಿಸುವ ಮುಂಚೆ ವಿದ್ಯುಚ್ಛಕ್ತಿ ಪರಿಶೀಲಕನಿಂದ ಪರಿಶೀಲಿಸಿಕೊಳ್ಳತಕ್ಕದ್ದು.

**139. ಪ್ರದರ್ಶನದ ಲೈಸನ್ಸ್.-** 121ನೇ ನಿಯಮದಲ್ಲಿ ಉಲ್ಲೇಖಿಸಿದ ಪ್ರಮಾಣ ಪತ್ರಗಳನ್ನು ಪಡೆದುಕೊಂಡ ತರುವಾಯ ಅರ್ಜಿದಾರನು ಲೈಸನ್ಸ್ ನೀಡುವ ಪ್ರಾಧಿಕಾರಿಗೆ ಅವನ ಅರ್ಜಿಯನ್ನು ಲಿಖಿತದಲ್ಲಿ ಸಲ್ಲಿಸತಕ್ಕದ್ದು. ಅಂತಹ ಅರ್ಜಿಯೊಂದಿಗೆ/ಅರ್ಜಿಯು ಇವುಗಳನ್ನು ಒಳಗೊಂಡಿರತಕ್ಕದ್ದು.

(ಎ) 121ನೇ ನಿಯಮದ (3)ನೇ ಉಪ-ನಿಯಮದ ಮೇರೆಗೆ ಸಾರ್ವಜನಿಕ ಕೆಲಸಗಳು, ಬಂದರುಗಳು ಮತ್ತು ಅಂತರ್ದೇಶೀಯ ಸಾರಿಗೆ ಇಲಾಖೆಯಿಂದ ಕಾರ್ಯನಿರ್ವಾಹಕ ಅಭಿಯಂತರರು ನೀಡಲಾದ ಪ್ರಮಾಣಪತ್ರ.

(ಬಿ) (i) 121ನೇ ನಿಯಮದ (4)ನೇ ಉಪ-ನಿಯಮದ ಮೇರೆಗೆ ಪ್ರದೇಶ ಅಥವಾ ಜಿಲ್ಲಾ ಉಪ ವಿದ್ಯುತ್ ಪರಿಶೀಲಕರ ಮೂಲಕ ನೀಡಿದ ಪ್ರಮಾಣಪತ್ರ.

(ii) 121ನೇ ನಿಯಮದ (5)ನೇ ಉಪ-ನಿಯಮದ ಮೇರೆಗೆ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ನೀಡಿದ ಪ್ರಮಾಣಪತ್ರ.

(iii) 121ನೇ ನಿಯಮ (6)ನೇ ಉಪ-ನಿಯಮದ ಮೇರೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ನೀಡಿದ ಪ್ರಮಾಣಪತ್ರ.

(ಸಿ) ಅಂತಹ ವ್ಯವಸ್ಥೆಗಳನ್ನು ಮಾಡಲಾಗಿದೆ ಎಂದು ಸ್ಥಿರೀಕರಿಸುವ ಸರಬರಾಜುದಾರರ ವಿವರ ಪತ್ರ ಸಹಿತವಾಗಿ ಪ್ರತಿಯೊಂದು ಆಟದಲ್ಲಿ ಪ್ರದರ್ಶನಕ್ಕಾಗಿ ಚಲನಚಿತ್ರ ವಿಭಾಗದ ಅನುಮೋದನೆಯೊಂದಿಗೆ ಕೇಂದ್ರ ಸರ್ಕಾರವು ಅನುಮೋದಿಸಿದ ಫಿಲ್ಮ್‌ಗಳನ್ನು ಪಡೆದುಕೊಳ್ಳುವುದಕ್ಕಾಗಿ ಎಲ್ಲಾ ವ್ಯವಸ್ಥೆಗಳನ್ನು ಪೂರ್ತಿಗೊಳಿಸಲಾಗಿದೆಯೆಂದು ಅರ್ಜಿದಾರನ ಘೋಷಣೆ.

(ಡಿ) ನಿಯಮಿಸಿದ ದರಗಳಲ್ಲಿ ಲೈಸನ್ಸ್ ಫೀಜನ್ನು ಸಂದಾಯ ಮಾಡಿದ್ದಕ್ಕಾಗಿ ಖಜಾನೆ ಚಲನ್‌ನೊಂದಿಗೆ ಇರತಕ್ಕದ್ದು.

**140. ಲೈಸನ್ಸ್‌ನ ಮಂಜೂರಾತಿ ಅಥವಾ ನಿರಾಕರಣೆ.-** (1) ಲೈಸನ್ಸ್‌ಗಾಗಿನ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಅನುಮೋದಿತ ಯೋಜನೆಗಳಿಗೆ ಅನುಸಾರವಾಗಿ ಎಲ್ಲಾ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ ಮತ್ತು ಚಲನಚಿತ್ರ ಪ್ರದರ್ಶನಕ್ಕಾಗಿ ಎಲ್ಲ ವ್ಯವಸ್ಥೆಗಳನ್ನು ಮಾಡಲಾಗಿದೆ ಎಂದು ಲೈಸನ್ಸ್ ನೀಡುವ ಪ್ರಾಧಿಕಾರಿಗೆ ಮನದಟ್ಟಾದರೆ, ಅರ್ಜಿದಾರನಿಗೆ ಅವನ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ನಮೂನೆ-'ಎಫ್' ನಲ್ಲಿ ಲೈಸನ್ಸ್‌ನ್ನು ನೀಡತಕ್ಕದ್ದು ಅಥವಾ ಬರಹದಲ್ಲಿ ದಾಖಲು ಮಾಡಬಹುದಾದ ಕಾರಣಗಳಿಗಾಗಿ ಅಂತಹ ಲೈಸನ್ಸ್‌ನ್ನು ನೀಡುವುದನ್ನು ನಿರಾಕರಿಸಬಹುದು. ಈ ಉದ್ದೇಶಕ್ಕಾಗಿ ಲೈಸನ್ಸ್ ನೀಡುವ ಪ್ರಾಧಿಕಾರಿಯು ಅವನು ಅವಶ್ಯವೆಂದು ಪರ್ಯಾಲೋಚಿಸುವಂಥ ಸ್ಥಳೀಯ ಪರಿಶೀಲನೆಯನ್ನು ಮಾಡಬಹುದು. ನಿಯಮ 33 ರಲ್ಲಿ ಉಲ್ಲೇಖಿಸಲಾದ ನಕ್ಷೆ ಮತ್ತು ರೇಖಾಚಿತ್ರದ ಪ್ರತಿಯನ್ನು ಲೈಸನ್ಸ್‌ಗೆ ಲಗತ್ತಿಸತಕ್ಕದ್ದು. ಲೈಸೆನ್ಸ್ ನೀಡುವ ಪ್ರಾಧಿಕಾರಿಯು ನಿರಾಕ್ಷೇಪಣಾ ಪ್ರಮಾಣಪತ್ರದ ಸಿಂಧುತ್ವದ ಅವಧಿಯ ಮುಕ್ತಾಯಕ್ಕೆ ಮುಂಚೆ ಲೈಸೆನ್ಸ್‌ಗಾಗಿನ ಅರ್ಜಿಯನ್ನು ಮಾಡಿಕೊಳ್ಳದಿದ್ದರೆ, ಲೈಸೆನ್ಸ್ ನೀಡುವುದನ್ನು ನಿರಾಕರಿಸಬಹುದು.

(2) ಲೈಸನ್ಸ್ ಪ್ರಾಧಿಕಾರವು, ಸರ್ಕಾರವು ಕಾಲಕಾಲಕ್ಕೆ ನಿಯಮಿಸಿದ ದರಗಳ ಫೀಜುಗಳನ್ನು ಸಂದಾಯ ಮಾಡಿದ್ದಕ್ಕಾಗಿ ಲೈಸೆನ್ಸ್‌ನ ಪ್ರತಿಯನ್ನು ನೀಡಬಹುದು.

**141. ಲೈಸೆನ್ಸಿನ ಅವಧಿ ಮತ್ತು ಮರುಮಂಜೂರಾತಿ,-** ಅರೆಖಾಯಂ ಸಿನಿಮಾ ಥಿಯೇಟರುಗಳಿಗೆ ಒಂದು ಸಲಕ್ಕೆ ಮೂರು ವರ್ಷಗಳಿಗೆ ಕಡಿಮೆ ಇಲ್ಲದಂತೆ, ಆದರೆ ಐದು ವರ್ಷಗಳವರೆಗೆ ಪ್ರದರ್ಶನ ಲೈಸೆನ್ಸ್ ಮಂಜೂರು ಮಾಡಬಹುದು. ವಾರ್ಷಿಕ ತೀರಿಕೆಗೆ ಸಂಬಂಧಿಸಿದಂತೆ ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಮತ್ತು ವಿದ್ಯುಚ್ಛಕ್ತಿ ಪರಿಶೀಲಕ ಇಲಾಖೆಯಿಂದ ಕಾರ್ಯನಿರ್ವಾಹಕ ಅಭಿಯಂತರರಿಂದ ಕಟ್ಟಡ ಕಟ್ಟುವ ಮುಕ್ತಾಯದಲ್ಲಿ ಸವಿವರವಾಗಿ ಪರಿಶೀಲಿಸತಕ್ಕದ್ದು. ಸಾರ್ವಜನಿಕ ಕೆಲಸಗಳು ಜಿಲ್ಲೆಯ ಬಂದರು ಮತ್ತು ಅಂತರ್ದೇಶೀಯ ಸಾರಿಗೆ ಇಲಾಖೆಯ ಜಿಲ್ಲಾ ವಿದ್ಯುಚ್ಛಕ್ತಿ ಪರಿಶೀಲಕನು ಐದು ವರ್ಷಗಳಿಗೂ ಮೀರಿದ ಅವಧಿಗಾಗಿ ಲೈಸೆನ್ಸ್‌ನ್ನು ನೀಡುವುದಕ್ಕಾಗಿ ಆ ಕಟ್ಟಡದ 'ಭದ್ರತೆಯ' ಬಗ್ಗೆ ಪ್ರಮಾಣಪತ್ರವನ್ನು ಒದಗಿಸತಕ್ಕದ್ದು, 140 ನಿಯಮದ ಮೇರೆಗೆ ಮಂಜೂರ್ಮಾಡಿದ ಲೈಸೆನ್ಸ್‌ನ್ನು ಅಂತಹ ಲೈಸೆನ್ಸ್‌ನ್ನು ಮೊದಲ ಬಾರಿಗೆ ಮಂಜೂರು ಮಾಡಿದ ದಿನಾಂಕದಿಂದ ಮೂವತ್ತು ವರ್ಷಗಳ ಅವಧಿಗೆ ಮೀರಿ ಮರು ಮಂಜೂರು ಮಾಡತಕ್ಕದ್ದಲ್ಲ. ಇದರ ಹೊರತು ಸದರಿ ಮೂವತ್ತು ವರ್ಷಗಳ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಅರ್ಜಿದಾರನು ಖಾಯಂ ಥಿಯೇಟರನ್ನಾಗಿ ಎರಡು ಅಥವಾ ಹೆಚ್ಚು ಸ್ಕ್ರೀನ್‌ಗಳಾಗಿ ಆ ಕಟ್ಟಡವನ್ನು ವ್ಯತ್ಯಾಸಗೊಳಿಸಿದರೆ ಅಥವಾ ಮಾರ್ಪಾಟುಗೊಳಿಸಿದರೆ 121(7)ನೇ ನಿಯಮದ ಮೇರೆಗಿನ ಅಸ್ತಿತ್ವದಲ್ಲಿರುವ ಉಪಬಂಧಗಳ ನಿಯಮಗಳ ಅವಶ್ಯ ಲೈಸೆನ್ಸ್‌ನ್ನು, ಅಗತ್ಯದ ಷರತ್ತುಗಳನ್ನು ಪೂರೈಸಿದರೆ ಮಂಜೂರು ಮಾಡತಕ್ಕದ್ದು.

**142. ಅರೆಖಾಯಂ ಸಿನಿಮಾ ಆವರಣವನ್ನು ಆವೃತಗೊಳಿಸವುದು,-** ಆವರಣದ ಮುಂಭಾಗವು ಸಾಕಷ್ಟು ಎತ್ತರದ ಕಲ್ಲುಗಳಿಂದ ನಿರ್ಮಿಸಿದುದಾಗಿರತಕ್ಕದ್ದು ಮತ್ತು ಉಳಿದ ಭಾಗವನ್ನು ಆವರಣಗಳೊಳಗಿನ ವ್ಯಕ್ತಿಗಳಿಗೆ ಹೊರಗಿನ ಸಾರ್ವಜನಿಕರು ಯಾವುದೇ ಅನಾನುಕೂಲತೆಯನ್ನು ಉಂಟು ಮಾಡುವುದನ್ನು ತಡೆಗಟ್ಟುವ ಹಾಗೆ ಮುಳ್ಳು ತಂತಿ ಬೇಲಿ ಅಥವಾ ಸ್ಥಳೀಯವಾಗಿ ಲಭ್ಯವಿರುವ ಯಾವುದೇ ಸೂಕ್ತ ಸಾಮಗ್ರಿಯದಾಗಿರಬಹುದು.

**143. ಕಟ್ಟಡ ಕಟ್ಟುವ ಸಾಮಗ್ರಿಗಳು,-** ಅರೆಖಾಯಂ ಸಿನಿಮಾ ಕಟ್ಟಡಗಳ ನಿರ್ಮಾಣಕ್ಕಾಗಿ ಸಾಧ್ಯವಾದಮಟ್ಟಿಗೆ ಸ್ಥಳೀಯವಾಗಿ ಲಭ್ಯವಿರುವ ಬಿಟುಮಿನ್ (ಅಸ್ಫಾಲ್ಟಿಕ್ ಶೀಟುಗಳು) ಇತ್ಯಾದಿಗಳಲ್ಲಿ ಹುದುಗಿಸಿದ ಕಲ್ಲು, ಇಟ್ಟಿಗೆ, ಸಿಮೆಂಟು/ಸುಣ್ಣದಕಲ್ಲು ಅಥವಾ ಕಾಡುಮರ, ಜಿಂಕ್ ಶೀಟುಗಳು/ ಎ,ಸಿ. ಶೀಟುಗಳು, ಬ್ಲಾಕ್ ಬೋರ್ಡ್‌ಗಳನ್ನು ಉಪಯೋಗಿಸಬಹುದು. ಬಾಗಿಲು ಮತ್ತು ಕಿಟಕಿಗಳು ಸ್ಟೀಲು ಅಥವಾ ಕಾಡುಮರಗಳಾಗಿದ್ದಾಗಿರಬಹುದು. ಹೊರಗೋಡೆಗಳು ಸಿಮೆಂಟು ಇಟ್ಟಿಗೆ/ ಸುಣ್ಣದ ಕಲ್ಲುಗಳಾದ್ದಾಗಿರಬಹುದು ಮತ್ತು ಗೋಡೆಗಳ ಎತ್ತರ 2.6 ಮೀಟರುಗಳಿಗಿಂತ ಕಡಿಮೆಯಿರತಕ್ಕದ್ದಲ್ಲ.

**144. ಪ್ರೊಜೆಕ್ಷನ್ ಕೊಠಡಿ.-** (1) ಚಲನಚಿತ್ರಗ್ರಾಹಕ ಯಂತ್ರದ ಸಲಕರಣೆಯನ್ನು, 2-4 ಗಂಟೆ ರೇಟಿಂಗ್ ಮಾಡುವ ಅಗ್ನಿನಿರೋಧಕ ಸಾಮಗ್ರಿಯಿಂದ ದೃಢವಾಗಿ ನಿರ್ಮಿಸಲಾದ ಕೊಠಡಿಯಲ್ಲಿ ಇಡತಕ್ಕದ್ದು. ಅದರ ನೆಲ ಮಹಡಿಯು, 132ನೇ ನಿಯಮದ ಮೇರೆಗೆ ಕೇಬಲ್ಲುಗಳನ್ನು ಹೂಳಲು ಕನಿಷ್ಠ ಐವತ್ತು ಮಿಲಿ ಮೀಟರುಗಳ ಪೂರ್ಣಗೊಳಿಸಿದ ನೆಲವನ್ನು ಹೊಂದಿರತಕ್ಕದ್ದು:

**ಪರಂತು, ಡಿಜಿಟಲ್ ಪ್ರೊಜೆಕ್ಟರ್ಗಳು, ಡಿಜಿಟಲ್ ಧ್ವನಿ ವ್ಯವಸ್ಥೆಯಂಥ ಮುಂದುವರೆದ ತಂತ್ರಜ್ಞಾನದೊಂದಿಗೆ ಇರುವ ಪ್ರಸ್ತುತ ಮತ್ತು ಪ್ರಸ್ತಾವಿತ ಅರೆಖಾಯಂ ಸಿನಿಮಾ ಥಿಯೇಟರುಗಳ ಸಂದರ್ಭದಲ್ಲಿ, ಪ್ರತ್ಯೇಕ ಪ್ರೊಜೆಕ್ಷನ್ ಕೊಠಡಿಯು ಕಡ್ಡಾಯವಾಗತಕ್ಕದ್ದಲ್ಲ.**

(2) ಪ್ರೊಜೆಕ್ಷನ್ ಮತ್ತು ಪ್ರೇಕ್ಷಕ ಕಿಟಕಿಗಳನ್ನು ಹೊರತುಪಡಿಸಿ, ಪ್ರೊಜೆಕ್ಷನ್ ಕೊಠಡಿಯು ಸಭಾಂಗಣದೊಂದಿಗೆ ಯಾವುದೇ ಸಂಪರ್ಕವನ್ನು ಹೊಂದಿರತಕ್ಕದ್ದಲ್ಲ.

ಪರಂತು, ಡಿಜಿಟಲ್ ಪ್ರೊಜೆಕ್ಟರ್ಗಳು, ಡಿಜಿಟಲ್ ಧ್ವನಿ ವ್ಯವಸ್ಥೆಯಂಥ ಮುಂದುವರೆದ ತಂತ್ರಜ್ಞಾನದೊಂದಿಗೆ ಇರುವ ಪ್ರಸ್ತುತ ಮತ್ತು ಪ್ರಸ್ತಾವಿತ ಅರೆಖಾಯಂ ಸಿನಿಮಾ ಥಿಯೇಟರುಗಳ ಸಂದರ್ಭದಲ್ಲಿ, ಪ್ರತ್ಯೇಕ ಪ್ರೊಜೆಕ್ಷನ್ ಕೊಠಡಿಯು ಕಡ್ಡಾಯವಾಗತಕ್ಕದ್ದಲ್ಲ.

(3) ಒಂದು ಪ್ರೊಜೆಕ್ಟರನ್ನು ಹೊಂದಿರುವ ಪ್ರೊಜೆಕ್ಷನ್ ಕೊಠಡಿಯು, ಅತಿ ಚಿಕ್ಕ ಉದ್ದಗಲವಾದ 2.5 ಮೀಟರುಗಳ ಮತ್ತು 3 ಮೀಟರುಗಳಿಗೆ ಕಡಿಮೆಯಿಲ್ಲದ ಪೂರ್ತಿ ಎತ್ತರದ ಕನಿಷ್ಠ ಪಕ್ಷ ಏಳೂವರೆ ಚದುರ ಮೀಟರುಗಳ ನೆಲ ಪ್ರದೇಶವನ್ನು ಹೊಂದಿರಬೇಕು. ಪ್ರತಿಯೊಂದು ಹೆಚ್ಚುವರಿ ಪ್ರೊಜೆಕ್ಟರಿಗಾಗಿ 2.3 ಚದರ ಮೀಟರುಗಳ ನೆಲದ ಜಾಗವು ಇರತಕ್ಕದ್ದು.

ಪರಂತು, ಡಿಜಿಟಲ್ ಪ್ರೊಜೆಕ್ಟರ್ಗಳು, ಡಿಜಿಟಲ್ ಧ್ವನಿ ವ್ಯವಸ್ಥೆಯಂಥ ಮುಂದುವರೆದ ತಂತ್ರಜ್ಞಾನದೊಂದಿಗೆ ಇರುವ ಪ್ರಸ್ತುತ ಮತ್ತು ಪ್ರಸ್ತಾವಿತ ಅರೆಖಾಯಂ ಸಿನಿಮಾ ಥಿಯೇಟರುಗಳ ಸಂದರ್ಭದಲ್ಲಿ, ಪ್ರತ್ಯೇಕ ಪ್ರೊಜೆಕ್ಷನ್ ಕೊಠಡಿಯು ಕಡ್ಡಾಯವಾಗತಕ್ಕದ್ದಲ್ಲ.

(4) ನೆಲ ಅಂತಸ್ತು ಅಥವಾ ಅದರ ಕೆಳಗಿನ ಅಂತಸ್ತಿಗೆ ಹೋಗಲು ಕ್ರಮವಾದ ಸ್ಟೇರ್ಕೇಸ್‌ಗಳು ಇರತಕ್ಕದ್ದು.

(5) ಪ್ರೊಜೆಕ್ಷನ್ ಕೊಠಡಿಯ ಬಾಗಿಲು ಅಗ್ನಿ ನಿರೋಧಕದ್ದಾಗಿರತಕ್ಕದ್ದು ಮತ್ತು ಎಲ್ಲಾ ಸಂದುಗಳು, ಬುಷ್‌ಗಳು ಮತ್ತು ಜೋಡಣೆಗಳು ಸಭಾಂಗಣದೊಳಕ್ಕೆ ಯಾವುದೇ ಹೊಗೆಯು ಹೋಗುವುದನ್ನು ಸಾಧ್ಯವಾದಷ್ಟು ಮಟ್ಟಿಗೆ ತಡೆಗಟ್ಟುವ ಹಾಗೆ ನಿರ್ಮಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು, ಪ್ರೊಜೆಕ್ಷನ್ ಕೊಠಡಿಗಾಗಿ ವಾಯು ಸಂಚಾರವನ್ನು ಒದಗಿಸತಕ್ಕದ್ದು. ಆದರೆ ವಾಯು ಸಂಚಾರ ಕೊಳವೆಗಳು ಸಭಾಂಗಣದೊಂದಿಗೆ ನೇರ ಸಂಪರ್ಕವನ್ನು ಹೊಂದಿರತಕ್ಕದ್ದಲ್ಲ. ವಾಯು ಸಂಚಾರವನ್ನು ಪೈಪುಗಳ ಮೂಲಕ ಹರಿಸುವ ಪ್ರದೇಶವು ಪ್ರೊಜೆಕ್ಷನ್ ಕೊಠಡಿಯ ನೆಲಪ್ರದೇಶದ ಶೇಕಡಾ ಒಂದಕ್ಕಿಂತ ಕಡಿಮೆಯಿರತಕ್ಕದ್ದಲ್ಲ.

**ವಿವರಣೆ.-** ಈ ನಿಯಮದಲ್ಲಿ, ಬುಷ್ ಎಂದರೆ, ಯಾವ ರಂಧ್ರಗಳ ಮೂಲಕ ಪೈಪುಗಳು ಮತ್ತು ಕೇಬಲ್ಲುಗಳನ್ನು ಹಾಯಿಸಲಾಗಿದೆಯೋ, ಅಂತಹ ರಂಧ್ರಗಳನ್ನು ಯುಕ್ತವಾಗಿ ಹೊಗೆ ನಿರೋಧಕಗೊಳಿಸುವ ದೃಷ್ಟಿಯಿಂದ ಸೇರಿಸಲಾದ ಪ್ಯಾಕಿಂಗ್.
ಪರಂತು, ಡಿಜಿಟಲ್ ಪ್ರೊಜೆಕ್ಟರ್ಗಳು, ಡಿಜಿಟಲ್ ಧ್ವನಿ ವ್ಯವಸ್ಥೆಯಂಥ ಮುಂದುವರೆದ ತಂತ್ರಜ್ಞಾನದೊಂದಿಗೆ ಇರುವ ಪ್ರಸ್ತುತ ಮತ್ತು ಪ್ರಸ್ತಾವಿತ ಅರೆಖಾಯಂ ಸಿನಿಮಾ ಥಿಯೇಟರುಗಳ ಸಂದರ್ಭದಲ್ಲಿ, ಪ್ರತ್ಯೇಕ ಪ್ರೊಜೆಕ್ಷನ್ ಕೊಠಡಿಯು ಕಡ್ಡಾಯವಾಗತಕ್ಕದ್ದಲ್ಲ.

(6) ಫಿಲ್ಮುಗಳನ್ನು ಸುತ್ತುವ ಉದ್ದೇಶಕ್ಕಾಗಿ ಪ್ರೊಜೆಕ್ಷನ್ ಕೊಠಡಿಯ ಪಕ್ಕದಲ್ಲಿ ರಿವೈಂಡಿಂಗ್ ಕೊಠಡಿ ಅಥವಾ ಆವರಣ ಇರತಕ್ಕದ್ದು ಮತ್ತು ರಿವೈಂಡಿಂಗ್ ಕೊಠಡಿ ಅಥವಾ ಆವರಣವು ಪ್ರೊಜೆಕ್ಷನ್ ಕೊಠಡಿಗೆ ಹೊಂದಿಕೊಂಡಿರುವಲ್ಲಿ ಮತ್ತು ಒಂದರಿಂದ ಮತ್ತೊಂದಕ್ಕೆ ಹೋಗಲು ಅವುಗಳ ನಡುವೆ ಬಾಗಿಲು ಇರುವಲ್ಲಿ, ಅಗ್ನಿ ನಿರೋಧಕ ಬಾಗಿಲು ಅದೇ ಮುಚ್ಚಿಕೊಳ್ಳುವಂತೆ ಬಾಗಿಲು ಇರತಕ್ಕದ್ದು.

ಪರಂತು, ಡಿಜಿಟಲ್ ಪ್ರೊಜೆಕ್ಟರ್ಗಳು, ಡಿಜಿಟಲ್ ಧ್ವನಿ ವ್ಯವಸ್ಥೆಯಂಥ ಮುಂದುವರೆದ ತಂತ್ರಜ್ಞಾನದೊಂದಿಗೆ ಇರುವ ಪ್ರಸ್ತುತ ಮತ್ತು ಪ್ರಸ್ತಾವಿತ ಅರೆಖಾಯಂ ಸಿನಿಮಾ ಥಿಯೇಟರುಗಳ ಸಂದರ್ಭದಲ್ಲಿ, ಪ್ರತ್ಯೇಕ ಪ್ರೊಜೆಕ್ಷನ್ ಕೊಠಡಿಯು ಕಡ್ಡಾಯವಾಗತಕ್ಕದ್ದಲ್ಲ.

(7) ಆವರಣವು ಸಭಾಂಗಣದೊಳಗಿದ್ದರೆ, ಆವರಣದ ಪ್ರೊಜೆಕ್ಷನ್‌ಗಾಗಿ ಮತ್ತು ವೀಕ್ಷಣೆಗಾಗಿ ಅಗತ್ಯವಾದುವುಗಳನ್ನು ಹೊರತುಪಡಿಸಿ ಯಾವುದೇ ಸಂದುಗಳಿಗೆ ಸಭಾಂಗಣದೊಂದಿಗೆ ಸಂಪರ್ಕಿಸಲು ಅವಕಾಶವಿರತಕ್ಕದ್ದಲ್ಲ. ರಿವೈಂಡಿಂಗ್ ಕೊಠಡಿಗಳ ಉದ್ದೇಶಕ್ಕಾಗಿ ಪ್ರೊಜೆಕ್ಷನ್ ಕೊಠಡಿಯ ಪಕ್ಕ / ಒಳಗೆ ರಿವೈಂಡಿಂಗ್ ಕೊಠಡಿ ಅಥವಾ ಆವರಣವು, ಅಗ್ನಿ ನಿರೋಧಕ ಬಾಗಿಲು ಅದೇ ಮುಚ್ಚಿಕೊಳ್ಳುವಂಥದ್ದನ್ನು ಹೊಂದಿರತಕ್ಕದ್ದು:
ಪರಂತು, ಡಿಜಿಟಲ್ ಪ್ರೊಜೆಕ್ಟರ್ಗಳು, ಡಿಜಿಟಲ್ ಧ್ವನಿ ವ್ಯವಸ್ಥೆಯಂಥ ಮುಂದುವರೆದ ತಂತ್ರಜ್ಞಾನದೊಂದಿಗೆ ಇರುವ ಪ್ರಸ್ತುತ ಮತ್ತು ಪ್ರಸ್ತಾವಿತ ಸಿನಿಮಾ ಮಂದಿರಗಳು ಅಥವಾ ಮಲ್ಟಿಪ್ಲೆಕ್ಸ್‌ಗಳ ಸಂದರ್ಭದಲ್ಲಿ ರಿವೈಂಡಿಂಗ್ ಕೊಠಡಿಯು ಕಡ್ಡಾಯವಾಗತಕ್ಕದ್ದಲ್ಲ.

(8) ಪ್ರೊಜೆಕ್ಟರ್ ಸಂದುಗಳು, 35 ಮಿಲಿಮೀಟರ್ಗಳು, 70 ಮಿಲಿಮೀಟರಿನ ಸಿನಿಮಾ ಸ್ಕೋಪ್ ಮತ್ತು ಸಿನೇರಾಮ, ವೈಡ್-ಆ್ಯಂಗಲ್, ವಿಸ್ಟಾ ವಿಷನ್‌ಗಳಂಥ ಪ್ರೊಜೆಕ್ಷನ್ ಮಾದರಿಗಳಿಗೆ ಅನುಸಾರವಾಗಿರತಕ್ಕದ್ದು:
ಪರಂತು, ಡಿಜಿಟಲ್ ಪ್ರೊಜೆಕ್ಟರ್ಗಳು, ಡಿಜಿಟಲ್ ಧ್ವನಿ ವ್ಯವಸ್ಥೆಯಂಥ ಮುಂದುವರೆದ ತಂತ್ರಜ್ಞಾನದೊಂದಿಗೆ ಇರುವ ಪ್ರಸ್ತುತ ಮತ್ತು ಪ್ರಸ್ತಾವಿತ ಸಿನಿಮಾ ಮಂದಿರಗಳು ಅಥವಾ ಮಲ್ಟಿಪ್ಲೆಕ್ಸ್‌ಗಳ ಸಂದರ್ಭದಲ್ಲಿ ಈ ಉಪ ನಿಯಮವು ಅನ್ವಯವಾಗತಕ್ಕದ್ದಲ್ಲ.

(9) ಪ್ರತಿಯೊಂದು ಸಂದವು ದಪ್ಪದಲ್ಲಿ 5 ಮಿಲಿಮೀಟರಿಗಿಂತ ಕಡಿಮೆಯಿಲ್ಲದ ಪ್ಲೇಟ್ ಗಾಜು ಪರದೆಯನ್ನು, ಹೊಗೆ ಬರದಂತೆ ಜೋಡಣೆ ಸ್ಥಿತಿಯಲ್ಲಿ ಕೂಡಿಸಿ ಒದಗಿಸತಕ್ಕದ್ದು:

ಪರಂತು, 250 ಚದರ ಮಿಲಿಮೀಟರ್ಗಳಿಗಿಂತ ಹೆಚ್ಚಿಗೆ ಆದ ಸಂದುಗಳಿಗಾಗಿ,-

(ಎ) ಉಪಯೋಗಿಸಿದ ಗಾಜಿನ ಪರದೆಗಳು ದಪ್ಪ ಅಥವಾ ತಂತಿ ಕೂಡಿದ ದಪ್ಪ ಗಾಜಿನವು ಆಗಿರತಕ್ಕದ್ದು;

(ಬಿ) ಗಾಜಿನ ಪರದೆಗಳ ಜೊತೆಗೆ ಲೋಹದ ಪರದೆಗಳನ್ನು ಒದಗಿಸತಕ್ಕದ್ದು ಮತ್ತು ಪ್ರೊಜೆಕ್ಷನ್‌ಗಾಗಿ ಉಪಯೋಗಿಸದೆ ಇರುವಾಗ ಸಂದುಗಳನ್ನು ಲೋಹ ಪರದೆಗಳಿಂದ ಮುಚ್ಚತಕ್ಕದ್ದು; ಮತ್ತು

(ಸಿ) ಸಂದುಗಳು ಉಪಯೋಗದಲ್ಲಿಲ್ಲದೆ ಇರುವಾಗ ಆ ಸಂದುಗಳನ್ನು ಲೋಹ ಪರದೆಗಳಿಂದ ಮುಚ್ಚಿಸತಕ್ಕದ್ದೆಂದು ಕ್ಯಾಬಿನ್‌ನಲ್ಲಿ ನೋಟೀಸು ಹಾಕತಕ್ಕದ್ದು.

(10) (i) ಪ್ರೊಜೆಕ್ಷನ್ ಕೊಠಡಿಯು 18 ವರ್ಷ ವಯಸ್ಸು ತುಂಬಿದ ಮತ್ತು ಸರ್ಕಾರದ ಮುಖ್ಯ ವಿದ್ಯುಚ್ಛಕ್ತಿ ಪರಿಶೀಲಕನು ನೀಡಿದ ಸಿನಿಮಾ ಆಪರೇಟರ್ ಲೈಸೆನ್ಸ್‌ನ್ನು ಹೊಂದಿರುವ ವ್ಯಕ್ತಿಯ ಪ್ರಭಾರದಲ್ಲಿರತಕ್ಕದ್ದು:

ಪರಂತು, ಕರ್ನಾಟಕದಲ್ಲಿ ಸಿನಿಮಾಟೋಗ್ರಫಿಯ ತಾಂತ್ರಿಕ ಶಿಕ್ಷಣ ಮಂಡಳಿಯು ನಡೆಸಿದ ಸಿನಿಮಾಟೋಗ್ರಫಿಯಲ್ಲಿ ಸಿನಿಮಾ ಆಪರೇಷನ್ ಅಥವಾ ಡಿಪ್ಲೊಮಾದಲ್ಲಿ ಕ್ರಾಫ್ಟ್ ಕೋರ್ಸ್ ಉತ್ತೀರ್ಣಗೊಂಡು ಅಥವಾ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದಿಂದ ಮನ್ನಣೆ ಪಡೆದ ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್‌ನಲ್ಲಿ ಪದವಿ ಮತ್ತು ಡಿಪ್ಲೊಮಾದಲ್ಲಿ ಪ್ರಮಾಣಪತ್ರವನ್ನು ಅಭ್ಯರ್ಥಿಯು ಹೊಂದಿರುವಲ್ಲಿ, ಸಿನಿಮಾ ಆಪರೇಟರ್ ಲೈಸೆನ್ಸ್ ಪಡೆಯುವುದಕ್ಕಾಗಿ ಕರ್ನಾಟಕ ಸಿನಿಮಾ ಚಾಲಕರ ಪರೀಕ್ಷಾ ಮಂಡಳಿಯು ನಡೆಸುವ ಪರೀಕ್ಷೆಗೆ ಹಾಜರಾಗುವುದರಿಂದ ವಿನಾಯಿತಿ ನೀಡತಕ್ಕದ್ದು:

(ii) ಆಪರೇಟರ್, ಎಲ್ಲ ಕೇಬಲ್ಲುಗಳು, ಲೀಡ್‌ಗಳು, ಸಂಯೋಗಗಳು ಮತ್ತು ಪ್ರತಿರೋಧಗಳು ಮತ್ತು ಪ್ರೊಜೆಕ್ಷನ್ ಕೊಠಡಿಯಲ್ಲಿರುವ ಸಾಗಿಸಬಹುದಾದ ಅಗ್ನಿಶಾಮಕ ಉಪಕರಣಗಳು ಸರಿಯಾದ ಸುಸ್ಥಿತಿಯಲ್ಲಿವೆಂಬುದನ್ನು ಪ್ರತಿಯೊಂದು ಪ್ರದರ್ಶನವು ಪ್ರಾರಂಭವಾಗುವುದಕ್ಕೆ ಮುಂಚೆ ಅವನು ಮನದಟ್ಟು ಮಾಡಿಕೊಳ್ಳತಕ್ಕದ್ದು, ಅವನು ಯಂತ್ರ ಚಾಲನೆಯಲ್ಲಿರುವ ಸಮಯದಲ್ಲಿ ಪ್ರೊಜೆಕ್ಷನ್ ಕೊಠಡಿಯಲ್ಲಿ ಹಾಜರು ಇರತಕ್ಕದ್ದು:

(iii) ಪರಂತು, ಡಿಜಿಟಲ್ ಪ್ರೊಜೆಕ್ಟರ್‌ಗಳು, ಡಿಜಿಟಲ್ ಧ್ವನಿ ವ್ಯವಸ್ಥೆಯಂಥ ಮುಂದುವರೆದ ತಂತ್ರಜ್ಞಾನದೊಂದಿಗೆ ಇರುವ ಮಲ್ಟಿಪ್ಲೆಕ್ಸ್ ಅಥವಾ ಪ್ರಸ್ತುತ ಅಥವಾ ಉದ್ದೇಶಿತ ಸಿನಿಮಾ ಥಿಯೇಟರಿನ ಸಂದರ್ಭದಲ್ಲಿ, ಆದಾಗ್ಯೂ, ಪ್ರೊಜೆಕ್ಷನ್ ಕೊಠಡಿಯು ಕಡ್ಡಾಯವಾಗಿರದಿದ್ದಾಗ್ಯೂ. ಆಪರೇಟರ್ ಯಂತ್ರ ಚಾಲನೆಯಲ್ಲಿರುವ ಸಮಯದಲ್ಲಿ ಪ್ರೊಜೆಕ್ಷನ್ ಕೊಠಡಿಯಲ್ಲಿ ಹಾಜರಿರತಕ್ಕದ್ದು.

(iv) ಆಪರೇಟರನ ನಿಯೋಜನೆಗೆ ವಿಫಲವಾಗಿದ್ದಲ್ಲಿ ತಡೆಹಿಡಿಯುವಿಕೆಗೆ ಅಥವಾ ರದ್ದಿಯಾತಿಗೆ ಹೊಣೆಯಾಗಬಹುದಾದ ಸಿನಿಮಾ ಥಿಯೇಟರನ ಅಥವಾ ಮಲ್ಟಿಪ್ಲೆಕ್ಸ್‌ನ ವಿದ್ಯುಚ್ಛಕ್ತಿ ಪ್ರಮಾಣಪತ್ರವನ್ನು ಒಪ್ಪಿಸತಕ್ಕದ್ದು.

11. ಇಬ್ಬರು ಆಪರೇಟರುಗಳು ಹಿಂಬರಹ ಮಾಡಲಾದ ಅನುಕೂಲವಾದ ಥಿಯೇಟರ್ ಜೊತೆಗೆ ಸಾಂಪ್ರದಾಯಿಕ ಪ್ರೊಜೆಕ್ಟರುಗಳು ಮತ್ತು ಪ್ರತಿಯೊಂದು ಸ್ಕ್ರೀನ್‌ಗೂ ಒಬ್ಬ ಆಪರೇಟರ್ ಇರತಕ್ಕದ್ದು, ಇಲಾಖೆಯ ವಿದ್ಯುಚ್ಛಕ್ತಿ ಪರಿಶೀಲಕನಿಂದ ಹಿಂಬರಹ ಮಾಡಲಾದ ಅನುಕೂಲವಾದ ಥಿಯೇಟರ್ ಉನ್ನತ ತಂತ್ರಜ್ಞಾನದಂತಿರುವ ಡಿಜಿಟಲ್ ಪ್ರೊಜೆಕ್ಷನ್ ಸಿಸ್ಟಮ್ ಇರತಕ್ಕದ್ದು.

**145. ವಾಯು ಸಂಚಾರಕಗಳು,-** (1) ಪ್ರತಿ ಅರೆಖಾಯಂ ಸಿನಿಮಾ ಪ್ರದೇಶವೂ ನೆಲಪ್ರದೇಶದ ಎಂಟನೇ ಒಂದು ಭಾಗಕ್ಕಿಂತ ಕಡಿಮೆ ಇಲ್ಲದಂತ ಮೂರನೇ-ಎರಡು ಭಾಗದಷ್ಟು ವ್ಯವಸ್ಥೆ ಮಾಡಲಾದ ತೆರೆದ ಅವಧಿಯಲ್ಲಿ ಇಟ್ಟುಕೊಂಡು ಮಾಡಲಾದ ಕಾರ್ಯಸಾಧನೆಗಳ ಸಾಕಷ್ಟು ವಾಯು ಸಂಚಾರಕಗಳಿರತಕ್ಕದ್ದು, ಸಾಕಷ್ಟು/ಪರ್ಯಾಪ್ತಗಳ ಎಂದರೆ ಕೃತಕ ವಾಯು ಸಂಚಾರಕದ ಜೊತೆಗೆ ಪ್ರತಿ ಐವತ್ತು ಆಸನಗಳಿಗೆ ಕಡಿಮೆ ಇಲ್ಲದಂತೆ ಒಳಮಳಿಗೆಯಲ್ಲಿ ಒಂದು ಪ್ಯಾನ್ ಮತ್ತು ಸಭಾಂಗಣದ ಪ್ರತಿ ಐವತ್ತು ಚದರ ಮೀಟರ್ಗಳಿಗೆ ಸಂಪೂರ್ಣವಾಗಿ ಉಪಯೋಗವಾಗುವಂತೆ ಒಂದು ಪ್ಯಾನ್ನು ಲೋಕೋಪಯೋಗಿ, ಬಂದರುಗಳ ಮತ್ತು ಅಂತರ್ದೇಶೀಯ ಸಾರಿಗೆ ಇಲಾಖೆ ಕಾರ್ಯನಿರ್ವಾಹಕ ಅಭಿಯಂತರರಿಂದ ಅನುಮೋದನೆಗೊಂಡಿರತಕ್ಕದ್ದು.

(2) ಪರ್ಯಾಯವಾಗಿ/ಬದಲಾಗಿ, ಲೋಕೋಪಯೋಗಿ, ಬಂದರುಗಳು ಮತ್ತು ಅಂತರ್ದೇಶೀಯ ಸಾರಿಗೆ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರಿಂದ ಅನುಮೋದನೆಗೊಂಡ ಸೂಕ್ತವಾದ ಸಾಮರ್ಥ್ಯದ ಕೇಂದ್ರಿಕೃತ ವಾಯುಸಂಚಾರಕ ವ್ಯವಸ್ಥೆಯ ಸಾಕಷ್ಟು ಸ್ಥಾನಗಳಿರತಕ್ಕದ್ದು.

(3) ಅರೆಖಾಯಂ ಸಿನಿಮಾದ ಸಭಾಂಗಣದಲ್ಲಿ ವಾಯು/ಹವಾನಿಯಂತ್ರಿತ ಅಥವಾ ವಾಯು ಶೈತ್ಯಾಕಗಳನ್ನು ಲೋಕೋಪಯೋಗಿ, ಬಂದರುಗಳು ಮತ್ತು ಅಂತರ್ದೇಶೀಯ ಸಾರಿಗೆ ಇಲಾಖೆಯಿಂದ ಅನುಮೋದನೆಗೊಂಡ ಅರೆ-ಖಾಯಂ ಸಿನಿಮಾ ಥಿಯೇಟರುಗಳಲ್ಲಿ ಸೂಕ್ತವಾದ ವಾಯು ಸಂಚಾರಕಗೊಳಿಸಿರತಕ್ಕದ್ದು.

ಪರಂತು, ವಾಯುಸಂಚಾರಕ ವ್ಯವಸ್ಥೆಯ ಕಾರ್ಯಸಾಧನೆಯ ಅವಧಿಯಲ್ಲಿ ವಿಫಲತೆಗಳಿಂದಾಗಿ ತಪ್ಪಿದಲ್ಲಿ ಅವಧಿಯಲ್ಲಿ ಪ್ರದರ್ಶನವನ್ನು ನಿಲ್ಲಿಸತಕ್ಕದ್ದು.

**146. ಟಿಕೆಟು ಬೂತುಗಳು,-** (1) ವಿವಿಧ ವರ್ಗಗಳಿಗೆ ಅನುಗುಣವಾಗಿ ಸೂಕ್ತವಾದ ಬುಕಿಂಗ್ ಕಿಟಕಿಗಳನ್ನು ಆವರಣಗಳಲ್ಲಿ ಕೊಠಡಿಗಳ ಮುಂದೆ ಸಾಲಿನಲ್ಲಿ ನಿಂತು ಟಿಕೇಟುಗಳನ್ನು ಕೊಂಡುಕೊಳ್ಳುವವರು ಸಾರ್ವಜನಿಕ ರಸ್ತೆಯಲ್ಲಿ ಸಂಚಾರಕ್ಕೆ ಯಾವುದೇ ಅಡ್ಡಿಯಾಗದಂತೆ ಆವರಣದೊಳಗೆ ಕೊಂಡುಕೊಳ್ಳುವಂತೆ ಒದಗಿಸತಕ್ಕದ್ದು.

(2) ಪರ್ಯಾಪ್ತ ಎಂದರೆ, ಸಾರ್ವಜನಿಕರಿಗೆ ಟಿಕೆಟ್ ಬೂತನ್ನು ಪ್ರದೇಶದ ಮತ್ತು ಹೊರಗೆ ಮುಂಭಾಗದಲ್ಲಿ ಒದಗಿಸತಕ್ಕದ್ದು.

(3) (i) ಯಾವುದೇ ಟಿಕೇಟು ಅಥವಾ ಇತರ ಯಾವುದೇ ಸರಿಯದ ಸಾಕ್ಷ್ಯವು ಯಾವುದೇ ಸಿನಿಮಾ ಅಥವಾ ಥಿಯೇಟರ್ ಅಥವಾ ಮಲ್ಟಿಪ್ಲೇಕ್ಸ್ ಲೈಸನ್ಸ್‌ದಾರ ಟಿಕೇಟು ಮಾರಾಟ ಮಾಡುವ/ಇಟ್ಟುಕೊಳ್ಳುವ ಅಥವಾ ಕೊಡಮಾಡುವುದು ಅಥವಾ ಮಾರಾಟಕ್ಕಾಗಿ ಇಡುವುದು ಅಥವಾ ಮಾರುವಂತೆ ಮಾಡು ಅಥವಾ ಇಟ್ಟುಕೊಳ್ಳುವಂತೆ ಮಾಡುವ ಅಥವಾ ಮಾರಾಟ ಮಾಡಲಾದ ಯಾರೇ ವ್ಯಕ್ತಿ ಅಥವಾ ಅವನ ಏಜೆಂಟ್ ಕ್ರಮಬದ್ಧವಾಗಿ ಲಿಖಿತದಲ್ಲಿ ಅಧಿಕೃತಗೊಳಿಸತಕ್ಕದ್ದು.

(ii) ಯಾವುದೇ ಅರೆಖಾಯಂ ಸಿನಿಮಾ ಥಿಯೇಟರ್ನ ಪ್ರಾರಂಭ ಯಾವುದೇ ಇತರೆ ಸರಿಯಾದ ಸಾಕ್ಷ್ಯದೊಂದಿಗೆ ಯಾವುದೇ ಟೀಕೇಟು ಅಥವಾ ಕೊಡುವುದು ಅಥವಾ ಮಾರಾಟ ಮಾಡತಕ್ಕದ್ದು ಅಥವಾ ಇಟ್ಟುಕೊಳ್ಳುವುದು ಅಥವಾ ಕೊಟ್ಟ ಅಥವಾ ಮಾರಾಟ ಮಾಡಲಾದ ಯಾವುದೇ ಸ್ಥಳ ಇತರೆ ಬುಕ್ಕಿಂಗ್ ಕಿಟಕಿಗಳನ್ನು ಉದ್ದೇಶದಿಂದ ಒದಗಿಸಲಾದ ಮತ್ತು ವ್ಯಕ್ತಿ ಸಾಲಿನಲ್ಲಿರುವ ಇತರೇ ವ್ಯಕ್ತಿಯು ಬುಕ್ಕಿಂಗ್ ಕಿಟಕಿಗಳ ಹಿಂದಿನಿಂದ ಮಾರಾಟ ಮಾಡತಕ್ಕದ್ದಲ್ಲ.

ಪರಂತು, ಲೈಸನ್ಸ್ ಪ್ರಾಧಿಕಾರವು ಧರ್ಮದರ್ಶಿ ಪ್ರದರ್ಶನಗಳಿಗೆ ಬುಕಿಂಗ್ ಕಿಟಕಿಗಳು ಮತ್ತು ಲೈಸನ್ಸ್‌ದಾರನ ಇತರ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಆ ಸ್ಥಳದಲ್ಲಿ ಪ್ರವೇಶ ಹಕ್ಕಿನ ಇತರೆ ಯಾವುದೇ ಸಾಕ್ಷ್ಯದೊಂದಿಗೆ ಟಿಕೆಟುಗಳು, ಪಾಸುಗಳನ್ನು ಮಾರಾಟ ಮಾಡಲು ಲಿಖಿತದಲ್ಲಿ ಅನುಮತಿ ನೀಡಬಹುದು.

(4) (i) ಟಿಕೆಟುಗಳನ್ನು ಮಾರಾಟ ಮಾಡುವ ಮೂಲಕ ಅಥವಾ ಅನ್ಯಥಾ ಮುಂಗಡವಾಗಿ ಯಾವುದೇ ವರ್ಗಕ್ಕೆ ಸೀಟುಗಳನ್ನು ಬುಕ್ ಮಾಡುವುದು ಪಿಲ್ಮ್ ಪ್ರದರ್ಶನದ ದಿನದಿಂದ ಏಳು ದಿನಗಳ ಮುಂಚಿತವಾಗಿ ಲೈಸನ್ಸ್‌ದಾರನು ಮಾರಾಟ ಮಾಡತಕ್ಕದ್ದಲ್ಲ.

(ii) ಆರೆಖಾಯಂ ಸಿನಿಮಾ ಥಿಯೇಟರ್ಗಳಲ್ಲಿ ಸುಸಂಬದ್ಧ ನಿಯಮಗಳಿಗೆ ಅನುಗುಣವಾಗಿ ಆನ್‌ಲೈನ್‌ನಲ್ಲಿ ಮಾರಾಟವಾದ ಟಿಕೆಟುಗಳಿಗೆ ಅವಕಾಶಕೊಡತಕ್ಕದ್ದು.

(iii) ಪ್ರತಿ ಟಿಕೆಟ್‌ನ ವೆಚ್ಚಗಳು ಇತರೆ ವೆಚ್ಚಗಳು ಸಂಬಂಧಿಸಿದ ಅಧಿನಿಯಮಗಳು ಮತ್ತು ನಿಯಮಗಳಂತೆಯೇ ಅನ್ವಯವಾಗತಕ್ಕದ್ದು.

**147. ಶೌಚಗೃಹಗಳು, ಮೂತ್ರಿಗಳು ಮತ್ತು ನೀರಿನ ಸೌಲಭ್ಯಗಳು,-** (1) ಪ್ರತಿ ಅರೆಖಾಯಂ ಸಿನಿಮಾದ ಮುಖ್ಯ ಕಟ್ಟಡದಲ್ಲಿ ಪುರುಷರಿಗೆ, ಮಹಿಳೆಯರಿಗೆ ಮತ್ತು ಮಕ್ಕಳಿಗೆ, ತೃತೀಯ ಲಿಂಗ ಮತ್ತು ವಿಕಲಚೇತನರಿಗೆ ಪ್ರತ್ಯೇಕವಾಗಿ ಶೌಚಗೃಹಗಳು ಮತ್ತು ಮೂತ್ರಗಳನ್ನು ಸೂಕ್ತವಾದ ಸಂಖ್ಯೆಗೆ ಅನುಗುಣವಾಗಿ ಒದಗಿಸತಕ್ಕದ್ದು.

(2) ಅನುಸೂಚಿ 'ಸಿ' ಯಲ್ಲಿ ಉಪಬಂಧಿಸಲಾದ ನೈರ್ಮಲ್ಯ ಅನುಕೂಲವನ್ನು ನಿರ್ಮಿಸಲು ನಿರ್ಧರಿಸಬಹುದಾದಂತೆ ಇರತಕ್ಕದ್ದು.

(3) ನೀರಿನ ಸೌಲಭ್ಯಗಳು ಮತ್ತು ಶೌಚಗೃಹಗಳು ಭೂಮಿಯ ಒಳಗೆ ಚರಂಡಿ ವ್ಯವಸ್ಥೆಯಲ್ಲಿ ಜೋಡಿಸತಕ್ಕದ್ದು.

(4) ಮಳೆ ನೀರನ್ನು ಸಮರ್ಥವಾಗಿ ಸಂರಕ್ಷಿಸಲು ಮತ್ತು ಬಳಸಲು ಮಳೆ ನೀರು ಕೊಯ್ಲು ವ್ಯವಸ್ಥೆಯನ್ನು ಅಳವಡಿಸತಕ್ಕದ್ದು.

(5) ಪ್ರತಿ ಅರೆಖಾಯಂ ಸಿನಿಮಾದಲ್ಲಿ ಪುರುಷರಿಗೆ ಮತ್ತು ಸ್ತ್ರೀಯರಿಗೆ ಪ್ರತ್ಯೇಕವಾಗಿ ಸೂಕ್ತ ಸಂಖ್ಯೆಯ ಕುಡಿಯುವ ನೀರಿನ ಸೌಲಭ್ಯಗಳನ್ನು ಒದಗಿಸತಕ್ಕದ್ದು. ಆದರೆ ಅಲ್ಲಿನ ಸಂಖ್ಯೆ ಎರಡು ನೀರಿನ ಕೊಳಾಯಿಗಿಂತ ಕಡಿಮೆಯಿರತಕ್ಕದ್ದಲ್ಲ. ಅದರಲ್ಲಿ ಒಂದು ಪುರುಷರಿಗೆ ಮತ್ತು ಮತ್ತೊಂದು ಮಹಿಳೆಯರಿಗೆ. ನೀರಿನ ಕೊಳಾಯಿಗಳನ್ನು ನೀರಿನ ಸರಬರಾಜು ಪೈಪ್‌ನಲ್ಲಿ ಜೋಡಿಸತಕ್ಕದ್ದು ಅಥವಾ ಯಾವಾಗ ನೀರಿನ ಸರಬರಾಜು ಮಾಡಲಾಗುತ್ತದೋ ಪೈಪ್ ಕೂಡಿಸುವುದು ಅಥವಾ ನೀರಿನ ಸರಬರಾಜು ಮಾಡಲು ಪೈಪ್‌ನ ವ್ಯವಸ್ಥೆ ಇಲ್ಲದಿದ್ದಾಗ ಟ್ಯಾಂಕ್‌ಗೆ ಅಥವಾ ನೀರು ಶೇಖರಗೊಳ್ಳುವ/ಅಡಕಗೊಳ್ಳುವ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯಿರತಕ್ಕದ್ದು.

**148. ಔಟ್‌ಹೌಸ್ ಇತ್ಯಾದಿ,-** (1) ಉಪ-ನಿಯಮಗಳು (2) ಮತ್ತು (3)ರ ಕೆಳಗೆ ಉಪಬಂಧಿಸಿದುದನ್ನು ಹೊರತುಪಡಿಸಿ ಸಿನಿಮಾ ಕಟ್ಟಡದ ಬಳಿ ಯಾವುದೇ ಹೋಟೆಲುಗಳು, ಅಂಗಡಿಗಳು ಮತ್ತು ಕ್ಯಾಂಟಿನ್‌ಗಳಿಗೆ ಅವಕಾಶ ಕೊಡತಕ್ಕದ್ದಲ್ಲ.

(2) ಸಿನಿಮಾ ಕಟ್ಟಡವು ಶಬ್ದ ನಿರೋಧಕ ಮತ್ತು ಸುಲಭವಾಗಿ ದಹ್ಯವಲ್ಲದ ಸಾಮಗ್ರಿಗಳಲ್ಲಿ ನಿರ್ಮಾಣವಾದ ಸಿನಿಮಾ ಕಟ್ಟಡವಾಗಿದ್ದರೆ, ಲೈಸನ್ಸ್ ಪ್ರಾಧಿಕಾರವು ಸ್ಥಳೀಯ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ, ಅವರ ಅಧಿಕಾರ ವ್ಯಾಪ್ತಿ ಹೊಂದಿರುವ ಸ್ಥಳದಲ್ಲಿ ಮತ್ತು ನಗರಾಭಿವೃದ್ಧಿ ಪ್ರಾಧಿಕಾರ ಪಟ್ಟಣ ಯೋಜನಾ ಅಧಿಕಾರಿ/ ನಗರ ನಿಗಮ/ ಸ್ಥಳೀಯ ಯೋಜನಾ ಪ್ರಾಧಿಕಾರ/ ಜಿಲ್ಲೆಯ ನಗರ & ಪಟ್ಟಣ ಯೋಜನಾ ಸಹಾಯಕ ನಿರ್ದೇಶಕರಿಂದ ಅನುಮತಿ ಪಡೆದು ಸಿನಿಮಾ ಕಟ್ಟಡದ ಕಾಂಪೌಂಡ್ ಒಳಗೆ ಹೋಟೇಲುಗಳು, ಅಂಗಡಿಗಳು ಮತ್ತು ಕ್ಯಾಂಟೀನುಗಳನ್ನು ಸ್ಥಾಪಿಸ಼ಬಹುದು. ಪರಂತು, ಇವುಗಳು ಸಿನಿಮಾ ಕಟ್ಟಡವನ್ನು ಸ್ಥಗಿತಗೊಳಿಸುವಂತಿರಬಾರದು ಮತ್ತು ಸಿನಿಮಾ ಕಟ್ಟಡಕ್ಕೆ ತೆರೆದುಕೊಳ್ಳುವಂತಿರಬಾರದು.

(3) ಉಪ-ನಿಯಮ (2)ರ ಮೇರೆಗೆ ಲೈಸನ್ಸ್ ಪ್ರಾಧಿಕಾರಕ್ಕೆ ಈ ಮುಂದಿನವುಗಳ ಬಗ್ಗೆ ಮನವರಿಕೆಯಾಗುವ ಹೊರತು ಅನುಮತಿಯನ್ನು ಮಂಜೂರು ಮಾಡತಕ್ಕದ್ದಲ್ಲ,-

(ಎ) ಅಂತಹ ಕಟ್ಟಡಗಳಲ್ಲಿ ಮುಕ್ತವಾಗಿದ್ದು ಅಂತಸ್ತಿನಲ್ಲಿ ಬೆಂಕಿಯನ್ನು ತಡೆಗಟ್ಟುವುದಕ್ಕಾಗಿ ಅಥವಾ ಆರಿಸುವುದಕ್ಕಾಗಿ ಸಾಕಷ್ಟು ಅವಕಾಶಗಳನ್ನು ಕಲ್ಪಿಸಲಾಗಿದೆ ಎಂದು;

(ಬಿ) ಬೆಂಕಿ ಉಂಟಾದ ಸಂದರ್ಭದಲ್ಲಿ ಸಂದರ್ಶಕರು ಸುಲಭವಾಗಿ ಮತ್ತು ಅತಿಶೀಘ್ರವಾಗಿ ಹೊರಹೋಗಲು ಅಂತಹ ಸ್ಥಾಪನೆಗಳಲ್ಲಿ ಪ್ರತ್ಯೇಕವಾಗಿ ದಾರಿ ಮತ್ತು ನಿರ್ಗಮನ ಇರುವುದೆಂದು;

(ಸಿ) ಅಂತಹ ಸ್ಥಾಪನೆಗಳಿಗೆ ರಸ್ತೆ ಮುಕ್ತವಾಗಿರುವುದೆಂದು ಅಗ್ನಿಶಾಮಕ ಎಂಜಿನ್‌ಗಳು ಮತ್ತು ಸಾಧನ ಸಲಕರಣೆಗಳು ಸುಲಭವಾಗಿ ಹೋಗಲು ಸಾಕಷ್ಟು ಅನುಕೂಲ ಇದೆ ಎಂಬುದನ್ನು ಮನಗೊಳ್ಳುವುದು;

**148. ಔಟ್‌ಹೌಸ್, ಇತ್ಯಾದಿ,-** (1), (2) ಮತ್ತು (3)ನೇ ಉಪನಿಯಮಗಳಲ್ಲಿ ಉಪಬಂಧಿಸಲಾದಂತೆ, ಸಿನಿಮಾ ಕಟ್ಟಡ ಹೊರತುಪಡಿಸಿ, ಯಾವುದೇ ಷೋರೂಮುಗಳು, ಹೋಟೇಲುಗಳು, ಅಂಗಡಿಗಳು, ಕಛೇರಿಗಳು, ಬ್ಯಾಂಕುಗಳು ಮತ್ತು ಕ್ಯಾಂಟಿನ್‌ಗಳಿಗೆ ಅವಕಾಶಕೊಡತಕ್ಕದ್ದಲ್ಲ.

(2) ಸಿನಿಮಾ ಕಟ್ಟಡವು ಶಬ್ದ ನಿರೋಧಕ ಮತ್ತು ಸುಲಭವಾಗಿ ದಹ್ಯವಲ್ಲದ ಸಾಮಗ್ರಿಗಳಲ್ಲಿ ನಿರ್ಮಾಣವಾದ ಸಿನಿಮಾ ಕಟ್ಟಡವಾಗಿದ್ದರೆ, ಲೈಸನ್ಸ್ ಪ್ರಾಧಿಕಾರವು ಸ್ಥಳೀಯ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ, ಅವರ ಅಧಿಕಾರವ್ಯಾಪ್ತಿಯ ಸ್ಥಳದಲ್ಲಿ ಷೋರೂಮುಗಳು, ಹೋಟೇಲುಗಳು, ಅಂಗಡಿಗಳು, ಕ್ಯಾಂಟೀನುಗಳು, ಬ್ಯಾಂಕುಗಳು ಮತ್ತು ಕಛೇರಿಗಳನ್ನು ಸಿನಿಮಾ ಕಟ್ಟಡ ಇರುವ ಮಹಡಿಯನ್ನು ಹೊರತುಪಡಿಸಿ ತೆರೆಯಲು ಅನುಮತಿಸಬಹುದು ಮತ್ತು ಆಲ್ಕೋಹಾಲ್‌ನ್ನು (ಮದ್ಯ) ಮಾರುವುದು ಮತ್ತು ಸೇವಿಸುವುದಕ್ಕೆ ಸಂಬಂಧಿಸಿದ ಅಂಗಡಿಗಳನ್ನು ಸ್ಥಾಪಿಸುವುದಕ್ಕೆ ಅನುಮತಿಸತಕ್ಕದ್ದಲ್ಲ.

**149. ವಿದ್ಯುಚ್ಛಕ್ತಿ ಸ್ಥಾಪನೆಗಳು,-** ಈ ಅಧ್ಯಾಯದ ಉದ್ದೇಶಗಳಿಗಾಗಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, "ಬುಷ್' ಎಂದರೆ ಯಾವ ಸಂದುಗಳ ಮೂಲಕ ಕೊಳವೆಗಳು ಮತ್ತು ಕೇಬಲ್ಲುಗಳನ್ನು ಹಾಯಿಸಲಾಗಿದೆಯೋ ಆ ಸಂದುಗಳಲ್ಲಿ ಅಂತಹ ಸಂದುಗಳನ್ನು ಯುಕ್ತವಾಗಿ ಹೊಗೆ ನಿರೋಧಕಗೊಳಿಸುವ ದೃಷ್ಟಿಯಿಂದ ಸೇರಿಸಲಾದ ಪ್ಯಾಕಿಂಗ್.

(2) ವಿದ್ಯುಚ್ಛಕ್ತಿ ಅಧಿನಿಯಮ 2003 ಮತ್ತು ಕೇಂದ್ರಿಯ ವಿದ್ಯುಚ್ಛಕ್ತಿ ಪ್ರಾಧಿಕಾರ (ವಿದ್ಯುತ್ ಸರಬರಾಜಿಗೆ ಸಂಬಂಧಿಸಿದ ಸುರಕ್ಷತೆ ಮತ್ತು ಕಾನೂನುಕ್ರಮಗಳು) ನಿಯಂತ್ರಣಗಳು 2010 ಮತ್ತು ನಿಯಮಗಳು ಮತ್ತು ನಿಯಂತ್ರಣಗಳಿಗೆ ತದನಂತರ ಮಾಡಲಾದ ಈ ಅಧ್ಯಾಯದಲ್ಲಿ ನಿರ್ದಿಷ್ಟವಾಗಿ ಪರಿಭಾಷಿಸಲಾಗದಂಥ ಈ ನಿಯಮಗಳಿಗೆ ಯಾವುದೇ ಪದ ಅದೇ ಅರ್ಥ ಮತ್ತು ಪದಗಳನ್ನು ಪರಿಭಾಷಿಸತಕ್ಕದ್ದಲ್ಲ.

**150. ಮುಖ್ಯ ಸರ್ಕ್ಯೂಟ್‌ಗಳು.-** ಆವರಣಗಳ ವಿದ್ಯುತ್ ದೀಪ ವ್ಯವಸ್ಥೆಯು ಕನಿಷ್ಠ ಪಕ್ಷ ಮೂರು ಪ್ರತ್ಯೇಕ ಮತ್ತು ವಿಭಿನ್ನ ಮುಖ್ಯ ಸರ್ಕ್ಯೂಟ್‌ಗಳನ್ನು ಹೊಂದಿರತಕ್ಕದ್ದು ಮತ್ತು ಅವುಗಳು,-

(ಎ) ಪ್ರೊಜೆಕ್ಷನ್ ಕೊಠಡಿಗಾಗಿ ಮತ್ತು ಅಲ್ಲಿಂದ ಡಿಮ್ಮಿಂಗ್ ರೆಗ್ಯುಲೇಟರು ಯಾವುದಾದರೂ ಇದ್ದರೆ, ಅದರ ಮೂಲಕ ಸಭಾಂಗಣದ ಕೇಂದ್ರ ದೀಪ ವ್ಯವಸ್ಥೆಗಾಗಿ 'ಎ' ಸರ್ಕ್ಯೂಟ್;

(ಬಿ) ಸಭಾಂಗಣದ ಸರಿಸುಮಾರು ಅರ್ಧಭಾಗ ಸಾರ್ವಜನಿಕರಿಗೆ ತೆರೆದಿರುವ ದಾರಿಗಳು, ಮೆಟ್ಟಲು ದಾರಿಗಳು, ಹೊರಕ್ಕೆ ಹೋಗುವ ದಾರಿಗಳು ಮತ್ತು ಕಟ್ಟಡಗಳ ಭಾಗಗಳಿಗಾಗಿ 'ಬಿ' ಸರ್ಕ್ಯೂಟ್; ಮತ್ತು

(ಸಿ) ಸಭಾಂಗಣದ ಉಳಿದ ಅರ್ಧಭಾಗ ಸಾರ್ವಜನಿಕರಿಗೆ ತೆರೆದಿರುವ ದಾರಿಗಳು, ಮೆಟ್ಟಲು ದಾರಿಗಳು, ಹೊರಕ್ಕೆ ಹೋಗುವ ದಾರಿ ಮತ್ತು ಕಟ್ಟಡಗಳ ಭಾಗಗಳಿಗಾಗಿ 'ಸಿ', ಸರ್ಕ್ಯೂಟ್‌ಗಳು

- ಇರತಕ್ಕದ್ದು.

(2) 'ಬಿ' ಮತ್ತು 'ಸಿ' ಸರ್ಕ್ಯೂಟ್‌ಗಳಿಗೆ ಸಂಬಂಧಿಸಿದಂತೆ ಸರ್ಕ್ಯೂಟ್‌ಗಳ ನಿಯಂತ್ರಣವು ಒಂದರಿಂದ ಇನ್ನೊಂದಕ್ಕೆ ದೂರದಲ್ಲಿರತಕ್ಕದ್ದು.

**151. ಸರಬರಾಜು ವ್ಯವಸ್ಥೆ.-** (1) ಸರಬರಾಜು ಮೂರು ಹಂತಗಳ ಎಸಿ ವ್ಯವಸ್ಥೆಯಲ್ಲಿ ಲಭ್ಯವಿರುವಲ್ಲಿ, 'ಎ' 'ಬಿ' ಮತ್ತು 'ಸಿ' ಸರ್ಕ್ಯೂಟ್‌ಗಳ ಲೋಡನ್ನು ಸರಿತೂಗಿಸಲು ಮೂರು ವಿವಿಧ ಸ್ಥಳಗಳಿಂದ ಸರಬರಾಜು ಮಾಡತಕ್ಕದ್ದು.

(2) "ಎ", "ಬಿ" ಮತ್ತು "ಸಿ" ಮುಖ್ಯ ಸರ್ಕ್ಯೂಟ್‌ಗಳನ್ನು ಅವಶ್ಯವೆಂದು ಪರ್ಯಾಲೋಚಿಸಬಹುದಾದಷ್ಟು ಉಪ-ಸರ್ಕ್ಯೂಟ್‌ಗಳಿಗಾಗಿ ಉಪ-ವಿಭಾಗಿಸಬಹುದು. ಪ್ರತಿಯೊಂದು ಉಪ-ಸರ್ಕ್ಯೂಟ್ ವಿತರಣಾ ಫಲಕದಿಂದ ಪ್ರಾರಂಭವಾಗತಕ್ಕದ್ದು ಮತ್ತು ಅರ್ಥ್ ಲಿಕೇಜುಗಳ ಸರ್ಕ್ಯೂಟ್ ಬ್ರೇಕರ್‌ಗಳ (ಇಎಲ್‌ಸಿಬಿ) ಸೂಕ್ತ ಸಾಮರ್ಥ್ಯದಿಂದರತಕ್ಕದ್ದು.

(3) ಆವರಣದ ಒಳಗಡೆ ಮತ್ತು ಹೊರಗಡೆಯ ದೀಪಗಳು ಪ್ರತ್ಯೇಕ ಸರ್ಕ್ಯೂಟ್ ಇರತಕ್ಕದ್ದು. ಫ್ಯಾನುಗಳು, ವಿದ್ಯುತ್ ಮತ್ತು ತಂಪುಗೊಳಿಸುವ ಉದ್ದೇಶಗಳಿಗಾಗಿನ ಸರ್ಕ್ಯೂಟ್‌ಗಳನ್ನು ದೀಪ ಸರ್ಕ್ಯೂಟ್‌ಗಳಿಂದ ವಿಭಿನ್ನ ಮತ್ತು ಪ್ರತ್ಯೇಕವಾಗಿ ಇಡತಕ್ಕದ್ದು.

(4) ವಿದ್ಯುತ್ ಉಳಿತಾಯ ಮತ್ತು ಆಧುನಿಕ ತಂತ್ರಜ್ಞಾನ ದೀಪ ವ್ಯವಸ್ಥೆಯ ಎಲ್‌ಇಡಿ ಮೊದಲಾದವುಗಳಿಂದ ಕೂಡಿರತಕ್ಕದ್ದು.

**152. ಸ್ವಿಚ್ಚು ಮತ್ತು ಫ್ಯೂಸ್.-** ಎಲ್ಲ ವಿದ್ಯುತ್ ಸ್ಥಾಪನೆಗಳ ನಿಯಂತ್ರಣಕ್ಕಾಗಿ ಮುಖ್ಯ ಸ್ವಿಚ್ಚು ಬೋರ್ಡಿನಲ್ಲಿ ಓವರ್ ಲೋಡ್ ಮತ್ತು ಅರ್ಥ್ ಲೀಕೇಜ್ ಸಂರಕ್ಷಣೆಗೆ ಮುಖ್ಯ ಸ್ವಿಚ್ಚನ್ನು ಒದಗಿಸತಕ್ಕದ್ದು. ಎಲ್ಲ ಸರ್ಕ್ಯೂಟ್‍ಗಳನ್ನು ಸಿಬ್ಬಂದಿ ವರ್ಗಕ್ಕೆ ಸುಲಭವಾಗಿ ಸಿಗಬಹುದಾದ ಸ್ಥಾನಗಳಲ್ಲಿ ಮತ್ತು ಅವುಗಳು ಯಾವುದೇ ದಾರಿ ಅಥವಾ ಹೊರಕ್ಕೆ ಹೋಗುವ ದಾರಿಗೆ ಅಡ್ಡಿಪಡಿಸುವ ಸಂಭವವಿಲ್ಲದಿರಬಹುದಾದ ಸ್ಥಳದಲ್ಲಿ ಇಟ್ಟು ಸೂಕ್ತ ಸಾಮರ್ಥ್ಯದ ಸರ್ಕ್ಯೂಟ್ ಬ್ರೇಕರ್‍ಗಳ ಮೂಲಕ ಸಮರ್ಥವಾಗಿ ಪರಿರಕ್ಷಿಸತಕ್ಕದ್ದು.

(2) ಸ್ವಿಚ್ಚುಗಳು ಮತ್ತು ಫ್ಯೂಸ್ ಫಲಕಗಳಿಗೆ ಅವು ಸಾರ್ವಜನಿಕರಿಗೆ ಸಿಗುವಂತಿದ್ದರೆ ಮತ್ತು ಅವು ಟಿಕೆಟ್ ಕಿಂಡಿಗಳಲ್ಲಿ ಇದ್ದರೆ, ಗಾಜು ಅಥವಾ ಲೋಹದ ಮುಂಭಾಗದಿಂದ ಸರಿಯಾದ ಬೀಗ ಹಾಕುವ ಪೆಟ್ಟಿಗೆಗಳನ್ನು ಒದಗಿಸತಕ್ಕದ್ದು ಮತ್ತು ಗಾಜನ್ನು (ಸಾಕಷ್ಟು ದಪ್ಪವಾಗಿದ್ದ ಹೊರತು) ಸೂಕ್ತ ಅಗ್ನಿ ನಿರೋಧ ಸಾಧನವನ್ನು ಬಳಸುವ ಮೂಲಕ ಅಗ್ನಿ ನಿರೋಧಕದಿಂದ ಮಾಡಿದ ರಕ್ಷಕ ತಂತಿಯ ಮೂಲಕ ಅಥವಾ ಪರ್ಯಾಯವಾಗಿ ಮುಚ್ಚಳವಿರುವ ಮತ್ತು ಪ್ರಾಸಂಗಿಕ ಪೆಟ್ಟಿಗೆಗಳಿಂದ ಪರಿರಕ್ಷಿಸತಕ್ಕದ್ದು.

(3) ಎಲ್ಲ ಸ್ವಿಚ್ಚುಗಳು ಮತ್ತು ಸೂಕ್ತ ಸಾಮರ್ಥ್ಯದ ಸರ್ಕ್ಯೂಟ್ ಬ್ರೇಕರ್‍ಗಳನ್ನು ಯಾವ, ದೀಪಗಳ ಸರ್ಕ್ಯೂಟ್‍ನ್ನು ಅಥವಾ ಲ್ಯಾಂಪ್‍ಗಳನ್ನು ಅವುಗಳು ನಿಯಂತ್ರಿಸುವುವೋ ಅವುಗಳನ್ನು ಸ್ಪಷ್ಟವಾಗಿ ತೋರಿಸುವ ಹಾಗೆ ಗುರುತು ಮಾಡತಕ್ಕದ್ದು.

**153. ಸಂಚಾಯಕ ಸಲಕರಣೆಗಳು.-** ವಿದ್ಯುಚ್ಛಕ್ತಿ ಇನ್‍ಸ್ಪೆಕ್ಟರನು ಸಂಚಾಯಕ ಸಲಕರಣೆಗಳನ್ನು ಅಥವಾ ಸ್ವಯಂಚಾಲಿತ ಡಿಸಿ ದೀಪಗಳ ಸಂಖ್ಯೆ ಮತ್ತು ತುರ್ತು ಪರಿಸ್ಥಿತಿ ಅಥವಾ ವಿದ್ಯುಚ್ಛಕ್ತಿಯು ನಿಂತು ಹೋದ ಸಮಯದಲ್ಲಿ, ಸಭಾಂಗಣವನ್ನು ದೀಪದಿಂದ ಬೆಳಗಿಸುವ ವ್ಯವಸ್ಥೆಯನ್ನು ಸ್ಥಾಪಿಸತಕ್ಕದ್ದು.

(2) ಸಂಚಾಯಕ ಸಲಕರಣೆಗಳನ್ನು ಹೊರಗಿನ ಗಾಳಿಗೆ ಸಾಕಷ್ಟು ವಾಯು ಸಂಚಾರವಿರುವ ಕೊಠಡಿಯಲ್ಲಿ ಇಡತಕ್ಕದ್ದು ಮತ್ತು ಈ ಕೊಠಡಿಯು ಅಗ್ನಿ ನಿರೋಧಕ ಬಾಗಿಲುಗಳೊಂದಿಗೆ ಅಗ್ನಿ ನಿರೋಧಕ ರಚನೆಯದ್ದಾಗಿರತಕ್ಕದ್ದು ಮತ್ತು ಅದನ್ನು ಯಾವುದೇ ಇತರ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ.

**154. ರೂಪಾಂತರಿಸುವ ಮತ್ತು ಪರಿವರ್ತಿಸುವ ಯಂತ್ರಸಾಮಗ್ರಿ.-** ನಿಯಂತ್ರಿಸುವ ಸ್ವಿಚ್ಚುಗಳು ಮತ್ತು ಸರ್ಕ್ಯೂಟ್ ಬ್ರೇಕರ್‍ಗಳೊಂದಿಗೆ ರೂಪಾಂತರಿಸುವ ಮತ್ತು ಪರಿವರ್ತಿಸುವ ಯಂತ್ರ ಸಾಮಗ್ರಿಯನ್ನು, ಹೊರಗಿನ ಗಾಳಿಗೆ ಸಾಕಷ್ಟು ವಾಯುಸಂಚಾರವಿರುವ, ಸರಿಯಾಗಿ ಬೆಳಕಿರುವ ಮತ್ತು ಆಡಳಿತ ವರ್ಗಕ್ಕೆ ಸಿಗುವ ಸ್ಥಳದಲ್ಲಿಡತಕ್ಕದ್ದು ಮತ್ತು ಅದನ್ನು ಯಾವುದೇ ಇತರ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ.

**155. ಮೋಟಾರುಗಳು, ಇತ್ಯಾದಿ.-** ಎಲ್ಲ ಮೋಟಾರುಗಳು ಮತ್ತು ವಿದ್ಯುಚ್ಛಕ್ತಿ ಸಾಧನ ಸಾಮಗ್ರಿಗಳು, ಅವುಗಳಿಗೆ ಅವಕಾಶ ಕೊಟ್ಟಿದ್ದರೆ, ಅವುಗಳು ವಿಶೇಷ ಷರತ್ತುಗಳಿಗೊಳಪಟ್ಟಿರತಕ್ಕದ್ದು. ಆದರೆ, ಮುನ್ನೂರು ವ್ಯಾಟ್‍ಗಳಿಗಿಂತ ಹೆಚ್ಚಾಗಿ ತೆಗೆದುಕೊಳ್ಳದ ವಿದ್ಯುತ್ ಪ್ಯಾನ್‍ಗಳು ಮತ್ತು ಅಂತಹವೇ ಮೋಟಾರುಗಳನ್ನು ಸೂಕ್ತ ವಿತರಣಾ ಫಲಕದ ಮೇಲೆ ಸರ್ಕ್ಯೂಟ್ ಬ್ರೇಕರ್‍ಗಳಿಂದ ಪ್ರತ್ಯೇಕವಾಗಿ ವೈರಿಂಗ್ ಮಾಡಿದ್ದರೆ ಉಪಯೋಗಿಸಬಹುದು.

**156. ಪ್ರತಿರೋಧಗಳು.-** ನಿಯಂತ್ರಣ ಉದ್ದೇಶಕ್ಕಾಗಿ ಪ್ರತಿರೋಧವನ್ನು ಹೊರತುಪಡಿಸಿ ಎಲ್ಲ ಪ್ರತಿರೋಧಗಳನ್ನು ಪ್ರೊಜೆಕ್ಷನ್ ಕೊಠಡಿಯ ಹೊರಗೆ ಮತ್ತು ಯುಕ್ತವಾಗಿ ಕಾರ್ಯಸಾಧ್ಯವಿದ್ದರೆ ಸಭಾಂಗಣದ ಹೊರಗಡೆ ಇಡತಕ್ಕದ್ದು, ಸಭಾಂಗಣದ ಒಳಗಡೆ ಇಟ್ಟರೆ, ಅಂತಹ ಪ್ರತಿರೋಧವನ್ನು ಹೂತ ತಂತಿಯ ರಕ್ಷಕ ಮೂಲಕ ಅಥವಾ ಆಕಸ್ಮಿಕ ಸಂಪರ್ಕಗಳನ್ನು ತಡೆಗಟ್ಟುವ ಇತರ ಸಮರ್ಥ ಸಾಧನಗಳಿಂದ ಪರಿರಕ್ಷಿಸತಕ್ಕದ್ದು.

**157. ಚಾಪ ದೀಪಗಳು.-** (1) ಯಾವುದೇ ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್‍ನಲ್ಲಿ, ವಿದ್ಯುಚ್ಛಕ್ತಿ ಇನ್‍ಸ್ಪೆಕ್ಟರನ ಅನುಮತಿಯಿಲ್ಲದೆ ಸಭಾಂಗಣದಲ್ಲಿ ಅಥವಾ ಸಾರ್ವಜನಿಕರಿಗಾಗಿ ತೆರೆದಿರುವ ಯಾವುದೇ ಭಾಗದಲ್ಲಿ ಚಾಪ ದೀಪಗಳನ್ನು ಉಪಯೋಗಿಸತಕ್ಕದ್ದಲ್ಲ. ಅಂತಹ ಆವರಣಗಳ ಯಾವುದೇ ಭಾಗದಲ್ಲಿ ಅವುಗಳನ್ನು ಉಪಯೋಗಿಸಿದಾಗ, ಬೀಳುವ ಗಾಜು ಮತ್ತು ಪ್ರಜ್ವಲಿಸುವ ಕಣಗಳು ಅಥವಾ ಇಂಗಾಲದ ಅಪಾಯದ ವಿರುದ್ಧ ರಕ್ಷಿಸಲು ವಿಶೇಷ ಮುನ್ನೆಚ್ಚರಿಕೆಗಳನ್ನು

ತೆಗೆದುಕೊಳ್ಳತಕ್ಕದ್ದು. ಬೇರೆಯವರು ಸ್ಪರ್ಶಿಸಬಹುದಾದಂಥ ದೀಪಗಳು, ಲಾಂದ್ರಗಳ ಮತ್ತು ಜೋಡಣೆಗಳ ಎಲ್ಲ ಭಾಗಗಳನ್ನು (ಅವುಗಳನ್ನು ಸ್ಪರ್ಶಿಸಲು ನಿಯೋಜಿತನಾದ ವ್ಯಕ್ತಿಯ ಹೊರತು) ಚೌಕಟ್ಟಿನಿಂದ ವಿದ್ಯುತ್ ನಿರೋಧಕಗೊಳಿಸತಕ್ಕದ್ದು.

(2) ಸೀನರಿ ಅಥವಾ ಇತರ ಸುಲಭವಾಗಿ ಬೆಂಕಿ ಹತ್ತುವ ಸಾಮಗ್ರಿಗಳೊಂದಿಗೆ ಸಂಪರ್ಕದಿಂದ ಮೂಲಕ ಬೆಂಕಿ ಹೊತ್ತಿಕೊಳ್ಳಲು ಸಾಕಷ್ಟು ಉಷ್ಣಾಂಶ ಹೆಚ್ಚಾಗಬಹುದಾದ ಚಾಪ ದೀಪದ ಲೋಹದ ಕೆಲಸ ಯಾವುದೇ ತೆರೆದ ಭಾಗವನ್ನು ತಂತಿ ರಕ್ಷಕ ಮೂಲಕ ಪರಿರಕ್ಷಿಸತಕ್ಕದ್ದು. ಯಾವುದೇ ಸಂದರ್ಭದಲ್ಲಿ ಚಾಪ ದೀಪಗಳನ್ನು ಸಂವಾಹಕಗಳ ಮೂಲಕ ತೂಗುಬಿಡತಕ್ಕದ್ದಲ್ಲ.

(3) ಎಲ್ಲ ಚಾಪ ದೀಪಗಳನ್ನು ವಾತಾವರಣಕ್ಕೆ ಒಯ್ಯುವ ಗಾಳಿ ತೂರದ ನಾಳಗಳೊಂದಿಗೆ ಸಂಪರ್ಕಿಸತಕ್ಕದ್ದು.

(4) ಡಿಜಿಟಲ್ ಪ್ರಾಜೆಕ್ಟರ್ಗಳು, ಡಿಜಿಟಲ್ ಶಬ್ದ ವ್ಯವಸ್ಥೆಯಂಥ ಮುಂದುವರೆದ ತಂತ್ರಜ್ಞಾನದ ಪ್ರೊಜೆಕ್ಟರ್ ಮತ್ತು ಶಬ್ದ ವ್ಯವಸ್ಥೆ ಮತ್ತು ಮುಂದುವರೆದ ತಂತ್ರಜಾನದ ಯಾವುದೇ ಇತರ ವಿಧಾನಗಳನ್ನು ಅಳವಡಿಸಿಕೊಳ್ಳಬಹುದು ಮತ್ತು ಜಿಲ್ಲಾ ಅಥವಾ ಆ ಪ್ರದೇಶದ ವಿದ್ಯುಚ್ಛಕ್ತಿ ಇನ್ಸ್‌ಪೆಕ್ಟರನಿಂದ ಅನುಮತಿಯನ್ನು ಪಡೆದ ತರುವಾಯ ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್‌ನ ಯಾವುದೇ ಭಾಗದಲ್ಲಿ ಬಳಸಬಹುದು.

**158. ಚಲನಚಿತ್ರ ದೀಪಗಳಿಗಾಗಿ ಕೇಬಲ್‌ಗಳು.-** ಚಲನಚಿತ್ರ ದೀಪಗಳು ಅಥವಾ ಡಿಜಿಟಲ್ ಪ್ರೊಜೆಕ್ಟರ್ಗಾಗಿ ಕೇಬಲ್‌ಗಳನ್ನು ಪ್ರೊಜೆಕ್ಟರ್ ಕೊಠಡಿಯಿಂದ ವಿದ್ಯುತ್ ಸರಬರಾಜು ಬೋರ್ಡಿನಿಂದ ಪ್ರತ್ಯೇಕ ಸರ್ಕ್ಯೂಟ್‌ಗಳಿಗಾಗಿ ತೆಗೆದುಕೊಳ್ಳತಕ್ಕದ್ದು. ಸೂಕ್ತವಾದ ಫ್ಯೂಜ್ ರಕ್ಷಣೆಯೊಂದಿಗೆ ಸ್ವಿಚ್ಚನ್ನು ಸಮರ್ಥ ಜೋಡಿ ಕಂಬದಿಂದ ಚಲನಚಿತ್ರ ದೀಪ ಪಥದಲ್ಲಿ ಪ್ರೊಜೆಕ್ಷನ್ ಕೊಠಡಿಯೊಳಗೆ ಜೋಡಿಸತಕ್ಕದ್ದು.

**159. ಕೇಬಲ್‌ಗಳಿಗಾಗಿ ವಿದ್ಯುತ್ ನಿರೋಧಕ ಸಾಮಗ್ರಿ.-** ಪ್ರೊಜೆಕ್ಷನ್ ಕೊಠಡಿಯೊಳಗೆ, ಅಗ್ನಿ ಪ್ರತಿರೋಧಕ ಕಡಿಮೆ ಹೊಗೆ ಬರುವ ರೀತಿಯ ಎಲ್ಲಾ ವಿದ್ಯುತ್ ಕೇಬಲ್‌ಗಳನ್ನು ಮತ್ತು ಎಲ್ಲಾ ಕೇಬಲ್‌ಗಳನ್ನು ನಳಿಕೆಗಳಿಂದ ಮುಚ್ಚತಕ್ಕದ್ದು. ಸ್ವಿಚ್ಚು ಬೋರ್ಡಿನಿಂದ ಪ್ರೊಜೆಕ್ಟರು ಮತ್ತು ಮೋಟಾರುಗಳಿಗೆ ಹೋಗುವ ಎಲ್ಲಾ ನಳಿಕೆಗಳನ್ನು ನೆಲದ ಹಾಸನ್ನು ಅಗೆಯದೆ ಪೂರ್ಣಗೊಳಿಸಿದ ನೆಲದಲ್ಲಿ ಹೂಳತಕ್ಕದ್ದು ಮತ್ತು ಯಾವುದೇ ಸಂದರ್ಭದಲ್ಲಿ ಕೇಬಲ್‌ಗಳ ಮೇಲಿನ ನಳಿಕೆಗಳಿಗೆ ನೆಲದ ಮೇಲ್ಮೈ ಮೇಲೆ ಅವಕಾಶ ಕೊಡತಕ್ಕದ್ದಲ್ಲ.

**160. ನಿರ್ಗಮನ ಚಿಹ್ನೆ, ದಾರಿಗಳು, ಇತ್ಯಾದಿಗಳಿಗಾಗಿ ಸಹಾಯಕ ಸರಬರಾಜು.-** (1) ಸಭಾಂಗಣದೊಳಗೆ ನಡುದಾರಿಗಳು ಮತ್ತು ದಾರಿಗಳಲ್ಲಿ ನೆಲದೀಪಗಳನ್ನು ಒದಗಿಸತಕ್ಕದ್ದು. ಅವುಗಳ ವೋಲ್ಟೇಜು ಇಪ್ಪತ್ನಾಲ್ಕು ವೋಲ್ಟುಗಳನ್ನು ಮೀರತಕ್ಕದ್ದಲ್ಲ.

(2) ಸಾರ್ವಜನಿಕರು ಸಿನಿಮಾ ಥಿಯೇಟರ್ನೊಳಗೆ ಇರುವ ಸಮಯದಲ್ಲಿ ಸ್ಟೇರ್ಕೇಸ್‌ಗಳಲ್ಲಿ, ಮೊಗಶಾಲೆಗಳಲ್ಲಿ, ದಾರಿಗಳಲ್ಲಿ ಮತ್ತು ಹೊರಕ್ಕೆ ಹೋಗುವ ದಾರಿಗಳಲ್ಲಿ ಎಲ್ಲಾ ದೀಪಗಳನ್ನು ಹೊತ್ತಿಸಿಟ್ಟಿರತಕ್ಕದ್ದು.

(3) ಸಾರ್ವಜನಿಕರು ಆವರಣದಲ್ಲಿರುವಾಗ ಆದ್ಯಂತವಾಗಿ ಆವರಣದಲ್ಲಿ ಸುಸ್ಥಿತಿಯಲ್ಲಿರುವ ಕನಿಷ್ಠ ಪಕ್ಷ ಆರು ಟಾರ್ಚುಗಳನ್ನು ಇಟ್ಟಿರತಕ್ಕದ್ದು ಮತ್ತು ಅದು ದ್ವಾರಪಾಲಕರಿಗೆ ಸುಲಭವಾಗಿ ಸಿಗುವ ಹಾಗೆ ಇಡೀ ಕಟ್ಟಡದಲೆಲ್ಲಾ ಹಂಚಿರತಕ್ಕದ್ದು.

(4) ಎಲ್ಲ ಹೊರಗೆ ಹೋಗುವ ದಾರಿಗಳಲ್ಲಿ ತುರ್ತು ದೀಪಗಳನ್ನು ಸಹ ಒದಗಿಸತಕ್ಕದ್ದು.

(5) ತುರ್ತು ಚಿಹ್ನೆಯ ಫಲಕಗಳನ್ನು (ಅಗ್ನಿ ಹೊತ್ತಿಕೊಂಡಾಗ ಹೊರಗೆ ಹೋಗುವ ದಾರಿ/ ಸ್ಟೇರ್ಕೇಸ್, ಸುರಕ್ಷತೆಯ ಜಾಗ, ಅಗ್ನಿಶಾಮಕ, ತುರ್ತು ಅಲಾರಂ ಸ್ವಿಚ್ಚು ಇತ್ಯಾದಿ..) ಪ್ರಕಾಶಮಾನವಾಗಿ ಮತ್ತು ಸ್ಪಷ್ಟವಾಗಿ ಕಾಣುವಂತೆ ಇಟ್ಟಿರತಕ್ಕದ್ದು.

**161. ವೈರಿಂಗ್.-** (1) ಇಡೀ ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಆವರಣಗಳ ವಿದ್ಯುತ್ ವೈರಿಂಗ್‌ನ್ನು ಲೋಹ ಅಥವಾ ಅನುಮೋದಿತ ಗಟ್ಟಿ ಪಾಲಿ ವೈನಲ್ ಕ್ಲೋರೈಡ್‌ನ ನಳಿಕೆ ಕೊಳವೆಗಳಲ್ಲಿ ಮಾಡತಕ್ಕದ್ದು.

(2) ಲೋಹದ ನಳಿಕೆ ಕೊಳವೆಗಳಿಗಾಗಿ ಬುಷ್‌ಗಳನ್ನು ಅವಶ್ಯವಿರುವಾಗಲೆಲ್ಲಾ ಉಪಯೋಗಿಸತಕ್ಕದ್ದು. ಎಲ್ಲಾ ಲೋಹದ ಕೊಳವೆಗಳನ್ನು ಸಮರ್ಥವಾಗಿ ಅರ್ತಿಂಗ್ ಕಲ್ಪಿಸತಕ್ಕದ್ದು ರಕ್ಷಾಸಂಪುಟಗಳು ಮತ್ತು ಇತರ ಜೋಡಣೆಗಳೊಂದಿಗೆ

ಮುಂದುವರಿಸತಕ್ಕಂಥ ಉತ್ತಮ ಮತ್ತು ಖಾಯಂ ವಿದ್ಯುತ್ ಸಂಪರ್ಕ ಸುನಿಶ್ಚಿತಗೊಳಿಸುವ ಸ್ಕ್ರೂ ಜಾಯಿಂಟುಗಳು ಅಥವಾ ಇತರೆ ಸಾಧನಗಳನ್ನು ಒದಗಿಸತಕ್ಕದ್ದು.

**162. ಜೋಡಣೆಗಳು.-** (1) ಎಲ್ಲ ತೂಗು ಹಾಕಿದ ಜೋಡಣೆಗಳನ್ನು ಭದ್ರವಾಗಿ ಜೋಡಿಸತಕ್ಕದ್ದು.

(2) ಸಂಯೋಜಿತ ಅನಿಲ ಮತ್ತು ವಿದ್ಯುತ್ ಜೋಡಣೆಗಳನ್ನು ಉಪಯೋಗಿಸತಕ್ಕದ್ದಲ್ಲ.

(3) ಸಭಾಂಗಣದಲ್ಲಿ ಮತ್ತು ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡದ ಮುಂಭಾಗದಲ್ಲಿ ಯಾವುದೇ ವಿದ್ಯುತ್ ದೀಪದ ಲೋಲಕಗಳು ಅಥವಾ ಬ್ರ್ಯಾಕೆಟ್ಟುಗಳು ನೆಲದ ಮೇಲೆ ಜೋಡಣೆಗಳ ಅತಿ ಕೆಳಗಿನ ಮುಂಚಾಚಿರುವ ಭಾಗಕ್ಕೆ ಕನಿಷ್ಠ ಪಕ್ಷ ಎರಡೂವರೆ ಮೀಟರುಗಳಿರತಕ್ಕದ್ದು. ಯಾವುದೇ ವಿದ್ಯುತ್ ಜೋಡಣೆಗಳು ಅಥವಾ ಯಾವುದೇ ವಿವರಣೆಯ ಸಲಕರಣೆಗಳನ್ನು ಸುರಕ್ಷಾ ಪರದೆಯು ಸರಿಯಾಗಿ ಕೆಲಸ ಮಾಡುವುದಕ್ಕೆ ಯಾವುದೇ ಸಮಯದಲ್ಲಿ ಅಡ್ಡಿಯಾಗುವ ಹಾಗೆ ಜೋಡಿಸತಕ್ಕದ್ದಲ್ಲ ಅಥವಾ ಅಳವಡಿಸತಕ್ಕದ್ದಲ್ಲ.

(4) (i) ವಿದ್ಯುಚ್ಛಕ್ತಿ ಸ್ಥಾಪನೆಯನ್ನು, ಕರ್ನಾಟಕ ಸರ್ಕಾರದ ಲೈಸೆನ್ಸ್ ನೀಡುವ ಸಲಹಾ ಮತ್ತು ಪರೀಕ್ಷಾ ಮಂಡಲಿಯು ಕೊಟ್ಟ ವೈರ್ಮೆನ್ನರ ಅಥವಾ ಮೇಲ್ವಿಚಾರಕರ ಪರ್ಮಿಟ್ಟನ್ನು ಹೊಂದಿರುವ ಸರಿಯಾದ ಅರ್ಹತೆ ಪಡೆದ ವ್ಯಕ್ತಿಯ ಪ್ರಭಾರದಲ್ಲಿರತಕ್ಕದ್ದು ಅಥವಾ ಅದು ಲೈಸೆನ್ಸ್ ಪಡೆದ ವಿದ್ಯುಚ್ಛಕ್ತಿ ಕಾಂಟ್ರಾಕ್ಟರನ ಪ್ರಭಾರದಲ್ಲಿರತಕ್ಕದ್ದು, ಅವನ ಹೆಸರನ್ನು ಜಿಲ್ಲಾ ಅಥವಾ ಆ ಕ್ಷೇತ್ರದ ವಿದ್ಯುಚ್ಛಕ್ತಿ ಪರಿಶೀಲಿಕನಿಗೆ ತಿಳಿಸತಕ್ಕದ್ದು.

(ii) ಲೈಸೆನ್ಸು ಪಡೆದ ವಿದ್ಯುಚ್ಛಕ್ತಿ ಕಂಟ್ರಾಕ್ಟರನು, ಜಿಲ್ಲಾ ವಿದ್ಯುಚ್ಛಕ್ತಿ ಪರಿಶೀಲಿಕನಿಗೆ ವಾರ್ಷಿಕವಾಗಿ ಎಲ್ಲ ಸರ್ಕ್ಯೂಟುಗಳಿಗೆ ಮತ್ತು ವಿದ್ಯುತ್ ನಿರೋಧಕ ಅಳವಡಿಸಿದನ್ನು ಮತ್ತು ಎಲೆಕ್ಟ್ರಾನ್ ವ್ಯಾಲ್ಯೂಗಳನ್ನು ಒದಗಿಸತಕ್ಕದ್ದು.

(5) ವಿದ್ಯುತ್ ಶಾಕ್‌ನಿಂದ ನರಳುತ್ತಿರುವ ವ್ಯಕ್ತಿಗಳ ಚೇತರಿಕೆಗಾಗಿ ಇಂಗ್ಲಿಷ್, ಹಿಂದಿ ಮತ್ತು ಪ್ರಾದೇಶಿಕ ಭಾಷೆಗಳೆರಡರಲ್ಲೂ ಸೂಚನೆಗಳನ್ನು ಎದ್ದು ಕಾಣುವ ಸ್ಥಳದಲ್ಲಿ ಅಂಟಿಸತಕ್ಕದ್ದು ಮತ್ತು ವೈರ್ಮೆನ್ನರ ಉಪಯೋಗಕ್ಕಾಗಿ ಕನಿಷ್ಠ ಪಕ್ಷ ಸುಸ್ಥಿತಿಯಲ್ಲಿರುವ ಒಂದು ಜೊತೆ ರಬ್ಬರ್ ಕೈಚೀಲಗಳನ್ನು ಒದಗಿಸತಕ್ಕದ್ದು.

(6) ವಿದ್ಯುಚ್ಛಕ್ತಿ ಅಧಿನಿಯಮ, 2003 ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರ (ಸುರಕ್ಷತೆ ಮತ್ತು ವಿದ್ಯುತ್ ಪೂರೈಕೆಗೆ ಸಂಬಂಧಪಟ್ಟ ಕ್ರಮಗಳು) ವಿನಿಯಮಗಳು, 2010 ಮತ್ತು ಅದರ ತರುವಾಯ ಐಎಸ್‌ಎಸ್ 3043/1987ರ ನಿಯಮಗಳು ಮತ್ತು ವಿನಿಯಮಗಳ ಮೇರೆಗೆ ಅರ್ತಿಂಗ್ ಕಲ್ಪಿಸುವುದನ್ನು ಸಮರ್ಥವಾಗಿ ಮತ್ತು ಪೂರ್ಣವಾಗಿ ಮಾಡತಕ್ಕದ್ದು ಮತ್ತು ಅದನ್ನು ಸರಿಯಾಗಿ ಇಟ್ಟುಕೊಂಡು ಬರತಕ್ಕದ್ದು. ಭೂ ವಿದ್ಯುತ್ ಧ್ರುವಗಳನ್ನು ತೆರೆದಿಡತಕ್ಕದ್ದು ಮತ್ತು ನಿಯತವಾಗಿ ನೀರು ಹಾಕುವುದು, ಪರಿಶೀಲನೆ ಮತ್ತು ಪರೀಕ್ಷೆಯನ್ನು ಅನುಗೊಳಿಸುವ ಹಾಗೆ ಐ.ಎಸ್. ಮಾನಕಗಳ ಪ್ರಕಾರ ಕಲ್ಲುಕಟ್ಟಡ ಆವೃತಗಳಲ್ಲಿ ಆವೃತಗೊಳಿಸತಕ್ಕದ್ದು.

**163. ಜನರೇಟರ್ ಸರಬರಾಜಿನ ಉತ್ಪಾದಕತೆ ಪರ್ಯಾಯ ಮೂಲ.-** ಪ್ರಸ್ತುತ ವಿದ್ಯುತ್ ಸರಬರಾಜನ್ನು ಆವರಣದಲ್ಲಿನ ವಿಶೇಷ ಸ್ಥಾವರದಿಂದ ಪಡೆದಿರುವಲ್ಲಿ, ಅಂತಹ ಸ್ಥಾವರವನ್ನು ಎಲ್ಲಾ ಸಂದರ್ಭಗಳಲ್ಲಿ ಜಿಲ್ಲಾ ಅಥವಾ ಆ ಕ್ಷೇತ್ರದ ವಿದ್ಯುಚ್ಛಕ್ತಿ ಪರಿಶೀಲಕನು ಅನುಮೋದಿಸಿರಬೇಕು.

**164. ವೈರಿಂಗ್ ಯೋಜನೆ.-** ವಿದ್ಯುಚ್ಛಕ್ತಿ ಸ್ಥಾಪನೆಯ ಎಲ್ಲಾ ಸರ್ಕ್ಯೂಟ್‌ಗಳು ಮತ್ತು ಉಪ ಸರ್ಕ್ಯೂಟ್‌ಗಳ ವ್ಯವಸ್ಥೆಯನ್ನು ವಿತರಣಾ ಫಲಕಗಳ ಸ್ಥಾನವನ್ನು ಮತ್ತು ಕೇಬಲ್‌ಗಳ ಗಾತ್ರವನ್ನು ಸ್ಪಷ್ಟವಾಗಿ ಸೂಚಿಸುವ ಏಕರೇಖೆಯಲ್ಲಿ ಚೌಕಟ್ಟು ಹಾಕಿರುವ ವೈರಿಂಗ್ ರೇಖಾಚಿತ್ರವನ್ನು ಆವರಣದಲ್ಲಿ ಪ್ರದರ್ಶಿಸತಕ್ಕದ್ದು ಮತ್ತು ಅದನ್ನು ತಹಲ್‌ವರೆಗೆ ಇಡತಕ್ಕದ್ದು, ಅಂತಹ ರೇಖಾಚಿತ್ರವನ್ನು ವಿದ್ಯುಚ್ಛಕ್ತಿ ಇನ್‌ಸ್ಪೆಕ್ಟರನು ಕ್ರಮಬದ್ಧವಾಗಿ ಅನುಮೋದಿಸಿ ಡಿಜಿಟಲ್ ನಮೂನೆಯಲ್ಲಿ ಸಹ ನಿರ್ವಹಿಸತಕ್ಕದ್ದು.

**165. ದೀಪ ವ್ಯವಸ್ಥೆಯ ಸಂವಾಹಕಗಳು.-** (1) ದೀಪ ವ್ಯವಸ್ಥೆಯ ಸಂವಾಹಕಗಳನ್ನು ಪ್ರತಿಯೊಂದು ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡದಲ್ಲಿ ಸಂಬಂಧಪಟ್ಟ ಐ.ಎಸ್. ಮಾನಕಗಳಿಗೆ ಅನುಗುಣವಾಗಿ ಒದಗಿಸತಕ್ಕದ್ದು.

(2) ನಿಯಾನ್ ಚಿಹ್ನೆಗಳನ್ನು ಸ್ಥಾಪಿಸಿದ್ದರೆ ಅವುಗಳನ್ನು ಪ್ರಾರಂಭಿಸುವ ಮುಂಚೆ ವಿದ್ಯುಚ್ಛಕ್ತಿ ಇನ್ಸ್‌ಪೆಕ್ಟರನಿಂದ ಪರಿಶೀಲಿಸಿಕೊಳ್ಳತಕ್ಕದ್ದು.

**166. ದೂರವಾಣಿ.-** (1) ಪ್ರತಿಯೊಂದು ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್‌ಗೆ ಸುಲಭವಾಗಿ ಲಭ್ಯವಾಗಬಹುದಾದ ಸ್ಥಳದಲ್ಲಿ ದೂರವಾಣಿಯನ್ನು ಒದಗಿಸತಕ್ಕದ್ದು. ಅಗ್ನಿಶಾಮಕ, ಅಂಬುಲೆನ್ಸ್, ಪೋಲೀಸು, ಆಸ್ಪತ್ರೆ ಮೊದಲಾದವುಗಳನ್ನು ಒಳಗೊಂಡು ಎಲ್ಲ ತುರ್ತುಪರಿಸ್ಥಿತಿ ಸಂಪರ್ಕ ಸಂಖ್ಯೆಗಳನ್ನು ಎದ್ದುಕಾಣುವ ಜಾಗದಲ್ಲಿ ಪ್ರದರ್ಶಿಸತಕ್ಕದ್ದು. ಹತ್ತಿರದ ಅಗ್ನಿಶಾಮಕ ಠಾಣೆಯ ದೂರವಾಣಿ ಸಂಖ್ಯೆಯು ನಿಯಂತ್ರಣ ಕೊಠಡಿ ಸಂಖ್ಯೆ. 101 ರೊಂದಿಗೆ ಎದ್ದು ಕಾಣುವಂತಿರತಕ್ಕದ್ದು

(2) ಸಮಗ್ರ ದೂರವಾಣಿ ಸಂಪರ್ಕದ ಸ್ಥಾಪನೆ ಮತ್ತು ನಿರ್ವಹಣೆಯನ್ನು ಲೈಸೆನ್ಸ್‌ದಾರನು ತನ್ನ ಖರ್ಚಿನಲ್ಲಿ ನಿರ್ವಹಿಸತಕ್ಕದ್ದು.

**167. ಅಗ್ನಿನಂದಿಸುವ ಸಲಕರಣೆ.-** (1) ಪ್ರತಿಯೊಂದು ಸಿನಿಮಾ ಥಿಯೇಟರ್ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡಕ್ಕೆ ಈ ಕೆಳಕಂಡ ಅಗ್ನಿನಂದಿಸುವ ಉಪಕರಣಗಳನ್ನು ಒದಗಿಸತಕ್ಕದ್ದು, ಎಂದರೆ:-

(ಎ) ಪ್ರೊಜೆಕ್ಷನ್ ಕೊಠಡಿಯಲ್ಲಿ,-

(i) ಒಂದು ದಪ್ಪ ಉಣ್ಣೆ ಕಂಬಳಿ;

(ii) ಎರಡು ಬಕೆಟ್ ನೀರು, ಪ್ರತಿಯೊಂದು ಒಂಬತ್ತು ಲೀಟರುಗಳ ಸಾಮರ್ಥ್ಯವುಳ್ಳದ್ದು;

(iii) ಪ್ರತಿಯೊಂದು ಎರಡು ಕಿಲೋಗ್ರಾಂ ಸಾಮರ್ಥ್ಯವುಳ್ಳ ಕಾರ್ಬನ್ ಡೈಆಕ್ಸೈಡ್ (ಇಂಗಾಲಾಮ್ಲ) ನಂದಿಗೆಗಳು ಅಥವಾ ಐದು ಕಿಲೋಗ್ರಾಂ ಸಾಮರ್ಥ್ಯವುಳ್ಳ ಒಂದು ಕಾರ್ಬನ್ ಡೈಆಕ್ಸೈಡ್ ನಂದಿಗೆ;

(ಬಿ) ಸಭಾಂಗಣ ಮತ್ತು ಬಾಲ್ಕನಿಯಲ್ಲಿ,-

(i) ಸಭಾಂಗಣದಲ್ಲಿ ಪ್ರತಿಯೊಂದು ಐದು ಕಿಲೋಗ್ರಾಂ ಸಾಮರ್ಥ್ಯವುಳ್ಳ ನಾಲ್ಕು ಎಬಿಸಿ ಪೌಡರ್ ನಂದಿಗೆಗಳು ಮತ್ತು ಬಾಲ್ಕನಿಯು ಇರುವಲ್ಲೆಲ್ಲಾ ಬಾಲ್ಕನಿಯಲ್ಲಿ ಎರಡು ಅಂತಹ ನಂದಿಗೆಗಳು;

(ii) ಸಭಾಂಗಣದಲ್ಲಿ ಉದ್ದದಲ್ಲಿ ಆರು ಮೀಟರುಗಳಿಗಿಂತ ಕಡಿಮೆಯಿಲ್ಲದ ಬಗ್ಗಿಸಬಹುದಾದ ನೀರ್ಕೊಳವೆಗೆ ಲಗತ್ತಿಸಿದ ಎರಡು ನೀರಿನ ಪಂಪುಗಳು ಮತ್ತು ಬಾಲ್ಕನಿಯು ಇರುವಲ್ಲೆಲ್ಲಾ ಬಾಲ್ಕನಿಯಲ್ಲಿ ಒಂದು ನೀರಿನ ಪಂಪು. ಪ್ರತಿಯೊಂದು ನೀರಿನ ಪಂಪಿಗೆ ಯಾವಾಗಲೂ ನೀರು ತುಂಬಿಡಬೇಕಾದ ಪ್ರತಿಯೊಂದು ಹತ್ತು ಲೀಟರು ಸಾಮರ್ಥ್ಯದ ಸಮತಲವುಳ್ಳ ಎರಡು ಚಪ್ಪಟೆ ತಳ ಬಕೆಟುಗಳನ್ನು ಒದಗಿಸತಕ್ಕದ್ದು ಮತ್ತು ಅಗತ್ಯಪಡಿಸಲಾದಂತೆ ಇನ್ ಬಿಲ್ಟ್ ಅಗ್ನಿ ನಂದಿಸುವ ಉಪಕರಣವನ್ನು ಒದಗಿಸತಕ್ಕದ್ದು;

(iii) ಪ್ರತಿಯೊಂದು ಎರಡು ಕಿಲೋಗ್ರಾಂ ಸಾಮರ್ಥ್ಯವುಳ್ಳ ಎರಡು ಕಾರ್ಬನ್ ಡೈಆಕ್ಸೈಡ್ ನಂದಿಗೆಗಳು ಮತ್ತು ಐದು ಕಿಲೋಗ್ರಾಂ ಸಾಮರ್ಥ್ಯವುಳ್ಳ ಒಂದು ಕಾರ್ಬನ್ ಡೈಆಕ್ಸೈಡ್ ನಂದಿಗೆ;

(iv) ನೆಲ ಪ್ರದೇಶದ ಪ್ರತಿ ಒಂದು ನೂರು ಚದರ ಮೀಟರುಗಳು ಅಥವಾ ಅದರ ಭಾಗಕ್ಕಾಗಿ ನೀರು ತುಂಬಿದ ಹತ್ತು ಲೀಟರುಗಳ ಸಾಮರ್ಥ್ಯವುಳ್ಳ ಒಂದು ಅಗ್ನಿಶಾಮಕ ಬಕೆಟ್, ಸಭಾಂಗಣದಲ್ಲಿ ಕನಿಷ್ಠ ಪಕ್ಷ ಹನ್ನೆರಡು ಬಕೆಟುಗಳನ್ನು ಮತ್ತು ಬಾಲ್ಕನಿಯಲ್ಲಿ ಎರಡು ಬಕೆಟಗಳನ್ನು ಇಡತಕ್ಕದ್ದು;

(ಸಿ) ವಿದ್ಯುಚ್ಛಕ್ತಿ ಸ್ಥಾಪನೆಗಳ ಹತ್ತಿರ,-

(i) ಪ್ರತಿಯೊಂದು ಮುಖ್ಯ ಸ್ವಿಚ್ ಫಲಕದ ಹತ್ತಿರದಲ್ಲಿ ಐದು ಕಿಲೋಗ್ರಾಂ ಸಾಮರ್ಥ್ಯವುಳ್ಳ ಒಂದು ಎಬಿಸಿ ಪೌಡರ್ ನಂದಿಗೆಗಳು;

(ii) ವಿದ್ಯುಚ್ಛಕ್ತಿ ಮೀಟರುಗಳು, ರೋಟರಿ ಕನ್ವರ್ಟರುಗಳು ಅಥವಾ ಯಾವುದೇ ಇತರ ವಿದ್ಯುಚ್ಛಕ್ತಿ ಯಂತ್ರ ಸಾಮಗ್ರಿ ಅಥವಾ ಸಲಕರಣೆಯನ್ನು ಸ್ಥಾಪಿಸಿರುವಾಗಲೆಲ್ಲಾ, ಐದು ಕಿಲೋಗ್ರಾಂ ಸಾಮರ್ಥ್ಯವುಳ್ಳ ಒಂದು ಎಬಿಸಿ ಪೌಡರ್ ನಂದಿಗೆಯನ್ನು ಒದಗಿಸತಕ್ಕದ್ದು.

(2) ಎಲ್ಲ ಅಗ್ನಿಶಾಮಕ ಉಪಕರಣಗಳನ್ನು ಉಪಯೋಗಕ್ಕೆ ಸಿದ್ಧವಾಗಿ ಲಭ್ಯವಾಗುವಂಥ ರೀತಿಯಲ್ಲಿ ಇಡತಕ್ಕದ್ದು. ಸಭಾಂಗಣದಲ್ಲಿನ ಅಗ್ನಿಶಾಮಕ ಉಪಕರಣಗಳ ಬಹುಭಾಗವನ್ನು 1.20 ಮೀಟರಿನ ಎತ್ತರದಲ್ಲಿ ಪರದೆಯ ಅಕ್ಕಪಕ್ಕದಲ್ಲಿ ಜೋಡಿಸತಕ್ಕದ್ದು.

(3) ಅಗ್ನಿಶಾಮಕ ಬಕೆಟುಗಳು ದುಂಡನೆಯ ತಳವನ್ನು, ಪ್ರತಿಯೊಂದು ಒಂಭತ್ತು ಲೀಟರುಗಳ ಸಾಮರ್ಥ್ಯವನ್ನು ಹೊಂದಿರತಕ್ಕದ್ದು. ಅವುಗಳಿಗೆ ಸ್ವಚ್ಛ ಒಣ ಮರಳನ್ನು ತುಂಬಿ ಇಂಗ್ಲೀಷ್, ಹಿಂದಿ ಮತ್ತು ಕನ್ನಡದಲ್ಲಿ ದೊಡ್ಡ ಬಿಳಿಯ ಅಕ್ಷರಗಳಲ್ಲಿ **"Fire''** ಎಂಬ ಪದವನ್ನು ಕೆಂಪು ಬಣ್ಣದಲ್ಲಿ ಬರೆದಿರತಕ್ಕದ್ದು.

(4) ಸಾಗಿಸಲು ಸುಲಭವಾದ ಎಲ್ಲ ನಂದಿಗೆಗಳನ್ನು ನಿಯತಕಾಲಿಕವಾಗಿ ನಿರ್ವಹಿಸತಕ್ಕದ್ದು ಮತ್ತು ಅಗ್ನಿಶಾಮಕ ಅಧಿಕಾರ ವ್ಯಾಪ್ತಿಯಲ್ಲಿ ಅಥವಾ ಸರ್ಕಾರವು ಈ ಬಗ್ಗೆ ಅಧಿಕೃತಗೊಳಿಸಿದ ಎಂಜಿನಿಯರಿಂಗ್ ಫರ್ಮ್ ಹೈಡ್ರಾಲಿಕ್ ಒತ್ತಡದ ಮೂಲಕ ಒಳಪಡಿಸತಕ್ಕದ್ದು. ಇಪ್ಪತ್ತು ಕಿಲೋಗ್ರಾಂ/ ಎರಡು ಚದರ ಸೆಂಟೀ ಮೀಟರ್ ಒತ್ತಡವನ್ನು ಒಂದು ನಿಮಿಷ ತಡೆದುಕೊಳ್ಳಬಲ್ಲದು ಎಂದು ತೋರಿಸಲು ಮತ್ತು ಅಂತಹ ಪರೀಕ್ಷೆಯ ಪ್ರಮಾಣಪತ್ರವನ್ನು ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ಒಪ್ಪಿಸತಕ್ಕದ್ದು, ಆ ತರುವಾಯ ವಾರ್ಷಿಕವಾಗಿ ಅಂತಹವೇ ಪರೀಕ್ಷೆಗಳನ್ನು ಪುನರಾವರ್ತಿಸತಕ್ಕದ್ದು.

(5) ಸಿನಿಮಾ ಕಟ್ಟಡ ಅಥವಾ ಮಲ್ಟಿಪ್ಲೆಕ್ಸ್‌ನ ಸಿನಿಮಾ ಆಪರೇಟರನ್ನು ಒಳಗೊಂಡು ಸೇವಕರು ಮತ್ತು ಸಿಬ್ಬಂದಿಗೆ ಮೂರು ದಿನಗಳಿಗಿಂತ ಕಡಿಮೆಯಿಲ್ಲದ ಅವಧಿಯವರೆಗೆ ಪ್ರತಿಯೊಬ್ಬರಿಗೂ ರಾಜ್ಯದಲ್ಲಿರುವ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿಯಲ್ಲಿನ ಆವರಣಗಳಲ್ಲಿ ಇಟ್ಟುಕೊಂಡು ಬಂದಿರುವ ಎಲ್ಲ ಅಗ್ನಿಶಾಮಕ ಸಾಧನ ಸಾಮಗ್ರಿಯ ಉಪಯೋಗದಲ್ಲಿ ತರಬೇತಿ ಕೊಡತಕ್ಕದ್ದು.

(6) ಲೈಸೆನ್ಸ್‌ದಾರನು,-

(i) ತಯಾರಿಕೆದಾರರ ತಪಶೀಲುಗಳ ಮೇರೆಗೆ ಮತ್ತು ಜಿಲ್ಲಾ ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಅಗ್ನಿಶಾಮಕ ಅಧಿಕಾರಿಯ ನಿರ್ದೇಶನಗಳ ಮೇರೆಗೆ ಲೈಸೆನ್ಸು ಪಡೆದ ಆವರಣಗಳಲ್ಲಿ ಒದಗಿಸಿದ ಸುಲಭವಾಗಿ ಸಾಗಿಸಬಹುದಾದ ಅಗ್ನಿ ನಂದಿಗೆಯನ್ನು ನಿಯತಕಾಲಿಕವಾಗಿ ನಿರ್ವಹಿಸಿಕೊಂಡುಬರತಕ್ಕದ್ದು ಮತ್ತು ಅದನ್ನು ಪುನಃ ತುಂಬತಕ್ಕದ್ದು ಮತ್ತು ಹಾಗೆ ಮಾಡಿರುವುದರ ಬಗ್ಗೆ ಕಾಗದದ ಚೀಟಿಯ ಮೇಲೆ ದಿನಾಂಕವನ್ನು ದಾಖಲ್ಮಾಡತಕ್ಕದ್ದು ಮತ್ತು ಅದನ್ನು ಅಂತಹ ಕಂಟೈನರ್ ಹೊರಗಡೆ ಅಂಟಿಸತಕ್ಕದ್ದು;

(ii) ಲೈಸೆನ್ಸ್ ಪಡೆದ ಆವರಣದಲ್ಲಿ ಒದಗಿಸಿದ ಸುಲಭವಾಗಿ ಸಾಗಿಸಬಹುದಾದ ಪ್ರತಿಯೊಂದು ಅಗ್ನಿ ನಂದಿಗೆಯನ್ನು ಪ್ರತಿ ಒಂದು ವರ್ಷಕ್ಕೊಮ್ಮೆ ಅಥವಾ ತಯಾರಿಕೆದಾರನು ನಿರ್ದೇಶಿಸಿದಂತೆ ಮತ್ತು ಜಿಲ್ಲಾ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಗ್ನಿಶಾಮಕ ಅಧಿಕಾರಿಯ ನಿರ್ದೇಶನಗಳಂತೆ ವಿಸರ್ಜಿಸತಕ್ಕದ್ದು, ಮತ್ತು ಅದನ್ನು ಪುನಃ ತುಂಬತಕ್ಕದ್ದು ಮತ್ತು ಅಂತಹ ಪುನಃ ತುಂಬಿದ ದಿನಾಂಕವನ್ನು ಸುಲಭವಾಗಿ ಸಾಗಿಸಬಹುದಾದ ಆಗ್ನಿ ನಂದಿಗೆÉಯ ಕಂಟೈನರ್ನ ಹೊರಮೈ ಮೇಲೆ ಸೂಕ್ತ ಜಾಗದಲ್ಲಿ ದಾಖಲ್ಮಾಡತಕ್ಕದ್ದು.

**168. ಅಗ್ನಿಯ ಬಗ್ಗೆ ಮುನ್ನೆಚ್ಚರಿಕೆ.-** (1) ಬಾಗಿಲುಗಳು ಮತ್ತು ದಾರಿಗಳನ್ನು ಮುಚ್ಚುವ ಎಲ್ಲ ಪರದೆಗಳನ್ನು, ನೆಲದ ಮೇಲೆ ಎಳದಾಡದ ಹಾಗೆ ತೂಗು ಹಾಕತಕ್ಕದ್ದು ಮತ್ತು ಅದರ ಕೆಳತುದಿಯು ನೆಲದ ಮಟ್ಟದ ಮೇಲೆ ಕನಿಷ್ಠ ಪಕ್ಷ ಹತ್ತು ಸೆಂಟೀ ಮೀಟರ್ ಮೇಲೆ ಇರತಕ್ಕದ್ದು, ಪರದೆಗಳು ಅಗ್ನಿ ವಿಲಂಬಕ ನಿವಾರಣೋಪಾಯಗಳೊಂದಿಗೆ ಇರತಕ್ಕದ್ದು.

(2) ಯಾರೇ ಅನಧಿಕೃತ ವ್ಯಕ್ತಿಗೆ ಪ್ರೊಜೆಕ್ಷನ್ ಕೊಠಡಿಯನ್ನು ಪ್ರವೇಶಿಸಲು ಅವಕಾಶ ಕೊಡತಕ್ಕದ್ದಲ್ಲ.

(3) ಇಡೀ ಸಿನಿಮಾ ಥಿಯೇಟರಿನ ಆವರಣಗಳಲ್ಲಿ ಧೂಮಪಾನ, ಆಲ್ಕೋಹಾಲ್ (ಮದ್ಯ) ಬಳಕೆ, ತಂಬಾಕು ಅಥವಾ ಯಾವುದೇ ನಿಷೇದಿತ ವಸ್ತುವಿಗೆ ಇಡೀ ಸಿನಿಮಾ ಥಿಯಟೇರ್ ಆವರಣದಲ್ಲಿ ಅವಕಾಶ ಕೊಡತಕ್ಕದ್ದಲ್ಲ.

(4) ಪ್ರೊಜೆಕ್ಷನ್ ಕೊಠಡಿಯೊಳಕ್ಕೆ ಯಾವುದೇ ದಹ್ಯ ವಸ್ತುವನ್ನು ತೆಗೆದುಕೊಂಡು ಹೋಗತಕ್ಕದ್ದಲ್ಲ ಅಥವಾ ಅದರಲ್ಲಿ ಉಳಿಯಲು ಅವಕಾಶ ಕೊಡತಕ್ಕದ್ದಲ್ಲ.

(5) ಚಲನಚಿತ್ರ ಪ್ರೊಜೆಕ್ಟರುಗಳಿಗೆ ದೃಢವಾದ ರಚನೆಯ ಎರಡು ಲೋಹದ ಫಿಲ್ಮಂ ಪೆಟ್ಟಿಗೆಗಳೊಂದಿಗೆ ಜೋಡಿಸತಕ್ಕದ್ದು, ಅದಕ್ಕೆ ಮತ್ತು ಅದರಿಂದ ಫಿಲ್ಮಂ ಹೋಗುವಂತೆ ಮತ್ತು ಬರುವಂತೆ ಮಾಡತಕ್ಕದ್ದು:

ಪರಂತು, ಡಿಜಿಟಲ್ ಪ್ರೊಜೆಕ್ಟರ್, ಡಿಜಿಟಲ್ ಶಬ್ದ ವ್ಯವಸ್ಥೆಯಂಥ ಮುಂದುವರೆದ ತಂತ್ರಜ್ಞಾನದಲ್ಲಿ ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್ ಇರುವ ಸಂದರ್ಭದಲ್ಲಿ, ಈ ಸಂಬಂಧ ಅಗತ್ಯ ಉಪಕರಣವನ್ನು ಬಳಸತಕ್ಕದ್ದು.

(6) ಫಿಲ್ಮು ಪೆಟ್ಟಿಗೆಗಳಿಗೆ, ಪೆಟ್ಟಿಗೆಯ ಒಳಕ್ಕೆ ಜ್ವಾಲೆ ಹೋಗುವುದನ್ನು ತಡೆಗಟ್ಟುವ ಹಾಗೆ ರಚಿಸಿದ ಫಿಲ್ಮ್ ಕಂಡಿಯೊಂದಿಗೆ ಜೋಡಿಸತಕ್ಕದ್ದು.

(7) ಫಿಲ್ಮುಗಳನ್ನು, ಚಲನಚಿತ್ರ ಸುರುಳಿಯ ಪಕ್ಕ ಪಟ್ಟಿಗಳ ಅಂಚುಗಳಾಚೆ ಸುತ್ತಿದ ಫಿಲ್ಮು ಯಾವುದೇ ಸಮಯದಲ್ಲಿ ಹೋಗದ ಅಥವಾ ಮುಂಚಾಚದ ರೀತಿಯಲ್ಲಿ ಅಂತಹ ಚಲನಚಿತ್ರ ಸುರಳಿಗಳ ಮೇಲೆ ಒಂದು ಸುತ್ತು ಸುತ್ತತಕ್ಕದ್ದು, ಫಿಲ್ಮುಗಳ ರಿವೈಂಡಿಂಗನ್ನು ರಿವೈಂಡಿಂಗ್ ರೂಮು ಅಥವಾ ಆವರಣದಲ್ಲಿ ಮಾತ್ರ ನಡೆಸತಕ್ಕದ್ದು:

ಪರಂತು, ಡಿಜಿಟಲ್ ಪ್ರೊಜೆಕ್ಟರ್, ಡಿಜಿಟಲ್ ಶಬ್ದ ವ್ಯವಸ್ಥೆಯಂಥ ಮುಂದುವರೆದ ತಂತ್ರಜ್ಞಾನದಲ್ಲಿ ಸಂದರ್ಭದಲ್ಲಿ, ರಿವೈಂಡಿಂಗ್ ರೂಮು ಕಡ್ಡಾಯವಾಗತಕ್ಕದ್ದಲ್ಲ.

(8) ಮುಚ್ಚಿದ ಲೋಹ ಪೆಟ್ಟಿಗೆಗಳನ್ನು ದಾಸ್ತಾನು ಮಾಡುವುದಕ್ಕಾಗಿ ತುಂಬದ ಪೆಟ್ಟಿಗೆಯನ್ನು ಒದಗಿಸತಕ್ಕದ್ದು, ಫಿಲ್ಮುಗಳನ್ನು ಪ್ರತ್ಯೇಕ ದಾಸ್ತಾನು ಕೊಠಡಿಯಲ್ಲಿ ದಾಸ್ತಾನು ಮಾಡತಕ್ಕದ್ದು ಮತ್ತು ಪ್ರೊಜೆಕ್ಷನ್ ಕೊಠಡಿಯಲ್ಲಿ ದಾಸ್ತಾನು ಮಾಡತಕ್ಕದ್ದಲ್ಲ.

(9) ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್‌ನಲ್ಲಿ ಜಮಖಾನೆಗಳನ್ನು ಹಾಸಿದ್ದರೆ, ಅವುಗಳು ಅಗ್ನಿ ನಿರೋಧಕ ಸಾಮಗ್ರಿಯದಾಗಿರತಕ್ಕದ್ದು ಮತ್ತು ಅವುಗಳ ಅಂಚುಗಳು ಸುತ್ತಿಕೊಳ್ಳದಂತೆ ಅಥವಾ ಮಡಚಿಕೊಳ್ಳದಂತೆ ನೆಲಕ್ಕೆ ಭದ್ರವಾಗಿ ಜೋಡಿಸತಕ್ಕದ್ದು. ಚಾಪೆಗಳನ್ನು ಉಪಯೋಗಿಸಿದರೆ, ಅವುಗಳು ಅಗ್ನಿ ನಿರೋಧಕ ಸಾಮಗ್ರಿಯದ್ದಾಗಿರತಕ್ಕದ್ದು ಮತ್ತು ಅವುಗಳನ್ನು ಚಾಪೆಯ ಗಾತ್ರವನ್ನು ಮೀರದ ಮತ್ತು ಚಾಪೆಯ ದಪ್ಪಕ್ಕಿಂತ ಆಳವಲ್ಲದ ತಗ್ಗಿನಲ್ಲಿ ನೆಲದೊಳಕ್ಕೆ ಬಿಡತಕ್ಕದ್ದು,

(10) ವಿದ್ಯುತ್ ಸ್ವಿಚ್ಚುಗಳನ್ನು ಟಿಕೆಟ್ ಬೂತುಗಳಲ್ಲಿ ಸ್ಥಾಪಿಸಿದ್ದರೆ, ಅವುಗಳನ್ನು ಸರಿಯಾಗಿ ಮುಚ್ಚುವುದರ ಮೂಲಕ ಸಾರ್ವಜನಿಕರಿಗೆ ನಿಲುಕದಂತೆ ಮಾಡತಕ್ಕದ್ದು.

**169. ಸ್ವಚ್ಛತೆಯ ನಿರ್ವಹಣೆ ಇತ್ಯಾದಿ.**- ಲೈಸೆನ್ಸ್‌ದಾರನು,-

(1) ಕಟ್ಟಡದಲ್ಲಿನ ಎಲ್ಲ ಕಿಟಕಿಗಳು ಮತ್ತು ವಾಯುಸಂಚಾರದ ಇತರ ಸಾಧನಗಳನ್ನು ಸುಸ್ಥಿತಿಯಲ್ಲಿಟ್ಟುಕೊಂಡಿರುವಂತೆ;

(2) ಅಂತಹ ಕಟ್ಟಡ ಅಥವಾ ಸ್ಥಳದ ಪ್ರತಿಯೊಂದು ಭಾಗವನ್ನು ಸರಿಯಾದ ನೈರ್ಮಲ್ಯ ಸ್ಥಿತಿಗಳಲ್ಲಿ ಇಟ್ಟುಕೊಂಡಿರುವಂತೆ;

(3) ಕಟ್ಟಡದ ಗೋಡೆಗಳಿಗೆ ಕನಿಷ್ಠ ಪಕ್ಷ ಪ್ರತಿ ಆರು ತಿಂಗಳಿಗೊಂದು ಸಲ ಸುಣ್ಣ ಬಳಿಸುವಂತೆ ಅಥವಾ ಪ್ರತಿ ಎರಡು ವರ್ಷಗಳಿಗೊಂದು ಸಲ ಬಣ್ಣ ಬಳಿಸುವಂತೆ ಅಥವಾ ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಅಥವಾ ಇತರ ಸಕ್ಷಮ ಪೌರ ಅಥವಾ ಆರೋಗ್ಯ ಪ್ರಾಧಿಕಾರಿಯು ಹಾಗೆ ಅಗತ್ಯಪಡಿಸಿದರೆ ಮೇಲಿಂದ ಮೇಲೆ ಬಣ್ಣ ಬಳಿಸುವಂತೆ;

(4) ಆವರಣವನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸುವಂತೆ ಮತ್ತು ಪ್ರತಿಯೊಂದು ಪ್ರದರ್ಶನದ ತರುವಾಯ ತೆಗೆದುಹಾಕಬೇಕಾದ ಎಲ್ಲ ಬೇಡದ ವಸ್ತುಗಳನ್ನು ಅಥವಾ ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಅಥವಾ ಇತರ ಸಕ್ಷಮ ಪೌರ ಅಥವಾ ಆರೋಗ್ಯ ಪ್ರಾಧಿಕಾರಿಯು ಹಾಗೆ ಅಗತ್ಯಪಡಿಸಿದರೆ ಮೇಲಿಂದ ಮೇಲೆ ಎಲ್ಲ ಅನಗತ್ಯ ವಸ್ತುಗಳನ್ನು ತೆಗೆದುಹಾಕುವಂತೆ; ಮತ್ತು

(5) ಫ್ಯಾನುಗಳು, ಗಾಜುಗಳು ಮತ್ತು ಷೇಡುಗಳು ಮುಂತಾದವುಗಳಂಥ ವಿದ್ಯುತ್ ಸಾಧನ ಸಾಮಗ್ರಿಗಳನ್ನು ನಿಯತ ಕಾಲಿಕವಾಗಿ ಸ್ವಚ್ಛಗೊಳಿಸುವಂತೆ ಮತ್ತು ಅಂದವಾದ ಸ್ಥಿತಿಯಲ್ಲಿಡುವಂತೆ

- ಮಾಡತಕ್ಕದ್ದು.

**170. ಧೂಮಪಾನ ನಿಷೇಧ.-** ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್ ಆವರಣದಲ್ಲಿ ಯಾರೇ ವ್ಯಕ್ತಿಯು ಧೂಮಪಾನ ಮಾಡತಕ್ಕದ್ದಲ್ಲ ಮತ್ತು ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್‌ನ ಯಾರೇ ಲೈಸೆನ್ಸ್‌ಧಾರಕನು ಅಥವಾ ಆತನ ನಾಮನಿರ್ದೇಶಿತ ವ್ಯವಸ್ಥಾಪಕ ಅಥವಾ ವ್ಯವಸ್ಥಾಪಕರು ಇಡೀ ಸಿನಿಮಾ ಥಿಯೇಟರಿನ ಆವರಣದಲ್ಲಿ ಧೂಮಪಾನ ನಿಷೇದಿಸಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

**171. ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ಕಾಪಾಡುವುದು.-** ಲೈಸೆನ್ಸ್‌ದಾರನು ಅಥವಾ ಆತನ ವ್ಯವಸ್ಥಾಪಕನು ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್ ಆವರಣಗಳಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ಕಾಪಾಡಿಕೊಂಡುಬರಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಆವರಣದಲ್ಲಿ ಉಗುಳುವುದು ಮತ್ತು ಇತರ ರೀತಿಗಳ ಮಾಲಿನ್ಯವನ್ನು ತಡೆಗಟ್ಟಲಾಗಿದೆಯೇ ಎಂಬುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

**172. ತಿರುಗು ವ್ಯಾಪಾರದ ನಿಷೇಧ.-** ಯಾರೇ ವ್ಯಕ್ತಿಯು ಆಟ ಅಥವಾ ಪ್ರದರ್ಶನ ಅಥವಾ ಆಟ ಅಥವಾ ಪ್ರದರ್ಶನದ ಮಧ್ಯಂತರ ಸಮಯದಲ್ಲಿ ಮತ್ತು ಯಾರೇ ಲೈಸೆನ್ಸ್‌ದಾರನು ಅಥವಾ ಆತನ ನಾಮನಿರ್ದೇಶಿತನು ಆಟ ಅಥವಾ ಪ್ರದರ್ಶನದ ಅವಧಿಯಲ್ಲಿ ಅಥವಾ ಪ್ರದರ್ಶನ (ಆಟ) ಅಥವಾ ಪ್ರದರ್ಶನದ ಮಧ್ಯಂತರ ಕಾಲದಲ್ಲಿ ಯಾರೇ ವ್ಯಕ್ತಿಗೆ,-

(1) ಸಭಾಂಗಣದಲ್ಲಿ ತಿರುಗಿಕೊಂಡು ವ್ಯಾಪಾರ ಮಾಡಲು; ಅಥವಾ

(2) ಸಭಾಂಗಣದಲ್ಲಿಯೇ ಪ್ರೇಕ್ಷಕ ವರ್ಗದ ಯಾರೇ ಸದಸ್ಯನಿಗೆ ಯಾವುದೇ ತಿಂಡಿ ತಿನಿಸು ಅಥವಾ ಪಾನೀಯಗಳನ್ನು ಮಾರಾಟ ಮಾಡಲು ಅಥವಾ ಸರಬರಾಜು ಮಾಡಲು; ಅಥವಾ

(3) ಸಭಾಂಗಣದಲ್ಲಿಯೇ ಪ್ರೇಕ್ಷಕ ವರ್ಗದ ಯಾರೇ ಸದಸ್ಯನಿಗೆ ಯಾವುದೇ ವಸ್ತುಗಳನ್ನು ಅಥವಾ ಪದಾರ್ಥವನ್ನು ಪ್ರತಿಫಲಕ್ಕಾಗಿಯೇ ಆಗಲಿ ಅಥವಾ ಅಗಿಲ್ಲದೆಯೇ ಆಗಲಿ ವಿತರಿಸಲು ಅಥವಾ ಮಾರಾಟ ಮಾಡಲು

- ಅವಕಾಶ ಕೊಡತಕ್ಕದ್ದಲ್ಲ.

**173. ಮಿತಿಮೀರಿದ ಜನಸಂದಣಿ ನಿಷೇಧ.-** ಯಾರೇ ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್‌ನ ಲೈಸೆನ್ಸ್‌ದಾರನು ಸಭಾಂಗಣದ ಯಾವುದೇ ಭಾಗಕ್ಕೆ ಅಂತಹ ಭಾಗದಲ್ಲಿ ಆ ಸ್ಥಳಾವಕಾಶ ಒದಗಿಸಲು ಲೈಸೆನ್ಸ್‌ನಲ್ಲಿ ಅಧಿಕೃತಗೊಳಿಸಿದ ಗರಿಷ್ಠ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯ ವ್ಯಕ್ತಿಗಳನ್ನು ಸೇರಿಸತಕ್ಕದ್ದಲ್ಲ. ಈ ಗರಿಷ್ಠತೆಯು ಮೀರಿಲ್ಲವೆಂಬುದನ್ನು ನಿಶ್ಚಿತಪಡಿಸಿಕೊಳ್ಳುವುದಕ್ಕಾಗಿ ಮತ್ತು ಇನ್ನೂ ವಿಶೇಷವಾಗಿ ಯಾವುದೇ ಸಮಯದಲ್ಲಿ ಸಕ್ಷಮ ಪ್ರಾಧಿಕಾರಿಯು ಪರಿಶೀಲಿಸಲು ಸಾಧ್ಯವಾಗುವಂತೆ ಲೈಸೆನ್ಸ್‌ದಾರನು ಪ್ರತಿಗಳು ಮತ್ತು ಪಕ್ಕ ಪ್ರತಿಗಳ ಮೇಲೆ ಕ್ರಮ ಸಂಖ್ಯೆಗಳು ಮತ್ತು ಪ್ರದರ್ಶನದ ದಿನಾಂಕ ಮತ್ತು ಸಂಖ್ಯೆಯನ್ನು ಹೊಂದಿರುವ ಟಿಕೇಟುಗಳನ್ನು ಕೊಡತಕ್ಕದ್ದು. ಪ್ರತಿಯೊಂದು ಪ್ರದರ್ಶನದ ತರುವಾಯ, ಟಿಕೆಟ್ ಪುಸ್ತಕಗಳಲ್ಲಿ ಕೊಟ್ಟ ಕೊನೆಯ ಪಕ್ಕ ಪ್ರತಿಯ ಮೇಲೆ 'ಮುಕ್ತಾಯವಾಗಿದೆ' ಎಂದು ಗುರುತು ಮಾಡತಕ್ಕದ್ದು.

**174. ಸಿನಿಮಾ ಥಿಯೇಟರು ಅಥವಾ ಮಲ್ಟಿಪ್ಲೆಕ್ಸ್‌ನ ಅಪರೇಟರುಗಳ ಕರ್ತವ್ಯ ಇತ್ಯಾದಿ.-** ಪ್ರೊಜೆಕ್ಟಿಂಗ್ ಸಲಕರಣೆ, ವಿದ್ಯುಚ್ಛಕ್ತಿ ಸ್ಥಾಪನೆಗಳು ಮತ್ತು ಸ್ಥಿರ ಯಂತ್ರ ಮತ್ತು ಎಂಜಿನ್ ಕೊಠಡಿಗಳು (ಯಾವುವಾದರೂ ಇದ್ದರೆ), ಅವುಗಳ ಪ್ರಭಾರದಲ್ಲಿರುವ ವ್ಯಕ್ತಿಗಳು ಪ್ರತಿಯೊಂದು ಪ್ರದರ್ಶನವು ಪ್ರಾರಂಭವಾಗುವುದಕ್ಕೆ ಮುಂಚೆ ಅವರ ಅನುಕ್ರಮ ಪ್ರಭಾರದಲ್ಲಿರುವ ಡಿಜಿಟಲ್

ವ್ಯವಸ್ಥೆಯಂಥ ಮುಂದುವರೆದ ತಂತ್ರಜ್ಞಾನವನ್ನು ಒಳಗೊಂಡು, ಸಲಕರಣೆಗಳು ಅಥವಾ ಸ್ಥಿರ ಯಂತ್ರವು ಕೆಲಸ ಮಾಡುವ ಸ್ಥಿತಿಯಲ್ಲಿದೆ ಎಂದು ಆತನು ಸ್ವತಃ ಮನದಟ್ಟು ಮಾಡಿಕೊಳ್ಳತಕ್ಕದ್ದು.

**175. ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡವನ್ನು ಯಾವುದೇ ಇತರೆ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ.-** ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್‌ನ ಕಟ್ಟಡವನ್ನು ಲೈಸೆನ್ಸ್ ನೀಡುವ ಪ್ರಾಧಿಕಾರಿಯ ಬರಹದಲ್ಲಿನ ಪೂರ್ವಾನುಮತಿಯ ಹೊರತು ಚಲನಚಿತ್ರ ಫಿಲ್ಮ್‌ಗಳ ಪ್ರದರ್ಶನಕ್ಕಾಗಿ ಅಲ್ಲದೆ ಯಾವುದೇ ಇತರ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ:

ಪರಂತು, ಸಿನಿಮಾ ಥಿಯೇಟರು ಮತ್ತು ಟಿಕೇಟು ನೀಡುವ ಕಿಂಡಿಗಳಿಗೆ ಲಗತ್ತಾದ ಪ್ರೊಜೆಕ್ಟರ್ ಕೊಠಡಿ, ಶೌಚಾಲಯಗಳು, ಪ್ರವೇಶದ್ವಾರ/ ಹೊರಗೆ ಹೋಗುವ ಮೊಗಸಾಲೆಗಳು/ ಕಾರಿಡಾರ್‌ಗಳು/ ಆಹಾರ ಅಂಗಡಿಗಳು/ ಕಾಫಿ ಅಂಗಡಿಗಳು/ ಉಪಾಹಾರ ಗೃಹಗಳಂಥ ಎಲ್ಲ ಪೂರಕ ಉಪಯೋಗಗಳಿಗಾಗಿನ ಪ್ರದೇಶಗಳನ್ನು ಒಳಗೊಂಡು ಸಿನಿಮಾ ಥಿಯೇಟರು ಮತ್ತು ಸಭಾಂಗಣದ ಉದ್ದೇಶಕ್ಕಾಗಿ ಬಳಸಿಕೊಳ್ಳಲಾದ ಖಾಯಂ ಕಟ್ಟಡದ ಭಾಗವಾಗಿರುವ ಮಲ್ಟಿಪ್ಲೆಕ್ಸ್‌ನ ಕಾಂಪ್ಲೆಕ್ಸ್‌ನ ಸಂದರ್ಭದಲ್ಲಿ, ಈ ನಿಯಮದ ಅನ್ವಯಕ್ಕಾಗಿ ಮಾತ್ರ ಪರಿಗಣಿಸತಕ್ಕದ್ದು.

**176. ಸ್ಲಾಟ್ ಯಂತ್ರದ ನಿಷೇಧ.-** ಯಾವುದೇ ಸ್ಲಾಟ್ ಅಥವಾ ಮನೋರಂಜನಾ ಯಂತ್ರವನ್ನು, ಲೈಸೆನ್ಸ್ ನೀಡುವ ಪ್ರಾಧಿಕಾರಿಯ ಲಿಖಿತದಲ್ಲಿ ಅನುಮತಿಯ ಹೊರತು ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್‌ನಲ್ಲಿ ನಡೆಸತಕ್ಕದ್ದಲ್ಲ. ಸ್ಥಳೀಯ ಪ್ರಾಧಿಕಾರದೊಂದಿಗೆ ಸಮಾಲೋಚಿಸಿದ ತರುವಾಯ ಅದನ್ನು ನಿರ್ಧರಿಸತಕ್ಕದ್ದು:

ಪರಂತು, ಸಿಹಿ ತಿಂಡಿಗಳು, ಕಾಫಿ, ಟೀ, ತಿಂಡಿಗಳಂಥ ವಸ್ತುಗಳ ಮಾರಾಟಕ್ಕಾಗಿ ಮತ್ತು ಮಾದಕವಲ್ಲದ ಪಾನೀಯಗಳನ್ನು ಮಾರುವ ಯಂತ್ರಗಳಿಗಾಗಿ ಅಥವಾ ತೂಕದ ದಾಖಲಾತಿಗಾಗಿ ಅಥವಾ ಟಿಕೇಟುಗಳನ್ನು ಕೊಡುವುದಕ್ಕಾಗಿ ಅಂತಹ ಅನುಮತಿಯನ್ನು ಅಗತ್ಯಪಡಿಸತಕ್ಕದ್ದಲ್ಲ.

## ಅಧ್ಯಾಯ – XVI

## ಅರೆ ಖಾಯಂ ಸಿನಿಮಾಗಳ ಸಂಬಂಧದಲ್ಲಿ ಲೈಸೆನ್ಸುಗಳ ಮರುಮಂಜೂರಾತಿ

**177. ಮರು ಮಂಜೂರಾತಿಗಾಗಿ ಅರ್ಜಿ.-** (1) (i) ಅರೆ ಖಾಯಂ ಸಿನಿಮಾಗೆ ಲೈಸೆನ್ಸಿನ ಮರುಮಂಜೂರಾತಿಗಾಗಿ ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ಆ ಲೈಸೆನ್ಸ್ ಮುಕ್ತಾಯವಾಗುವುದಕ್ಕೆ ಒಂದು ತಿಂಗಳು ಮುಂಚಿತವಾಗಿ ಪ್ರತಿಯೊಂದು ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು ಅಂತಹ ಅರ್ಜಿಯು,-

(i) 139ನೇ ನಿಯಮದ ಖಂಡ (ಎ), (ಬಿ)(i), ಬಿ(ii) ಮತ್ತು ಬಿ(iii)ರಲ್ಲಿ ಉಲ್ಲೇಖಿಸಿದ ಪ್ರಮಾಣಪತ್ರಗಳು ಮತ್ತು ಖಂಡ (ಸಿ)ದಲ್ಲಿ ಉಲ್ಲೇಖಿಸಿದ ಘೋಷಣೆ;

(ii) 179ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ದರಗಳಲ್ಲಿ ಫೀಜುಗಳ ಸಂದಾಯವನ್ನು ಸ್ಪಷ್ಟೀಕರಿಸುವುದಕ್ಕಾಗಿ ಖಜಾನೆ ಚಲನ್;

(iii) ರಾಜ್ಯ ಸರ್ಕಾರದಿಂದ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರದಿಂದ ಗುತ್ತಿಗೆ ಆಧಾರದ ಮೇಲೆ ಅಂತಹ ಭೂಮಿಯನ್ನು ಪಡೆದಿರುವ ಸಂದರ್ಭದಲ್ಲಿ ಸಿನಿಮಾ ಕಟ್ಟಡಕ್ಕೆ ಸಂಬಂಧಪಟ್ಟಂತೆ ಮತ್ತು ಸಿನಿಮಾ ಕಟ್ಟಡವು ಇರುವ ಸಂಬಂಧದಲ್ಲಿ ಬಾಡಿಗೆಯು ಆ ದಿನಾಂಕದವರೆಗೆ ಸಂದಾಯವಾಗಿರುವುದಕ್ಕೆ ಸಕ್ಷಮ ಪ್ರಾಧಿಕಾರವು ನೀಡಿದ ಪ್ರಮಾಣಪತ್ರ.

- ಇವುಗಳೊಂದಿಗೆ ಲಗತ್ತಾಗಿರತಕ್ಕದ್ದು.

(2) (1)ನೇ ಉಪ-ನಿಯಮದ ಮೇರೆಗೆ ಅರ್ಜಿಯ ಪ್ರತಿಯನ್ನು, ವಿದ್ಯುಚ್ಛಕ್ತಿ ಸ್ಥಾಪನೆಗಳಿಗಾಗಿ ಅರ್ಹತಾ ಪ್ರಮಾಣಪತ್ರವನ್ನು ನೀಡುವುದಕ್ಕಾಗಿ ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಿದ ಫೀಜುಗಳು, ಫೀಜಿನ ಸಂದಾಯದ ಖಜಾನೆ ಚಲನ್‌ನೊಂದಿಗೆ ಲಗತ್ತು ಮಾಡಿ ವಿದ್ಯುಚ್ಛಕ್ತಿ ಪರಿಶೀಲಕನಿಗೆ ಕಳುಹಿಸತಕ್ಕದ್ದು. ವಿದ್ಯುಚ್ಛಕ್ತಿ ಪರಿಶೀಲಕನು, ವಿದ್ಯುಚ್ಛಕ್ತಿ ಸ್ಥಾಪನೆಗಳು ಈ ನಿಯಮಗಳ ಅಗತ್ಯತೆಗಳನ್ನು ಪೂರೈಸಿವೆಯೇ ಎಂದು ಪರಿಶೀಲಿಸತಕ್ಕದ್ದು ಮತ್ತು ಲೈಸೆನ್ಸು ನೀಡುವ ಪ್ರಾಧಿಕಾರಿಗೆ ವರದಿ ಮಾಡತಕ್ಕದ್ದು. ವಿದ್ಯುಚ್ಛಕ್ತಿ ಸ್ಥಾಪನೆಗಳು ಈ ನಿಯಮಗಳ ಅಗತ್ಯತೆಗಳನ್ನು ಪೂರೈಸಿವೆಯೆಂದು ವಿದ್ಯುಚ್ಛಕ್ತಿ ಪರಿಶೀಲಕನಿಗೆ ಮನದಟ್ಟಾದರೆ, ಆತನು ಅರ್ಜಿಯನ್ನು ಸ್ವೀಕರಿಸಿದ ನಂತರ ಹದಿನೈದು ದಿನಗಳೊಳಗೆ ಪ್ರಮಾಣಪತ್ರವನ್ನು ನೀಡತಕ್ಕದ್ದು. ಆದಾಗ್ಯೂ, ಅದರಲ್ಲಿ ಯಾವುದೇ ನ್ಯೂನತೆ ಇರುವುದು ವಿದ್ಯುಚ್ಛಕ್ತಿ ಪರಿಶೀಲಕನಿಗೆ ಕಂಡುಬಂದರೆ, ಆತನು ಲೈಸೆನ್ಸು ನೀಡುವ ಪ್ರಾಧಿಕಾರಿಗೆ ಆ ಬಗ್ಗೆ ಲಿಖಿತದಲ್ಲಿ ವರದಿಯನ್ನು ಮಾಡತಕ್ಕದ್ದು. ತದನಂತರ ಕೂಡಲೇ ಅವುಗಳ ಸರಿಪಡಿಸುವಿಕೆಗಾಗಿ ಮಾಲೀಕನಿಗೆ ನೋಟೀಸನ್ನು ಲಿಖಿತದಲ್ಲಿ ನೀಡತಕ್ಕದ್ದು ಮತ್ತು ಅಂತಹ ಸರಿಪಡಿಸುವಿಕೆಯನ್ನು ಸೂಕ್ತ ಕಾಲದೊಳಗೆ ಮಾಡಬೇಕೆಂದು ನಿರ್ದಿಷ್ಟಪಡಿಸತಕ್ಕದ್ದು. ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಂತಹ ನೋಟೀಸಿನ ನಿಬಂಧನೆಗಳನ್ನು ಪಾಲಿಸಲು ಲೈಸೆನ್ಸುದಾರನು ತಪ್ಪಿದ ತರುವಾಯ, ಲೈಸೆನ್ಸು ನೀಡುವ ಪ್ರಾಧಿಕಾರಿಯು, ಇರುವ ಲೈಸೆನ್ಸನ್ನು ತಡೆಹಿಡಿಯತಕ್ಕದ್ದು ಅಥವಾ ರದ್ದುಗೊಳಿಸತಕ್ಕದ್ದು ಅಥವಾ ಅಂತಹ ಸರಿಪಡಿಸುವಿಕೆಗಳನ್ನು ಲೈಸೆನ್ಸುದಾರನು ಮಾಡುವವರೆಗೆ ಸಂದರ್ಭಾನುಸಾರ ಲೈಸೆನ್ಸನ್ನು ಮರುಮಂಜೂರಾತಿ ಮಾಡತಕ್ಕದ್ದಲ್ಲ;

ಪರಂತು, ಯಾವುದೇ ಅರೆಖಾಯಂ ಸಿನಿಮಾ ಥಿಯೇಟರ್‌ನ ಸಂದರ್ಭದಲ್ಲಿ, ಈ ನಿಯಮಗಳ ಅಗತ್ಯತೆಗಳನ್ನು ಪೂರೈಸದಿದ್ದರೆ, ವಿದ್ಯುಚ್ಛಕ್ತಿ ಪರಿಶೀಲಕನು, ಐದು ವರ್ಷಗಳ ಅವಧಿಯವರೆಗೆ ಪ್ರಮಾಣಪತ್ರವನ್ನು ನೀಡುವ ಅರ್ಜಿಯನ್ನು ತಿರಸ್ಕರಿಸಬಹುದು ಅಥವಾ ಲಿಖಿತದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಪ್ರಮಾಣಪತ್ರದ ಅವಧಿಯನ್ನು ಕಡಿಮೆಮಾಡಬಹುದು ಮತ್ತು ಅರ್ಜಿದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟ ತರುವಾಯ ಮತ್ತು ಆ ಕಾರಣಗಳನ್ನು ಲೈಸೆನ್ಸು ನೀಡುವ ಪ್ರಾಧಿಕಾರಿಗೆ ಸ್ಪಷ್ಟವಾಗಿ ತಿಳಿಸತಕ್ಕದ್ದು.

(3) (1)ನೇ ಉಪ-ನಿಯಮದ ಮೇರೆಗೆ ಅರ್ಜಿಯ ಒಂದು ಪ್ರತಿಯನ್ನು, ಪ್ರಮಾಣಪತ್ರವನ್ನು ನೀಡುವುದಕ್ಕಾಗಿ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಿದ ಫೀಜುಗಳು, ಫೀಜಿನ ಸಂದಾಯದ ಖಜಾನೆ ಚಲನ್‌ನೊಂದಿಗೆ ಲಗತ್ತು ಮಾಡಿ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರಿಗೆ ಕಳುಹಿಸತಕ್ಕದ್ದು. ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು, ಅರೆಖಾಯಂ ಸಿನಿಮಾ ಕಟ್ಟಡವು, ಈ ನಿಯಮಗಳ ಅಗತ್ಯತೆಗಳನ್ನು ಪೂರೈಸಿವೆಯೇ ಎಂದು ಪರಿಶೀಲಿಸತಕ್ಕದ್ದು ಮತ್ತು ಲೈಸೆನ್ಸು ನೀಡುವ ಪ್ರಾಧಿಕಾರಿಗೆ ವರದಿ ಮಾಡತಕ್ಕದ್ದು. ಅರೆ ಖಾಯಂ ಸಿನಿಮಾ ಕಟ್ಟಡವು ಈ ನಿಯಮಗಳ ಅಗತ್ಯತೆಗಳನ್ನು ಪೂರೈಸಿವೆಯೆಂದು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರಿಗೆ ಮನದಟ್ಟಾದರೆ, ಆತನು ಅರ್ಜಿಯನ್ನು ಸ್ವೀಕರಿಸಿದ ನಂತರ ಹದಿನೈದು ದಿನಗಳೊಳಗೆ ಪ್ರಮಾಣಪತ್ರವನ್ನು ನೀಡತಕ್ಕದ್ದು. ಆದಾಗ್ಯೂ, ಅದರಲ್ಲಿ ಯಾವುದೇ ನ್ಯೂನತೆ ಇರುವುದು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರಿಗೆ ಕಂಡುಬಂದರೆ, ಆತನು ಲೈಸೆನ್ಸು ನೀಡುವ ಪ್ರಾಧಿಕಾರಿಗೆ ಆ ಬಗ್ಗೆ ಲಿಖಿತದಲ್ಲಿ ವರದಿಯನ್ನು ನೀಡತಕ್ಕದ್ದು, ತದನಂತರ ಕೂಡಲೇ ಅವುಗಳ ಸರಿಪಡಿಸುವಿಕೆಗಾಗಿ ಮಾಲೀಕನಿಗೆ ನೋಟೀಸನ್ನು ಲಿಖಿತದಲ್ಲಿ ನೀಡತಕ್ಕದ್ದು ಮತ್ತು ಅಂತಹ ಸರಿಪಡಿಸುವಿಕೆಯನ್ನು ಸೂಕ್ತ ಕಾಲದೊಳಗೆ ಮಾಡಬೇಕೆಂದು ನಿರ್ದಿಷ್ಟಪಡಿಸತಕ್ಕದ್ದು. ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಂತಹ ನೋಟೀಸಿನ ನಿಬಂಧನೆಗಳನ್ನು ಪಾಲಿಸಲು ಲೈಸೆನ್ಸುದಾರನು ತಪ್ಪಿದ ತರುವಾಯ, ಲೈಸೆನ್ಸು ನೀಡುವ ಪ್ರಾಧಿಕಾರಿಯು, ಇರುವ ಲೈಸೆನ್ಸನ್ನು ತಡೆಹಿಡಿಯತಕ್ಕದ್ದು ಅಥವಾ ರದ್ದುಗೊಳಿಸತಕ್ಕದ್ದು ಅಥವಾ ಅಂತಹ ಸರಿಪಡಿಸುವಿಕೆಗಳನ್ನು ಲೈಸೆನ್ಸುದಾರನು ಮಾಡುವವರೆಗೆ ಸಂದರ್ಭಾನುಸಾರ ಲೈಸೆನ್ಸನ್ನು ಮರುಮಂಜೂರಾತಿ ಮಾಡತಕ್ಕದ್ದಲ್ಲ;

ಪರಂತು, ಯಾವುದೇ ಅರೆ ಖಾಯಂ ಸಿನಿಮಾ ಥಿಯೇಟರ್ನ ಸಂದರ್ಭದಲ್ಲಿ, ಈ ನಿಯಮಗಳ ಅಗತ್ಯತೆಗಳನ್ನು ಪೂರೈಸದಿದ್ದರೆ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು, ಐದು ವರ್ಷಗಳ ಅವಧಿಯವರೆಗೆ ಪ್ರಮಾಣಪತ್ರವನ್ನು ನೀಡುವ ಅರ್ಜಿಯನ್ನು ತಿರಸ್ಕರಿಸಬಹುದು ಅಥವಾ ಲಿಖಿತದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಪ್ರಮಾಣಪತ್ರದ ಅವಧಿಯನ್ನು ಕಡಿಮೆ ಮಾಡಬಹುದು ಮತ್ತು ಅರ್ಜಿದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟ ತರುವಾಯ ಆ ಕಾರಣಗಳನ್ನು ಲೈಸೆನ್ಸು ನೀಡುವ ಪ್ರಾಧಿಕಾರಿಗೆ ಸ್ಪಷ್ಟವಾಗಿ ತಿಳಿಸತಕ್ಕದ್ದು.

(4) (1)ನೇ ಉಪ-ನಿಯಮದ ಮೇರೆಗೆ ಅರ್ಜಿಯ ಒಂದು ಪ್ರತಿಯನ್ನು, ಪ್ರಮಾಣಪತ್ರವನ್ನು ನೀಡುವುದಕ್ಕಾಗಿ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಿದ ಫೀಜುಗಳು, ಫೀಜಿನ ಸಂದಾಯದ ಖಜಾನೆ ಚಲನ್‌ನೊಂದಿಗೆ ಲಗತ್ತು ಮಾಡಿ ಜಿಲ್ಲಾ ಆರೋಗ್ಯಾಧಿಕಾರಿಗೆ ಕಳುಹಿಸತಕ್ಕದ್ದು. ಜಿಲ್ಲಾ ಆರೋಗ್ಯಾಧಿಕಾರಿಯು, ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡ ಮತ್ತು ಆವರಣಗಳು, ಈ ನಿಯಮಗಳ ಅಗತ್ಯತೆಗಳನ್ನು ಪೂರೈಸಿವೆಯೇ ಎಂದು ಪರಿಶೀಲಿಸತಕ್ಕದ್ದು ಮತ್ತು ಲೈಸೆನ್ಸು ನೀಡುವ ಪ್ರಾಧಿಕಾರಿಗೆ ವರದಿ ಮಾಡತಕ್ಕದ್ದು. ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡ ಮತ್ತು ಆವರಣಗಳು ಈ ನಿಯಮಗಳ ಅಗತ್ಯತೆಗಳನ್ನು ಪೂರೈಸಿವೆಯೆಂದು ಜಿಲ್ಲಾ ಆರೋಗ್ಯಾಧಿಕಾರಿಗೆ ಮನದಟ್ಟಾದರೆ, ಆತನು ಅರ್ಜಿಯನ್ನು ಸ್ವೀಕರಿಸಿದ ನಂತರ ಹದಿನೈದು ದಿನಗಳೊಳಗೆ ಪ್ರಮಾಣಪತ್ರವನ್ನು ನೀಡತಕ್ಕದ್ದು. ಆದಾಗ್ಯೂ, ಅದರಲ್ಲಿ ಯಾವುದೇ ನ್ಯೂನತೆ ಇರುವುದು ಜಿಲ್ಲಾ ಆರೋಗ್ಯಾಧಿಕಾರಿಗೆ ಕಂಡುಬಂದರೆ, ಆತನು ಲೈಸೆನ್ಸು ನೀಡುವ ಪ್ರಾಧಿಕಾರಿಗೆ ಆ ಬಗ್ಗೆ ಲಿಖಿತದಲ್ಲಿ ವರದಿಯನ್ನು ಮಾಡತಕ್ಕದ್ದು. ತದನಂತರ ಕೂಡಲೇ ಅವುಗಳ ಸರಿಪಡಿಸುವಿಕೆಗಾಗಿ ಮಾಲೀಕನಿಗೆ ನೋಟೀಸನ್ನು ಲಿಖಿತದಲ್ಲಿ ಕೊಡತಕ್ಕದ್ದು ಮತ್ತು ಅಂತಹ ಸರಿಪಡಿಸುವಿಕೆಯನ್ನು ಸೂಕ್ತ ಕಾಲದೊಳಗೆ ಮಾಡಬೇಕೆಂದು ನಿರ್ದಿಷ್ಟಪಡಿಸತಕ್ಕದ್ದು. ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಂತಹ ನೋಟೀಸಿನ ನಿಬಂಧನೆಗಳನ್ನು ಪಾಲಿಸಲು ಲೈಸೆನ್ಸುದಾರನು ತಪ್ಪಿದ ತರುವಾಯ, ಲೈಸೆನ್ಸು ನೀಡುವ ಪ್ರಾಧಿಕಾರಿಯು, ಇರುವ ಲೈಸೆನ್ಸನ್ನು ತಡೆಹಿಡಿಯತಕ್ಕದ್ದು ಅಥವಾ ರದ್ದುಗೊಳಿಸತಕ್ಕದ್ದು ಅಥವಾ ಅಂತಹ ಸರಿಪಡಿಸುವಿಕೆಗಳನ್ನು ಲೈಸೆನ್ಸುದಾರನು ಮಾಡುವವರೆಗೆ ಸಂದರ್ಭಾನುಸಾರ ಲೈಸೆನ್ಸನ್ನು ಮರುಮಂಜೂರಾತಿ ಮಾಡತಕ್ಕದ್ದಲ್ಲ;

ಪರಂತು, ಯಾವುದೇ ಸಿನಿಮಾ ಅಥವಾ ಮಲ್ಟಿಪ್ಲೆಕ್ಸ್ ಕಟ್ಟಡ ಮತ್ತು ಆವರಣಗಳ ಸಂದರ್ಭದಲ್ಲಿ, ಈ ನಿಯಮಗಳ ಅಗತ್ಯತೆಗಳನ್ನು ಪೂರೈಸದಿದ್ದರೆ, ಜಿಲ್ಲಾ ಆರೋಗ್ಯಾಧಿಕಾರಿಯು, ಐದು ವರ್ಷಗಳ ಅವಧಿಯವರೆಗೆ ಪ್ರಮಾಣಪತ್ರವನ್ನು ನೀಡುವ ಅರ್ಜಿಯನ್ನು ತಿರಸ್ಕರಿಸಬಹುದು ಅಥವಾ ಲಿಖಿತದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಪ್ರಮಾಣಪತ್ರದ ಅವಧಿಯನ್ನು ಕಡಿಮೆಮಾಡಬಹುದು ಮತ್ತು ಅರ್ಜಿದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟ ತರುವಾಯ ಆ ಕಾರಣಗಳನ್ನು ಲೈಸೆನ್ಸು ನೀಡುವ ಪ್ರಾಧಿಕಾರಿಗೆ ಸ್ಪಷ್ಟವಾಗಿ ತಿಳಿಸತಕ್ಕದ್ದು.

(5) (1)ನೇ ಉಪ-ನಿಯಮದ ಮೇರೆಗೆ ಅರ್ಜಿಯ ಪ್ರತಿಯನ್ನು, ಪ್ರಮಾಣಪತ್ರವನ್ನು ನೀಡುವುದಕ್ಕಾಗಿ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಿದ ಫೀಜುಗಳು, ಫೀಜಿನ ಸಂದಾಯದ ಖಜಾನೆ ಚಲನ್‌ನೊಂದಿಗೆ ಲಗತ್ತು ಮಾಡಿ ಜಿಲ್ಲಾ ಅಗ್ನಿಶಾಮಕ ಅಧಿಕಾರಿಗೆ ಕಳುಹಿಸತಕ್ಕದ್ದು. ಜಿಲ್ಲಾ ಅಗ್ನಿಶಾಮಕ ಅಧಿಕಾರಿಯು ಮತ್ತು ತುರ್ತು ಸೇವೆಗಳ ಅಗ್ನಿಶಾಮಕ ಅಧಿಕಾರಿ, ಅರೆಖಾಯಂ ಸಿನಿಮಾ ಕಟ್ಟಡ, ಅಗ್ನಿಶಾಮಕ ಸಾಮಗ್ರಿಗಳು ಮತ್ತು ಉಪಕರಣಗಳು, ಈ ನಿಯಮಗಳ ಅಗತ್ಯತೆಗಳನ್ನು ಪೂರೈಸಿವೆಯೇ ಎಂದು ಪರಿಶೀಲಿಸತಕ್ಕದ್ದು ಮತ್ತು ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ವರದಿ ಮಾಡತಕ್ಕದ್ದು. ಅರೆ ಖಾಯಂ ಸಿನಿಮಾ ಕಟ್ಟಡ, ಅಗ್ನಿಶಾಮಕ ಸಾಮಗ್ರಿಗಳು ಮತ್ತು ಉಪಕರಣಗಳು ಈ ನಿಯಮಗಳ ಅಗತ್ಯತೆಗಳನ್ನು ಪೂರೈಸಿವೆಯೆಂದು ಜಿಲ್ಲಾ ಅಗ್ನಿಶಾಮಕ ಅಧಿಕಾರಿಗೆ ಮನದಟ್ಟಾದರೆ, ಆತನು ಅರ್ಜಿಯನ್ನು ಸ್ವೀಕರಿಸಿದ ನಂತರ ಹದಿನೈದು ದಿನಗಳೊಳಗೆ ಪ್ರಮಾಣಪತ್ರವನ್ನು ನೀಡತಕ್ಕದ್ದು. ಆದಾಗ್ಯೂ, ಅದರಲ್ಲಿ ಯಾವುದೇ ನ್ಯೂನತೆ ಇರುವುದು ಜಿಲ್ಲಾ ಅಗ್ನಿಶಾಮಕ ಅಧಿಕಾರಿಗೆ ಕಂಡುಬಂದರೆ, ಆತನು ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ಆ ಬಗ್ಗೆ ಲಿಖಿತದಲ್ಲಿ ವರದಿಯನ್ನು ಮಾಡತಕ್ಕದ್ದು. ತದನಂತರ ಕೂಡಲೇ ಅವುಗಳ ಸರಿಪಡಿಸುವಿಕೆಗಾಗಿ ಮಾಲೀಕನಿಗೆ

ನೋಟೀಸನ್ನು ಲಿಖಿತದಲ್ಲಿ ಕೊಡತಕ್ಕದ್ದು ಮತ್ತು ಅಂತಹ ಸರಿಪಡಿಸುವಿಕೆಯನ್ನು ಸೂಕ್ತ ಕಾಲದೊಳಗೆ ಮಾಡಬೇಕೆಂದು ನಿರ್ದಿಷ್ಟಪಡಿಸತಕ್ಕದ್ದು. ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಂತಹ ನೋಟೀಸಿನ ನಿಬಂಧನೆಗಳನ್ನು ಪಾಲಿಸಲು ಲೈಸೆನ್ಸುದಾರನು ತಪ್ಪಿದ ತರುವಾಯ, ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಇರುವ ಲೈಸೆನ್ಸನ್ನು ತಡೆಹಿಡಿಯತಕ್ಕದ್ದು ಅಥವಾ ರದ್ದುಗೊಳಿಸತಕ್ಕದ್ದು ಅಥವಾ ಅಂತಹ ಸರಿಪಡಿಸುವಿಕೆಗಳನ್ನು ಲೈಸೆನ್ಸುದಾರನು ಮಾಡುವವರೆಗೆ ಸಂದರ್ಭಾನುಸಾರ ಲೈಸೆನ್ಸನ್ನು ಮರುಮಂಜೂರಾತಿ ಮಾಡತಕ್ಕದ್ದಲ್ಲ;

ಪರಂತು, ಯಾವುದೇ ಅರೆ ಖಾಯಂ ಸಿನಿಮಾ ಕಟ್ಟಡ, ಅಗ್ನಿಶಾಮಕ ಸಾಮಗ್ರಿಗಳು ಮತ್ತು ಉಪಕರಣಗಳ ಸಂದರ್ಭದಲ್ಲಿ, ಈ ನಿಯಮಗಳ ಅಗತ್ಯತೆಗಳನ್ನು ಪೂರೈಸದಿದ್ದರೆ, ಜಿಲ್ಲಾ ಅಗ್ನಿಶಾಮಕ ಅಧಿಕಾರಿಯು, ಐದು ವರ್ಷಗಳ ಅವಧಿಯವರೆಗೆ ಪ್ರಮಾಣಪತ್ರವನ್ನು ನೀಡುವ ಅರ್ಜಿಯನ್ನು ತಿರಸ್ಕರಿಸಬಹುದು ಅಥವಾ ಲಿಖಿತದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಪ್ರಮಾಣಪತ್ರದ ಅವಧಿಯನ್ನು ಕಡಿಮೆಮಾಡಬಹುದು ಮತ್ತು ಅರ್ಜಿದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟ ತರುವಾಯ ಆ ಕಾರಣಗಳನ್ನು ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ಸ್ಪಷ್ಟವಾಗಿ ತಿಳಿಸತಕ್ಕದ್ದು.

(6) (2)ನೇ ಉಪ ನಿಯಮದ ಮೇರೆಗೆ ವಿದ್ಯುಚ್ಛಕ್ತಿ ಪರಿಶೀಲಕನ ಪ್ರಮಾಣಪತ್ರ, (3)ನೇ ಉಪ-ನಿಯಮದ ಮೇರೆಗೆ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರ ಪ್ರಮಾಣಪತ್ರ, (4)ನೇ ಉಪ-ನಿಯಮದ ಮೇರೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯ ಪ್ರಮಾಣಪತ್ರ, (5)ನೇ ಉಪ-ನಿಯಮದ ಮೇರೆಗೆ ಅಗ್ನಿಶಾಮಕ ಅಧಿಕಾರಿಯ ಪ್ರಮಾಣಪತ್ರವನ್ನು ಸ್ವೀಕರಿಸಿದ ತರುವಾಯ, ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಎಲ್ಲ ನಿಯಮಗಳನ್ನು ಅನುಪಾಲಿಸಲಾಗಿದೆಯೇ ಎಂಬುದನ್ನು ಪರಿಶೀಲಿಸತಕ್ಕದ್ದು ಮತ್ತು ಅದನ್ನು ತಾನು ಮನದಟ್ಟುಮಾಡಿಕೊಳ್ಳತಕ್ಕದ್ದು ಹಾಗೂ ಐದು ವರ್ಷಗಳ ಅವಧಿಯವರೆಗೆ ಸಿಂಧುತ್ವ ಲೈಸೆನ್ಸನ್ನು ನೀಡತಕ್ಕದ್ದು ಅಥವಾ ಲಿಖಿತದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಆ ಅವಧಿಯನ್ನು ಕಡಿಮೆ ಮಾಡತಕ್ಕದ್ದು.

**178. ತಾತ್ಕಾಲಿಕ ಪರವಾನಗಿ,-** (1) 177ನೇ ನಿಯಮದ ಮೇರೆಗೆ ಸಲ್ಲಿಸಿದ ಪರ್ಮಿಟ್ಟಿನ ಮರುಮಂಜೂರಾತಿಗಾಗಿನ ಅರ್ಜಿಯಲ್ಲಿ, ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಲೈಸೆನ್ಸ್ ಮುಕ್ತಾಯವಾಗುವ ದಿನಾಂಕಕ್ಕೆ ಮುಂಚಿತವಾಗಿ ಲೈಸೆನ್ಸಿನ ಮರುಮಂಜೂರಾತಿಗಾಗಲಿ ಅಥವಾ ಅದರ ಮರುಮಂಜೂರಾತಿಯ ನಿರಾಕರಣೆಗಾಗಲಿ ಯಾವುದೇ ಕಾರಣವನ್ನು ನೀಡದಿದ್ದರೆ, ಆತನು, 'ಜಿ' ನಮೂನೆಯಲ್ಲಿ ತಾತ್ಕಾಲಿಕ ಪರ್ಮಿಟ್ಟನ್ನು ನೀಡತಕ್ಕದ್ದು, ಪರಂತು, ವಿದ್ಯುಚ್ಛಕ್ತಿ ಪರಿಶೀಲಕನ ಪ್ರಮಾಣಪತ್ರವು ಉಳಿಕೆ ಸಿಂಧುತ್ವಕ್ಕೆ ಮುಂದುವರಿಯತಕ್ಕದ್ದು.

(2) ಅಂತಹ ತಾತ್ಕಾಲಿಕ ಪರವಾನಗಿ, ನವೀಕರಣ ಮಾಡಲು ಕೋರಿದ ಲೈಸೆನ್ಸಿನ ಷರತ್ತುಗಳಿಗೊಳಪಟ್ಟಿರತಕ್ಕದ್ದು ಮತ್ತು ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಅರ್ಜಿಯನ್ನು ವಿಲೆ ಮಾಡುವವರೆಗೆ ಅದು ಸಿಂಧುವಾಗಿರತಕ್ಕದ್ದು.

ಪರಂತು, ತಾತ್ಕಾಲಿಕ ಪರವಾನಗಿ, ಸಿಂಧುತ್ವವಾಗಿರುವುದು ನಿಂತುಹೋಗತಕ್ಕದ್ದು ಮತ್ತು ಲೈಸೆನ್ಸ್‌ನ್ನು ಯುಕ್ತವಾಗಿ ಮರುಮಂಜೂರಾತಿ ಮಾಡಿರುವುದನ್ನು ಅರ್ಜಿದಾರನು ಸ್ವೀಕರಿಸಿದ ತರುವಾಯ ಅಥವಾ ಪರ್ಮಿಟ್ಟಿನ ಮರುಮಂಜೂರಾತಿಗೆ ನಿರಾಕರಣೆಯ ಆದೇಶವನ್ನು ಆತನು ಸ್ವೀಕರಿಸಿದ ತರುವಾಯ ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ತಾತ್ಕಾಲಿಕ ಪರವಾನಗಿಯನ್ನು ಒಪ್ಪಿಸತಕ್ಕದ್ದು.

ಮತ್ತೂ ಪರಂತು, ಈ ಸಂಬಂಧದಲ್ಲಿ ಯಾವುದೇ ಕಾಲದಲ್ಲಿ ಮಾಡಲಾದ ತಗಾದೆಯ ಮೇಲೆ ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ತಾತ್ಕಾಲಿಕ ಪರವಾನಗಿಯನ್ನು ಒಪ್ಪಿಸತಕ್ಕದ್ದು.

(3) ತಾತ್ಕಾಲಿಕ ಪರವಾನಗಿಯ ಮಂಜೂರಾತಿಗಾಗಿ ಫೀಜುಗಳನ್ನು ವಿಧಿಸತಕ್ಕದ್ದಲ್ಲ.

(4) ತಾತ್ಕಾಲಿಕ ಪರವಾನಗಿ ಮೂವತ್ತು ದಿನಗಳ ಅದರ ಸಿಂಧುತ್ವದ ಅವಧಿಯಲ್ಲಿ, ಈ ನಿಯಮಗಳ ಉದ್ದೇಶಗಳಿಗಾಗಿ ಲೈಸೆನ್ಸು ಎಂಬುದಾಗಿ ಭಾವಿಸತಕ್ಕದ್ದು.

**179. ಲೈಸೆನ್ಸಿನ ಮರುಮಂಜೂರಾತಿಗಾಗಿ ಫೀಜುಗಳು,-** ಪ್ರತಿಯೊಂದು ಲೈಸೆನ್ಸಿನ ಮರುಮಂಜೂರಾತಿಗಾಗಿ ಫೀಜಿನ ದರವು ಕಾಲಕಾಲಕ್ಕೆ ಸರ್ಕಾರವು ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು.

**180. ವಿದ್ಯುತ್ ಸ್ಥಾಪನೆಯ ತರುವಾಯದ ಸೇರ್ಪಡೆಗಳು ಮತ್ತು ಮಾರ್ಪಾಟುಗಳ ಅನುಮೋದನೆಗಾಗಿ ಕಾರ್ಯವಿಧಾನ,-** (1) ಲೈಸೆನ್ಸ್‌ದಾರನು, ವಿದ್ಯುತ್ ಸ್ಥಾಪನೆಗಳು ಅಥವಾ ಸಲಕರಣೆಗಳ ಸೇರ್ಪಡೆಗಳು ಅಥವಾ ಮಾರ್ಪಾಟುಗಳನ್ನು ಮಾಡಲು ಆತನ ಉದ್ದೇಶವನ್ನು ಲಿಖಿತದಲ್ಲಿ ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ಅಧಿಸೂಚಿಸತಕ್ಕದ್ದು. ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಜಿಲ್ಲಾ ಅಥವಾ ಆ ಪ್ರದೇಶದ ವಿದ್ಯುಚ್ಛಕ್ತಿ ಪರಿಶೀಲಕನಿಗೆ ಅಂತಹ ನೋಟೀಸನ್ನು ಕಳುಹಿಸತಕ್ಕದ್ದು. ಉದ್ದೇಶಿತ ಮಾರ್ಪಟುಗಳು ಅಥವಾ ಸೇರ್ಪಡೆಗಳು ಈ ನಿಯಮಗಳ ಉಪಬಂಧಗಳಿಗೆ ಅನುಗುಣವಾಗಿವೆಯೆಂದು ವಿದ್ಯುಚ್ಛಕ್ತಿ ಪರಿಶೀಲಕನು ಪರಿಶೀಲನೆಯ ತರುವಾಯ ವರದಿ ಮಾಡಿರುವಲ್ಲಿ, ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಈ ಮುಂದಿನ ಪ್ರಸ್ತಾವನೆಯನ್ನು ಸಾಧ್ಯವಾಗಬಹುದಾದಷ್ಟು ಬೇಗನೆ 31ನೇ ನಿಯಮದ (3)ನೇ ಉಪ-ನಿಯಮದಲ್ಲಿ ಹೇಳಲಾದ ಕಾರ್ಯವಿಧಾನಗಳನ್ನು ಅನುಮೋದಿಸಬಹುದು.

(2) ಲೈಸೆನ್ಸು ನೀಡುವ ಪ್ರಾಧಿಕಾರಿಯು, ಮತ್ತಷ್ಟು ಪರಿಶೀಲನೆ ಅವಶ್ಯಕವಾಗಿರುವುದೆಂದು ಅಭಿಪ್ರಾಯಪಟ್ಟಿರುವಲ್ಲಿ ಆತನು, ಅದನ್ನು ನಿರ್ದೇಶಿಸಬಹುದು ಮತ್ತು ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದ ಫೀಜುಗಳನ್ನು ಮುಂಗಡವಾಗಿ ಸಂದಾಯ ಮಾಡಲು ಲೈಸೆನ್ಸುದಾರನನ್ನು ಅಗತ್ಯಪಡಿಸಬಹುದು.

(3) ಎರಡು ನಿಯತಕಾಲಿಕ ಪರಿಶೀಲನೆಗಳ ನಡುವಿನ ಮಧ್ಯಂತರದ ಅವಧಿಯಲ್ಲಿ, 4ನೇ ನಿಯಮದ (2)ನೇ ಉಪ-ನಿಯಮದ ಮೇರೆಗೆ ಹೊರಡಿಸಲಾದ ಅಂತಹ ಅಧಿಕಾರಿಯ ಯಾವುದೇ ಲಿಖಿತ ಆದೇಶಗಳನ್ನು ಪಾಲಿಸುವಲ್ಲಿ, ಪ್ರಭಾರದಲ್ಲಿರುವ ಆ ವ್ಯಕ್ತಿಯು ನಿರ್ಲಕ್ಷಿಸಿರುವಲ್ಲಿ ಅಥವಾ ವಿಫಲನಾಗಿರುವಲ್ಲಿ ಆತನು ಒಡೆತನ ಹೊಂದಿರುವುದು ಅವಶ್ಯಕವಾಗಿರುವುದೆಂದು ವಿದ್ಯುಚ್ಛಕ್ತಿ ಪರಿಶೀಲಕನು ಅಭಿಪ್ರಾಯಪಟ್ಟಿರುವಲ್ಲಿ, ತಾನು ನಿರ್ದಿಷ್ಟಪಡಿಸಿದ ಕಾಲದೊಳಗೆ ಯಾವುದೇ ಹೆಚ್ಚಿನ ಪರಿಶೀಲನೆಯನ್ನು ಮಾಡತಕ್ಕದ್ದು ಅಥವಾ ಪರಿಶೀಲನೆಯ ಯಾವುದೇ ಅವಧಿಯಲ್ಲಿ, ಸ್ಥಾಪನೆಯಲ್ಲಿ ನ್ಯೂನತೆ ಕಂಡುಬಂದರೆ, ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದ ಫೀಜುಗಳನ್ನು ಅಂತಹ ಹೆಚ್ಚಿನ ಪರಿಶೀಲನೆಗಾಗಿ ಚಾರ್ಜು ಮಾಡತಕ್ಕದ್ದು ಮತ್ತು ಅಂತಹ ಫೀಜನ್ನು ಲೈಸೆನ್ಸುದಾರನು ಸಂದಾಯ ಮಾಡತಕ್ಕದ್ದು.

## ಅಧ್ಯಾಯ – XVII
## ಸಂಕೀರ್ಣ

**181. ಅಪೀಲು ಪ್ರಾಧಿಕಾರಿ.-** (1) 10ನೇ ಮತ್ತು 17ನೇ ಪ್ರಕರಣಗಳ ಉದ್ದೇಶಗಳಿಗಾಗಿ ಸಂಬಂಧಪಟ್ಟ ಕಂದಾಯ ವಿಭಾಗದ ವಿಭಾಗೀಯ ಆಯುಕ್ತರು ಅಪೀಲು ಪ್ರಾಧಿಕಾರಿಯಾಗಿರತಕ್ಕದ್ದು.

**182. 5ನೇ ಮತ್ತು 9ನೇ ಪ್ರಕರಣಗಳ ಮೇರೆಗಿನ ಅಪೀಲುಗಳಲ್ಲಿ ಪ್ರಕ್ರಿಯೆ.-** (1) ಅಪೀಲಿನ ವಿಷಯವಾಗಿರುವಂಥ ಆದೇಶದ ಬಗ್ಗೆ ಆಕ್ಷೇಪಣೆಗಳ ಕಾರಣಗಳನ್ನು ಸಂಕ್ಷಿಪ್ತವಾಗಿ ತಿಳಿಸುವ ವಿವರಣಾಪತ್ರದ ರೂಪದಲ್ಲಿ ಅಪೀಲನ್ನು ದ್ವಿಪ್ರತಿಯಲ್ಲಿ ಒಪ್ಪಿಸತಕ್ಕದ್ದು ಮತ್ತು ಅದರೊಂದಿಗೆ ಯಾವ ಆದೇಶದ ವಿರುದ್ಧವಾಗಿ ಅಪೀಲು ಹೂಡಲಾಗಿದೆಯೋ ಆ ಆದೇಶದ ಮೂಲಪ್ರತಿ ಅಥವಾ ಪ್ರಮಾಣೀಕೃತ ಪ್ರತಿ ಇರತಕ್ಕದ್ದು.

(2) ಅಪೀಲು ವಿವರಣಾ ಪತ್ರಕ್ಕೆ ಅಪೀಲುದಾರ ಅಥವಾ ಆತನು ಅಧಿಕೃತಗೊಳಿಸಿದ ಏಜೆಂಟನು ರುಜು ಮಾಡತಕ್ಕದ್ದು ಮತ್ತು ಅದನ್ನು ಯಾವುದೇ ಕೆಲಸದ ದಿವಸದಂದು ಕಛೇರಿ ವೇಳೆಯಲ್ಲಿ ಯಾವುದೇ ಕಾಲದಲ್ಲಿ ಖುದ್ದಾಗಿ ಅಥವಾ

ಏಜೆಂಟಿನ ಮೂಲಕ ಅಪೀಲು ಪ್ರಾಧಿಕಾರಿಗೆ ಸಲ್ಲಿಸತಕ್ಕದ್ದು ಅಥವಾ ನೋಂದಾಯಿತ ಅಂಚೆಯ ಮೂಲಕ ಕಳುಹಿಸತಕ್ಕದ್ದು, ಅಪೀಲುಗಳನ್ನು ಸಲ್ಲಿಸಲು ಏಜೆಂಟಿನ ಅಧಿಕೃತಗೊಳಿಸುವಿಕೆಯು ಲಿಖಿತದಲ್ಲಿರತಕ್ಕದ್ದು ಮತ್ತು ಏಜೆಂಟನು ಪವರ್ ಆಫ್ ಅಟಾರ್ನಿ ಹೊಂದಿರುವ ಹೊರತು ಅದು ಅಪೀಲು ವಿವರಣ ಪತ್ರವನ್ನು ಒಳಗೊಂಡಿರತಕ್ಕದ್ದು.

(3) ಅಪೀಲು ಪ್ರಾಧಿಕಾರಿಯು, ಅಪೀಲಿನ ವಿಚಾರಣೆಗಾಗಿ ಒಂದು ದಿವಸವನ್ನು ನಿಗದಿಪಡಿಸತಕ್ಕದ್ದು, ಅಪೀಲು ವಿಚಾರಣೆಗಾಗಿ ನಿಗದಿಪಡಿಸಿದ ದಿನಾಂಕದಂದು ಅಥವಾ ಅಪೀಲನ್ನು ಮುಂದೂಡಬಹುದಾದಂಥ ಮುಂದಿನ ದಿನಾಂಕದಂದು ಅಪೀಲು ಪ್ರಾಧಿಕಾರಿಯು, ಪಕ್ಷಕಾರರು ಅಥವಾ ಅವರ ಏಜೆಂಟರನ್ನು ವಿಚಾರಣೆ ಮಾಡಿದ ತರುವಾಯ ಅಪೀಲಿನ ಬಗ್ಗೆ ಆತನು ಸೂಕ್ತವೆಂದು ಭಾವಿಸುವಂಥ ಆದೇಶಗಳನ್ನು ಮಾಡಬಹುದು.

**183. ಅಪೀಲಿನ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಫೀಜು.-** ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದಂಥ ಫೀಜನ್ನು ಅಪೀಲು ಪ್ರಾಧಿಕಾರಿಗೆ ಸಲ್ಲಿಸುವ ಪ್ರತಿಯೊಂದು ಅಪೀಲು ವಿವರಣಾಪತ್ರದ ಬಗ್ಗೆ ಸಂದಾಯ ಮಾಡತಕ್ಕದ್ದು.

**184. ನಿರಸನ ಮತ್ತು ಉಳಿಸುವಿಕೆಗಳು.-** ಕರ್ನಾಟಕ ಸಿನಿಮಾ (ನಿಯಂತ್ರಣ) ನಿಯಮಗಳು, 1971ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

ಪರಂತು, ಸದರಿ ನಿರಸನವು ಸದರಿ ನಿಯಮಗಳ ಹಿಂದಿನ ಪ್ರವರ್ತನೆಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ ಮತ್ತು ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899ರ (1899ರ ಕರ್ನಾಟಕ ಅಧಿನಿಯಮ ಸಂಖ್ಯೆ 3) 6ನೇ ಪ್ರಕರಣವು ಅಂತಹ ನಿರಸನದ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

ಡಿ.ಎಸ್. ಜೋಗೋಜೆ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಕಾರಾಗೃಹ ಮತ್ತು ಸಿನಿಮಾ)

## ಅನುಸೂಚಿ – ಎ

## (2(12)ನೇ ನಿಯಮವನ್ನು ನೋಡಿ)

## ಅಗ್ನಿನಿರೋಧಕ ಸಾಮಗ್ರಿಗಳು

1. (ಎ) ಮಣ್ಣು, ಗಾರೆ ಅಥವಾ ಸಿಮೆಂಟ್‌ನಲ್ಲಿನ ಸುಟ್ಟ ಇಟ್ಟಿಗೆ ಅಥವಾ ಸೈಜುಗಲ್ಲುಗಳ ಅಥವಾ ಅವುಗಳಿಗೆ ಸಮಾನವಾದ ಸಾಮಗ್ರಿಗಳ ಅಥವಾ ಕನಿಷ್ಠಪಕ್ಷ ಮೂರು ನೂರ ಐವತ್ತು ಮಿಲಿ ಮೀಟರಿನ ಮತ್ತು ನಾಲ್ಕು ನೂರು ಮಿಲಿ ಮೀಟರುಗಳಷ್ಟು ದಪ್ಪವಿರುವ ಕ್ರಮವಾಗಿ ರೀ-ಇನ್‌ಫೋರ್ಸ್ಡ್ (ಬಲವರ್ಧಿತ) ಅಲ್ಲದ ಕನಿಷ್ಠ ಮೂರು ನೂರು ಮಿಲಿ ಮೀಟರುಗಳಷ್ಟು ದಪ್ಪದ ಸಿಮೆಂಟು ಕಾಂಕ್ರೀಟ್ ಮತ್ತು ಕನಿಷ್ಠ ಒಂದು ನೂರಾ ಐವತ್ತು ಮಿಲಿ ಮೀಟರುಗಳಷ್ಟು ದಪ್ಪ ರೀ-ಇನ್‌ಫೋರ್ಸ್ಡ್ ಗೋಡೆಗಳು.

(ಬಿ) ರೀ-ಇನ್‌ಫೋರ್ಸ್ಡ್ ಕಾಂಕ್ರೀಟಿನ ಛಾವಣಿ ಅಥವಾ ಇಟ್ಟಿಗೆ ಗೋಡೆ ಮತ್ತು ಜಾಕ್ ಕಮಾನು ಛಾವಣಿಗಳ ಸಹಿತವಾದ ಪ್ರಿಕಾಸ್ಟ್ ತೊಲೆಗಳ ರೀ ಇನ್‌ಫೋರ್ಸ್ಡ್ ಇಟ್ಟಿಗೆ ಕಾಂಕ್ರೀಟ್ ಛಾವಣಿಗಳು, ಸುಟ್ಟ ಸ್ಲ್ಯಾಬ್ ಛಾವಣಿಗಳು ಅಗ್ನಿನಿರೋಧಕಗಳಲ್ಲ;

(ಸಿ) ರೀ-ಇನ್‌ಫೋರ್ಸ್ಡ್ ಸಿಮೆಂಟ್ ಕಾಂಕ್ರೀಟ್ ಕಬ್ಬಿಣದ ಗರ್ಡರ್‌ಗಳ, ತೊಲೆಗಳು ಮತ್ತು ಸಂಯೋಜಕಗಳು, ಅವುಗಳನ್ನು (ಎ) ಉಪ-ಪ್ಯಾರಾದಲ್ಲಿ ವಿವರಿಸಿದಂತೆ ಆವರಣದಲ್ಲಿ ಇರಿಸಿದ್ದರೆ ಮಾತ್ರ ಅವುಗಳು ಅಗ್ನಿ ನಿರೋಧಕಗಳಾಗಿರುತ್ತವೆ;

(ಡಿ) ಮಣ್ಣು, ಸುಣ್ಣ ಅಥವಾ ಸಿಮೆಂಟು ಗಾರೆಯಲ್ಲಿ ಕಂಬಗಳನ್ನು ಇಟ್ಟಿಗೆ ಅಥವಾ ಸೈಜ್ ಕಲ್ಲಿನಿಂದ ಅಥವಾ ಇತರ ಕಲ್ಲಿನಿಂದ ಕಟ್ಟಿದ ಊರುಗಂಬಗಳು ಮತ್ತು ಸ್ತಂಭಗಳು. ರೀ-ಇನ್‌ಫೋರ್ಸ್ಡ್ ಅಥವಾ ರೀ-ಇನ್‌ಫೋರ್ಸ್ಡ್ ಅಲ್ಲದ ಸಿಮೆಂಟ್ ಕಾಂಕ್ರೀಟಿನ ಊರುಗಂಬಗಳು ಮತ್ತು ಸ್ತಂಭಗಳು, ಆದರೆ ಗ್ರಾನೈಟ್ ಅಮೃತಶಿಲೆ, ಸುಣ್ಣದ ಕಲ್ಲು ಸ್ತಂಭಗಳು ಅಗ್ನಿನಿರೋಧಕವಲ್ಲ;

(ಇ) ರೀ-ಇನ್‌ಫೋರ್ಸ್ಡ್ ಸಿಮೆಂಟ್ ಕಾಂಕ್ರೀಟಿನ ಛಾವಣಿಯ ನಿರ್ಮಿತಿಗಳು ಅಥವಾ ರೀ-ಇನ್‌ಫೋರ್ಸ್ಡ್ ಮಾಡಿದ ಇಟ್ಟಿಗೆ ಕಾಂಕ್ರೀಟ್ ಛಾವಣಿಗಳು ಮತ್ತು ಉಕ್ಕಿನ ಟ್ರಸ್ಸುಗಳು ಛಾವಣಿ ನಿರ್ಮಿತಿ ಅಥವಾ ಟ್ರಸ್ಸುಗಳನ್ನು ಒಳಗೊಂಡಿರುವ ಮೇಲ್ಛಟ್ಟವು ಅಗ್ನಿ ನಿರೋಧಕ ಗೋಡೆಗಳು, ಛಾವಣಿಗಳು ಮತ್ತು ನೆಲದಿಂದ ಆವೃತ್ತವಾಗಿದ್ದರೆ ಮತ್ತು ಅದನ್ನು ದಹ್ಯ ಸಾಮಗ್ರಿ ದಾಸ್ತಾನಿಗಾಗಿ ಉಪಯೋಗಿಸದಿದ್ದರೆ, ಉಕ್ಕಿನ ಸಾಮಗ್ರಿಗಳನ್ನು ಆವೃತಗೊಳಿಸಿದ್ದರೆ ಮಾತ್ರ ಅಗ್ನಿ ನಿರೋಧಕವಾಗಿರುತ್ತವೆ;

(ಎಫ್) ಬಾಗಿಲುಗಳು, ಅವು ಸ್ವಯಂಚಾಲಿತವಾಗಿ ಮುಚ್ಚಿಕೊಳ್ಳುವ ಹಾಗಿದ್ದರೆ ಪರೀಕ್ಷಿಸಿದಾಗ ಅವು ಕನಿಷ್ಠ ಅರ್ಧ ಗಂಟೆಯವರೆಗೆ ಒಂದು ಸಾವಿರ ಡಿಗ್ರಿ ಸೆಂಟಿಗ್ರೇಡ್ ಉಷ್ಣತೆಯನ್ನು ತಡೆದುಕೊಳ್ಳಲು ಸಮರ್ಥವಾಗಿದ್ದರೆ ಮತ್ತು ಇಪ್ಪತ್ತು ಮಿಲಿ ಮೀಟರುಗಳ ಆಳಕ್ಕಿಂತ ಕಡಿಮೆಯಿರದ ಶಟರ್‍ನ್ನು ಹಿಡಿಯುವುದಕ್ಕಾಗಿನ ಕೂರುಗಾಲುವೆ ಸಹಿತವಾದ ಅಗ್ನಿ ನಿರೋಧಕ ಸಾಮಗ್ರಿಯಿಂದ ಬಾಗಿಲಿನ ಚೌಕಟ್ಟು ಇರುವುದಾದರೆ, ಆ ಬಾಗಿಲುಗಳು;

(ಜಿ) ಖಾಯಂ ಆಗಿ ಕೂಡಿಸಿದ ಶಟರ್‌ಗಳಿರುವ ಗಾಜು ಹವಣಿಸಿದ ಕಿಟಕಿಗಳನ್ನು ಪರೀಕ್ಷಿಸಿದಾಗ ಅವು ಅರ್ಧ ಗಂಟೆಯವರೆಗೆ ಒಡೆಯದೆ ಒಂದು ಸಾವಿರ ಡಿಗ್ರಿ ಸೆಂಟಿಗ್ರೇಡ್ ಉಷ್ಣತೆಯನ್ನು ತಡೆದುಕೊಳ್ಳುವಂತಿದ್ದರೆ, ಅಗ್ನಿ ನಿರೋಧಕವೆಂದು ಪರಿಗಣಿಸಬಹುದು;

(ಹೆಚ್)   ಕನಿಷ್ಠ ಮೂವತ್ತೈದು ಮಿಲಿ ಮೀಟರುಗಳಷ್ಟು ದಪ್ಪವುಳ್ಳ ಕಾಂಕ್ರೀಟಿನಿಂದ ಅಥವಾ ಸುಟ್ಟ ಇಟ್ಟಿಗೆಗಳಿಂದ ಉಕ್ಕಿನ ವಿಭಾಗದ ಪ್ರತಿಯೊಂದು ಭಾಗವು ಆವೃತಗೊಳ್ಳುವಂಥ ರೀತಿಯಲ್ಲಿ ಸಿಮೆಂಟ್ ಕಾಂಕ್ರೀಟ್‌ನಿಂದ ಸಿಮೆಂಟ್ ಗಾರೆಯಲ್ಲಿ ಇಟ್ಟಿಗೆಯೊಂದಿಗೆ ಎಲ್ಲಾ ಕಡೆಗಳಲ್ಲಿ ಉಕ್ಕು ವಿಭಾಗಗಳಲ್ಲಿ ಮತ್ತು ಅದರ ಸುತ್ತಮುತ್ತ ತುಂಬಿರುವುದನ್ನು ಒಳಗೊಂಡಿರುವ ಉಕ್ಕು ರಚನೆಯ ಅಗ್ನಿನಿರೋಧಕ ಆವರಣ;

(ಐ)   ಜಾಕ್ರಚ್ ಸೀಲಿಂಗ್‌ಗಳಲ್ಲಿ ಮತ್ತು ಉಕ್ಕಿನಿಂದ ಮಾಡಿದ ಚೌಕಟ್ಟಿನಲ್ಲಿ Iನೇ ವಿಭಾಗಗಳ ಫ್ಲಾಂಜ್‌ಗಳು, ಇಟ್ಟಿಗೆ ಅಥವಾ ಕಾಂಕ್ರೀಟಿನ ಪಾನ್‌ಲಿಂಗ್‌ದೊಂದಿಗೆ ರಚನೆಗಳು, ಅಗ್ನಿ ನಿರೋಧಕವಾಗುವುದಕ್ಕೆ ಯಾವುದೇ ಆವರಣ ಹಾಕುವ ಅಗತ್ಯವಿರುವುದಿಲ್ಲ.

## ಅನುಸೂಚಿ 'ಬಿ'

## (2(13)ನೇ ಮತ್ತು 45ನೇ ನಿಯಮ ನೋಡಿ)

## ಅಗ್ನಿಪ್ರತಿರೋಧಕ ಸಾಮಗ್ರಿಗಳು

1.   ಸ್ವಯಂಚಾಲಿತವಾಗಿ ತಾವೇ ಉರಿಯದಿದ್ದರೆ ಕಟ್ಟಡದ ಯಾವುದೇ ಸಾಮಗ್ರಿ ಮತ್ತು ಯಾವುದೇ ಭಾಗಗಳನ್ನು ಪರಿಗಣಿಸಬಹುದು. ಬೆಂಕಿಯನ್ನು ಕಾಲು ಗಂಟೆಯವರೆಗೆ ನಿರೋಧಿಸಲು ಮತ್ತು ಈ ಅವಧಿಯಲ್ಲಿ ಬೆಂಕಿಯು ಹೋಗುವುದನ್ನು ಮತ್ತು ಹರಡುವುದನ್ನು ತಡೆಯಲು ಸಮರ್ಥವಾಗಿದ್ದರೆ, ಅಗ್ನಿನಿರೋಧಕಗಳೆಂದು ಪರಿಗಣಿಸಬಹುದು.

2.   ಬೇರೆಯವುಗಳ ಜೊತೆಗೆ, ಈ ಕೆಳಕಂಡವುಗಳನ್ನು ಅಗ್ನಿ ಪ್ರತಿರೋಧಕಗಳೆಂದು ಪರಿಗಣಿಸಲಾಗಿದೆ. ಅವುಗಳು ಎಂದರೆ:-

(ಎ)   ಗೋಡೆಗಳು, ಛಾವಣಿಗಳು, ತೊಲೆಗಳು, ಊರುಗಂಬಗಳು, ಸ್ತಂಭಗಳ ಮತ್ತು ಮರದ ಟ್ರಸ್ಸುಗಳು, ಅವು ಇಪ್ಪತ್ತೈದು ಮಿಲಿ ಮೀಟರುಗಳಷ್ಟು ದಪ್ಪದ ಸುಣ್ಣದ ಪ್ಲಾಸ್ಟರ್ ಅಥವಾ ಐದು ಮಿಲಿಮೀಟರಿನ ಸಿಮೆಂಟ್ ಆಸ್ಬೆಸ್ಟಾಸ್ ಶೀಟುಗಳಿಂದ ಆವೃತವಾಗಿದ್ದರೆ,

(ಬಿ)   ಗ್ರಾನೈಟ್, ಇತರ ಕಲ್ಲು, ಕಬ್ಬಿಣ ಅಥವಾ ಮರದ ಸ್ಟೇರ್‌ಕೇಸ್‌ಗಳು, ಅವುಗಳ ತಳದ ಮೇಲ್ಮೈ ಕೆಳಗಿನಿಂದ ಇಪ್ಪತ್ತೈದು ಮಿಲಿ ಮೀಟರು ದಪ್ಪದ ಸುಣ್ಣದ ಪ್ಲಾಸ್ಟರಿನಿಂದ ಅಥವಾ ಮೆಟ್ಟಲುಗಳಿಂದ ಸ್ವಲ್ಪ ದೂರದಲ್ಲಿ ತಂತಿ ಜಾಲ ಅಥವಾ ಮರದ ರೀಪರುಗಳ ಮೇಲೆ ಆಶ್ರಯಿತವಾದ ಆಸ್ಬೆಸ್ಟಾಸ್ ಶೀಟುಗಳಿಂದ ಆವೃತವಾಗಿದ್ದರೆ,

(ಸಿ)   ಇಪ್ಪತ್ತೈದು ಮಿಲಿ ಮೀಟರ್ ದಪ್ಪಕ್ಕೆ ಕಡಿಮೆಯಲ್ಲದ ಪಟ್ಟಿ ಹಾಕಿದ ಮರದ ಬಾಗಿಲುಗಳು, ಮರಕ್ಕೆ ತಿರುಗಣಿಯಿಂದ ಜೋಡಿಸಲಾದ ತೆಳು ಕಬ್ಬಿಣದ ಹಾಳೆ ಅಥವಾ ಸಾದಾ ಸಿಮೆಂಟ್ ಆಸ್ಬೆಸ್ಟಾಸ್ ಶೀಟುಗಳಿಂದ ಷಟರುಗಳು ಮತ್ತು ಚೌಕಟ್ಟುಗಳು ಎರಡೂ ಕಡೆಗಳಲ್ಲಿ, ಆವೃತವಾಗಿದ್ದರೆ, ಅವುಗಳು ತಮ್ಮಷ್ಟಕ್ಕೆ ತಾವೇ ಮುಚ್ಚಿಕೊಳ್ಳುವಂತೆ ವ್ಯವಸ್ಥೆ ಮಾಡಿದ್ದರೆ ಮತ್ತು ಚೌಕಟ್ಟಿನಲ್ಲಿನ ತಳೆದ ಆಳವು ಕನಿಷ್ಠಪಕ್ಷ ಇಪ್ಪತ್ತು ಮಿಲಿ ಮೀಟರ್ ಇದ್ದರೆ.

3.   ಮೇಲೆ ಹೇಳಿದ ಸಾಮಗ್ರಿಯನ್ನುಳಿದು ಬೇರೆ ಸಾಮಗ್ರಿಗಳನ್ನು ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಅಗ್ನಿ ಪ್ರತಿರೋಧಕಗಳೆಂದು ಅಂಗೀಕರಿಸಬಹುದು. ಪರಂತು, ಅವುಗಳು ಮೇಲೆ ಕೊಟ್ಟಿರುವ ವಿವರಣೆಗೆ ಅನುರೂಪವಾಗಿರಬೇಕು.

## ಅನುಸೂಚಿ 'ಸಿ'

## (54(2)ನೇ ನಿಯಮವನ್ನು ನೋಡಿ)

## ನೈರ್ಮಲ್ಯ ಸ್ಥಳಾವಕಾಶದ ಪ್ರಮಾಣ

| ಜೋಡಣೆಗಳು | ಸಂಖ್ಯೆ | ಪುರುಷರಿಗಾಗಿ | ಸ್ತ್ರೀಯರಿಗಾಗಿ | ಸಿಬ್ಬಂದಿಗಾಗಿ |
|---|---|---|---|---|

| | | | | |
|---|---|---|---|---|
| | | | | |
| ಶೌಚಗೃಹಗಳು | ಒಂದು | ಪ್ರತಿ 250 ವ್ಯಕ್ತಿಗಳಿಗಾಗಿ ಅಥವಾ 250 ವ್ಯಕ್ತಿಗಳಿಗೆ ಮೀರುವ 50ರ ಒಂದು ಭಾಗಕ್ಕಾಗಿ ಕನಿಷ್ಠಪಕ್ಷ ನಾಲ್ಕು-ಅವುಗಳಲ್ಲಿ ಮೂರನೇ ಎರಡರಷ್ಟು ಪುರುಷರಿಗಾಗಿ ಮತ್ತು ಮೂರನೇ ಒಂದರಷ್ಟು ಸ್ತ್ರೀಯರಿಗಾಗಿ | | |
| ಮೂತ್ರಿಗಳು | ಒಂದು | ಒಂದು ಪ್ರತಿ 50 ಜನರಿಗೆ ಅಥವಾ ಅದರ ಭಾಗಕ್ಕಾಗಿ ಇವುಗಳಲ್ಲಿ ಮೂರನೇ ಎರಡರಷ್ಟು ಪುರುಷರಿಗೆ ಮತ್ತು ಮೂರನೇ ಒಂದರಷ್ಟು ಸ್ತ್ರೀಯರಿಗಾಗಿ | | |
| ಸ್ನಾನದ ನಲ್ಲಿಗಳು | ಒಂದು | ಪ್ರತಿಯೊಂದು ಶೌಚಗೃಹದಲ್ಲಿ | ಪ್ರತಿಯೊಂದು ಶೌಚಗೃಹದಲ್ಲಿ ಒಂದು | ಪ್ರತಿಯೊಂದು ಶೌಚಗೃಹದಲ್ಲಿ ಒಂದು |
| ವಾಷ್‌ಬೇಸಿನ್‌ಗಳು | ಒಂದು | ಪ್ರತಿ 250 ವ್ಯಕ್ತಿಗಳಿಗಾಗಿ ಅಥವಾ ಅದರ ಒಂದು ಭಾಗಕ್ಕೆ ಕನಿಷ್ಠ ಪಕ್ಷ ನಾಲ್ಕು. ಅವುಗಳಲ್ಲಿ ಅರ್ಧ ಪುರುಷರಿಗಾಗಿ ಮತ್ತು ಅರ್ಧ ಸ್ತ್ರೀಯರಿಗಾಗಿ | | ಒಂದು |
| ಶೌಚಗೃಹಗಳು ಮತ್ತು ಮೂತ್ರಿಗಳ ಹತ್ತಿರದಲ್ಲಿ ಪ್ರತಿ 250 ವ್ಯಕ್ತಿಗಳು ಅಥವಾ ಅದರ ಭಾಗಕ್ಕಾಗಿ ಹರಿದು ಹೋಗುವ ಮೂತ್ರಿಗಳ ವ್ಯವಸ್ಥೆಯಿರುವಲ್ಲಿ ಒಂದು ನೀರಿನ ನಲ್ಲಿಯನ್ನು ಒದಗಿಸತಕ್ಕದ್ದು. | | | | |

**[ಟಿಪ್ಪಣಿ.-** ಈ ಪ್ರಮಾಣಗಳನ್ನು ನಿಗದಿಪಡಿಸುವುದಕ್ಕಾಗಿ, ಸ್ಥಳಾವಕಾಶ ಪಡೆಯುವ ವ್ಯಕ್ತಿಗಳ ಒಟ್ಟು ಸಂಖ್ಯೆಯ ಮೂರನೇ ಎರಡರಷ್ಟು ಪುರುಷರಿಗೆಂದು ಮತ್ತು ಮೂರನೇ ಒಂದರಷ್ಟು ಸ್ತ್ರೀಯರಿಗೆಂದು ಭಾವಿಸಬಹುದು. ಯಾವುದೇ ಥಿಯೇಟರಿನಲ್ಲಿ ಸಿಬ್ಬಂದಿಯ ಅನನ್ಯ ಉಪಯೋಗಕ್ಕಾಗಿ ಈಗಾಗಲೇ ಒದಗಿಸಿದ ಪ್ರತ್ಯೇಕ ಶೌಚಗೃಹಗಳು, ಮೂತ್ರಿಗಳು, ಸ್ನಾನದ ನಲ್ಲಿಗಳು, ವಾಷ್‌ಬೇಸಿನ್‌ಗಳು ಇರುವಲ್ಲಿ, ಅಂತಹ ಶೌಚಗೃಹಗಳು, ಮೂತ್ರಿಗಳು, ಇತ್ಯಾದಿಗಳ ಸಂಖ್ಯೆಯನ್ನು ಪ್ರೇಕ್ಷಕರಿಗೆ ಅಂತಹ ಸೌಲಭ್ಯಗಳನ್ನು ಒದಗಿಸುವಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.]

## ನಮೂನೆ “ಎ”

## [24(1), 89 ಮತ್ತು 116 ನಿಯಮಗಳನ್ನು ನೋಡಿ]

## ಸಿನಿಮಾ ಕಟ್ಟಡದ ನಿರ್ಮಾಣಕ್ಕೆ ಅರ್ಜಿ

ಇವರಿಗೆ;

ಜಿಲ್ಲಾ ಮ್ಯಾಜಿಸ್ಟ್ರೇಟ್

--------- ಜಿಲ್ಲೆ,

- - - - -

ಮಾನ್ಯರೆ,

ನನ್ನ ಹೆಸರಿನಲ್ಲಿ (ಖಾಯಂ/ ಡ್ರೈವ್ ಇನ್/ ಸಂಚಾರಿ ಸಿನಿಮಾಗಳ) ಸ್ಥಾಪನೆಗಾಗಿ “ನಿರಾಕ್ಷೇಪಣಾ ಪ್ರಮಾಣಪತ್ರದ” ಮಂಜೂರಾತಿಗಾಗಿ ನಾನು ಈ ಮೂಲಕ ಅರ್ಜಿ ಸಲ್ಲಿಸುತ್ತಿದ್ದೇನೆ ಮತ್ತು ಈ ಕೆಳಕಂಡಂತೆ ವಿವರಗಳನ್ನು ಕೊಟ್ಟಿದ್ದೇನೆ.

ಅರ್ಜಿದಾರನ ರುಜು

---

1. ಅರ್ಜಿದಾರನ ಪೂರ್ಣ ಹೆಸರು
2. ತಂದೆಯ/ಗಂಡನ ಹೆಸರು ಮತ್ತು ಉದ್ಯೋಗ
3. ಅರ್ಜಿದಾರನ ಖಾಯಂ ವಿಳಾಸ
   (i) ಗ್ರಾಮ/ಡೋರ್ ನಂ.
   (ii) ತಾಲ್ಲೂಕು/ವಾರ್ಡ್/ವಿಭಾಗ
   (iii) ಜಿಲ್ಲೆ
4. ಅರ್ಜಿದಾರನ ಈಗಿನ ಉದ್ಯೋಗ
5. ಅರ್ಜಿಯು,-
   (i) . . . . . . . . . . . . . . . . .
   (ii) [ಖಾಯಂ ಡ್ರೈವ್ ಇನ್ ಸಂಚಾರಿ ಸಿನಿಮಾ]
   (iii) . . . . . . . . . . . . . . .. . .
   (iv) . . . . . . . . . . . . . . . . . .
   (v) ವಿಶೇಷ ಸ್ವರೂಪದ ಸಿನಿಮಾ
6. ಸಿನಿಮಾವನ್ನು ಸ್ಥಾಪಿಸಲು ಉದ್ದೇಶಿಸಿದ ಸ್ಥಳ:
   (i) ಆರ್.ಎಸ್. ಸಂಖ್ಯೆ/ನಿವೇಶನ ಸಂಖ್ಯೆ/ಸಿ.ಟಿ.ಎಸ್ ಸಂಖ್ಯೆ:
   (ii) ಗ್ರಾಮ/ಬಡಾವಣೆ/ವಾರ್ಡು/ವಿಭಾಗ:

(iii) ತಾಲ್ಲೂಕು/ಪಟ್ಟಣ:

(iv) ಜಿಲ್ಲೆ:

7. ಭೂಮಿ/ ನಿವೇಶನವು ಅರ್ಜಿದಾರನ ಒಡೆತನದಲ್ಲಿದೆಯೇ:

8. ಭೂಮಿ/ ನಿವೇಶನವು ಅರ್ಜಿದಾರನ ಒಡೆತನದಲ್ಲಿಲ್ಲದಿದ್ದರೆ:

(i) ಒಡೆಯನ ಹೆಸರು ಮತ್ತು ವಿಳಾಸ

(ii) ಅರ್ಜಿದಾರನ ಕಾನೂನುಸಮ್ಮತ ಅಧಿಭೋಗವನ್ನು ರುಜುವಾತುಪಡಿಸುವ ದಸ್ತಾವೇಜನ್ನು ಲಗತ್ತಿಸಲಾಗಿದೆಯೇ?

9. ಅಧಿನಿಯಮದ ಮೇರೆಗೆ ಯಾವುದೇ ಲೈಸೆನ್ಸ್ ಪಡೆದಂಥ ಇತರ ಸ್ಥಳಗಳು ಯಾವುವಾದರೂ ಇದ್ದರೆ ಆ ಸ್ಥಳಗಳ ಸ್ವಾಧೀನತೆಯನ್ನು ಅರ್ಜಿದಾರನು ಹೊಂದಿದ್ದಾನೆಯೇ :-

(ಎ) ಅದೇ ಸ್ಥಳದಲ್ಲಿ ಅಥವಾ ಬೇರೆ ಎಲ್ಲಾದರೂ ?

(ಬಿ) ಲೈಸೆನ್ಸ್‌ಗಾಗಿ ಅರ್ಜಿ ಮಾಡಿಕೊಳ್ಳುವ ಕಾಲದಲ್ಲಿದೆಯೇ ? ಅಥವಾ ಯಾವುದೇ ಹಿಂದಿನ ಕಾಲದಲ್ಲಿದೆಯೇ ಹೇಗೆ?

10. ಅರ್ಜಿಗೆ ಈ ಕೆಳಕಂಡವುಗಳನ್ನು ಲಗತ್ತಿಸಲಾಗಿದೆಯೇ ?

(1) ಖಾತಾ ಉದ್ಧೃತ

(2) ಭೂಕಂದಾಯ/ಪೌರಸಭಾ ತೆರಿಗೆಯನ್ನು ತೀರಿಸಿದ ಬಗ್ಗೆ ಪ್ರಮಾಣಪತ್ರ

(3) ಅದು ರೆವಿನ್ಯೂ ಭೂಮಿಯಾಗಿದ್ದರೆ, ಕೃಷಿಯೇತರ ಉದ್ದೇಶಗಳಿಗಾಗಿ ಆ ಭೂಮಿಯನ್ನು ಪರಿವರ್ತಿಸಿದ ಬಗ್ಗೆ ಪ್ರಮಾಣಪತ್ರ

(4) 'ಬಿ' ನಮೂನೆಯ ಪ್ರತಿ

(5) 27ನೇ ನಿಯಮದ ಮೇರೆಗೆ "ನಿರಾಕ್ಷೇಪಣಾ ಪ್ರಮಾಣಪತ್ರ" ಕ್ಕಾಗಿನ ಫೀಜು ಮತ್ತು 28ನೇ ನಿಯಮದ ಮೇರೆಗೆ ಫೀಜನ್ನು ಸಂದಾಯ ಮಾಡಿದ್ದಕ್ಕಾಗಿ ಖಜಾನೆ ಚಲನು

(6) 24(2)ನೇ ನಿಯಮದ ಮೇರೆಗೆ (ಎ) ಮತ್ತು (ಬಿ) ಖಂಡಗಳು ಅಥವಾ 90ನೇ ನಿಯಮದ ಮೇರೆಗೆ ಅಗತ್ಯಪಡಿಸಿದ ರೇಖಾ ಚಿತ್ರಗಳು.

11. ಉದ್ದೇಶಿತ ನಿವೇಶನವು ಸಾರ್ವಜನಿಕ ರಸ್ತೆಯಿಂದ-

(1) ಅತಿ ಹತ್ತಿರದ ಖಾಯಂ ಸಿನಿಮಾ

(2) ಅತಿ ಹತ್ತಿರದ ಸಂಚಾರಿ ಸಿನಿಮಾ

(3) ಅತಿ ಹತ್ತಿರದ ಶೈಕ್ಷಣಿಕ ಸಂಸ್ಥೆ

(4) ಅತಿ ಹತ್ತಿರದ ಆಸ್ಪತ್ರೆ

(5) ಅತಿ ಹತ್ತಿರದ ದೇವಸ್ಥಾನ ಅಥವಾ ಇತರ ಧಾರ್ಮಿಕ ಸಂಸ್ಥೆಗೆ ಇರುವ ದೂರ

12. ಇತ್ತೀಚಿನ ಜನಗಣತಿಯ ಅಂಕಿಗಳಿಗನುಸಾರವಾಗಿ ಆ ಸ್ಥಳದ ಜನಸಂಖ್ಯೆ

13. ಸಿನಿಮಾ ಪ್ರದರ್ಶನಕ್ಕಾಗಿ ಹೊಸ ಸ್ಥಳದ ಸ್ಥಾಪನೆಯಿಂದ ಯಾವುದೇ ನಿರ್ದಿಷ್ಟ ಸ್ಥಳ ಅಥವಾ ಸ್ಥಳಗಳಿಗಾಗಿ ಒದಗಿಸಬಹುದಾದ ಪ್ರಯೋಜನ.

ಸ್ಥಳ :

ದಿನಾಂಕ : ಅರ್ಜಿದಾರನ ರುಜು

**ಟಿಪ್ಪಣಿ:** (1) ಅರ್ಜಿಯನ್ನು 89ನೇ ನಿಯಮದ ಮೇರೆಗೆ ಮಾಡಿಕೊಂಡಾಗ ಬಾಬು 10(3) ಅನ್ವಯವಾಗುವುದಿಲ್ಲ.

**ನಮೂನೆ "ಎಎ"**

**[105ನೇ ನಿಯಮ ನೋಡಿ]**

**ಸಿನಿಮಾ ಕಟ್ಟಡದ ನಿರ್ಮಾಣಕ್ಕೆ ಅರ್ಜಿ**

ಇವರಿಗೆ;

ಜಿಲ್ಲಾ ಮ್ಯಾಜಿಸ್ಟ್ರೇಟ್

--------- ಜಿಲ್ಲೆ,

- - - - -

ಮಾನ್ಯರೆ,

ನನ್ನ ಹೆಸರಿನಲ್ಲಿ ಪ್ರಸ್ತುತವಿರುವ ಸಂಚಾರಿ ಸಿನಿಮಾದಿಂದ ಅರೆ ಖಾಯಂ ಸಿನಿಮಾಗೆ ಪರಿವರ್ತಿಸುವುದಕ್ಕಾಗಿ "ನಿರಾಕ್ಷೇಪಣಾ ಪ್ರಮಾಣಪತ್ರದ" ಮಂಜೂರಾತಿಗಾಗಿ ನಾನು ಈ ಮೂಲಕ ಅರ್ಜಿ ಸಲ್ಲಿಸುತ್ತಿದ್ದೇನೆ ಮತ್ತು ಈ ಕೆಳಕಂಡಂತೆ ವಿವರಗಳನ್ನು ಕೊಟ್ಟಿದ್ದೇನೆ.

ಅರ್ಜಿದಾರನ ರುಜು

---

1. ಅರ್ಜಿದಾರನ ಪೂರ್ಣ ಹೆಸರು
2. ತಂದೆಯ/ಗಂಡನ ಹೆಸರು ಮತ್ತು ಉದ್ಯೋಗ
3. ಅರ್ಜಿದಾರನ ಖಾಯಂ ವಿಳಾಸ
   (i) ಗ್ರಾಮ/ಡೋರ್ ನಂ.
   (ii) ತಾಲ್ಲೂಕು/ವಾರ್ಡ್/ವಿಭಾಗ
   (iii) ಜಿಲ್ಲೆ
4. ಅರ್ಜಿದಾರನ ಈಗಿನ ಉದ್ಯೋಗ

4-ಎ. ಪ್ರಸ್ತುತವಿರುವ ಲೈಸೆನ್ಸಿನ ವಿವರಗಳು,-

(i) ಲೈಸೆನ್ಸಿನ ಸಂಖ್ಯೆ……----- ದಿನಾಂಕ ------
   (ii) ಸಿಂಧುತ್ವದ ಅವಧಿ ------------

5. ಅರ್ಜಿಯು,-
   (i) ಅರೆ - ಖಾಯಂ
   (ii) ವಿಶೇಷ ಸ್ವರೂಪದ ಸಿನಿಮಾ
6. ಸಿನಿಮಾವನ್ನು ಸ್ಥಾಪಿಸಲು ಉದ್ದೇಶಿಸಿದ ಸ್ಥಳ,-
   (i) ಆರ್.ಎಸ್. ಸಂಖ್ಯೆ/ನಿವೇಶನ ಸಂಖ್ಯೆ/ಸಿ.ಟಿ.ಎಸ್ ಸಂಖ್ಯೆ

(ii) ಗ್ರಾಮ/ಬಡಾವಣೆ/ವಾರ್ಡು/ವಿಭಾಗ

(iii) ತಾಲ್ಲೂಕು/ಪಟ್ಟಣ

(iv) ಜಿಲ್ಲೆ

7. ಭೂಮಿ/ ನಿವೇಶನವು ಅರ್ಜಿದಾರನ ಒಡೆತನದಲ್ಲಿದೆಯೆ

8. ಭೂಮಿ/ ನಿವೇಶನವು ಅರ್ಜಿದಾರನ ಒಡೆತನದಲ್ಲಿಲ್ಲದಿದ್ದರೆ-

(i) ಒಡೆಯನ ಹೆಸರು ಮತ್ತು ವಿಳಾಸ

(ii) ಅರ್ಜಿದಾರನ ಕಾನೂನುಸಮ್ಮತ ಅಧಿಭೋಗವನ್ನು ರುಜುವಾತುಪಡಿಸುವ ದಸ್ತಾವೇಜನ್ನು ಲಗತ್ತಿಸಲಾಗಿದೆಯೇ?

9. ಅಧಿನಿಯಮದ ಮೇರೆಗೆ ಯಾವುದೇ ಲೈಸೆನ್ಸ್ ಪಡೆದಂಥ ಇತರ ಸ್ಥಳಗಳು ಯಾವುವಾದರೂ ಇದ್ದರೆ ಆ ಸ್ಥಳಗಳ ಸ್ವಾಧೀನತೆಯನ್ನು ಅರ್ಜಿದಾರನು ಹೊಂದಿದ್ದಾನೆಯೇ :-

(ಎ) ಅದೇ ಸ್ಥಳದಲ್ಲಿ ಅಥವಾ ಬೇರೆ ಎಲ್ಲಾದರೂ ?

(ಬಿ) ಲೈಸೆನ್ಸ್‌ಗಾಗಿ ಅರ್ಜಿ ಮಾಡಿಕೊಳ್ಳುವ ಕಾಲದಲ್ಲಿದೆಯೇ ? ಅಥವಾ ಯಾವುದೇ ಹಿಂದಿನ ಕಾಲದಲ್ಲಿದೆಯೇ ಹೇಗೆ?

10. ಅರ್ಜಿಗೆ ಈ ಕೆಳಕಂಡವುಗಳನ್ನು ಲಗತ್ತಿಸಲಾಗಿದೆಯೇ ?

(1) ಖಾತಾ ಉದ್ಧೃತ

(2) ಭೂ ಕಂದಾಯ/ಪೌರಸಭಾ ತೆರಿಗೆಯನ್ನು ತೀರಿಸಿದ ಬಗ್ಗೆ ಪ್ರಮಾಣಪತ್ರ

(3) 105ನೇ ನಿಯಮದ ಮೇರೆಗೆ "ನಿರಾಕ್ಷೇಪಣಾ ಪ್ರಮಾಣಪತ್ರ" ಕ್ಕಾಗಿನ ಫೀಜು ಮತ್ತು 29ನೇ ನಿಯಮದ ಮೇರೆಗೆ ಫೀಜನ್ನು ಸಂದಾಯ ಮಾಡಿದ್ದಕ್ಕಾಗಿ ಖಜಾನೆ ಚಲನು

(4) ಪ್ರಸ್ತುತವಿರುವ ಸಂಚಾರಿ ಸಿನಿಮಾ ಕಟ್ಟಡದ ರೇಖಾ ಚಿತ್ರಗಳು.

11. ಉದ್ದೇಶಿತ ನಿವೇಶನವು ಸಾರ್ವಜನಿಕ ರಸ್ತೆಯಿಂದ-

(1) ಅತಿ ಹತ್ತಿರದ ಖಾಯಂ ಸಿನಿಮಾ

(2) ಅತಿ ಹತ್ತಿರದ ಸಂಚಾರಿ ಸಿನಿಮಾ

(3) ಅತಿ ಹತ್ತಿರದ ಶೈಕ್ಷಣಿಕ ಸಂಸ್ಥೆ

(4) ಅತಿ ಹತ್ತಿರದ ಆಸ್ಪತ್ರೆ

(5) ಅತಿ ಹತ್ತಿರದ ದೇವಸ್ಥಾನ ಅಥವಾ ಇತರ ಧಾರ್ಮಿಕ ಸಂಸ್ಥೆಗೆ ಇರುವ ದೂರ

12. ಇತ್ತೀಚಿನ ಜನಗಣತಿಯ ಅಂಕಿಗಳಿಗನುಸಾರವಾಗಿ ಆ ಸ್ಥಳದ ಜನಸಂಖ್ಯೆ

13. ಸಿನಿಮಾ ಪ್ರದರ್ಶನಕ್ಕಾಗಿ ಹೊಸ ಸ್ಥಳದ ಸ್ಥಾಪನೆಯಿಂದ ಯಾವುದೇ ನಿರ್ದಿಷ್ಟ ಸ್ಥಳ ಅಥವಾ ಸ್ಥಳಗಳಿಗಾಗಿ ಒದಗಿಸಬಹುದಾದ ಪ್ರಯೋಜನ.

ಸ್ಥಳ :

ದಿನಾಂಕ : ಅರ್ಜಿದಾರನ ರುಜು

**ನಮೂನೆ "ಎ-I"**

**[89ನೇ ನಿಯಮಗಳನ್ನು ನೋಡಿ]**

ಇವರಿಗೆ,

ಜಿಲ್ಲಾ ಮ್ಯಾಜಿಸ್ಟ್ರೇಟ್

--------- ಜಿಲ್ಲೆ,

- - - - -

ಮಾನ್ಯರೇ,

ನನ್ನ ಹೆಸರಿನಲ್ಲಿ ಸಂಚಾರಿ ಸಿನಿಮಾದ ಸ್ಥಾಪನೆಗಾಗಿ ಮತ್ತು ಪ್ರದರ್ಶನಕ್ಕಾಗಿ ಲೈಸೆನ್ಸಿನ ಮಂಜೂರಾತಿಗಾಗಿ ನಾನು ಈ ಮೂಲಕ ಅರ್ಜಿ ಸಲ್ಲಿಸುತ್ತಿದ್ದೇನೆ ಮತ್ತು ಈ ಕೆಳಕಂಡಂತೆ ವಿವರಗಳನ್ನು ಒದಗಿಸಿದ್ದೇನೆ.

ಅರ್ಜಿದಾರನ ರುಜು

---

**ಸಂಚಾರಿ ಸಿನಿಮಾದ ಸ್ಥಾಪನೆಗಾಗಿ ಮತ್ತು ಪ್ರದರ್ಶನಕ್ಕಾಗಿ ಲೈಸೆನ್ಸಿನ ಮಂಜೂರಾತಿಗಾಗಿ ಅರ್ಜಿ**

1. ಅರ್ಜಿದಾರನ ಪೂರ್ಣ ಹೆಸರು
2. ತಂದೆಯ/ಗಂಡನ ಹೆಸರು ಮತ್ತು ಉದ್ಯೋಗ
3. ಅರ್ಜಿದಾರನ ಖಾಯಂ ವಿಳಾಸ
   - (i) ಗ್ರಾಮ/ಡೋರ್ ನಂ.
   - (ii) ತಾಲ್ಲೂಕು/ವಾರ್ಡ್/ವಿಭಾಗ
   - (iii) ಜಿಲ್ಲೆ
4. ಅರ್ಜಿದಾರನ ಈಗಿನ ಉದ್ಯೋಗ
5. ಸಿನಿಮಾವನ್ನು ಸ್ಥಾಪಿಸಲು ಉದ್ದೇಶಿಸಿದ ಸ್ಥಳ,-
   - (i) ಆರ್.ಎಸ್. ಸಂಖ್ಯೆ/ನಿವೇಶನ ಸಂಖ್ಯೆ/ಸಿ.ಟಿ.ಎಸ್ ಸಂಖ್ಯೆ
   - (ii) ಗ್ರಾಮ/ಬಡಾವಣೆ/ವಾರ್ಡು/ವಿಭಾಗ
   - (iii) ತಾಲ್ಲೂಕು/ಪಟ್ಟಣ
   - (iv) ಜಿಲ್ಲೆ
6. ಭೂಮಿ/ ನಿವೇಶನವು ಅರ್ಜಿದಾರನ ಒಡೆತನದಲ್ಲಿದೆಯೆ
7. ಭೂಮಿ/ ನಿವೇಶನವು ಅರ್ಜಿದಾರನ ಒಡೆತನದಲ್ಲಿಲ್ಲದಿದ್ದರೆ-
   - (i) ಒಡೆಯನ ಹೆಸರು ಮತ್ತು ವಿಳಾಸ

(ii) ಅರ್ಜಿದಾರನ ಕಾನೂನುಸಮ್ಮತ ಅಧಿಭೋಗವನ್ನು ರುಜುವಾತುಪಡಿಸುವ ದಸ್ತಾವೇಜನ್ನು ಲಗತ್ತಿಸಲಾಗಿದೆಯೇ?

8. ಯಾವುದೇ ಇತರ ಸ್ಥಳಗಳಲ್ಲಿ ಸ್ವಾಧೀನತೆಯನ್ನು ಅರ್ಜಿದಾರನು ಹೊಂದಿದ್ದಾನೆಯೇ, ತಿಳಿಸಿ :-

(ಎ) ಅದೇ ಸ್ಥಳದಲ್ಲಿ ಅಥವಾ ಬೇರೆ ಎಲ್ಲಾದರೂ ?

(ಬಿ) ಮೊದಲನೇ ಬಾರಿ ಲೈಸೆನ್ಸ್‌ಗಾಗಿ ಅರ್ಜಿ ಮಾಡಿಕೊಳ್ಳುವ ಕಾಲದಲ್ಲಿದೆಯೇ ? ಅಥವಾ ಯಾವುದೇ ಹಿಂದಿನ ಕಾಲದಲ್ಲಿದೆಯೇ ಹೇಗೆ?

9. ಅರ್ಜಿಗೆ ಈ ಕೆಳಕಂಡ ದಸ್ತಾವೇಜುಗಳನ್ನು ಲಗತ್ತಿಸಲಾಗಿದೆಯೇ ?

(1) ಖಾತಾ ಉದ್ಧೃತ

(2) ಭೂ ಕಂದಾಯ/ಪೌರಸಭಾ ತೆರಿಗೆ/ಸರ್ಕಾರಿ ತೆರಿಗೆಯನ್ನು ತೀರಿಸಿದ ಬಗ್ಗೆ ಪ್ರಮಾಣಪತ್ರ

(3) 89ನೇ ನಿಯಮದ ಮೇರೆಗೆ ಲೈಸೆನ್ಸಿಗಾಗಿ ಫೀಜುಗಳನ್ನು ಸಂದಾಯ ಮಾಡಿದ್ದಕ್ಕಾಗಿ ಖಜಾನೆ ಚಲನು

(4) 94ನೇ ನಿಯಮದ ಮೇರೆಗೆ ಅಗತ್ಯಪಡಿಸಿದ ವಿವರಗಳನ್ನು ತೋರಿಸುವ ರೇಖಾ ಚಿತ್ರಗಳು.

10. ಉದ್ದೇಶಿತ ನಿವೇಶನವು ಸಾರ್ವಜನಿಕ ರಸ್ತೆಯಿಂದ,-

(1) ಅತಿ ಹತ್ತಿರದ ಖಾಯಂ ಸಿನಿಮಾ

(2) ಅತಿ ಹತ್ತಿರದ ಸಂಚಾರಿ ಸಿನಿಮಾ

(3) ಅತಿ ಹತ್ತಿರದ ಶೈಕ್ಷಣಿಕ ಸಂಸ್ಥೆ

(4) ಅತಿ ಹತ್ತಿರದ ಆಸ್ಪತ್ರೆಗಳು / ಅಥವಾ ಇತರ ಧಾರ್ಮಿಕ ಸಂಸ್ಥೆಗೆ ಇರುವ ದೂರ

11. ಜನಗಣತಿಯ ಅಂಕಿಗಳಿಗನುಸಾರವಾಗಿ ಆ ಸ್ಥಳದ ಜನಸಂಖ್ಯೆ

12. ಹೊಸ ಸ್ಥಳದಲ್ಲಿ ಸಿನಿಮಾ ಪ್ರದರ್ಶನಕ್ಕಾಗಿ ಸ್ಥಾಪನೆಯಿಂದ ಯಾವುದೇ ನಿರ್ದಿಷ್ಟ ಸ್ಥಳ ಅಥವಾ ಸ್ಥಳಗಳಿಗಾಗಿ ಒದಗಿಸಬಹುದಾದ ಪ್ರಯೋಜನ.

ಸ್ಥಳ :

ದಿನಾಂಕ : ಅರ್ಜಿದಾರನ ರುಜು

## ನಮೂನೆ "ಬಿ"

**[24(1)ನೇ ಮತ್ತು 116ನೇ ನಿಯಮಗಳನ್ನು ನೋಡಿ]**

**ಕರ್ನಾಟಕ ಸಿನಿಮಾ (ನಿಯಂತ್ರಣ) ನಿಯಮಗಳು, 2014ರ ಮೇರೆಗೆ ಅರ್ಜಿದಾರನಿಂದ ನೋಟೀಸು**

--------------- ಜಿಲ್ಲೆ ------------ ಪಟ್ಟಣ --------- ಗ್ರಾಮದ/ಮನೆ ನಂಬರಿನಲ್ಲಿ ವಾಸವಾಗಿರುವ ----------ವಯಸ್ಸಿನ ಮಗ/ಮಗಳು/ಹೆಂಡತಿಯಾದ ----------- ನಾನು ನನಗೆ ಶ್ರೀ/ಶ್ರೀಮತಿಗೆ ಸೇರಿದ ಮತ್ತು ------------ಜಿಲ್ಲೆ -------- ತಾಲ್ಲೂಕು ---------- ಪಟ್ಟಣದ ------------ ಗ್ರಾಮದ ---------- ವಾರ್ಡು --------- ವಿಭಾಗದ ---------- ಇಎಸ್/ನಿವೇಶನ/ಸಿ.ಟಿ.ಎಸ್ ಸಂಖ್ಯೆಯನ್ನು ಹೊಂದಿರುವ ಮತ್ತು ಸುಮಾರು ---------- ಚದರ ಮೀಟರುಗಳ ಅಳತೆಯ ಮತ್ತು ಈ ಕೆಳಕಂಡಂತೆ ಚೆಕ್ಕುಬಂದಿಯುಳ್ಳ ಭೂಮಿಯ ಮೇಲೆ (ಖಾಯಂ/ ಡ್ರೈವ್ ಇನ್/ ಸಂಚಾರಿ ಸಿನಿಮಾಗಳನ್ನು) ಸ್ಥಾಪಿಸಲು ನಾನು ಉದ್ದೇಶಿಸಿರುವೆನೆಂಬ ನೋಟೀಸನ್ನು ದಯವಿಟ್ಟು ಸ್ವೀಕರಿಸಿ.

**(ಇಲ್ಲಿ ನಿವೇಶನದ ಸರಹದ್ದನ್ನು ನೀಡುವುದು)**

ನಾನು ಗಮನಿಸಬಹುದಾದಂಥ ಸಮಯದೊಳಗೆ - - - - ಜಿಲ್ಲೆಯ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಸದರಿ ಸಿನಿಮಾದ ಸ್ಥಳಕ್ಕೆ ಯಾವುದೇ ಆಕ್ಷೇಪಣೆಗಳನ್ನು ದಾಖಲು ಮಾಡುತ್ತೇನೆಂದು ಈ ಮೂಲಕ ಗಮನಕ್ಕೆ ತರಲಾಗಿದೆ.

**ಒಡೆಯ/ಗೇಣಿದಾರ**

## ನಮೂನೆ "ಸಿ"

**[25(1)ನೇ ಮತ್ತು 117ನೇ ನಿಯಮಗಳನ್ನು ನೋಡಿ]**

**ಕರ್ನಾಟಕ ಸಿನಿಮಾ (ನಿಯಂತ್ರಣ) ನಿಯಮಗಳು, 2014ರ ಮೇರೆಗೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಯವರಿಂದ ನೋಟೀಸು**

-------------- ಜಿಲ್ಲೆಯ ------------ ಪಟ್ಟಣದ ------------------ ತಾಲ್ಲೂಕು/ವಾರ್ಡು/ಸಂಖ್ಯೆ/ವಿಭಾಗ-------------------ದ ------------------- ಗ್ರಾಮ --------------- ನಂಬರಿನ ಮನೆಯ ನಿವಾಸಿಯಾದ ನಾನು --------------------ವರ್ಷದ ವಯಸ್ಸಿನ ಶ್ರೀ ------------ ರವರ ಮಗ/ಮಗಳು/ಹೆಂಡತಿಯಾದ ಶ್ರೀ/ಶ್ರೀಮತಿ ------------ಯು ಅವನು/ಅವಳು ಶ್ರೀ/ಶ್ರೀಮತಿ---------------ಗೆ ಸೇರಿದ ಮತ್ತು ------------------- ಜಿಲ್ಲೆಯ --------------- ತಾಲ್ಲೂಕು/ಪಟ್ಟಣದ ------------------ ಗ್ರಾಮ/ವಾರ್ಡು/ವಿಭಾಗದ ರೆವಿನ್ಯೂ ಸರ್ವೆ ನಂಬರುಗಳು/ನಿವೇಶನ/ಸಿ.ಟಿ.ಎಸ್ ಸಂಖ್ಯೆ------------------ ಗಳ ಮತ್ತು -------------- ಸುಮಾರು --------------- ಚದರ ಮೀ/ಮತ್ತು ಕೆಳಕಂಡ ಚಕ್ಕುಬಂದಿಯುಳ್ಳ ಭೂಮಿಯ ಮೇಲೆ ಖಾಯಂ/ಡ್ರೈವ್ ಇನ್/ಸಂಚಾರಿ ಸಿನಿಮಾವನ್ನು ಸ್ಥಾಪಿಸುವುದಕ್ಕಾಗಿ ನಿರಾಕ್ಷೇಪಣಾ ಪ್ರಮಾಣಪತ್ರದ ಮಂಜೂರಾತಿಗಾಗಿ ನಾನು ಅರ್ಜಿಯನ್ನು ಸಲ್ಲಿಸಿರುವುದರಿಂದ:

(ಇಲ್ಲಿ ನಿವೇಶನದ ಸರಹದ್ದನ್ನು ನೀಡುವುದು)

ಹಿಂದೆ ಹೇಳಿದಂತೆ "ನಿರಾಕ್ಷೇಪಣಾ ಪ್ರಮಾಣಪತ್ರದ" ಮಂಜೂರಾತಿಗಾಗಿ ಯಾವುದೇ ಆಕ್ಷೇಪಣೆ ಹೊಂದಿರುವ ಯಾರೇ ವ್ಯಕ್ತಿಯು 20------------ ದಿವಸದೊಳಗೆ ಕೆಳಗೆ ರುಜು ಮಾಡಿರುವವರಿಗೆ ಲಿಖಿತದಲ್ಲಿ ಅವನ ಆಕ್ಷೇಪಣೆಯನ್ನು ಸಲ್ಲಿಸತಕ್ಕದ್ದೆಂದು ಈ ಮೂಲಕ ನೋಟೀಸು ಕೊಡಲಾಗಿದೆ. ಆ ದಿನಾಂಕದ ನಂತರ ಸ್ವೀಕರಿಸಿದ ಯಾವುದೇ ಆಕ್ಷೇಪಣೆಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ.

20 ------- ರ --------- ಈ ದಿವಸದಂದು ನನ್ನ ರುಜುವಿನೊಂದಿಗೆ ಕೊಡಲಾಗಿದೆ

ಲೈಸೆನ್ಸ್ ನೀಡುವ ಪ್ರಾಧಿಕಾರದ
ಜಿಲ್ಲಾ ಮ್ಯಾಜಿಸ್ಟ್ರೇಟ್

**ನಮೂನೆ "ಡಿ"**

**[27(1) ಮತ್ತು 118(1)ನೇ ನಿಯಮಗಳನ್ನು ನೋಡಿ]**

**ಕರ್ನಾಟಕ ಸಿನಿಮಾ (ನಿಯಂತ್ರಣ) ನಿಯಮಗಳು, 2014ರ ಮೇರೆಗಿನ ನಿರಾಕ್ಷೇಪಣಾ ಪ್ರಮಾಣಪತ್ರ**

ಕರ್ನಾಟಕ ಸಿನಿಮಾಗಳ (ನಿಯಂತ್ರಣ) ನಿಯಮಗಳು, 2014ರ 27ನೇ ನಿಯಮದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ----------- ಜಿಲ್ಲೆ ------------- ಜಿಲ್ಲಾ/ಹೆಚ್ಚುವರಿ ಜಿಲ್ಲಾ ಮ್ಯಾಜಿಸ್ಟ್ರೇಟರಾದ ----------------------------- ನಾನು, ಅವನು/ಅವಳು/ಶ್ರೀ/ ಶ್ರೀಮತಿಗೆ ಸೇರಿದ ಮತ್ತು ----------------- ಜಿಲ್ಲೆಯ --------------- ತಾಲ್ಲೂಕು/ ಪಟ್ಟಣ --------------- --------- ಗ್ರಾಮ/ವಾರ್ಡು/ವಿಭಾಗದ ರೆವಿನ್ಯೂ ಸರ್ವೆ/ನಿವೇಶನ/ಸಿ.ಟಿ.ಎಸ್ ಸಂಖ್ಯೆ ಹೊಂದಿರುವ ಮತ್ತು ಸುಮಾರು ---------------- ಚದರ ಮೀಟರುಗಳ/ಹೆಚ್ಎ ಅಳತೆಯ ಮತ್ತು ಈ ಕೆಳಕಂಡ ಚಕ್ಕುಬಂದಿಯುಳ್ಳ ಭೂಮಿಯಲ್ಲಿ ಖಾಯಂ/ಡ್ರೈವ್-ಇನ್/ಸಂಚಾರಿ ಸಿನಿಮಾ/ಅರೆ ಖಾಯಂ ಸಿನಿಮಾದ ಸ್ಥಾಪನೆಗಾಗಿ ----------------- ಜಿಲ್ಲೆ --------------- ಪಟ್ಟಣದ ---------------- ತಾಲ್ಲೂಕು --------- ವಾರ್ಡು/ವಿಭಾಗದ ಗ್ರಾಮ/ಮನೆಯಲ್ಲಿ ವಾಸವಾಗಿರುವ ----------------- ವರ್ಷಗಳ ವಯಸ್ಸಿನ ------------- ಮಗ/ಮಗಳು/ಹೆಂಡತಿಯಾದ ಶ್ರೀ/ಶ್ರೀಮತಿಗೆ ಯಾವುದೇ `ಆಕ್ಷೇಪಣೆ ಇಲ್ಲ' ವೆಂದು ಪ್ರಮಾಣಪತ್ರವನ್ನು ಈ ಮೂಲಕ ಮಂಜೂರು ಮಾಡಿರುತ್ತೇನೆ.

**ನಮೂನೆ 'ಬಿ' ದಲ್ಲಿಯಂತೆ ನಿವೇಶನದ ವಿವರವನ್ನು ದಯವಿಟ್ಟು ಇಲ್ಲಿ ನೀಡುವುದು.**

(ಈ "ನಿರಾಕ್ಷೇಪಣಾ ಪ್ರಮಾಣಪತ್ರವು" 27ನೇ ನಿಯಮ ಅಥವಾ ಸಂದರ್ಭಾನುಸಾರ 118(1)ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ಅವಧಿಯವರೆಗೆ ಸಿಂಧುವಾಗಿರುತ್ತದೆ.)

20 ------- ರ --------- ಈ ದಿವಸದಂದು ನನ್ನ ರುಜುವಿನೊಂದಿಗೆ ಕೊಡಲಾಗಿದೆ

ಲೈಸೆನ್ಸ್ ನೀಡುವ ಪ್ರಾಧಿಕಾರ, ------------- ನಲ್ಲಿ
ಜಿಲ್ಲಾ ಮ್ಯಾಜಿಸ್ಟ್ರೇಟ್

**ನಮೂನೆ “ಇ”**

**[34(2) (ಬಿ)ನೇ ನಿಯಮ ನೋಡಿ]**

**ಕರ್ನಾಟಕ ಸರ್ಕಾರ**

**(ವಿದ್ಯುತ್ ಪರಿವೀಕ್ಷಣಾಲಯ ಇಲಾಖೆ)**

------------------------------------------------- ಕಛೇರಿ

ಪ್ರಮಾಣ ಪತ್ರದ ಸಂಖ್ಯೆ--------------- ದಿನಾಂಕ : ---------------

ಕರ್ನಾಟಕ ಸಿನಿಮಾಗಳ (ನಿಯಂತ್ರಣ) ನಿಯಮಗಳು, 2014ರ 34ನೇ ನಿಯಮದ ಮೇರೆಗೆ, ನಾನು --------------------- ಎಂದು ಕರೆಯಲಾದ ಮತ್ತು ----------------ರಂದು ----------------ನಲ್ಲಿ ಶ್ರೀ ------------------- ಅವರು ಮಾಲೀಕ/ವ್ಯವಸ್ಥಾಪನ ನಿರ್ದೇಶಕನಾದ ಮತ್ತು ಶ್ರೀ ---------------- ಅವರು ವ್ಯವಸ್ಥಾಪಕ/ನಿರ್ದೇಶಕ ಅಥವಾ ಪ್ರಭಾರದಲ್ಲಿರುವ ವ್ಯಕ್ತಿಯಾಗಿರುವಂಥ ಹಿಂದೆ ವಿಶೇಷವಾಗಿ ವಿವರಿಸಿದ ಸಿನಿಮಾದ ಸಭಾಂಗಣ, ಸಿನಿಮಾ ಸಲಕರಣೆ ಮತ್ತು ಸ್ಥಾವರ ಮತ್ತು ವಿದ್ಯುಚ್ಛಕ್ತಿ ಸ್ಥಾಪನೆಯು ಮೂಕಿ (ಟಾಕಿ ಅಲ್ಲದ) ಫಿಲ್ಮುಗಳಿಗೆ ಮಾತ್ರ/ಮೂಕಿ ಮತ್ತು ಟಾಕಿ ಫಿಲ್ಮುಗಳೆರಡಕ್ಕೂ ಯೋಗ್ಯವಾಗಿದೆಯೆಂದು ಪ್ರಮಾಣೀಕರಿಸುತ್ತೇನೆ.

ಈ ಪ್ರಮಾಣಪತ್ರವು -------------- ದಿಂದ --------------ವರೆಗಿನ ---------------- ಅವಧಿಗೆ ಸಿಂಧುವಾಗಿದೆ. ಆದರೆ ಅ ಅವಧಿಯೊಳಗೆ ರದ್ದಿಯಾತಿಗೆ ಗುರಿಯಾಗುತ್ತದೆ.

ಅಧಿಕಾರಿಯ ರುಜು.

**ಸಾಧನ ಸಾಮಗ್ರಿಯ ವಿವರಗಳು**

| ಉಪಕರಣ | ತಯಾರಕನ ಹೆಸರು | ಸಂಖ್ಯೆ | ಸಾಮರ್ಥ್ಯ |
|---|---|---|---|
| ಪ್ರೊಜೆಕ್ಟರ್<br>ಪ್ರೊಜೆಕ್ಟರ್ ಮೋಟಾರು<br>ರೆಕ್ಟಿಫಾಯರ್<br>ಟ್ರಾನ್ಸ್‌ಫಾರ್ಮರ್<br>ಧ್ವನಿವರ್ಧಕ<br>ಯಾವುದೇ ಇತರ ಸ್ಥಾವರಗಳು | | | |

[ಟಿಪ್ಪಣಿ : ಪ್ರಮಾಣಪತ್ರದ ಮರುಮಂಜೂರಾತಿಗಾಗಿ, ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಿದಂತೆ ನಿಯಮಿಸಿದ ಪರಿಶೀಲನಾ ಫೀಜನ್ನು ಸಂದಾಯ ಮಾಡಿರುವ ಚಲನ್ ಅನ್ನು, ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾಂತೆ ಸಂದರ್ಭಾನುಸಾರ ವಿದ್ಯುಚ್ಛಕ್ತಿ

ಪರಿಶೀಲನ ಇಲಾಖೆಯ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಅಧಿಕಾರಿಗೆ ಪ್ರಮಾಣಪತ್ರದ ಮುಕ್ತಾಯದ ದಿನಾಂಕದ ಒಂದು ತಿಂಗಳು ಮುಂಚೆ ಕಳುಹಿಸತಕ್ಕದ್ದು.]

**ನಮೂನೆ "ಎಫ್"**

**(36ನೇ ಮತ್ತು 140ನೇ ನಿಯಮಗಳನ್ನು ನೋಡಿ)**

**ಕರ್ನಾಟಕ ಸಿನಿಮಾಗಳ (ನಿಯಂತ್ರಣ) ನಿಯಮಗಳು, 2014ರ ಮೇರೆಗೆ [ಖಾಯಂ /ಡ್ರೈವ್‌ಇನ್ ಸಿನಿಮಾದಲ್ಲಿ] ಚಲನಚಿತ್ರ ಆಟಗಳ ಪ್ರದರ್ಶನಕ್ಕಾಗಿ ಲೈಸೆನ್ಸ್**

1. ಲೈಸೆನ್ಸ್‌ದಾರನ ಹೆಸರು ಮತ್ತು ವಿಳಾಸ
2. ಲೈಸೆನ್ಸ್‌ದಾರನು ಸಿನಿಮಾ ಥಿಯೇಟರಿನ ಒಡೆಯನಾಗಿಲ್ಲದಿದ್ದರೆ, ಅದರ ಒಡೆಯನ ಹೆಸರು ಮತ್ತು ವಿಳಾಸ
3. ಸಿನಿಮಾ ಥಿಯೇಟರಿನ ಜಾಗ
4. ಚದರ ಮೀಟರುಗಳಲ್ಲಿ ಥಿಯೇಟರಿನ ಪ್ರದೇಶ
5. ಯಾವ ಸಾಮಗ್ರಿಗಳಿಂದ ಛಾವಣಿ, ಪಕ್ಕದ ಗೋಡೆಗಳು, ಗ್ಯಾಲರಿಗಳು ಮತ್ತು ಸ್ಟೇರ್‌ಕೇಸ್‌ಗಳನ್ನು ಮಾಡಲಾಗಿದೆಯೋ ಆ ಸಾಮಗ್ರಿಗಳು
6. ಕಾರ್ಯನಿರ್ವಾಹಕ ಅಭಿಯಂತರರಿಂದ ಕೊನೆಯ ಪರಿಶೀಲನೆಯ ದಿನಾಂಕ
7. ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಈ ಬಗ್ಗೆ ಅವನು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯಿಂದ ಕೊನೆಯ ಪರಿಶೀಲನೆಯ ದಿನಾಂಕ
8. ಆರೋಗ್ಯಾಧಿಕಾರಿಯಿಂದ ಕೊನೆಯ ಪರಿಶೀಲನೆ ದಿನಾಂಕ
9. ಲೈಸೆನ್ಸ್ ನೀಡುವ ಪ್ರಾಧಿಕಾರಿಯಿಂದ ಕೊನೆಯ ಪರಿಶೀಲನೆಯ ದಿನಾಂಕ
10. ಯಾವ ವಿಶೇಷ ಷರತ್ತುಗಳ ಮೇಲೆ ಲೈಸೆನ್ಸ್‌ನ್ನು ಮಂಜೂರು ಮಾಡಲಾಗಿದೆಯೋ ಆ ವಿಶೇಷ ಷರತ್ತುಗಳು ಯಾವುವಾದರೂ ಇದ್ದರೆ ಅವು
11. ಲೈಸೆನ್ ಜಾರಿಯಲ್ಲಿರಬೇಕಾದಂಥ ಅವಧಿ
12. ಸಂದಾಯ ಮಾಡಿದ ಫೀಜು
13. ಸಭಾಂಗಣದ ಪ್ರತಿಯೊಂದು ಭಾಗದಲ್ಲಿ ಹೋಗಲು ಅನುಮತಿಸಿದ ವ್ಯಕ್ತಿಗಳ ಗರಿಷ್ಠ ಸಂಖ್ಯೆ

| | ವ್ಯಕ್ತಿಗಳು |
|---|---|
| ಮೊದಲ ದರ್ಜೆಯಲ್ಲಿ | |
| ----------------ಯಲ್ಲಿ | |
| ----------------ಯಲ್ಲಿ | |
| ----------------ಯಲ್ಲಿ | ಒಟ್ಟು --------- |

## ಲೈಸೆನ್ಸಿನ ಷರತ್ತುಗಳು

ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮ, 1964ರ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೊಳಪಟ್ಟು ಲೈಸೆನ್ಸ್‌ನ್ನು ಮಂಜೂರ್ಮಾಡಲಾಗಿದೆ. ಅದು ಈ ಕೆಳಕಂಡ ಷರತ್ತುಗಳಿಗೂ ಸಹ ಒಳಪಟ್ಟಿರುತ್ತದೆ:-

(1) ಸಾರ್ವಜನಿಕರಿಗೆ ಸಾಂಕ್ರಾಮಿಕ ರೋಗಗಳು ಮತ್ತು ಅದೇ ರೀತಿಯ ಆರೋಗ್ಯಕ್ಕೆ ಸಂಬಂಧಿಸಿದ ಅಪಾಯಗಳ ಸಮಯ ಅಥವಾ ದುರ್ಘಟನೆಗಳ ಸಂದರ್ಭ ಯಾವುದಾದರೂ ಇದ್ದರೆ, ಸಾಮಾನ್ಯವಾಗಿ, ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಜಿಲ್ಲಾ ಆರೋಗ್ಯ ಅಧಿಕಾರಿ, ತಾಲ್ಲೂಕು ಆರೋಗ್ಯ ಅಧಿಕಾರಿ ಅಥವಾ ಪುರಸಭೆಯ ಆರೋಗ್ಯ ಅಧಿಕಾರಿಯ ಜೊತೆ ಸಮಾಲೋಚಿಸಿ ಹಾಗೆ ಸಲಹೆ ನೀಡುವುದಾದರೆ, ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದು,-

(ಎ) ಅಗತ್ಯತೆ ಉದ್ಭವಿಸಿದರೆ, ಸಂಪೂರ್ಣವಾಗಿ ನಿಲ್ಲಿಸುವುದು;

(ಬಿ) 49ನೇ ನಿಯಮದಲ್ಲಿ ಒದಗಿಸಲಾದ ಸ್ಥಳಾವಕಾಶದ ಪ್ರಮಾಣವನ್ನು ಕಡಿಮೆಗೊಳಿಸುವುದು;

(ಸಿ) ಸೋಂಕು ಸ್ಥಳಗಳಿಗೆ, ನಿಯತಕಾಲಿಕವಾಗಿ ಸೋಂಕುನಾಶಕ ಒಳಗೊಂಡಿರುವುದನ್ನು ಸಿಂಪಡಿಸಬಹುದು ಮತ್ತು ರೋಗಕಾರಕ ಕ್ರಿಮಿಗಳನ್ನು ನಾಶಗೊಳಿಸಬಹುದು.

(ಡಿ) ಅಂತಹ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರಬಹುದಾದಂತೆ ಉತ್ತಮ ವಾಯು ಸಂಚಾರಕ್ಕಾಗಿ ಅಂತಹ ಇತರೆ ಕ್ರಮಗಳನ್ನು ಅಳವಡಿಸಿಕೊಳ್ಳುವುದು ಮತ್ತು ಲೈಸೆನ್ಸುದಾರನು ಯಾವುದೇ ಅಂತಹ ನಿರ್ದೇಶನಗಳನ್ನು ಕೂಡಲೇ ಪಾಲಿಸತಕ್ಕದ್ದು ಮತ್ತು ಹಾಗೆ ಮಾಡಲು ವಿಫಲನಾದ ಸಂದರ್ಭದಲ್ಲಿ, ಆತನಿಗೆ ಮಂಜೂರು ಮಾಡಿದ ಲೈಸೆನ್ಸನ್ನು ರದ್ದುಗೊಳಿಸಲು ಹೊಣೆಯಾಗತಕ್ಕದ್ದು.

2. ಲೈಸೆನ್ಸ್‌ದಾರನನ್ನು ಅಥವಾ ಆತನ ನೌಕರರನ್ನು ಅಥವಾ ಏಜೆಂಟರನ್ನು ಯಾವುದೇ ಇತರ ಕಾನೂನು ಅಥವಾ ಅದರ ಮೇರೆಗೆ ರಚಿಸಲಾದ ನಿಯಮ ಅಥವಾ ಉಪನಿಯಮದ ಮೂಲಕ ಅಗತ್ಯಪಡಿಸಿದ ಯಾವುದೇ ಇತರ ಲೈಸೆನ್ಸನ್ನು ತೆಗೆದುಕೊಳ್ಳುವುದರಿಂದ ಅಥವಾ ಅನ್ಯಥಾ ಅವುಗಳನ್ನು ಪಾಲಿಸುವುದರಿಂದ ಈ ಲೈಸೆನ್ಸ್ ವಿನಾಯಿತಿಗೊಳಿಸುವುದಿಲ್ಲ.

3(ಎ) ಚಲನಚಿತ್ರ ಅಧಿನಿಯಮ, 1952ರ 4ನೇ ಪ್ರಕರಣದ ಮೇರೆಗೆ ರಚಿಸಿದ ಪ್ರಾಧಿಕಾರಿಯು, ಸಾರ್ವಜನಿಕ ಪ್ರದರ್ಶನಕ್ಕಾಗಿ ಯೋಗ್ಯವಾಗಿದೆಯೆಂದು ಪ್ರಮಾಣೀಕರಿಸಿದಂಥ ಮತ್ತು ಅದನ್ನು ಪ್ರದರ್ಶಿಸಿದಾಗ ಆ ಪ್ರಾಧಿಕಾರಿಯು ನಿಯಮಿಸಿದ ಗುರುತನ್ನು ಪ್ರದರ್ಶಿಸುವಂಥ ಮತ್ತು ಅದಕ್ಕೆ ಅಂತಹ ಗುರುತನ್ನು ಹಾಕಿದಾಗಿನಿಂದ ಯಾವುದೇ ರೀತಿಯಲ್ಲಿ ಅದನ್ನು ಬದಲಾಯಿಸಿರದ ಅಥವಾ ಅಕ್ರಮವಾಗಿ ತಿದ್ದಿಲ್ಲದಂಥ ಚಲನಚಿತ್ರವನ್ನು ಹೊರತುಪಡಿಸಿ ಯಾವುದೇ ಇತರ ಚಲನಚಿತ್ರವನ್ನು,-

[ಪರಂತು, ಈ ಷರತ್ತು ಮುಂಬೈ ಫಿಲ್ಮ್ ವಿಭಾಗವು ತಯಾರಿಸಿದ ನ್ಯೂಸ್ ರೀಲುಗಳ ಪ್ರದರ್ಶನಕ್ಕೆ ಅನ್ವಯಿಸತಕ್ಕದ್ದಲ್ಲ];

(ಬಿ) ಫಿಲ್ಮು ಸೆನ್ಸಾರ್ ಮಂಡಲಿಯು ವಯಸ್ಕರಿಗೆ ಪರಿಮಿತಿಗೊಳಿಸಿದ, ಸಾರ್ವಜನಿಕ ಪ್ರದರ್ಶನಕ್ಕಾಗಿ ಯೋಗ್ಯವಾಗಿದೆಯೆಂದು ಪ್ರಮಾಣೀಕರಿಸಿದಂಥ ಯಾವುದೇ ಫಿಲ್ಮನ್ನು ವಯಸ್ಕನಲ್ಲದ ಯಾರೇ ವ್ಯಕ್ತಿಗೆ ;

(ಸಿ) ಯಾವ ಫಿಲ್ಮಿನ ಪ್ರದರ್ಶನವನ್ನು ಅಧಿನಿಯಮದ 6ನೇ ಪ್ರಕರಣದ ಮೇರೆಗೆ ಅಮಾನತು ಗೊಳಿಸಲಾಗಿದೆಯೋ ಆ ಯಾವುದೇ ಫಿಲ್ಮನ್ನು

- ಲೈಸೆನ್ಸ್‌ದಾರನು ಪ್ರದರ್ಶಿಸತಕ್ಕದ್ದಲ್ಲ ಅಥವಾ ಪ್ರದರ್ಶಿಸಲು ಅನುಮತಿಸತಕ್ಕದ್ದಲ್ಲ.

ಈ ಷರತ್ತಿನ (ಬಿ) ಖಂಡದ ಉದ್ದೇಶಕ್ಕಾಗಿ, ಯಾರೇ ವ್ಯಕ್ತಿಯ ವಯಸ್ಸಿಗೆ ಸಂಬಂಧಿಸಿದಂತೆ ಯಾವುದೇ ಸಂದೇಹವಿದ್ದರೆ, ಆ ಪ್ರಶ್ನೆಗೆ ಸಂಬಂಧಿಸಿದಂತೆ ಸದ್ಭಾವನೆಯಿಂದ ವ್ಯವಸ್ಥಾಪಕನು ಕೊಟ್ಟ ತೀರ್ಮಾನವನ್ನು ಪ್ರಶ್ನಿಸತಕ್ಕದ್ದಲ್ಲ ಮತ್ತು ವಯಸ್ಕನೆಂದು ಕ್ಲೇಮು ಮಾಡುವ ಯಾರೇ ವ್ಯಕ್ತಿಯ ವಯಸ್ಸಿಗೆ ಸಂಬಂಧಿಸಿದಂತೆ ವ್ಯವಸ್ಥಾಪಕನಿಗೆ ಯುಕ್ತ ಸಂದೇಹವಿರುವಲ್ಲಿ, ವ್ಯವಸ್ಥಾಪಕನು ಫಿಲ್ಮಿನ ಪ್ರದರ್ಶನಕ್ಕೆ ಅವನಿಗೆ ಪ್ರವೇಶ ಕೊಡುವುದಕ್ಕೆ ಮುಂಚೆ ಈ ಕೆಳಕಂಡ ನಮೂನೆಯಲ್ಲಿ ಅವನ ಟಿಕೆಟ್‌ನ

ಪಕ್ಕಾಪ್ರತಿಯ ಹಿಂಬದಿಯಲ್ಲಿ ಘೋಷಣೆಯನ್ನು ಮಾಡಲು ಅಂತಹ ವ್ಯಕ್ತಿಯನ್ನು ಅಗತ್ಯಪಡಿಸತಕ್ಕದ್ದು ಮತ್ತು ತನಿಖೆಯನ್ನು ನಡೆಸಿದ ಮೇಲೆ, ಆ ಘೋಷಣೆಯು ಸುಳ್ಳಾಗಿರುವುದಾಗಿ ಕಂಡುಬಂದರೆ, ಭಾರತ ದಂಡ ಸಂಹಿತೆಯ 199ನೇ ಪ್ರಕರಣದ ಮೇರೆಗಿನ ಅಪರಾಧಕ್ಕಾಗಿ ಪ್ರಾಸಿಕ್ಯೂಷನ್ನಿಗೆ ಗುರಿಯಾಗಲು ಆತನು ಹೊಣೆಗಾರನಾಗಿರುವನೆಂದು ಆತನಿಗೆ ವಿವರಿಸತಕ್ಕದ್ದು.

**ಘೋಷಣೆ**

------------- ಇಲ್ಲಿ (ಪೂರ್ಣ ವಿಳಾಸ ತಿಳಿಸಿ) ವಾಸಿಸುವ ನಾನು ---------------- ಹದಿನೆಂಟು ವರ್ಷಗಳಿಗಿಂತ ಹೆಚ್ಚು ವಯಸ್ಸಿನವನಿದ್ದೇನೆಂದು ಈ ಮೂಲಕ ಶ್ರದ್ಧಾಪೂರ್ವಕವಾಗಿ ಘೋಷಿಸುತ್ತೇನೆ.

ಸಹಿ

3. ಲೈಸೆನ್ಸ್‌ದಾರನು, ಸಿನಿಮಾ ಥಿಯೇಟರಿನ ಒಳಗಡೆಯಾಗಲಿ ಅಥವಾ ಹೊರಗೆ ಆಗಲಿ ಸಭ್ಯತೆ ಅಥವಾ ನೈತಿಕತೆಯ ದೃಷ್ಟಿಕೋನದಿಂದ ಆಕ್ಷೇಪಣಾರ್ಹವಾದಂಥ ಯಾವುದೇ ಜಾಹೀರಾತು ಮಾಡುವ ವಿಷಯ ಅಥವಾ ಸಚಿತ್ರ ನಿರೂಪಣೆಯನ್ನು ಪ್ರದರ್ಶಿಸತಕ್ಕದ್ದಲ್ಲ ಅಥವಾ ಪ್ರದರ್ಶಿಸಲು ಅನುಮತಿಸತಕ್ಕದ್ದಲ್ಲ.

4. ಲೈಸೆನ್ಸ್‌ದಾರನು, ಕೇಂದ್ರ ಚಲನಚಿತ್ರ ಪರಿಶೀಲನಾ ಮಂಡಲಿ ಅಥವಾ ಕೇಂದ್ರ ಸರ್ಕಾರದ ಆದೇಶಗಳ ಮೇರೆಗೆ ಯಾವುದೇ ಚಲನಚಿತ್ರದಿಂದ ಕತ್ತರಿಸಲಾಗಿರುವಂಥ ದೃಶ್ಯ ಅಥವಾ ಛಾಯಾಚಿತ್ರವನ್ನು ನಿರೂಪಿಸುವ ಅಥವಾ ತೋರಿಸುವ ಅಥವಾ ತೋರಿಸುವುದೆಂದು ತಾತ್ಪರ್ಯವಾಗುವಂಥ ಯಾವುದೇ ಛಾಯಾಚಿತ್ರ ಅಥವಾ ಭಿತ್ತಿ ಪತ್ರಗಳನ್ನು ಪ್ರದರ್ಶಿಸತಕ್ಕದ್ದಲ್ಲ ಅಥವಾ ಪ್ರದರ್ಶಿಸುವಂತೆ ಮಾಡತಕ್ಕದ್ದಲ್ಲ.

5. ಲೈಸೆನ್ಸ್‌ದಾರನು, ಸಾರ್ವಜನಿಕರಿಗೆ ಆವರಣವನ್ನು ತೆಗೆದಿರಿಸಿರುವಾಗಲೆಲ್ಲಾ ಪ್ರತಿಯೊಂದು ಸಾರ್ವಜನಿಕ ಪ್ರವೇಶದ್ವಾರದಲ್ಲಿ ಕೋಷ್ಟಕದ ನಮೂನೆಯಲ್ಲಿ ಮತ್ತು ಸ್ಪಷ್ಟವಾದ, ದೊಡ್ಡದಾದ ಅಕ್ಷರಗಳಲ್ಲಿ ಮತ್ತು ಅಂಕಿಗಳಲ್ಲಿ,-

(ಎ) ಟ್ರೇಲರುಗಳು ಮತ್ತು ಜಾಹೀರಾತು ಫಿಲ್ಮ್‌ಗಳನ್ನು ಹೊರತುಪಡಿಸಿ ಆ ದಿವಸ ತೋರಿಸಬೇಕಾದ ಪ್ರತಿಯೊಂದು ಫಿಲ್ಮಿನ ಶೀರ್ಷಿಕೆ/ ಹೆಸರು ;

(ಬಿ) ಅಂತಹ ಪ್ರತಿಯೊಂದು ಫಿಲ್ಮ್ ಪ್ರಾರಂಭವಾಗುವ ಸರಿಸುಮಾರು ಕಾಲ;

(ಸಿ) ಕೇಂದ್ರ ಚಲನಚಿತ್ರ ಪರಿಶೀಲನಾ ಮಂಡಲಿಯಿಂದ ಅಂತಹ ಪ್ರತಿಯೊಂದು ಫಿಲ್ಮು 'ಎ' ಅಥವಾ 'ಯು' ಪ್ರಮಾಣಪತ್ರವನ್ನು ಸ್ವೀಕರಿಸಿದೆಯೋ ಹೇಗೆ ; ಮತ್ತು

(ಡಿ) ಮೂರು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಹೊರತುಪಡಿಸಿ ಹದಿನೆಂಟು ವರ್ಷಗಳಿಗಿಂತ ಕಡಿಮೆ ವಯಸ್ಸಿನ ವ್ಯಕ್ತಿಗಳನ್ನು ಒಳಗೆ ಬಿಡಲಾಗುವುದೋ ಅಥವಾ ಇಲ್ಲವೋ ಎಂಬುದನ್ನು

- ತೋರಿಸುವ ನೋಟೀಸನ್ನು ಎದ್ದು ಕಾಣುವ ಹಾಗೆ ಪ್ರದರ್ಶಿಸತಕ್ಕದ್ದು.

6. ಕೇಂದ್ರ ಚಲನಚಿತ್ರ ಪರಿಶೀಲನಾ ಮಂಡಲಿಯಿಂದ ಫಿಲ್ಮಿಗೆ ಸಂಬಂಧಿಸಿದಂತೆ ಸ್ವೀಕರಿಸಿದ ಯಾವುದೇ ಪ್ರಮಾಣಪತ್ರದ ಸ್ವರೂಪವನ್ನು ಆವರಣಗಳಲ್ಲಿ ಪ್ರದರ್ಶಿಸಿದ ಫಿಲ್ಮಿನ ಯಾವುದೇ ಜಾಹೀರಾತಿನಲ್ಲಿ 'ಯು' ಅಥವಾ 'ಎ' ಎಂಬ ಅಕ್ಷರದ ಮೂಲಕ ಸ್ಪಷ್ಟವಾಗಿ ಸೂಚಿಸತಕ್ಕದ್ದು.

7. ಲೈಸೆನ್ಸ್ ನೀಡುವ ಪ್ರಾಧಿಕಾರಿ ಮತ್ತು ಆ ಬಗ್ಗೆ ಆತನು ಯುಕ್ತವಾಗಿ ಅಧಿಕೃತಗೊಳಿಸಿದ ಯಾರೇ ಅಧೀನ ಅಧಿಕಾರಿ ಮತ್ತು ಲೈಸೆನ್ಸ್ ಪಡೆದ ಆವರಣದಲ್ಲಿ ಯಾವುದೇ ಮನೋರಂಜನೆಯ ಕಾಲದಲ್ಲಿ ವ್ಯವಸ್ಥೆಯನ್ನು ಕಾಪಾಡಲು ಪ್ರತಿನಿಯೋಜನೆಗೊಂಡ ಯಾರೇ ಪೊಲೀಸ್ ಅಧಿಕಾರಿಯು, ಲೈಸೆನ್ಸಿನ ಷರತ್ತುಗಳನ್ನು ಪಾಲಿಸಲಾಗಿದೆಯೋ ಹೇಗೆ ಎಂಬುದನ್ನು ನೋಡುವುದಕ್ಕಾಗಿ ಸದರಿ ಆವರಣಗಳಿಗೆ ಎಲ್ಲ ಕಾಲಗಳಲ್ಲಿ ಮುಕ್ತ ಪ್ರವೇಶಾವಕಾಶವನ್ನು ಹೊಂದಿರತಕ್ಕದ್ದು.

8. ಚಲನಚಿತ್ರ ಪ್ರದರ್ಶನಕ್ಕೆ ಲಗತ್ತಾದ ಜಾಗದಲ್ಲಿ ಯಾವುದೇ ಬಿರುಸು ಬಾಣಗಳನ್ನು ಉಪಯೋಗಿಸತಕ್ಕದ್ದಲ್ಲ.

9. ಲೈಸೆನ್ಸ್‌ದಾರನು, ಲೈಸೆನ್ಸ್ ನೀಡುವ ಪ್ರಾಧಿಕಾರಿಯ ಅನುಮತಿಯಿಲ್ಲದೆ ಲೈಸೆನ್ಸ್‌ನ್ನು ಅಥವಾ ಲೈಸೆನ್ಸ್ ಪಡೆದ ಆವರಣವನ್ನು ಹಸ್ತಾಂತರಿಸತಕ್ಕದ್ದಲ್ಲ, ಒಳ ಬಾಡಿಗೆಗೆ ಕೊಡತಕ್ಕದ್ದಲ್ಲ ಅಥವಾ ಅನ್ಯಥಾ ವರ್ಗಾವಣೆ ಮಾಡತಕ್ಕದ್ದಲ್ಲ ಅಥವಾ ಲೈಸೆನ್ಸ್‌ದಾರನು ಹಿಂದೆ ಹೇಳಿದಂತೆ ಅನುಮತಿಯಿಲ್ಲದೆ ಲೈಸೆನ್ಸ್ ಚಾಲ್ತಿಯಲ್ಲಿರುವ ಅವಧಿಯಲ್ಲಿ ಲೈಸೆನ್ಸ್ ಪಡೆದ ಆವರಣದಲ್ಲಿ ಚಲನಚಿತ್ರವನ್ನು ಪ್ರದರ್ಶಿಸಲು ಯಾರೇ ಇತರ ವ್ಯಕ್ತಿಗಳಿಗೆ ಅವಕಾಶ ಕೊಡತಕ್ಕದ್ದಲ್ಲ.

10. ಲೈಸೆನ್ಸ್‌ದಾರನು, ಲೈಸೆನ್ಸ್ ನೀಡುವ ಪ್ರಾಧಿಕಾರಿಯ ಅನುಮತಿಯಿಲ್ಲದೆ ಯಾರೇ ವ್ಯಕ್ತಿ, ಸಂಘ ಅಥವಾ ಸಂಸ್ಥೆಯ ಸಹಾಯಾರ್ಥವಾಗಿ ಲೈಸೆನ್ಸ್ ಪಡೆದ ಆವರಣದಲ್ಲಿ ಯಾವುದೇ ಫಿಲ್ಮನ್ನು ಪ್ರದರ್ಶಿಸತಕ್ಕದ್ದಲ್ಲ.

11. ಯಾವುದೇ ಚಲನಚಿತ್ರ ಪ್ರದರ್ಶನವನ್ನು ಲೈಸೆನ್ಸ್ ನೀಡುವ ಪ್ರಾಧಿಕಾರಿಯು ನಿಗದಿಪಡಿಸ ಬಹುದಾದಂಥ ರಾತ್ರಿ ಒಂದು ಗಂಟೆಗೆ ಮೀರದಂಥ ಕಾಲದ ತರುವಾಯ ಮುಂದುವರಿಸತಕ್ಕದ್ದಲ್ಲ.

12. ಲೈಸೆನ್ಸ್‌ದಾರನು ಅನುಮೋದಿತ ರಾಷ್ಟ್ರಗೀತೆಯನ್ನು ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಅಗತ್ಯಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಅಂತಹ ಕಾಲದಲ್ಲಿ ಪ್ರದರ್ಶಿಸತಕ್ಕದ್ದು.

[12ಎ. ಲೈಸೆನ್ಸ್‌ದಾರನು, ಒಂದು ವರ್ಷದಲ್ಲಿ ಹನ್ನೆರಡು ವಾರಗಳಿಗಿಂತ ಕಡಿಮೆಯಿಲ್ಲದ ಅವಧಿಗಾಗಿ ಕನ್ನಡ ಫಿಲ್ಮನ್ನು ಪ್ರದರ್ಶಿಸತಕ್ಕದ್ದು.]

13. ಲೈಸೆನ್ಸ್, ಈ ಯಾವುದೇ ಷರತ್ತುಗಳ ಅಥವಾ ಹಿಂಬದಿಯಲ್ಲಿ ನಿರ್ದಿಷ್ಟಪಡಿಸಿದ ವಿಶೇಷ ಷರತ್ತುಗಳನ್ನು ಉಲ್ಲಂಘಿಸಿದ್ದಕ್ಕಾಗಿ (ಅಥವಾ ಮನೋರಂಜನೆಯನ್ನು ಪ್ರಸ್ತಾಪಿಸುವ ಅಥವಾ ನಿಯಂತ್ರಿಸುವ ಮತ್ತು ತೆರಿಗೆಗಳ ಸಂದಾಯವನ್ನು ನಿಯಮಿಸುವ ಕುರಿತಾಗಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಲ್ಲಂಘನೆಗಾಗಿ) ರದ್ದಿಯಾತಿ ಮತ್ತು ಅಮಾನತ್ತಿಗೆ ಒಳಪಟ್ಟಿರತಕ್ಕದ್ದು.

ದಿನಾಂಕ 20-----------ರ ------------- ದಿವಸದಂದು.

ಮೊಹರು                                                  ಜಿಲ್ಲಾ ಮ್ಯಾಜಿಸ್ಟ್ರೇಟ್

## ನಮೂನೆ 'ಜಿ'

**(90ನೇ ನಿಯಮವನ್ನು ನೋಡಿ)**

**ಕರ್ನಾಟಕ ಸಿನಿಮಾಗಳ (ನಿಯಂತ್ರಣ) ನಿಯಮಗಳು, 2014 ಇದರ ಮೇರೆಗೆ ಸಂಚಾರಿ ಸಿನಿಮಾಗಳಲ್ಲಿ ಪ್ರದರ್ಶನಕ್ಕಾಗಿನ ಲೈಸೆನ್ಸ್:**

1. ಲೈಸೆನ್ಸ್‌ದಾರನ ಹೆಸರು ಮತ್ತು ವಿಳಾಸ

2. ಲೈಸೆನ್ಸ್‌ದಾರನು ಆ ಕಟ್ಟಡದ ಒಡೆಯನಾಗಿರದಿದ್ದರೆ, ಅದರ ಒಡೆಯನ ಹೆಸರು ಮತ್ತು ವಿಳಾಸ

3. ಕಟ್ಟಡದ ಸ್ಥಳ

4. ಚದರ ಮೀ.ಗಳಲ್ಲಿ ಆ ಕಟ್ಟಡದ ಪ್ರದೇಶ

5. ಯಾವ ಸಾಮಗ್ರಿಗಳಿಂದ ಛಾವಣಿ, ಪಕ್ಕದ ಗೋಡೆಗಳು, ಗ್ಯಾಲರಿಗಳು ಮತ್ತು ಸ್ಟೇರ್‌ಕೇಸುಗಳನ್ನು ಮಾಡಲಾಗಿದೆಯೋ ಆ ಸಾಮಗ್ರಿಗಳು

6. ಅಗ್ನಿಶಾಮಕ ಅಧಿಕಾರಿ ಅಥವಾ ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಈ ಬಗ್ಗೆ ಅವನಿಂದ ಅಧಿಕೃತನಾದ ಯಾರೇ ವ್ಯಕ್ತಿಯಿಂದ ಕೊನೆಯ ಪರಿಶೀಲನೆಯ ದಿನಾಂಕ

7. ಆರೋಗ್ಯಾಧಿಕಾರಿ ಅಥವಾ ಅವನಿಂದ ಈ ಬಗ್ಗೆ ಅಧಿಕೃತನಾದ ಯಾರೇ ವ್ಯಕ್ತಿಯಿಂದ ಕೊನೆಯ ಪರಿಶೀಲನೆ ದಿನಾಂಕ

8. ಪೊಲೀಸ್ ಪರಿಶೀಲಕನಿಂದ ಕೊನೆಯ ಪರಿಶೀಲನೆಯ ದಿನಾಂಕ

9. ಲೈಸೆನ್ಸ್ ನೀಡಿದುದರ ಬಗ್ಗೆ ವಿಶೇಷ ಷರತ್ತುಗಳು ಯಾವುದಾದರೂ ಇದ್ದರೆ ಅವುಗಳನ್ನು ತಿಳಿಸಿ

10. ಲೈಸೆನ್ಸ್ ಜಾರಿಯಲ್ಲಿರಬೇಕಾದಂಥ ಅವಧಿ

11. ಸಂದಾಯ ಮಾಡಿದ ಫೀಜು

12. ಸಭಾಂಗಣದ ಪ್ರತಿಯೊಂದು ಭಾಗದಲ್ಲಿ ಹೋಗಲು ಅನುಮತಿಸಿದ ವ್ಯಕ್ತಿಗಳ ಗರಿಷ್ಠ ಸಂಖ್ಯೆ

ವ್ಯಕ್ತಿಗಳು

ಮೊದಲ ದರ್ಜೆಯಲ್ಲಿ

----------------ಯಲ್ಲಿ

---------------ಯಲ್ಲಿ

--------------ಯಲ್ಲಿ

(ಷರತ್ತುಗಳಿಗಾಗಿ ಹಿಂಬದಿ ನೋಡಿ)

**ಲೈಸೆನ್ಸಿನ ಷರತ್ತುಗಳು**

ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮ, 1964ರ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೊಳಪಟ್ಟು ಲೈಸೆನ್ಸ್‌ನ್ನು ಮಂಜೂರ್‍ಮಾಡಲಾಗಿದೆ. ಅದು ಈ ಕೆಳಕಂಡ ಷರತ್ತುಗಳಿಗೂ ಸಹ ಒಳಪಟ್ಟಿರುತ್ತದೆ:-

(1) ಸಾರ್ವಜನಿಕ ಸಾಂಕ್ರಾಮಿಕ ರೋಗಗಳು ಮತ್ತು ಅದೇ ರೀತಿಯ ಆರೋಗ್ಯಕ್ಕೆ ಸಂಬಂಧಿಸಿದ ಅಪಾಯಗಳ ಸಮಯ ಅಥವಾ ದುರ್ಘಟನೆಗಳ ಸಂದರ್ಭ ಯಾವುದಾದರೂ ಇದ್ದರೆ, ಸಾಮಾನ್ಯವಾಗಿ, ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಜಿಲ್ಲಾ ಆರೋಗ್ಯ ಅಧಿಕಾರಿ, ತಾಲ್ಲೂಕು ಆರೋಗ್ಯ ಅಧಿಕಾರಿ ಅಥವಾ ಪುರಸಭೆಯ ಆರೋಗ್ಯ ಅಧಿಕಾರಿಯ ಜೊತೆ ಸಮಾಲೋಚಿಸಿ ಹಾಗೆ ಸಲಹೆ ನೀಡುವುದಾದರೆ, ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದು,-

(ಎ) ಅಗತ್ಯತೆ ಉದ್ಭವಿಸಿದರೆ, ಸಂಪೂರ್ಣವಾಗಿ ನಿಲ್ಲಿಸುವುದು;

(ಬಿ) 49ನೇ ನಿಯಮದಲ್ಲಿ ಒದಗಿಸಲಾದ ಸ್ಥಳಾವಕಾಶದ ಪ್ರಮಾಣವನ್ನು ಕಡಿಮೆಗೊಳಿಸುವುದು;

(ಸಿ) ಸೋಂಕು ಸ್ಥಳಗಳಿಗೆ, ನಿಯತಕಾಲಿಕವಾಗಿ ಸೋಂಕುನಾಶಕ ಒಳಗೊಂಡಿರುವುದನ್ನು ಸಿಂಪಡಿಸಬಹುದು ಮತ್ತು ರೋಗಕಾರಕ ಕ್ರಿಮಿಗಳನ್ನು ನಾಶಗೊಳಿಸಬಹುದು; ಮತ್ತು

(ಡಿ) ಅಂತಹ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರಬಹುದಾದಂತೆ ಉತ್ತಮ ವಾಯು ಸಂಚಾರಕ್ಕಾಗಿ ಅಂತಹ ಇತರೆ ಕ್ರಮಗಳನ್ನು ಅಳವಡಿಸಿಕೊಳ್ಳುವುದು ಮತ್ತು ಲೈಸೆನ್ಸುದಾರನು ಯಾವುದೇ ಅಂತಹ ನಿರ್ದೇಶನಗಳನ್ನು ಕೂಡಲೇ ಪಾಲಿಸತಕ್ಕದ್ದು ಮತ್ತು ಹಾಗೆ ಮಾಡಲು ವಿಫಲನಾದ ಸಂದರ್ಭದಲ್ಲಿ, ಆತನಿಗೆ ಮಂಜೂರು ಮಾಡಿದ ಲೈಸೆನ್ಸನ್ನು ರದ್ದುಗೊಳಿಸಲು ಹೊಣೆಯಾಗತಕ್ಕದ್ದು.

2. ಲೈಸೆನ್ಸ್‌ದಾರನನ್ನು ಅಥವಾ ಆತನ ನೌಕರರನ್ನು ಅಥವಾ ಏಜೆಂಟರನ್ನು ಯಾವುದೇ ಇತರ ಕಾನೂನು ಅಥವಾ ಅದರ ಮೇರೆಗೆ ರಚಿಸಲಾದ ನಿಯಮ ಅಥವಾ ಉಪನಿಯಮದ ಮೂಲಕ ಅಗತ್ಯಪಡಿಸಿದ ಯಾವುದೇ ಇತರ ಲೈಸೆನ್ಸನ್ನು ತೆಗೆದುಕೊಳ್ಳುವುದರಿಂದ ಅಥವಾ ಅನ್ಯಥಾ ಅವುಗಳನ್ನು ಪಾಲಿಸುವುದರಿಂದ ಈ ಲೈಸೆನ್ಸ್ ವಿನಾಯಿತಿಗೊಳಿಸುವುದಿಲ್ಲ.

3(ಎ) ಚಲನಚಿತ್ರ ಅಧಿನಿಯಮ, 1952ರ (1952ರ ಕೇಂದ್ರ ಅಧಿನಿಯಮ 37), 3ನೇ ಪ್ರಕರಣದ ಮೇರೆಗೆ ರಚಿಸಿದ ಪ್ರಾಧಿಕಾರಿಯು, ಸಾರ್ವಜನಿಕ ಪ್ರದರ್ಶನಕ್ಕಾಗಿ ಯೋಗ್ಯವಾಗಿದೆಯೆಂದು ಪ್ರಮಾಣೀಕರಿಸಿದಂಥ ಮತ್ತು ಅದನ್ನು ಪ್ರದರ್ಶಿಸಿದಾಗ ಆ

ಪ್ರಾಧಿಕಾರಿಯು ನಿಯಮಿಸಿದ ಗುರುತನ್ನು ಪ್ರದರ್ಶಿಸುವಂಥ ಮತ್ತು ಅದಕ್ಕೆ ಅಂತಹ ಗುರುತನ್ನು ಹಾಕಿದಾಗಿನಿಂದ ಯಾವುದೇ ರೀತಿಯಲ್ಲಿ ಅದನ್ನು ಬದಲಾಯಿಸಿರದ ಅಥವಾ ಅಕ್ರಮವಾಗಿ ತಿದ್ದಿಲ್ಲದಂಥ ಚಲನಚಿತ್ರವನ್ನು ಹೊರತುಪಡಿಸಿ ಯಾವುದೇ ಇತರ ಚಲನಚಿತ್ರವನ್ನು,-

ಪರಂತು, ಈ ಷರತ್ತು ಮುಂಬೈ ಫಿಲ್ಮ್ ವಿಭಾಗವು ತಯಾರಿಸಿದ ನ್ಯೂಸ್ ರೀಲುಗಳ ಪ್ರದರ್ಶನಕ್ಕೆ ಅನ್ವಯಿಸತಕ್ಕದ್ದಲ್ಲ;

(ಬಿ) ಫಿಲ್ಮು ಸೆನ್ಸಾರ್ ಮಂಡಲಿಯು ವಯಸ್ಕರಿಗೆ ಪರಿಮಿತಿಗೊಳಿಸಿದ, ಸಾರ್ವಜನಿಕ ಪ್ರದರ್ಶನಕ್ಕಾಗಿ ಯೋಗ್ಯವಾಗಿದೆಯೆಂದು ಪ್ರಮಾಣೀಕರಿಸಿದಂಥ ಯಾವುದೇ ಫಿಲ್ಮನ್ನು ವಯಸ್ಕನಲ್ಲದ ಯಾರೇ ವ್ಯಕ್ತಿಗೆ;

(ಸಿ) ಯಾವ ಫಿಲ್ಮಿನ ಪ್ರದರ್ಶನವನ್ನು ಅಧಿನಿಯಮದ 6ನೇ ಪ್ರಕರಣದ ಮೇರೆಗೆ ಅಮಾನತು ಗೊಳಿಸಲಾಗಿದೆಯೋ ಆ ಯಾವುದೇ ಫಿಲ್ಮನ್ನು

- ಲೈಸೆನ್ಸ್‌ದಾರನು ಪ್ರದರ್ಶಿಸತಕ್ಕದ್ದಲ್ಲ ಅಥವಾ ಪ್ರದರ್ಶಿಸಲು ಅನುಮತಿಸತಕ್ಕದ್ದಲ್ಲ.

**ವಿವರಣೆ:** ಈ ಷರತ್ತಿನ (ಬಿ) ಖಂಡದ ಉದ್ದೇಶಕ್ಕಾಗಿ, ಯಾರೇ ವ್ಯಕ್ತಿಯ ವಯಸ್ಸಿಗೆ ಸಂಬಂಧಿಸಿದಂತೆ ಯಾವುದೇ ಸಂದೇಹವಿದ್ದರೆ, ಆ ಪ್ರಶ್ನೆಗೆ ಸಂಬಂಧಿಸಿದಂತೆ ಸದ್ಭಾವನೆಯಿಂದ ವ್ಯವಸ್ಥಾಪಕನು ಕೊಟ್ಟ ತೀರ್ಮಾನವನ್ನು ಪ್ರಶ್ನಿಸತಕ್ಕದ್ದಲ್ಲ ಮತ್ತು ವಯಸ್ಕನೆಂದು ಕ್ಲೇಮು ಮಾಡುವ ಯಾರೇ ವ್ಯಕ್ತಿಯ ವಯಸ್ಸಿಗೆ ಸಂಬಂಧಿಸಿದಂತೆ ವ್ಯವಸ್ಥಾಪಕನಿಗೆ ಯುಕ್ತ ಸಂದೇಹವಿರುವಲ್ಲಿ, ವ್ಯವಸ್ಥಾಪಕನು ಫಿಲ್ಮಿನ ಪ್ರದರ್ಶನಕ್ಕೆ ಅವನಿಗೆ ಪ್ರವೇಶ ಕೊಡುವುದಕ್ಕೆ ಮುಂಚೆ ಈ ಕೆಳಕಂಡ ನಮೂನೆಯಲ್ಲಿ ಅವನ ಟಿಕೆಟ್‌ನ ಪಕ್ಕಾಪ್ರತಿಯ ಹಿಂಬದಿಯಲ್ಲಿ ಘೋಷಣೆಯನ್ನು ಮಾಡಲು ಅಂತಹ ವ್ಯಕ್ತಿಯನ್ನು ಅಗತ್ಯಪಡಿಸತಕ್ಕದ್ದು ಮತ್ತು ತನಿಖೆಯನ್ನು ನಡೆಸಿದ ಮೇಲೆ, ಆ ಘೋಷಣೆಯು ಸುಳ್ಳಾಗಿರುವುದಾಗಿ ಕಂಡುಬಂದರೆ, ಭಾರತ ದಂಡ ಸಂಹಿತೆಯ 199ನೇ ಪ್ರಕರಣದ ಮೇರೆಗಿನ ಅಪರಾಧಕ್ಕಾಗಿ ಪ್ರಾಸಿಕ್ಯೂಷನ್ನಿಗೆ ಗುರಿಯಾಗಲು ಆತನು ಹೊಣೆಗಾರನಾಗಿರುವನೆಂದು ಆತನಿಗೆ ವಿವರಿಸತಕ್ಕದ್ದು.

**ಘೋಷಣೆ**

------------------- ಇಲ್ಲಿ (ಪೂರ್ಣ ವಿಳಾಸ ತಿಳಿಸಿ) ವಾಸಿಸುವ ನಾನು ---------------- ಹದಿನೆಂಟು ವರ್ಷಗಳಿಗಿಂತ ಹೆಚ್ಚು ವಯಸ್ಸಿನವನಿದ್ದೇನೆಂದು ಈ ಮೂಲಕ ಶ್ರದ್ಧಾಪೂರ್ವಕವಾಗಿ ಘೋಷಿಸುತ್ತೇನೆ.

ಸಹಿ

3. ಲೈಸೆನ್ಸ್‌ದಾರನು, ಲೈಸೆನ್ಸ್ ಪಡೆದಿರುವ ಆವರಣಗಳ ಒಳಗಡೆಯಾಗಲಿ ಅಥವಾ ಹೊರಗೆ ಆಗಲಿ ಅಶ್ಲೀಲ ಅಥವಾ ಅಸಭ್ಯ ಜಾಹೀರಾತು ಮಾಡುವ ವಿಷಯ ಅಥವಾ ಸಚಿತ್ರ ನಿರೂಪಣೆಯನ್ನು ಅಥವಾ ಸಾರ್ವಜನಿಕ ನೀತಿಗಳ ದೃಷ್ಟಿಕೋನದಿಂದ ಆಕ್ಷೇಪಣೀಯವಾದಂಥ ಯಾವುದೇ ವಿಷಯ ಅಥವಾ ಜಾಹೀರಾತನ್ನು ಪ್ರದರ್ಶಿಸತಕ್ಕದ್ದಲ್ಲ ಅಥವಾ ಪ್ರದರ್ಶಿಸಲು ಅನುಮತಿಸತಕ್ಕದ್ದಲ್ಲ.

4. ಲೈಸೆನ್ಸ್‌ದಾರನ್ನು, ಲೈಂಗಿಕ ವಿಕಾರಗಳನ್ನು ಸರಿಪಡಿಸಲು ಅಥವಾ ಮಕ್ಕಳನ್ನು ಪಡೆಯುವುದರಲ್ಲಿ ಮಕ್ಕಳಿಲ್ಲದವರಿಗೆ ಸಹಾಯ ಮಾಡುವಂತೆ ತಾತ್ಪರ್ಯವಾಗುವ ಲೈಂಗಿಕ ರೋಗಗಳು ಮತ್ತು ಔಷಧಿಗಳಿಗೆ ಸಂಬಂಧಪಟ್ಟ ಜಾಹೀರಾತು ಸ್ಲೈಡುಗಳನ್ನು ಪ್ರದರ್ಶಿಸತಕ್ಕದ್ದಲ್ಲ.

5. ಲೈಸೆನ್ಸ್‌ದಾರನು ಕೇಂದ್ರ ಚಲನಚಿತ್ರ ಪರಿಶೀಲನಾ ಮಂಡಲಿ ಅಥವಾ ಕೇಂದ್ರ ಸರ್ಕಾರದ ಆದೇಶಗಳ ಮೇರೆಗೆ ಯಾವುದೇ ಚಲನಚಿತ್ರದಿಂದ ಕತ್ತರಿಸಲಾಗಿರುವಂಥ ದೃಶ್ಯ ಅಥವಾ ಛಾಯಾಚಿತ್ರಗಳನ್ನು ನಿರೂಪಿಸುವ ಅಥವಾ ತೋರಿಸುವ ಅಥವಾ ತೋರಿಸುವುದೆಂದು ತಾತ್ಪರ್ಯವಾಗುವಂಥ ಯಾವುದೇ ಛಾಯಾಚಿತ್ರ ಅಥವಾ ಭಿತ್ತಿಪತ್ರಗಳನ್ನು ಪ್ರದರ್ಶಿಸತಕ್ಕದ್ದಲ್ಲ ಅಥವಾ ಪ್ರದರ್ಶಿಸುವಂತೆ ಮಾಡತಕ್ಕದ್ದಲ್ಲ.

(6) ಲೈಸೆನ್ಸ್‌ದಾರನು, ಸಾರ್ವಜನಿಕರಿಗೆ ಆವರಣವನ್ನು ತೆಗೆದಿರಿಸಿರುವಾಗಲೆಲ್ಲಾ ಪ್ರತಿಯೊಂದು ಸಾರ್ವಜನಿಕ ಪ್ರವೇಶ ದ್ವಾರದಲ್ಲಿ ಕೋಷ್ಠಕದ ನಮೂನೆಯಲ್ಲಿ ಮತ್ತು ಸ್ಪಷ್ಟವಾದ, ದೊಡ್ಡದಾದ ಅಕ್ಷರಗಳಲ್ಲಿ ಮತ್ತು ಅಂಕಿಗಳಲ್ಲಿ:-

(i) ಟ್ರೇಲರುಗಳು ಮತ್ತು ಜಾಹೀರಾತು ಫಿಲ್ಮ್‌ಗಳನ್ನು ಹೊರತುಪಡಿಸಿ ಆ ದಿವಸ ತೋರಿಸಬೇಕಾದ ಪ್ರತಿಯೊಂದು ಫಿಲ್ಮಿನ ಶೀರ್ಷಿಕೆ/ಹೆಸರು ;

(ii) ಅಂತಹ ಪ್ರತಿಯೊಂದು ಫಿಲ್ಮು ಪ್ರಾರಂಭವಾಗುವ ಸರಿ ಸುಮಾರು ಕಾಲ ;

(iii) ಕೇಂದ್ರ ಚಲನಚಿತ್ರ ಪರಿಶೀಲನಾ ಮಂಡಲಿಯಿಂದ ಅಂತಹ ಪ್ರತಿಯೊಂದು ಫಿಲ್ಮ್ 'ಎ' ಅಥವಾ 'ಯು' ಪ್ರಮಾಣಪತ್ರವನ್ನು ಸ್ವೀಕರಿಸಿದೆಯೇ ಎಂಬುದನ್ನು ; ಮತ್ತು

(iv) 3 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಹೊರತುಪಡಿಸಿ, 18 ವರ್ಷಗಳಿಗಿಂತ ಕಡಿಮೆ ವಯಸ್ಸಿನ ವ್ಯಕ್ತಿಗಳನ್ನು ಒಳಗೆ ಬಿಡಲಾಗುವುದೋ ಅಥವಾ ಇಲ್ಲವೋ ಎಂಬುದನ್ನು

- ತೋರಿಸುವ ನೋಟಿಸನ್ನು ಎದ್ದು ಕಾಣುವ ಹಾಗೆ ಪ್ರದರ್ಶಿಸತಕ್ಕದ್ದು.

(7) ಕೇಂದ್ರ ಚಲನಚಿತ್ರ ಪರಿಶೀಲನಾ ಮಂಡಲಿಯಿಂದ ಫಿಲ್ಮಿಗೆ ಸಂಬಂಧಿಸಿದಂತೆ ಸ್ವೀಕರಿಸಿದ ಯಾವುದೇ ಪ್ರಮಾಣಪತ್ರದ ಸ್ವರೂಪವನ್ನು ಆವರಣಗಳಲ್ಲಿ ಪ್ರದರ್ಶಿಸಿದ ಫಿಲ್ಮಿನ ಯಾವುದೇ ಜಾಹೀರಾತಿನಲ್ಲಿ 'ಯು' ಅಥವಾ 'ಎ' ಎಂಬ ಅಕ್ಷರದ ಮೂಲಕ ಸ್ಪಷ್ಟವಾಗಿ ಸೂಚಿಸತಕ್ಕದ್ದು.

(8) ಲೈಸೆನ್ಸ್ ನೀಡುವ ಪ್ರಾಧಿಕಾರಿ ಮತ್ತು ಈ ಬಗ್ಗೆ ಆತನು ಅಧಿಕೃತಗೊಳಿಸಿದ ಯಾರೇ ಅಧೀನ ಅಧಿಕಾರಿ ಮತ್ತು ಲೈಸೆನ್ಸ್ ಪಡೆದ ಆವರಣದಲ್ಲಿ ಯಾವುದೇ ಮನೋರಂಜನೆಯ ಕಾಲದಲ್ಲಿ ವ್ಯವಸ್ಥೆಯನ್ನು ಕಾಪಾಡಲು ಪ್ರತಿನಿಯೋಜನೆಗೊಂಡ ಯಾರೇ ಪೊಲೀಸ್ ಅಧಿಕಾರಿಯು ಲೈಸೆನ್ಸಿನ ಷರತ್ತುಗಳನ್ನು ಪಾಲಿಸಲಾಗಿದೆಯೋ ಎಂಬುದನ್ನು ನೋಡುವುದಕ್ಕಾಗಿ ಸದರಿ ಆವರಣಗಳಿಗೆ ಎಲ್ಲ ಕಾಲಗಳಲ್ಲಿ ಮುಕ್ತ ಪ್ರವೇಶಾವಕಾಶವನ್ನು ಹೊಂದಿರತಕ್ಕದ್ದು.

(9) ಚಲನಚಿತ್ರ ಪ್ರದರ್ಶನಕ್ಕೆ ಲಗತ್ತಾದ ಜಾಗದಲ್ಲಿ ಯಾವುದೇ ಬಿರುಸು ಬಾಣಗಳನ್ನು ಅಥವಾ ಯಾವುದೇ ಹೊರಗಿನ ಧ್ವನಿವರ್ಧಕಗಳನ್ನು ಉಪಯೋಗಿಸತಕ್ಕದ್ದಲ್ಲ.

(10) ಲೈಸೆನ್ಸ್‌ದಾರನು, ಲೈಸೆನ್ಸ್ ನೀಡುವ ಪ್ರಾಧಿಕಾರಿಯ ಅನುಮತಿಯಿಲ್ಲದೆ, ಲೈಸೆನ್ಸ್‌ನ್ನು ಅಥವಾ ಲೈಸೆನ್ಸ್ ಪಡೆದ ಆವರಣವನ್ನು ಹಸ್ತಾಂತರಿಸತಕ್ಕದ್ದಲ್ಲ, ಒಳಬಾಡಿಗೆಗೆ ಕೊಡತಕ್ಕದ್ದಲ್ಲ ಅಥವಾ ಅನ್ಯಥಾ ವರ್ಗಾವಣೆ ಮಾಡತಕ್ಕದ್ದಲ್ಲ ಅಥವಾ ಲೈಸೆನ್ಸ್‌ದಾರನು ಹಿಂದೆ ಹೇಳಿದಂತೆ ಅನುಮತಿಯಿಲ್ಲದೆ, ಲೈಸೆನ್ಸ್ ಚಾಲ್ತಿಯಲ್ಲಿರುವ ಅವಧಿಯಲ್ಲಿ ಲೈಸೆನ್ಸ್ ಪಡೆದ ಆವರಣದಲ್ಲಿ ಚಲನಚಿತ್ರವನ್ನು ಪ್ರದರ್ಶಿಸಲು ಯಾರೇ ಇತರ ವ್ಯಕ್ತಿಗಳಿಗೆ ಅವಕಾಶ ಕೊಡತಕ್ಕದ್ದಲ್ಲ.

(11) ಲೈಸೆನ್ಸ್‌ದಾರನು ಲೈಸೆನ್ಸ್ ನೀಡುವ ಪ್ರಾಧಿಕಾರಿಯ ಅನುಮತಿಯಿಲ್ಲದೆ ಯಾರೇ ವ್ಯಕ್ತಿ, ಸಂಘ ಅಥವಾ ಸಂಸ್ಥೆಯ ಸಹಾಯಾರ್ಥವಾಗಿ ಲೈಸೆನ್ಸ್ ಪಡೆದ ಆವರಣದಲ್ಲಿ ಯಾವುದೇ ಫಿಲ್ಮ್‌ನ್ನು ಪ್ರದರ್ಶಿಸತಕ್ಕದ್ದಲ್ಲ.

(12) ಯಾವುದೇ ಚಲನಚಿತ್ರ ಪ್ರದರ್ಶನವನ್ನು ಲೈಸೆನ್ಸ್ ನೀಡುವ ಪ್ರಾಧಿಕಾರಿಯು ನಿಗದಿಪಡಿಸ ಬಹುದಾದಂಥ, ರಾತ್ರಿ ಒಂದು ಗಂಟೆಗೆ ಮೀರದಂಥ ಕಾಲದ ತರುವಾಯ ಮುಂದುವರೆಸತಕ್ಕದ್ದಲ್ಲ.

(13) ಲೈಸೆನ್ಸ್‌ದಾರನು, ಅನುಮೋದಿತ ರಾಷ್ಟ್ರಗೀತೆಯನ್ನು ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಅಗತ್ಯಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಅಂತಹ ಕಾಲದಲ್ಲಿ ಪ್ರದರ್ಶಿಸತಕ್ಕದ್ದು.

(14) ಪ್ರತಿಯೊಂದು ತಿಂಗಳಿನ ಮೊದಲನೇ ದಿವಸದಂದಿನ ಮತ್ತು ಶಿಬಿರದ ತರುವಾಯ ಮೊದಲು ಪ್ರತಿ ಬದಲಾವಣೆಯಲ್ಲಿನ ವಿಳಾಸವನ್ನು ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಆ ಬಗ್ಗೆ ಅವನು ಅಧಿಕೃತಗೊಳಿಸಿದ ಇತರ ವ್ಯಕ್ತಿಗೆ ಮತ್ತು ಸಂಬಂಧಪಟ್ಟ ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ತಿಳಿಸತಕ್ಕದ್ದು.

(15)ಲೈಸೆನ್ಸ್ ಈ ಯಾವುದೇ ಷರತ್ತುಗಳ ಅಥವಾ ಹಿಂಬದಿಯಲ್ಲಿ ನಿರ್ದಿಷ್ಟಪಡಿಸಿದ ವಿಶೇಷ ಷರತ್ತುಗಳನ್ನು ಉಲ್ಲಂಘಿಸಿದ್ದಕ್ಕಾಗಿ (ಅಥವಾ ಮನೋರಂಜನೆಯನ್ನು ಪ್ರಸ್ತಾಪಿಸುವ ಅಥವಾ ನಿಯಂತ್ರಿಸುವ ಮತ್ತು ತೆರಿಗೆಗಳ ಸಂದಾಯವನ್ನು ನಿಯಮಿಸುವ ಕುರಿತಾಗಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಲ್ಲಂಘನೆಗಾಗಿ) ರದ್ದಿಯಾತಿ ಮತ್ತು ಅಮಾನತ್ತಿಗೆ ಒಳಪಟ್ಟಿರತಕ್ಕದ್ದು.

ದಿನಾಂಕ -----------------------20ರ ---------------------- ದಿವಸದಂದು.

------ ಜಿಲ್ಲಾ ಮ್ಯಾಜಿಸ್ಟ್ರೇಟರು
ಲೈಸೆನ್ಸ್ ನೀಡುವ ಪ್ರಾಧಿಕಾರಿ

**ನಮೂನೆ 'ಹೆಚ್'**

**[86 (1)ನೇ ನಿಯಮವನ್ನು ನೋಡಿ]**

**ಕರ್ನಾಟಕ ಸಿನಿಮಾಗಳ (ನಿಯಂತ್ರಣ) ನಿಯಮಗಳು, 2014ರ ಮೇರೆಗೆ ಪ್ರದರ್ಶನಕ್ಕಾಗಿ ತಾತ್ಕಾಲಿಕ ಪರವಾನಗಿ**

(ಪೂರ್ಣ ಹೆಸರು ಮತ್ತು ವಿಳಾಸ) --------- ಅವರು, ಆತನ ಲೈಸೆನ್ಸ್ ನವೀಕರಣಕ್ಕಾಗಿ ಅರ್ಜಿಯನ್ನು ಸಲ್ಲಿಸಿರುವುದರಿಂದ ಮತ್ತು ಸದರಿ ಲೈಸೆನ್ಸ್‌ನ್ನು ಆತನ ಅರ್ಜಿಯು ವಿಲೆಯಾಗುವವರೆಗೆ ನನ್ನ ಕಛೇರಿಯಲ್ಲಿ ಇಟ್ಟುಕೊಳ್ಳಲಾಗಿರುವುದರಿಂದ, ಕರ್ನಾಟಕ ಸಿನಿಮಾಗಳ (ನಿಯಂತ್ರಣ) ನಿಯಮಗಳು, 2014ರ 86ನೇ ನಿಯಮದ ಉಪಬಂಧಗಳಿಗೊಳಪಟ್ಟು ಲೈಸೆನ್ಸ್‌ಗಾಗಿನ ಆತನ ಅರ್ಜಿಯು ವಿಲೆಯಾಗುವವರೆಗೆ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮ, 1964ರ ಮೇರೆಗೆ ----------ನಲ್ಲಿ (ಇಲ್ಲಿ ಆವರಣದ ವಿವರಣೆಯನ್ನು ನಮೂದಿಸಿ) ಫಿಲ್ಮ್‌ಗಳನ್ನು ಪ್ರದರ್ಶಿಸಲು ತಾತ್ಕಾಲಿಕವಾಗಿ ಅನುಮತಿಯನ್ನು ಈ ಮೂಲಕ ಕೊಡಲಾಗಿದೆ.

20-----------ರ ----------- ದಿನಾಂಕದಂದು.

------ ಜಿಲ್ಲಾ ಮ್ಯಾಜಿಸ್ಟ್ರೇಟರು
ಲೈಸೆನ್ಸ್ ನೀಡುವ ಪ್ರಾಧಿಕಾರಿ

**ತಾತ್ಕಾಲಿಕ ಪರವಾನಗಿ**

(1) 85ನೇ ನಿಯಮದ ಮೇರೆಗೆ ಲೈಸೆನ್ಸ್‌ನ ಮರುಮಂಜೂರಾತಿಗಾಗಿ ಮಾಡಿಕೊಂಡ ಅರ್ಜಿಯ ಮೇಲೆ, ಲೈಸೆನ್ಸ್ ನೀಡುವ ಪ್ರಾಧಿಕಾರಿಯು, ಲೈಸೆನ್ಸ್ ಮುಕ್ತಾಯವಾಗುವ ದಿನಾಂಕಕ್ಕೆ ಮುಂಚೆ ಯಾವುದೇ ಕಾರಣಕ್ಕಾಗಿ ಆ ಲೈಸೆನ್ಸ್‌ನ್ನು ಮರು ಮಂಜೂರು ಮಾಡದಿದ್ದರೆ ಅಥವಾ ಆತನು ಮರು ಮಂಜೂರು ಮಾಡಲು ನಿರಾಕರಿಸಿದರೆ ಆತನು 'ಹೆಚ್' ನಮೂನೆಯಲ್ಲಿ ತಾತ್ಕಾಲಿಕ ಪರ್ಮಿಟ್ಟನ್ನು ಮಂಜೂರು ಮಾಡತಕ್ಕದ್ದು :

ಪರಂತು, ವಿದ್ಯುಚ್ಛಕ್ತಿ ಪರಿಶೀಲಕನ ಪ್ರಮಾಣಪತ್ರವು ಸಿಂಧುವಾಗಿರುವುದು ಮುಂದುವರಿದಿರಬೇಕು.

(2) ಅಂತಹ ತಾತ್ಕಾಲಿಕ ಪರವಾನಗಿ, ನವೀಕರಣ ಮಾಡಬೇಕೆಂದು ಕೋರಿರುವುದು ಲೈಸೆನ್ಸಿನ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು ಮತ್ತು ಅದು ಲೈಸೆನ್ಸ್ ನೀಡುವ ಪ್ರಾಧಿಕಾರಿಯು ಆ ಅರ್ಜಿಯನ್ನು ವಿಲೇ ಮಾಡುವವರೆಗೆ ಸಿಂಧುವಾಗಿರತಕ್ಕದ್ದು:

ಮತ್ತು, ಪರಂತು, ತಾತ್ಕಾಲಿಕ ಪರವಾನಗಿಯನ್ನು ಆ ಬಗ್ಗೆ ಯಾವುದೇ ಕಾಲದಲ್ಲಿ ತಗಾದೆ ಮಾಡಿದ ಮೇಲೆ ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ಒಪ್ಪಿಸತಕ್ಕದ್ದು.

(3) ತಾತ್ಕಾಲಿಕ ಪರವಾನಗಿಯ ಮಂಜೂರಾತಿಗಾಗಿ ಯಾವುದೇ ಫೀಜನ್ನು ವಿಧಿಸತಕ್ಕದ್ದಲ್ಲ.

(4) ಈ ತಾತ್ಕಾಲಿಕ ಪರವಾನಗಿಯನ್ನು, ಅದು ಸಿಂಧುತ್ವದಲ್ಲಿರುವ ಅವಧಿಯಲ್ಲಿ ಈ ನಿಯಮಗಳ ಉದ್ದೇಶಕ್ಕಾಗಿ ಲೈಸೆನ್ಸ್ ಆಗಿರುವುದಾಗಿ ಭಾವಿಸತಕ್ಕದ್ದು.

**ನಮೂನೆ – 1 ರೇಖಾಚಿತ್ರ**

**ಅರೆ ಖಾಯಂ ಥಿಯೇಟರಿನ ಮಾದರಿ ವೈರಿಂಗ್ ರೇಖಾಚಿತ್ರ**

1) ಥಿಯೇಟರಿನ ಮುಖ್ಯ ಸ್ವಿಚ್
2) ಅಂಗಳ ದೀಪ ವ್ಯವಸ್ಥೆ ಮುಖ್ಯ ಸ್ವಿಚ್
3) ಸಾಮಾನ್ಯ ದ್ವಿಪ ವ್ಯವಸ್ಥೆ ಸ್ವಿಚ್
4) ಕ್ಯಾಬಿನ್ ವಿದ್ಯುತ್ ಮುಖ್ಯ ಸ್ವಿಚ್
5) ಟ್ರಾನ್ಸ್‌ಫಾರ್ಮರ್ ಮುಖ್ಯ ಸ್ವಿಚ್ 230 ವೋಲ್ಟೇಜ್
6) ಟ್ರಾನ್ಸ್‌ಫಾರ್ಮರ್ ಮುಖ್ಯ ಸ್ವಿಚ್ 110 ವೋಲ್ಟೇಜ್
7) ರೆಕ್ಟಿಫೈಯರ್ ಮುಖ್ಯ ಸ್ವಿಚ್ ಎ ಸಿ ಸೈಡ್
8) ರೆಕ್ಟಿಫೈಯರ್ ಮುಖ್ಯ ಸ್ವಿಚ್ ಡಿಸಿ ಸೈಡ್
9) ಫ್ಯಾನ್ ಮುಖ್ಯ ಸ್ವಿಚ್
10) 11 ಮತ್ತು 12 ಫ್ಯಾನಿನ ಉಪ ಮುಖ್ಯ ಸ್ವಿಚ್

ಟಿ - ಟ್ರಾನ್ಸ್‌ಫಾರ್ಮರ್

ಆರ್ – ರೆಕ್ಟಿಫೈಯರ್

**ಸೂಚನೆ:** ತ್ರೀ ಫೇಸೆಸ್ (ಮೂರು ಹಂತಗಳು) ಸರಬರಾಜಿನ ಸಂದರ್ಭದಲ್ಲಿ ಎಲ್ಲಾ ತ್ರೀ ಫೇಸೆಸ್ (ಮೂರು ಹಂತಗಳ) ಮೇಲಿನ ಲೋಡುಗಳನ್ನು ಸಮದೂಗಿಸತಕ್ಕದ್ದು.

**ಡಿ.ಎಸ್. ಜೋಗೋಜೆ**

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಕಾರಾಗೃಹ ಮತ್ತು ಸಿನಿಮಾ)